ಶನಿವಾರ, ಮಾರ್ಚ್ 6, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ನಾಗಾ ಸಾಧು**
ಕುಂಭಮೇಳದ ಪೂರ್ವಭಾವಿಯಾಗಿ ಹರಿದ್ವಾರದಲ್ಲಿ ಶುಕ್ರವಾರ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ನಾಗಾ ಸಾಧು

RERA Registered: Karnataka RERA Registration Number:
Parkwest - Pine - Tower 9: PRM/KA/RERA/1251/310/PR/210216/003899
For more details, visit: https://rera.karnataka.gov.in

080 6897 0826

Shapoorji Pallonji Real Estate

*A truely 'head-turning' experience*

5:95# SCHEME AVAILABLE

BINNYPET, NEAR RAJAJI NAGAR | 2 BHKs - ₹1.21 Cr*. & 3 BHKs - ₹1.81 Cr*. onwards

ಕೋಡ್‌ನೇಮ್ ಇವಾಲ್ವ್

CREDAI BENGALURU

**Note:** : The project development and marketing is managed by Shapoorji Pallonji Development Managers Pvt. Ltd. (RERA Karnataka Registration Number PRM/KA/RERA/1251/309/AG/201012/002060) in collaboration with the promoter, Relationship Properties Pvt. Ltd. This material does not constitute an offer and/or contract of any type. Any prospective sale shall be governed by the terms and agreement for sale to be entered into between the parties. Before making a decision to purchase, customers are requested to independently, either directly or through customers' legal/financial advisors, thoroughly verify all details/documents pertaining to the project. Images are digitally enhanced, unless otherwise mentioned. No photos have been shot at site unless mentioned otherwise. The colours, shades of walls, tiles etc. shown in the images are for the purpose of representation. *The starting price mentioned is for a 2 BHK on the second floor (RERA Carpet Area – 69.77 sq. m. (751 sq. ft.), Super Built-up Area – 120.86 sq. m. (1301 sq. ft.)) and 3 BHK – Series 6 on the second floor (RERA Carpet Area – 108.23 sq. m. (1165 sq. ft.), Super Built-up Area – 178.18 sq. m. (1918 sq. ft.)) of Pine Tower (T-9) and is based on the Construction Linked Payment plan. Other charges and Government levies/taxes are extra. Other Terms & Conditions apply. #The 5:95 scheme mentioned herein is a flexi payment scheme/CLP Pre-EMI scheme offered by L&T Housing Finance Ltd and Yes Bank. It is subject to the eligibility of the loan applicant and the terms & conditions of the scheme offered by the above mentioned banks/NBFCs/HFCs. This special payment plan is for select units in Pine Tower (T-9) and for a limited period only. Under the mentioned scheme, the Pre-EMI holiday is till 31st March 2024. The customer contribution of 20% in addition to the initial contribution of 5% will be payable on receipt of occupation certificate. Other T&Cs apply. This project is a part of the proposed larger development and the entire development will be carried out in a phased manner by the promoter.

Pre launching
CODENAME
evolve

ಶನಿವಾರ, ಮಾರ್ಚ್ 6, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 65 | ಪುಟ 26

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭೂಮಿಕಾ**

ಉದ್ಯೋಗ ನಷ್ಟ, ಮಕ್ಕಳ ಪೋಷಣೆಯ ಹೊಣೆ ನಡುವೆಯೇ ಪುಟ್ಟ ಮಕ್ಕಳ ತಾಯಂದಿರು ಈ ಬಾರಿಯ ಮಹಿಳಾ ದಿನಾಚರಣೆಯ ಧ್ಯೇಯವಾಕ್ಯವನ್ನು ಅಕ್ಷರಶಃ ನಿಜ ಮಾಡಿದ್ದಾರೆ...

**ಅನುಭವ ಮಂಟಪ** ಹಿಂದುಳಿದವರ ಪಟ್ಟಿಗೆ ಸೇರಲು ನೂಕುನುಗ್ಗಲು

ಆಂಧ್ರ ಬಂದ್ ಶಾಂತಿಯುತ 12

ನಂದಿಗ್ರಾಮದಿಂದ ಮಮತಾ ಸ್ಪರ್ಧೆ 8

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 50,405 | 14,938 | ₹45,950 (ಬೆಂಗಳೂರು) | ₹67,300 (ಬೆಂಗಳೂರು) | 73.02 |

ಮೂರು ಪ್ರತ್ಯೇಕ ಪ್ರಕರಣ: 23 ವಿದ್ಯಾರ್ಥಿಗಳಿಗೆ ಸೋಂಕು • ಹೊಸದಾಗಿ 677 ಪ್ರಕರಣ ಪತ್ತೆ

# ಕೋವಿಡ್: ಶಾಲೆ ಸೀಲ್ ಡೌನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಮೂರು ಪ್ರತ್ಯೇಕ ಪ್ರಕರಣದಲ್ಲಿ ಶುಕ್ರವಾರ 23 ವಿದ್ಯಾರ್ಥಿಗಳಿಗೆ ಕೋವಿಡ್ ಸೋಂಕು ದೃಢಪಟ್ಟಿದೆ. ಬೆಂಗಳೂರಿನ ಬಿ. ನಾರಾಯಣಪುರದಲ್ಲಿ 7, ಕಲಬುರ್ಗಿಯ ಕಾಳಗಿಯಲ್ಲಿ 15 ಮತ್ತು ಮತ್ತು ದಾವಣಗೆರೆಯ ಸಾಸ್ವೆಹಳ್ಳಿಯಲ್ಲಿ ಒಬ್ಬ ವಿದ್ಯಾರ್ಥಿಗೆ ಸೋಂಕು ದೃಢ ಪಟ್ಟಿದೆ. ಇದರಿಂದಾಗಿ ಇತರ ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸಲಾಗಿದೆ.

ನಗರದ ಕೆ.ಆರ್.ಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯ ಬಿ.ನಾರಾಯಣಪುರ ಸರ್ಕಾರಿ ಪ್ರೌಢಶಾಲೆಯಲ್ಲಿ 7 ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರು ಕೋವಿಡ್ ಪೀಡಿತರಾಗಿದ್ದಾರೆ. ಇಲ್ಲಿ 7 ದಿನ ಈ ಶಾಲೆಯನ್ನು ಸೀಲ್ ಡೌನ್ ಮಾಡಲಾಗಿದೆ.

ಶಾಲೆಯಲ್ಲಿ 213 ವಿದ್ಯಾರ್ಥಿಗಳಿದ್ದು, ಮಾ.1 ಮತ್ತು ಮಾ.2ರಂದು ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಗಳನ್ನು ನಡೆಸಲಾಗಿತ್ತು. ವರದಿ ಶುಕ್ರವಾರ ಬಂದಿದ್ದು, ಕೋವಿಡ್ ಪೀಡಿತರಾಗಿರುವ 7 ವಿದ್ಯಾರ್ಥಿಗಳಲ್ಲಿ 6 ಮಂದಿಯನ್ನು ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. 66 ಮಂದಿ ನೇರ ಸಂಪರ್ಕಿತರು ಹಾಗೂ 53 ಮಂದಿ ಪರೋಕ್ಷ ಸಂಪರ್ಕಿತರನ್ನು ಗುರುತಿಸಲಾಗಿದೆ. ಅವರನ್ನೂ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇದರಲ್ಲಿ ವಿದ್ಯಾರ್ಥಿಗಳ ಕುಟುಂಬ ಸದಸ್ಯರೂ ಸೇರಿದ್ದಾರೆ.

ರಾಜ್ಯದಲ್ಲಿ ಶಾಲೆಗಳು ಪುನರಾರಂಭವಾದ ಬಳಿಕ ಸೀಲ್ ಡೌನ್ ಆಗುತ್ತಿರುವ ಮೊದಲ ಶಾಲೆ ಇದಾಗಿದೆ. ಕೋವಿಡ್ ಪೀಡಿತರಾದವರಲ್ಲಿ ಎಲ್ಲ ವಿದ್ಯಾರ್ಥಿಗಳು 10ನೇ ತರಗತಿಯವರಾಗಿದ್ದು, ಅವರಲ್ಲಿ ರೋಗ ಲಕ್ಷಣಗಳು ಬಹಿರಂಗವಾಗಿ ಕಾಣಿಸಿಕೊಂಡಿರಲಿಲ್ಲ ಎಂದು ಶಾಲಾ ಅಧಿಕಾರಿಗಳು ತಿಳಿಸಿದ್ದಾರೆ.

8ನೇ ಪುಟ ನೋಡಿ

## ಉಚಿತ ಲಸಿಕೆ ನೀಡಿ: ಸಿದ್ದರಾಮಯ್ಯ

‘ಸಾರ್ವಜನಿಕರಿಗೆ ಉಚಿತವಾಗಿ ಕೋವಿಡ್ ಲಸಿಕೆ ನೀಡಬೇಕು’ ಎಂದು ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

‘ಕೋವಿಡ್‌ನಿಂದ ಜನಸಾಮಾನ್ಯರು ಸಂಕಷ್ಟದಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ಲಸಿಕೆ ನಿರೀಕ್ಷೆ ಹುಟ್ಟಿಸಿದೆ. ಆದರೆ, ಲಸಿಕೆ ವಿತರಣೆ ಅಭಿಯಾನ ನಿಧಾನಗತಿಯಲ್ಲಿ ಸಾಗುತ್ತಿದೆ. ದೇಶದ ಒಟ್ಟು ಜನಸಂಖ್ಯೆಯ ಶೇ 70ರಷ್ಟು ಮಂದಿಗೆ ಈಗಿನ ಬೆಲೆಯಲ್ಲಿ ಕೋವಿಡ್ ಲಸಿಕೆ ಖರೀದಿಸುವ ಸಾಮರ್ಥ್ಯ ಇಲ್ಲ. ಈವರೆಗೆ ಶೇ .05ರಷ್ಟು ಮಂದಿಗೆ ಮಾತ್ರ ಲಸಿಕೆ ಸಿಕ್ಕಿದೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.‘ಭಾರತದಲ್ಲಿ ಜನಸಾಮಾನ್ಯರಿಂದ ₹ 250 ದರ ವಸೂಲಿ ಮಾಡಲು ಅನುಮತಿ ನೀಡಲಾಗಿದೆ. ಈ ಬಗ್ಗೆ ಪ್ರಧಾನಿ ಸೂಕ್ತ ಕ್ರಮ ಕೈಗೊಂಡು ಲಸಿಕೆ ಉಚಿತವಾಗಿ ಸಿಗುವಂತೆ ಮಾಡಬೇಕು. ಪಿಎಂ ಕೇರ್ಸ್ ನಿಧಿಯನ್ನು ಈ ಉದ್ದೇಶಕ್ಕಾಗಿ ಬಳಸಬೇಕು’ ಎಂದೂ ಅವರು ಹೇಳಿದ್ದಾರೆ.

**ವೈದ್ಯಕೀಯ ಸಂಘಟನೆಗಳ ಮನವಿ:** ಖಾಸಗಿ ಆಸ್ಪತ್ರೆಗಳಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಎರಡನೇ ಡೋಸ್ ಲಸಿಕೆಗೆ ಕೇಂದ್ರ ಸರ್ಕಾರ ದರ ನಿಗದಿ ಮಾಡಿರುವುದಕ್ಕೆ ವೈದ್ಯಕೀಯ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ. ಉಚಿತವಾಗಿ ಲಸಿಕೆ ನೀಡಲು ಆಗ್ರಹಿಸಿವೆ. ಭಾರತೀಯ ವೈದ್ಯಕೀಯ ಸಂಘವು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದು, ಆರೋಗ್ಯ ಕಾರ್ಯಕರ್ತರು ಹಾಗೂ ಜನಸಾಮಾನ್ಯರಿಗೆ ಉಚಿತವಾಗಿ ಲಸಿಕೆ ನೀಡಿ ಎಂದು ಮನವಿ ಮಾಡಿಕೊಂಡಿದೆ.

ರಾಜ್ಯದಲ್ಲಿ ಶುಕ್ರವಾರ 20,945 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಇದರಲ್ಲಿ 12,521 ಮಂದಿ ಹಿರಿಯ ನಾಗರಿಕರಾಗಿದ್ದಾರೆ. 4,059 ಮಂದಿ ಆರೋಗ್ಯ ಕಾರ್ಯಕರ್ತರು ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

## ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆ

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆ ಕಂಡಿದೆ. ಶುಕ್ರವಾರ 677 ಪ್ರಕರಣಗಳು ವರದಿಯಾಗಿವೆ. ಕಳೆದ ಒಂದೂವರೆ ತಿಂಗಳಿನಲ್ಲಿ 24 ಗಂಟೆಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ಸೋಂಕಿತರ ಒಟ್ಟು ಸಂಖ್ಯೆ 9.53 ಲಕ್ಷ ದಾಟಿದೆ. ಒಂದು ವಾರದಿಂದ ಪ್ರಕರಣಗಳ ಸಂಖ್ಯೆ ನಿತ್ಯ 500ರ ಗಡಿ ದಾಟುತ್ತಿದ್ದು, ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು ಹಾಗೂ ಬೀದರ್, ಚಿಕ್ಕಬಳ್ಳಾಪುರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮೃತರ ಸಂಖ್ಯೆ 12,354ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 427 ಮಂದಿ ಗುಣಮುಖರಾಗಿದ್ದು, ಚೇತರಿಸಿಕೊಂಡವರ ಸಂಖ್ಯೆ 9.35 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆಯೂ ಏರಿಕೆ ಕಂಡಿದ್ದು, 6,374 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 112 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

**ಪರೀಕ್ಷೆ ಹೆಚ್ಚಳ:** ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಒಂದು ದಿನದ ಅವಧಿಯಲ್ಲಿ 78 ಸಾವಿರ ಪರೀಕ್ಷೆ ನಡೆಸಲಾಗಿದೆ. ಈವರೆಗೆ 1.91 ಕೋಟಿ ಮಂದಿ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಬ್ರಿಟನ್‌ನಿಂದ ಮತ್ತೆ 214 ಮಂದಿ ಬಂದಿದ್ದಾರೆ. ಕಳೆದ ನ.25ರ ಬಳಿಕ ಇಲ್ಲಿಗೆ ಬಂದವರ ಸಂಖ್ಯೆ 13,215ಕ್ಕೆ ತಲುಪಿದೆ. ಅವರಲ್ಲಿ ಈವರೆಗೆ 64 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಬೆಂಗಳೂರಿನಲ್ಲಿ 444 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.07 ಲಕ್ಷ ದಾಟಿದೆ. ಮೈಸೂರಿನಲ್ಲಿ 23, ಕಲಬುರ್ಗಿಯಲ್ಲಿ 37, ತುಮಕೂರಿನಲ್ಲಿ 28, ಉಡುಪಿಯಲ್ಲಿ 22, ದಕ್ಷಿಣ ಕನ್ನಡದಲ್ಲಿ 20 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ.

## ರಿಷಭ್–ವಾಷಿಂಗ್ಟನ್ ‘ಸುಂದರ’ ಜೊತೆಯಾಟ

**ಅಹಮದಾಬಾದ್:** ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ಭಾರಿ ಹಿನ್ನಡೆ ಅನುಭವಿಸುವ ಭೀತಿಯಲ್ಲಿದ್ದ ಭಾರತ ತಂಡಕ್ಕೆ ರಿಷಭ್ ಪಂತ್ ಮತ್ತು ವಾಷಿಂಗ್ಟನ್ ಸುಂದರ್ ಅವರ ಜೊತೆಯಾಟವು ಸಂಜೀವಿನಿಯಾಯಿತು. ಇದರಿಂದಾಗಿ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು 89 ರನ್‌ಗಳ ಮಹತ್ವದ ಮುನ್ನಡೆ ಗಳಿಸಿತು.

**ಏಳನೇ ವಿಕೆಟ್ ಜೊತೆಯಾಟ**

113 ರನ್ • 158 ಎಸೆತ • ರಿಷಭ್ 71 (66ಎಸೆತ)

ವಾಷಿಂಗ್ಟನ್ 40 (92 ಎಸೆತ) • 2 ಇತರೆ

**ರಿಷಭ್ ಪಂತ್ ಶತಕ**

101 ರನ್ • 118 ಎಸೆತ • 13 ಬೌಂಡರಿ • 2 ಸಿಕ್ಸರ್

**ವಾಷಿಂಗ್ಟನ್ ಸುಂದರ್**

60* ರನ್ • 117 ಎಸೆತ • 8 ಬೌಂಡರಿ

**ಮೊದಲ ಇನಿಂಗ್ಸ್**

ಇಂಗ್ಲೆಂಡ್: 205 (75.5 ಓವರ್‌ಗಳಲ್ಲಿ)

ಭಾರತ: 7ಕ್ಕೆ 294 (94 ಓವರ್‌ಗಳಲ್ಲಿ)

* ಎರಡನೇ ದಿನದಾಟದ ಮುಕ್ತಾಯಕ್ಕೆ

14

ವಾಷಿಂಗ್ಟನ್ ಸುಂದರ್ ಮತ್ತು ರಿಷಭ್ ಪಂತ್ –ಪಿಟಿಐ ಚಿತ್ರ

# ಡ್ರಗ್ಸ್: ‘ಬಿಗ್‌ಬಾಸ್’ ಸ್ಪರ್ಧಿ ಮನೆ ಮೇಲೂ ದಾಳಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ಪೂರ್ವ ವಿಭಾಗದ ಪೊಲೀಸರು, ₹ 4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ‘ಬಿಗ್‌ಬಾಸ್’ ರಿಯಾಲಿಟಿ ಶೋ ಸ್ಪರ್ಧಿಯಾಗಿದ್ದ ಮಸ್ತಾನ್ ಚಂದ್ರ ಮನೆ ಮೇಲೆ ದಾಳಿ ಮಾಡಿ, ಅವರನ್ನು ವಶಕ್ಕೆ ಪಡೆದಿದ್ದಾರೆ.

‘ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ನಾಲ್ವರು ವಿದೇಶಿಗರನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಅವರು ನೀಡಿದ್ದ ಮಾಹಿತಿ ಆಧರಿಸಿ ಹಲವೆಡೆ ದಾಳಿ ಮಾಡಿ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಮಸ್ತಾನ್ ಚಂದ್ರ ಮನೆ ಮೇಲೂ ದಾಳಿ ಮಾಡಿ, ಕೆಲ ವಸ್ತುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಸ್ತಾನ್

‘2,719 ಗ್ರಾಂ ಎಂಡಿಎಂಎ ಮಾತ್ರೆಗಳು, 200 ಗ್ರಾಂ ಕೊಕೇನ್, 1,939 ಎಕ್ಸ್‌ಟೆಸಿ ಮಾತ್ರೆಗಳು, 526 ಎಲ್‌ಎಸ್‌ಡಿ ಕಾಗದ ಚೂರುಗಳು, 42.5 ಕೆ.ಜಿ ಗಾಂಜಾವನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹ 4 ಕೋಟಿಗೂ ಹೆಚ್ಚು’ ಎಂದೂ ತಿಳಿಸಿದರು.

**ವ್ಯವಸ್ಥಿತ ಜಾಲ:** ‘ಆರೋಪಿಗಳು ತಮ್ಮದೇ ಜಾಲ ರಚಿಸಿಕೊಂಡು ವ್ಯವಸ್ಥಿತವಾಗಿ ಕೃತ್ಯ ಎಸಗುತ್ತಿದ್ದರು. ಗಣ್ಯ ವ್ಯಕ್ತಿಗಳು, ಉದ್ಯಮಿಗಳು ಹಾಗೂ ಕೆಲ ವಿದ್ಯಾರ್ಥಿಗಳಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದರು’ ಎಂದು ಪೂರ್ವ ವಿಭಾಗದ ಡಿಸಿಪಿ ಎಸ್.ಡಿ. ಶರಣಪ್ಪ ಹೇಳಿದರು.

‘ನಾಗವಾರ ಬಳಿಯ ಬಿ.ಆರ್. ಅಂಬೇಡ್ಕರ್ ಮೈದಾನ ಸಮೀಪದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಫೆ. 26ರಂದು ಸ್ಥಳಕ್ಕೆ ಹೋಗಿದ್ದ ಕೆ.ಜಿ.ಹಳ್ಳಿ ಠಾಣೆ ಪೊಲೀಸರು, ವಿದೇಶಿ ಪ್ರಜೆಗಳಾದ ಉಗುಚುಕ್ವ ಹ್ಯಾರಿಸನ್ ಅಗಬಂಟಿ ಅಲಿಯಾಸ್ ಜಾನ್ ಪೆಡ್ಲರ್ ಹಾಗೂ ಜಾನ್ ನ್ಯಾನ್ಯೂ ಎಂಬುವರನ್ನು ಬಂಧಿಸಿದ್ದರು. ಡ್ರಗ್ಸ್, ವಾಹನ, ಮೊಬೈಲ್‌ಗಳು ಸೇರಿ ₹ 20 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದರು’ ಎಂದರು.

‘ಸಂಜಯನಗರ ನಿವಾಸಿಯಾದ ಮಸ್ತಾನ್ ಚಂದ್ರ ಹಾಗೂ ಕೇಶವ್, ಡ್ರಗ್ಸ್ ಪ್ರಕರಣದ ಪ್ರಮುಖ ಆರೋಪಿ ಜಾನ್ ಪೆಡ್ಲರ್ ಜೊತೆ ಒಡನಾಟವಿಟ್ಟುಕೊಂಡಿದ್ದರು. ಗುರುವಾರ ಬೆಳಿಗ್ಗೆ ದಾಳಿ ನಡೆಸಿ ಪರಿಶೀಲಿಸಲಾಗಿದೆ. ವಿಚಾರಣೆಗಾಗಿ ಮಸ್ತಾನ್ ಹಾಗೂ ಕೇಶವ್‌ನನ್ನು ವಶಕ್ಕೆ ಪಡೆಯಲಾಗಿದೆ’ ಎಂದರು.

### ಸುಶಾಂತ್ ಪ್ರಕರಣ: ಆರೋಪಪಟ್ಟಿ ಸಲ್ಲಿಕೆ

**ಮುಂಬೈ (ಪಿಟಿಐ):** ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾದಕವಸ್ತು ನಿಯಂತ್ರಣ ಬ್ಯೂರೊ (ಎನ್‌ಸಿಬಿ) ಇಲ್ಲಿನ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ಆರೋಪಪಟ್ಟಿಯನ್ನು ಸಲ್ಲಿಸಿದೆ. 8

### ನ್ಯೂಜಿಲೆಂಡ್ ಭೂಕಂಪನ: ತಗ್ಗಿದ ಸುನಾಮಿ ಆತಂಕ

**ಪೋರ್ಟ್‌ವಿಲಾ, ವನೌತು (ಎಎಫ್‌ಪಿ):** ಭಾರಿ ಭೂಕಂಪನದ ಹಿನ್ನೆಲೆಯಲ್ಲಿ ಸುನಾಮಿ ಕುರಿತ ಎಚ್ಚರಿಕೆಯನ್ನು ನ್ಯೂಜಿಲೆಂಡ್ ಸರ್ಕಾರ ಹಿಂತೆಗೆದುಕೊಂಡಿದ್ದು ಸುರಕ್ಷಿತ ಸ್ಥಳಕ್ಕೆ ತೆರಳಿದ ಸಾವಿರಾರು ನಿವಾಸಿಗಳು ತಮ್ಮ ಮನೆಗೆ ಮರಳಿದ್ದಾರೆ. 12

### ‘ಡಿಜಿಟಲ್ ವೇದಿಕೆಗಳ ವಿರುದ್ಧ ಕ್ರಮಕ್ಕೆ ಅವಕಾಶ ಇಲ್ಲ’

**ನವದೆಹಲಿ:** ಡಿಜಿಟಲ್ ವೇದಿಕೆಗಳ ವಿರುದ್ಧ ಕ್ರಮ ಕೈಗೊಳ್ಳಲು ಕೇಂದ್ರದ ಯಾವುದೇ ನಿಯಮಾವಳಿಗಳಲ್ಲಿ ಅವಕಾಶ ಇಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. 12

ಒಂದು ರಾಷ್ಟ್ರ ಒಂದು ಚುನಾವಣೆ ಚರ್ಚೆಗೆ ಕಾಂಗ್ರೆಸ್ ವಿರೋಧ

# ಗದ್ದಲದಲ್ಲೇ ಕಲಾಪ ಅಂತ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಒಂದು ರಾಷ್ಟ್ರ– ಒಂದು ಚುನಾವಣೆ’ ವಿಶೇಷ ಚರ್ಚೆ ವಿರೋಧಿಸಿ ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಶುಕ್ರವಾರ ಎರಡನೇ ದಿನವೂ ಧರಣಿ, ಗದ್ದಲ ಮುಂದುವರಿಸಿದ್ದರಿಂದಾಗಿ ಚರ್ಚೆ ನಡೆಯದೇ ಕಲಾಪ ಮುಂದೂಡಿಕೆಯಾಯಿತು.

‘ಈ ಚರ್ಚೆ ಕರ್ನಾಟಕದಿಂದಲೇ ಆರಂಭವಾಗಲಿ, ಪರ– ವಿರೋಧ ಇದ್ದವರು ತಮ್ಮ ಅಭಿಪ್ರಾಯ ಮುಕ್ತವಾಗಿ ಹೇಳಬಹುದು. ಇಡೀ ದೇಶಕ್ಕೆ ಒಂದು ಸಂದೇಶ ಹೋಗಬೇಕು. ಆದ್ದರಿಂದ ಚರ್ಚೆಯಲ್ಲಿ ಭಾಗವಹಿಸಿ’ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಕೇಳಿಕೊಂಡರೂ, ಕಾಂಗ್ರೆಸ್ ಸದಸ್ಯರು ಧರಣಿ ಬಿಟ್ಟು ಕದಲಲಿಲ್ಲ. ಗದ್ದಲ, ಕೂಗಾಟ ತಾರಕಕ್ಕೇರಿದಾಗ ಎರಡು ಬಾರಿ ಕಲಾಪ ಮುಂದೂಡಿದರು.

ಚರ್ಚೆಯ ಬಗ್ಗೆ ಸಭಾಧ್ಯಕ್ಷ ಕಾಗೇರಿ ಪ್ರಸ್ತಾಪಿಸಿದರೆ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಶಾಸಕ ಸಂಗಮೇಶ್ವರ ಅವರ ಅಮಾನತು ಆದೇಶವನ್ನು ಹಿಂದಕ್ಕೆ ಪಡೆಯಬೇಕು ಎಂದು ಪಟ್ಟು ಹಿಡಿದರು.

4ನೇ ಪುಟ ನೋಡಿ

## ‘ಇನ್ನೊಮ್ಮೆ ವಿಶೇಷ ಚರ್ಚೆಗೆ ಅವಕಾಶ’

‘ಒಂದು ರಾಷ್ಟ್ರ ಒಂದು ಚುನಾವಣೆ’ ವಿಷಯ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಮತ್ತೊಮ್ಮೆ ಕಾಂಗ್ರೆಸ್ ಸದಸ್ಯರ ಮನವೊಲಿಸುವ ಪ್ರಯತ್ನ ನಡೆಸುತ್ತೇನೆ. ಅವರ ಮನವೊಲಿಸಿದ ಬಳಿಕ ಚರ್ಚೆಗೆ ದಿನಾಂಕ ನಿಗದಿ ಮಾಡುತ್ತೇನೆ’ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ವಿಷಯದಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗಿರುವುದು ಸಂಸತ್ತಿನಲ್ಲಿ ಎಂಬುದು ಗೊತ್ತಿದೆ. ಆದರೆ, ಜನಪ್ರತಿನಿಧಿಗಳು ಈ ವಿಷಯದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದೂ ಅಷ್ಟೇ ಮುಖ್ಯ ಎಂಬ ಕಾರಣಕ್ಕೆ ಚರ್ಚೆ ನಡೆಸಲು ತೀರ್ಮಾನಿಸಲಾಗಿತ್ತು’ ಎಂದರು.

‘ಇದು(ಚರ್ಚೆ) ಏಕಾಏಕಿಯಾಗಿ ಕೈಗೊಂಡ ನಿರ್ಧಾರವಲ್ಲ. ಕಳೆದ ಎರಡು ಮೂರು ಅಧಿವೇಶನಗಳ ವೇಳೆಯೂ ಆಡಳಿತ ಮತ್ತು ವಿರೋಧ ಪಕ್ಷಗಳ ಜತೆ ಚರ್ಚೆ ನಡೆಸಲಾಗಿತ್ತು. ಮೊನ್ನೆ ರಾತ್ರಿಯವರೆಗೂ ಕಾಂಗ್ರೆಸ್ ಸದಸ್ಯರೂ ಒಪ್ಪಿಕೊಂಡಿದ್ದರು. ಅದಕ್ಕಾಗಿ ತಯಾರಿಯನ್ನೂ ನಡೆಸಿಕೊಂಡಿದ್ದರು. ಗುರುವಾರ ಬೆಳಿಗ್ಗೆ ಏನಾಯಿತೋ ಗೊತ್ತಿಲ್ಲ. ಇದು ಶಾಸಕಾಂಗ ಪಕ್ಷದ ತೀರ್ಮಾನ ಏನೂ ಮಾಡಲು ಆಗಲ್ಲ ಎಂದು ಕೆಲವು ಕಾಂಗ್ರೆಸ್ ನಾಯಕರು ನನ್ನ ಬಳಿ ಅಸಹಾಯಕತೆ ವ್ಯಕ್ತಪಡಿಸಿದರು’ ಎಂದೂ ಕಾಗೇರಿ ಹೇಳಿದರು.

‘ವಿಶೇಷ ಚರ್ಚೆಯಲ್ಲಿ ಮಾತನಾಡಲು ಕಾಂಗ್ರೆಸ್‌ನಿಂದ 19, ಬಿಜೆಪಿಯ 15 ಮತ್ತು ಜೆಡಿಎಸ್ 13 ಶಾಸಕರು ಹೆಸರು ಕೊಟ್ಟಿದ್ದರು. ಕೊನೆ ಕ್ಷಣದಲ್ಲಿ ಕಾಂಗ್ರೆಸ್‌ನವರು ಭಾಗವಹಿಸದೇ ಕಲಾಪಕ್ಕೆ ಅಡ್ಡಿ ಮಾಡಿದ್ದು, ಬೇಸರವಾಯಿತು. ವಿರೋಧಕ್ಕೆ ನನ್ನ ಆಕ್ಷೇಪವಿಲ್ಲ. ಆದರೆ, ಬೇರೆ ಸದಸ್ಯರು ಮಾತನಾಡಲು ಅವಕಾಶ ನೀಡದೇ ಇರುವುದು ಪ್ರಜಾತಂತ್ರದ ನಡವಳಿಕೆಯಲ್ಲ’ ಎಂದು ತಿಳಿಸಿದರು.

**ಇಂದಿನ ಪಾಡ್‌ಕಾಸ್ಟ್ ವಿಶೇಷ**

ವಚನವಾಣಿ

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

**ಚಿನಕುರಳಿ**

ಪ್ರಕಾಶ್ ಶೆಟ್ಟಿ

**ಡಾ. ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದಂತೆ ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯನ್ನು ನೇಮಕ ಮಾಡಿದೆ**

**ವದಂತಿಗಳಿಗೆ ಕಿವಿಗೊಡಬೇಡಿ ಸತ್ಯಸಂಗತಿಗಳ ಬಗ್ಗೆ ಅರಿವಿರಲಿ**

1. ಡಾ. ಶಿವರಾಮ ಕಾರಂತ ಬಡಾವಣೆಯಲ್ಲಿ 03.08.2018 ಕ್ಕೂ ಮೊದಲು ಕಾನೂನು ಬದ್ಧವಾಗಿ ಕಟ್ಟಿರುವ ಎಲ್ಲಾ ಕಟ್ಟಡಗಳನ್ನು 3.12.2020 ರಿಂದ ಜಾರಿಗೆ ಬರುವಂತೆ ಸಕ್ರಮಗೊಳಿಸಿ ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಅದೇಶ ನೀಡಿದೆ.
2. ಬಡಾವಣೆಯಲ್ಲಿನ ಇಂತಹ ಕಟ್ಟಡಗಳನ್ನು ಬಿಡಿಎ ಸಂಯೋಜನೆಗೊಳಿಸಬೇಕು ಎಂದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ತನ್ನ ಆದೇಶದಲ್ಲಿ ತಿಳಿಸಿದೆ.
3. ಮಾಲೀಕರು ಇಂತಹ ಕಟ್ಟಡಗಳನ್ನು ಸಕ್ರಮಗೊಳಿಸಲು ತಮ್ಮ ಅರ್ಜಿಗಳನ್ನು ಸಲ್ಲಿಸಲು ಸಹಾಯವಾಗಲಿ ಎಂಬ ಉದ್ದೇಶದೊಂದಿಗೆ ಹೈಕೋರ್ಟ್ ನ್ಯಾಯಮೂರ್ತಿಗಳಾದ ಎ.ವಿ. ಚಂದ್ರಶೇಖರ್ ಅಧ್ಯಕ್ಷರಾಗಿರುವ, ಮಾಜಿ ಡಿಜಿಪಿ ಮತ್ತು ಐಜಿಪಿಯಾಗಿದ್ದ ನಿವೃತ್ತ ಐಪಿಎಸ್ ಅಧಿಕಾರಿ ಶ್ರೀ ಎಸ್.ಟಿ. ರಮೇಶ್ ಮತ್ತು ಬಿಡಿಎ ಆಯುಕ್ತರಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಶ್ರೀ ಜೈಕರ್ ಜೆರೋಮ್ ಸದಸ್ಯರಾಗಿರುವ, ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯನ್ನು ಗೌರವಾನ್ವಿತ ಸರ್ವೋಚ್ಚ ನಾಯಾಲಯವು ಭಾರತೀಯ ಸಂವಿಧಾನದ ಕಲಂ 142ರಡಿ ರಚಿಸಿದೆ.
4. ತಮ್ಮ ಅರ್ಜಿಗಳನ್ನು ಸಲ್ಲಿಸಲು ಅಪೇಕ್ಷಿಸುವ ಎಲ್ಲಾ ವ್ಯಕ್ತಿಗಳು ಸಮಿತಿಯ ಪೋರ್ಟಲ್ jcc-skl.in ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.
5. ಅರ್ಜಿದಾರರಿಗೆ ಅದನ್ನು ಸರಳ ಮತ್ತು ಸುಲಭವಾಗಿಸಲು ಸಹಾಯವಾಣಿ ಕೇಂದ್ರಗಳನ್ನು ಸೋಮಶೆಟ್ಟಿಹಳ್ಳಿಯ ಸಮ್ಮೇಳನಾ ಸಭಾಂಗಣ, ಬ್ಯಾಲಕೆರೆಯ ಸರ್ಕಾರಿ ಶಾಲೆ, ಸಿಂಗನಾಯಕನಹಳ್ಳಿಯ ಡಾ. ಅಂಬೇಡ್ಕರ್ ಸಮ್ಮೇಳನಾ ಸಭಾಂಗಣ, ಮೇಡಿ ಅಗ್ರಹಾರದ ಸರ್ಕಾರಿ ಉರ್ದು ಪ್ರಾಥಮಿಕ ಶಾಲಾ ಕಟ್ಟಡ, ವಡೇರಹಳ್ಳಿ ಪಂಚಾಯತಿಯಲ್ಲಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯಲ್ಲಿ ಸ್ಥಾಪಿಸಲಾಗುತ್ತಿದೆ.
6. ಮೊದಲನೇ ಸಹಾಯವಾಣಿ ಕೇಂದ್ರ ಮೇಡಿ ಅಗ್ರಹಾರದ ಉರ್ದು ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ಕಾರ್ಯಾರಂಭಮಾಡಿದೆ. ಉಳಿದ ಸಹಾಯವಾಣಿ ಕೇಂದ್ರಗಳು ಶೀಘ್ರದಲ್ಲೇ ಕಾರ್ಯರಂಭ ಮಾಡಲಿವೆ.
7. ಮೇಡಿ ಅಗ್ರಹಾರದ ಉರ್ದು ಪ್ರಾಥಮಿಕ ಶಾಲೆಯಲ್ಲಿನ ಸಹಾಯವಾಣಿ ಕೇಂದ್ರದಲ್ಲಿ ಅರ್ಜಿದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.
8. ನೇರವಾಗಿ ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸುವುದು ಸಹ ಅತ್ಯುತ್ತಮವಾಗಿದೆ
9. ವಿಶೇಷವಾಗಿ ತರಬೇತಿ ಪಡೆದ ಸಿಬ್ಬಂದಿಯು ಈ ಸಹಾಯವಾಣಿ ಕೇಂದ್ರಗಳಿಗೆ ಭೇಟಿನೀಡುವ ಅರ್ಜಿದಾರರಿಗೆ ಸಹಾಯ ಮತ್ತು ಮಾರ್ಗದರ್ಶನ ನೀಡುವರು.
10. ಯಾವುದೇ ಅರ್ಜಿದಾರರಿಂದ ಯಾವುದೇ ದಾಖಲೆಗಳನ್ನು ಪಡೆದುಕೊಳ್ಳುವುದಿಲ್ಲ.
11. ದಾಖಲೆಗಳನ್ನು ಸ್ಕ್ಯಾನ್ ಮಾಡಿ ಮತ್ತು ರಸೀತಿಗಳೊಂದಿಗೆ ಅವುಗಳನ್ನು ಹಿಂತಿರುಗಿಸಲಾಗುವುದು.
12. ಡಾಟಾ ಅಭೇದ್ಯವಾಗಿದೆ ಮತ್ತು ಸಂಪೂರ್ಣ ಸುರಕ್ಷಿತವಾಗಿದೆ.
13. ಕೆಲವು ಸಮಾಜಘಾತುಕ ಶಕ್ತಿಗಳು ಸಾರ್ವಜನಿಕರನ್ನು ದಾರಿತಪ್ಪಿಸುವ ಮತ್ತು ಗೊಂದಲವನ್ನು ಉಂಟುಮಾಡುವ ಉದ್ದೇಶದಿಂದ ಸುಳ್ಳು ವದಂತಿಗಳನ್ನು ಹರಡುತ್ತಿವೆ.
14. ಇಂತಹ ಕೆಟ್ಟ ನಡವಳಿಕೆ ಮತ್ತು ಕ್ರಮವು ನೇರವಾಗಿ ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯದ ಆದೇಶದ ವಿರುದ್ಧವಾಗಿದೆ ಹಾಗೂ ಭಾರತದ ಸಂವಿಧಾನದ ಕಲಂ 141 ರ ಉಲ್ಲಂಘನೆಯಾಗಿದೆ.
15. ನಿಮ್ಮನ್ನು ಪತ್ತೆಹಚ್ಚಲಾಗುವುದು, ಗುರುತಿಸಲಾಗುವುದು ಹಾಗೂ ಸೂಕ್ತ ಕ್ರಮ ಕೈಗೊಳ್ಳುವಂತೆ ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಕ್ಕೆ ವರದಿ ಸಲ್ಲಿಸಲಾಗುವುದು ಎಂದು ಇಂತಹ ಸಮಾಜ ಘಾತುಕ ಶಕ್ತಿಗಳಿಗೆ ಎಚ್ಚರಿಕೆ ನೀಡಲಾಗಿದೆ.

**ದಯವಿಟ್ಟು ಸಹಾಯವಾಣಿ ಕೇಂದ್ರಕ್ಕೆ ಬನ್ನಿ ಮತ್ತು ನೀವೇ ಪರೀಕ್ಷಿಸಿಕೊಳ್ಳಿ**

## ‘ಹೆಚ್ಚಿನ ತೆರಿಗೆ ಹೊರೆ ಇಲ್ಲ’

**ಬೆಂಗಳೂರು:** ಈ ಬಾರಿ ಬಜೆಟ್ ಗಾತ್ರವನ್ನು ಇಳಿಸುವುದಿಲ್ಲ ಮತ್ತು ಸಾರ್ವಜನಿಕರ ಮೇಲೆ ಹೆಚ್ಚಿನ ತೆರಿಗೆ ಹೊರಿಸುವುದಿಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೋವಿಡ್ ಸಂಕಷ್ಟದ ಮಧ್ಯೆಯೂ ರಾಜ್ಯದ ಸಮಗ್ರ ಅಭಿವೃದ್ಧಿಗೆ ಎಲ್ಲ ಜಿಲ್ಲೆಗಳಿಗೂ ಸಮಾನ ರೀತಿಯಲ್ಲಿ ಅನುದಾನ ಒದಗಿಸಲಾಗುವುದು. ಮಹಿಳೆಯರ ಸಬಲೀಕರಣ, ಕೃಷಿ, ನೀರಾವರಿ ಮತ್ತು ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಹೇಳಿದರು.

ತೈಲ ಬೆಲೆ ಏರಿಕೆಯಿಂದ ಸಾರ್ವಜನಿಕರಿಗೆ ಹೆಚ್ಚಿನ ಹೊರೆ ಆಗಿದೆ. ಆದ್ದರಿಂದ ಬಜೆಟ್‌ನಲ್ಲಿ ಹೆಚ್ಚಿನ ತೆರಿಗೆ ಭಾರ ಹೊರಿಸುವುದಿಲ್ಲ. ಪೆಟ್ರೋಲ್ ಮತ್ತು ಡೀಸೆಲ್ ತೆರಿಗೆ ಕಡಿಮೆ ಮಾಡುವ ಪ್ರಸ್ತಾಪವೂ ಇಲ್ಲ ಎಂದು ಸ್ಪಷ್ಟಪಡಿಸಿದರು.

3ನೇ ಪುಟ ನೋಡಿ

# ಇಂದು ಕಪ್ಪು ಬಾವುಟ ಪ್ರದರ್ಶನ: ಯೋಗೇಂದ್ರ

ಪ್ರಜಾವಾಣಿ ವಾರ್ತೆ

**ಕಲಬುರ್ಗಿ:** ‘ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ಗಡಿಗಳಲ್ಲಿ ರೈತರು ನಡೆಸುತ್ತಿರುವ ಹೋರಾಟ 100 ದಿನ ಪೂರೈಸಿರುವುದರಿಂದ ಇದೇ 6ರಂದು ವಿವಿಧ ರಾಜ್ಯಗಳಲ್ಲಿ ರೈತರ ಮನೆಗಳ ಮೇಲೆ ಕಪ್ಪು ಬಾವುಟ ಪ್ರದರ್ಶಿಸುವ ಮೂಲಕ ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಲಾಗುವುದು’ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡ ಯೋಗೇಂದ್ರ ಯಾದವ್ ಹೇಳಿದರು.

ಯೋಗೇಂದ್ರ ಯಾದವ್

ನಗರದಲ್ಲಿ ಶುಕ್ರವಾರ ರೈತರೊಂದಿಗೆ ಸಂವಾದ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರೈತರು ತಮ್ಮ ವಾಹನಗಳಿಗೂ ಕಪ್ಪು ಬಾವುಟ ಕಟ್ಟುವರು. ದೆಹಲಿಯ ಗಡಿಗಳಲ್ಲಿ ಹೋರಾಟ ನಿರತ ರೈತರು ಕೈಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಧರಣಿ ನಡೆಸಲಿದ್ದಾರೆ’ ಎಂದರು.

‘ವಿವಿಧ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನಿನ ಮೂಲಕ ಖಾತ್ರಿಪಡಿಸಬೇಕು ಎಂಬ ಅಭಿಯಾನವನ್ನು ಕಲಬುರ್ಗಿಯಿಂದಲೇ ಆರಂಭಿಸುತ್ತಿದ್ದೇವೆ. ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರದ ವಿದರ್ಭ ಮತ್ತು ಮರಾಠವಾಡ ಹಾಗೂ ಮಧ್ಯ ಪ್ರದೇಶಕ್ಕೆ ಈ ಅಭಿಯಾನ ಕೊಂಡೊಯ್ಯಲಾಗುವುದು’ ಎಂದು ಯಾದವ್ ತಿಳಿಸಿದರು.

‘ವಿವಿಧ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸುವಂತೆ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಪತ್ರ ಬರೆದಿದ್ದರು. ಈಗ ಅವರೇ ಪ್ರಧಾನಿ ಇದ್ದರೂ ಬೆಂಬಲ ಬೆಲೆ ಬಗ್ಗೆ ಹಾರಿಕೆ ಉತ್ತರ ನೀಡುತ್ತಿದ್ದಾರೆ. ರೈತರ ಬೆಂಬಲ ಬೆಲೆ ಹಿಂದೆಯೂ ಇತ್ತು, ಈಗಲೂ ಇದೆ, ಮುಂದೆಯೂ ಇರುತ್ತದೆ ಎನ್ನುತ್ತಾರೆ. ಆದರೆ, ಅದು ಕಾಗದದಲ್ಲಿ ಮಾತ್ರ ಇದೆ. ಆಹಾರ ಭದ್ರತಾ ಕಾಯ್ದೆ, ಶಿಕ್ಷಣ ಹಕ್ಕು ಕಾಯ್ದೆಯಂತೆ ಬೆಂಬಲ ಬೆಲೆಗೆ ಕಾನೂನಿನ ಮಾನ್ಯತೆ ನೀಡಬೇಕು’ ಎಂದು ಒತ್ತಾಯಿಸಿದರು.

ಇನ್ನೊಂದು ಸುದ್ದಿ 8

## ಕ್ರೆಡಾಯ್‌ನಿಂದ ರಿಯಾಲ್ಟಿ ಎಕ್ಸ್‌ಪೊ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಮಾರತಹಳ್ಳಿಯ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಶನಿವಾರ ಮತ್ತು ಭಾನುವಾರ 'ಸೂಪರ್ ಸೇವರ್ ರಿಯಾಲ್ಟಿ ಎಕ್ಸ್‌ಪೊ 2021' ನಡೆಯಲಿದೆ. 'ಕ್ರೆಡಾಯ್ ಬೆಂಗಳೂರು' ಇದನ್ನು ಆಯೋಜಿಸಿದೆ.

ಒಟ್ಟು 24 ಡೆವಲಪರ್‌ಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ಮನೆ ಖರೀದಿ ಮಾಡುವವರಿಗೆ ನೆರವಾಗಲು ಏಳು ಹಣಕಾಸು ಸಂಸ್ಥೆಗಳು ಕೂಡ ಭಾಗವಹಿಸಲಿವೆ ಎಂದು ಪ್ರಕಟಣೆ ತಿಳಿಸಿದೆ.


ನೈಋತ್ಯ ರೈಲ್ವೆ

E-Tender Notice No.
MYS - COM - Pub - OnMir-21-1 Dtd : 01.03.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು: ಮೈಸೂರು ವಿಭಾಗದಲ್ಲಿ ಎರಡು ಪ್ಯಾಕೇಟ್ ಪದ್ಧತಿಯಲ್ಲಿ ಮೂರು ವರ್ಷಗಳ ಅವಧಿಗೆ ರೈಲಿನ ಕೋಚ್‌ಗಳಲ್ಲಿ ಇರುವ ಕನ್ನಡಿಗಳ ಮೇಲೆ ಜಾಹಿರತು ಪ್ರದರ್ಶಿಸುವುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18-03-2021, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ವಾಣಿಜ್ಯ), ಮೈಸೂರು

PUB/282/AASP/PRB/SWR/2020-21


## ಹಲ್ಲೆ ನಡೆಸಿದ ಲಿಂಗತ್ವ ಅಲ್ಪಸಂಖ್ಯಾತರು

**ಚಿತ್ರದುರ್ಗ:** ತಾಲ್ಲೂಕಿನ ಸೀಬಾರ ಗ್ರಾಮದ ಸಮೀಪ ಅಂಚೆ ಇಲಾಖೆಯ ನೌಕರರ ಮೇಲೆ ಹಲ್ಲೆ ನಡೆಸಿದ ಲಿಂಗತ್ವ ಅಲ್ಪಸಂಖ್ಯಾತರು ಚಿನ್ನದ ಸರ ದೋಚಿರುವ ಪ್ರಕರಣ ಬೆಳಕಿಗೆ ಬಂದಿದೆ. ಅಂಚೆ ಕಚೇರಿ ನೌಕರರಾದ ಅನಿಲ್, ಶಂಭುಲಿಂಗಪ್ಪ ಹಲ್ಲೆಗೆ ಒಳಗಾದವರು. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ಈ ಘಟನೆ ನಡೆದಿದೆ.


ಕರ್ನಾಟಕ ಸರ್ಕಾರ

ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ (ಪೌರಾಡಳಿತ ನಿರ್ದೇಶನಾಲಯ)

KMDS enabling municipal e-Governance

#1-4, 6ನೇ ಮಹಡಿ, ಐಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ಪ್ರದೇಶ, ಬೆಂಗಳೂರು - 560010

ದೂರವಾಣಿ: 080-23003100 e-mail: jdr@mrc.gov.in Web: www.mrc.gov.in

ಸಂ: 30659/DMA/67/KMDS/2020-21 ದಿನಾಂಕ: 06.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೆಎಂಡಿಎಸ್ ಡಾಟಾ ಸೆಂಟರ್‌ನಲ್ಲಿರುವ ಐಟಿ ಉಪಕರಣಗಳಿಗಾಗಿ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆಗಾಗಿ (2ನೇ ಕರೆ) ಅರ್ಹ ಬಿಡ್‌ದಾರರಿಂದ ಇ-ಆಡಳಿತ ಇಲಾಖೆಯ https://eproc.karnataka.gov.in ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ವಿವರವಾದ ಟೆಂಡರ್ ದಿನಾಂಕಗಳು ಈ ಕೆಳಗಿನಂತಿವೆ

- ಪ್ರಿ-ಬಿಡ್ ಸಭೆ : 10.03.2021ರ ಬೆಳಿಗ್ಗೆ 11.30 ಗಂಟೆಗೆ
- ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.03.2021ರ ಸಂಜೆ 5.30 ಗಂಟೆಗೆ
- ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 26.03.2021.

ಹೆಚ್ಚಿನ ಮಾಹಿತಿಗಾಗಿ https://eproc.karnataka.gov.in ಗೆ ಭೇಟಿ ನೀಡಿ

ಸಹಿ/- ಜಂಟಿ ನಿರ್ದೇಶಕರು (ಸುಧಾರಣೆ)

DIPR/DDU/YC/3023/2020-21 ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ , ಬೆಂಗಳೂರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ನೈಋತ್ಯ ರೈಲ್ವೆ

TENDER NOTICE No. MED/03/2021/HVS/CH/UBL/20-21 Date: 26.02.2021

ಕೇಂದ್ರೀಯ ಆಸ್ಪತ್ರೆ, ನೈರುತ್ಯ ರೈಲ್ವೆ, ಹುಬ್ಬಳ್ಳಿಯಲ್ಲಿ ನೇಮಕಾತಿ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಈ ಕೆಳಕಂಡ ವಿಶೇಷತೆಗಳಲ್ಲಿ ಕಾರ್ಯನಿರ್ವಹಿಸಲು ಆಸಕ್ತ ಅಭ್ಯರ್ಥಿಗಳಿಂದ "ಗೌರವ ಸಂದರ್ಶಕ ವಿಶೇಷಜ್ಞರು" ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ವಿಶೇಷಜ್ಞತೆ | ವಾರಕ್ಕೆ ದಿನಗಳ ಸಂಖ್ಯೆ | ಪ್ರತಿ ಭೇಟಿಗೆ ಗಂಟೆಗಳು | ಪ್ರತಿ ತಿಂಗಳಿಗೆ ಗೌರವಧನ ರೂ.ಗಳಲ್ಲಿ |
|---|---|---|---|---|
| 1. | ಇಎನ್‌ಟಿ (ತಜ್ಞರು) | ವಾರದಲ್ಲಿ 6 ದಿನ | 4 ಗಂಟೆಗಳು | 78,000/- |
| 2. | ಆಫ್ತಮಾಲಜಿ (ತಜ್ಞರು) | ವಾರದಲ್ಲಿ 6 ದಿನ | 4 ಗಂಟೆಗಳು | 78,000/- |
| 3. | ಡರ್ಮಟಾಲಜಿ (ತಜ್ಞರು) | ವಾರದಲ್ಲಿ 6 ದಿನ | 4 ಗಂಟೆಗಳು | 78,000/- |
| 4. | ಚೆಸ್ಟ್ ಫಿಸಿಷಿಯನ್ (ತಜ್ಞರು) | ವಾರದಲ್ಲಿ 6 ದಿನ | 4 ಗಂಟೆಗಳು | 78,000/- |
| 5. | ಮೆಡಿಕಲ್ ಗ್ಯಾಸ್ಟ್ರೋಎಂಟರಾಲಜಿ (ವಿಶೇಷ ತಜ್ಞರು) | ವಾರದಲ್ಲಿ 4 ದಿನ | 4 ಗಂಟೆಗಳು | 60,000/- |

ಆಸಕ್ತ ಅಭ್ಯರ್ಥಿಗಳು ಈ ಕೆಳಗಿನವುಗಳಲ್ಲಿ ಅರ್ಹರಾಗಿರಬೇಕು

| | | |
|---|---|---|
| 1. | ಅರ್ಹತೆ / ಅನುಭವ | 3 ವರ್ಷಗಳ ಅನುಭವದೊಂದಿಗೆ ಸ್ನಾತಕೋತ್ತರ ಪದವಿ ಅಥವಾ 5 ವರ್ಷಗಳ ಅನುಭವದೊಂದಿಗೆ ಸ್ನಾತಕೋತ್ತರ ಡಿಪ್ಲೋಮಾ ಪದವಿ |
| 2. | ವಯೋಮಿತಿ | 30 ರಿಂದ 64 ವರ್ಷಗಳು |
| 3. | ಯಾವುದೇ ಸಲಹೆಗರರು ಪ್ರಸ್ತುತವಾಗಿ ಯಾವುದೇ ಸರ್ಕಾರಿ / ಅರೆ ಸರ್ಕಾರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಅಂಥವರು ಸಂಬಂಧಪಟ್ಟ ಸಂಸ್ಥೆಯಿಂದ ಎನ್‌ಓಸಿಯನ್ನು ಪಡೆದು ಅರ್ಜಿಯೊಂದಿಗೆ ಅದನ್ನು ಸಲ್ಲಿಸಬೇಕು | |

ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 15.03.2021 06:00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಅನ್ನು ಸಂಪರ್ಕಿಸಿ

PUB/280/AASP/PRB/SWR/2020-21 ವೈದ್ಯಕೀಯ ನಿರ್ದೇಶಕರು, ಕೇಂದ್ರೀಯ ಆಸ್ಪತ್ರೆ ,ಹುಬ್ಬಳ್ಳಿ



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ

ಕುಷ್ಠರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ ಬೆಂಗಳೂರು- 560023

ದೂರವಾಣಿ:080-23351373/23351103

E-mail : rhfwtc-bengaluru@karnataka.gov.in

ಸಂಖ್ಯೆ : ಆಕುಕತಕೇ/ಎನ್.ಹೆಚ್.ಎಂ/28/2021-22 ದಿನಾಂಕ: 05.03.2021

ಟೆಂಡರ್ ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ ಮಾಗಡಿ ರಸ್ತೆ ಬೆಂಗಳೂರು ಇಲ್ಲಿ 2021-22ನೇ ಸಾಲಿನಲ್ಲಿ ಎನ್.ಹೆಚ್.ಎಂ. ಕಾರ್ಯಕ್ರಮದಡಿಯಲ್ಲಿ ನಡೆಸಲು ಉದ್ದೇಶಿಸಲಾಗಿರುವ ಇಲಾಖೆಯ ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಊಟ ಉಪಹಾರವನ್ನು ಸರಬರಾಜು ಮಾಡಲು, ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು, ಮಾಡ್ಯೂಲ್‌ಗಳ ಜೆರಾಕ್ಸ್ ಪ್ರತಿಗಳನ್ನು ಒದಗಿಸಲು, ಸ್ಕಿಲ್ ಲ್ಯಾಬ್‌ಗೆ ಸಂಬಂಧಿಸಿದ ಸಲಕರಣೆಗಳನ್ನು ಸರಬರಾಜು ಮಾಡಲು ಹಾಗೂ ಹೊರ ಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ನೌಕರರನ್ನು ಒದಗಿಸಲು ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು ದಿನಾಂಕ:06.03.2021 ಬೆಳಿಗ್ಗೆ 11:00 ರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ದಿನಾಂಕ: 04.04.2021 ಸಂಜೆ 05:00 ಗಂಟೆಯೊಳಗಾಗಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.

ಸಹಿ/-
ಪ್ರಾಂಶುಪಾಲರು
ಆರೋಗ್ಯ ಮತ್ತು ಕು.ಕ.ತರಬೇತಿ ಕೇಂದ್ರ
ಬೆಂಗಳೂರು-23.

ವಾಸಾಸಂಇ/ಬೆಂನ/3018/AAPL/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



PUBLIC NOTICE

NOTICE is hereby given to the public that our clients intents to take on lease of lease hold rights with regard to the properties morefully described in the Schedule hereunder and hereinafter referred to as "Schedule Property" from its Lessors namely (a) Daulat Chhabria, S/o. late Bulchand G.Chhabria, No.205, Embassy Centre, No.11, Crescent Road, Second floor,Bangalore 560 001 and (b) M/s. Great Western Suppliers Agency Private Limited, a company incorporated under the companies Act, 1956, having its registered office: Flat No. 101, 1st floor, H.No. 26/73, Karachi Khana, Kanpur- 208001.

ALL persons including an individual, a Company, Board, Banks, Financial Institution(s), Non- Banking Financial Institution(s), a Firm, an Association of persons or a body of individuals whether incorporated or not, lenders and/or creditors having any objection, claim, right, title and/or interest in respect of said Schedule Property or any part or portion thereof by way of Sale, Memorandum of Understanding, Exchange, Mortgage, Pledge, Charge, Gift, Trust, Inheritance, Succession, Possession, Lease, Tenancy, Maintenance, Easement, License, Bequeath, Share, Assignment, Lien, Attachment, Development Rights, Right of way, Lis pendens, Reservation, Agreement, FSI consumption or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned within a period of **07 (Seven) days** from the date of the publication of this notice, failing which, the claim or claims, if any, of such person or persons shall be considered to have been waived and/or abandoned.

SCHEDULE PROPERTY

ALL THAT PIECE AND PARCEL of property bearing (a) Unit No.301, with BBMP Khata No.138/8, PID No.76-15-138/8, measuring 4255 Sq.ft., together with open Car Parking units Nos.25 and 26 and covered car parking unit No.9 in the 1st Basement and Nos.18 and 19 in the 2nd Basement and the lease hold right over 6.75% undivided right and interest and (b) Unit No.302, with BBMP Khata No.138/8-1, PID No.76-15-138/8-1, measuring 4030 Sq.ft., together with open Car Parking units Nos.22 and 24 and covered car parking unit Nos.20 and 21 in the 2nd Basement and the lease hold right over 6.38% undivided right and interest, both in the Third floor of the building known as Raheja Paramount, constructed on the land bearing Corporation No.138, situated at Residency Road, Bangalore and bounded on the **East by** : Residency Road,
**West by** : Richmond Road,
**North by** : Property No.137, Residency Road,
**South by** : Property No.139, Residency Road.

S T Prashantha Kumar
Partner
Fox Mandal & Associates
6/12, Gurappa Avenue, Primrose Road, BENGALURU 560 025
Phone : +91 80 2559 5911, +91 80 3055 4100
Fax : +91 80 2559 5844
e-mail : bangalore@foxmandal.in


'ನಮ್ಮ ಮೆಟ್ರೊ' ಎರಡನೇ ಹಂತದ ಯೋಜನೆ

# 104 ಮರಗಳಿಗೆ ಕುತ್ತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ಮೆಟ್ರೊ' ಎರಡನೇ ಹಂತದ ಯೋಜನೆಗೆ 104 ಮರಗಳು ಜಾಗ ಮಾಡಿಕೊಡಬೇಕಾಗಿದ್ದು, ಇವುಗಳಲ್ಲಿ ಕೆಲವನ್ನು ಕಡಿದರೆ, ಕೆಲವು ಮರಗಳನ್ನು ಸ್ಥಳಾಂತರ ಮಾಡಲಾಗುತ್ತದೆ.

ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಿಂದ ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶ ನಿಲ್ದಾಣದ ವಿಸ್ತರಿತ ಮಾರ್ಗ ನಿರ್ಮಾಣಕ್ಕೆ 91 ಮರಗಳಿಗೆ ಕೊಡಲಿ ಏಟು ಬೀಳಲಿದ್ದು, ಇನ್ನು 13 ಮರಗಳು ಬೊಮ್ಮಸಂದ್ರ ಮಾರ್ಗ ನಿರ್ಮಾಣಕ್ಕೆ ತೆರವಾಗಲಿವೆ.

ಬೆಂಗಳೂರು ನಗರ ಜಿಲ್ಲೆಯ ಉಪಅರಣ್ಯ ಸಂರಕ್ಷಣಾಧಿಕಾರಿ ಈ ಮರಗಳನ್ನು ಕಡಿಯಲು ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ಅನುಮತಿ ನೀಡಿದ್ದಾರೆ. ಮರಗಳ ತಜ್ಞರ ಸಮಿತಿ (ಟಿಇಸಿ) ಶಿಫಾರಸ್ಸಿನ ನಂತರ ರೀಚ್ 1 (ಬೈಯಪ್ಪನಹಳ್ಳಿ-ವೈಟ್‌ಫೀಲ್ಡ್) ಹಾಗೂ ರೀಚ್ 5 (ಆರ್.ವಿ. ರಸ್ತೆ-ಬೊಮ್ಮಸಂದ್ರ) ಮಾರ್ಗದಲ್ಲಿ ಮರಗಳನ್ನು ಕಡಿಯಲು ಅಥವಾ ಸ್ಥಳಾಂತರಿಸಲು ಈ ಅನುಮತಿ ದೊರೆತಿದೆ.

ರೀಚ್ 1ರಲ್ಲಿ 39 ಮರಗಳನ್ನು ಕಡಿದರೆ, 52 ಮರಗಳನ್ನು ಸ್ಥಳಾಂತರಿಸಲಾಗುತ್ತದೆ. ಹೊಸ ಮಾರ್ಗ ನಿರ್ಮಾಣಕ್ಕೆ ಈ ಮರಗಳನ್ನು ತೆರವುಗೊಳಿಸಬೇಕಾದುದು ಅನಿವಾರ್ಯ ಎಂದು ತಜ್ಞರ ಸಮಿತಿ ಹೇಳಿದೆ.

**107 ಆಕ್ಷೇಪಣೆ:** ಮರಗಳನ್ನು ಕಡಿಯುವುದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. 107 ಮಂದಿ ಆಕ್ಷೇಪಣೆ ಸಲ್ಲಿಸಿದ್ದರು. ಇವುಗಳನ್ನು ಪರಿಶೀಲಿಸಿದ ಟಿಇಸಿ, ಸಮಗ್ರ ವರದಿಯನ್ನು ನೀಡಿದೆ.

ಅಲ್ಲದೆ, ಕಡಿಯಲಿರುವ ಮರಗಳಿಗೆ ಪರ್ಯಾಯವಾಗಿ 910 ಸಸಿಗಳನ್ನು ನೆಡಬೇಕು ಹಾಗೂ ಈ ಸಂಬಂಧ ಯೋಜನಾ ವರದಿಯನ್ನು ಎರಡು ತಿಂಗಳಲ್ಲಿ ಸಲ್ಲಿಸಬೇಕು ಎಂದು ವೃಕ್ಷ ಅಧಿಕಾರಿ ಬಿಎಂಆರ್‌ಸಿಎಲ್‌ಗೆ ಆದೇಶ ನೀಡಿದ್ದಾರೆ.

ಸ್ಥಳಾಂತರಿಸಿ ನೆಡಲಾದ ಮರಗಳನ್ನು ಮೂರು ವರ್ಷಗಳವರೆಗೆ ಪೋಷಿಸುವ ಜವಾಬ್ದಾರಿಯನ್ನು ಬಿಎಂಆರ್‌ಸಿಎಲ್ ನಿಭಾಯಿಸಬೇಕು ಮತ್ತು ಮರಗಳ ಸ್ಥಿತಿ-ಗತಿ ಕುರಿತು ಪ್ರತಿ ಮೂರು ತಿಂಗಳಿಗೊಮ್ಮೆ ವರದಿ ಕೊಡಬೇಕು ಎಂದು ನಿಗಮಕ್ಕೆ ಸೂಚನೆ ನೀಡಲಾಗಿದೆ.

### ಬೊಮ್ಮಸಂದ್ರ ಮಾರ್ಗದಲ್ಲಿ 13 ಮರ ಕಡಿಯಲು ಅನುಮತಿ

ರೀಚ್ 5ಗೆ 15 ಮರಗಳನ್ನು ಕಡಿಯುವ ಪ್ರಸ್ತಾವವನ್ನು ನಿಗಮ ನೀಡಿತ್ತು. ಎಂಟು ಆಕ್ಷೇಪಣೆಗಳು ಸಾರ್ವಜನಿಕರಿಂದ ಬಂದಿದ್ದವು. ಟಿಇಸಿಯು 13 ಮರಗಳನ್ನು ಕಡಿಯುವುದಕ್ಕೆ ಮಾತ್ರ ಅನುಮತಿ ನೀಡಿದೆ. ಎರಡು ಮರಕ್ಕೆ ಕಡಿಯುವುದಕ್ಕೆ ಪರ್ಯಾಯವಾಗಿ ಹತ್ತು ಸಸಿಗಳನ್ನು ನೆಟ್ಟು ಪೋಷಿಸುವಂತೆ ಟಿಇಸಿಯು ಬಿಎಂಆರ್‌ಸಿಎಲ್‌ಗೆ ಸೂಚನೆ ನೀಡಿದೆ.

## ಸುದ್ದಿ 2 ನಿಮಿಷ

### ಹೊರವಲಯಕ್ಕೆ ₹5 ಸಾವಿರ ಕೋಟಿ ಅನುದಾನ: ಆಗ್ರಹ

**ಬೆಂಗಳೂರು:** ಮಹಾನಗರದ ಹೊರವಲಯ ಪ್ರದೇಶಗಳ ವಿಧಾನಸಭಾ ಕ್ಷೇತ್ರಗಳಿಗೆ ಮೂಲಸೌಕರ್ಯ ಒದಗಿಸಲು ಪ್ರಸಕ್ತ ರಾಜ್ಯ ಬಜೆಟ್‌ನಲ್ಲಿ ₹5 ಸಾವಿರ ಕೋಟಿ ಅನುದಾನ ನಿಗದಿ ಮಾಡಬೇಕು ಎಂದು ದಾಸರಹಳ್ಳಿ ಶಾಸಕ ಆರ್. ಮಂಜುನಾಥ್ ಒತ್ತಾಯಿಸಿದ್ದಾರೆ.

'ಉದ್ಯೋಗ ಅರಸಿ ನಗರಕ್ಕೆ ಬರುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಹೊಸ ಕೈಗಾರಿಕೆಗಳು ಸ್ಥಾಪನೆಯಾಗುತ್ತಿವೆ. ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಏರಿಕೆ ಮಾಡಲು ಸರ್ಕಾರ ಮುಂದಾಗಿದೆ. ಏಷ್ಯಾದ ಎರಡನೇ ದೊಡ್ಡ ಕೈಗಾರಿಕಾ ಪ್ರದೇಶ ಎನಿಸಿರುವ ಪೀಣ್ಯದಲ್ಲಿ 10 ಸಾವಿರ ಉದ್ದಿಮೆಗಳು, 9 ಲಕ್ಷ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಪ್ರದೇಶಗಳ ಅಭಿವೃದ್ಧಿ ಅಗತ್ಯ' ಎಂದು ಅವರು ಹೇಳಿದ್ದಾರೆ.

'ಪೀಣ್ಯ ಕೈಗಾರಿಕಾ ಪ್ರದೇಶಗಳಲ್ಲಿನ ಕಂಪನಿಗಳಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ವರ್ಷಕ್ಕೆ ಸುಮಾರು ₹1,200 ಕೋಟಿ ವಾರ್ಷಿಕ ಜಿಎಸ್‌ಟಿ ಪಾವತಿಸಲಾಗುತ್ತಿದೆ. ಅಲ್ಲದೆ, ವರ್ಷಕ್ಕೆ ₹200 ಕೋಟಿಯಷ್ಟು ಆಸ್ತಿ ಮತ್ತು ವಾಣಿಜ್ಯ ತೆರಿಗೆ ಸಂಗ್ರಹವಾಗುತ್ತಿದೆ. ಈ ಹಣವನ್ನು ಬೇರೆ ಉದ್ದೇಶಕ್ಕೆ ಬಳಸದೆ ಹೊರವಲಯದ ಹೊಸ ಪ್ರದೇಶಗಳ ಅಭಿವೃದ್ಧಿ ಮಾತ್ರ ಬಳಕೆ ಮಾಡಬೇಕು' ಎಂದು ಅವರು ಕೋರಿದ್ದಾರೆ.

### ವಂಡರ್‌ಲಾ: ಮಹಿಳೆಯರಿಗೆ ವಿಶೇಷ ಕೊಡುಗೆ

**ಬೆಂಗಳೂರು:** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ವಂಡರ್ ಲಾ ಬೆಂಗಳೂರು ತನ್ನ ಥೀಮ್ ಪಾರ್ಕ್ ಮತ್ತು ರೆಸಾರ್ಟ್‌ಗಳಲ್ಲಿ ಮಹಿಳೆಯರಿಗೆ ವಿಶೇಷ ಕೊಡುಗೆಯನ್ನು ಘೋಷಿಸಿದೆ.

ಜಿಎಸ್‌ಟಿ ಸಹಿತ ₹ 999 ಟಿಕೆಟ್‌ಗೆ ಒನ್ + ಒನ್ ಕೊಡುಗೆ ನೀಡಲಾಗಿದೆ. ಅದೇ ರೀತಿ, ಮಹಿಳೆಯರಿಗೆ ಎರಡು ವಿಭಿನ್ನ ರೆಸಾರ್ಟ್ ಪ್ಯಾಕೇಜ್‌ಗಳನ್ನು ಘೋಷಿಸಲಾಗಿದೆ.

ಪಾರ್ಕ್ + ರೆಸಾರ್ಟ್ ಡೇ ಪ್ಯಾಕೇಜ್ ಅಡಿಯಲ್ಲಿ ಮಧ್ಯಾಹ್ನ 1.30ರಿಂದ ಸಂಜೆ 6 ಗಂಟೆಯವರೆಗೆ ಸಮಯ ನಿಗದಿ ಮಾಡಲಾಗಿದೆ. ಥೀಮ್ ಪಾರ್ಕ್‌ಗೆ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಜತೆಗೆ ರೆಸಾರ್ಟ್‌ನಲ್ಲಿ ತಾಜಾ ಪಾನೀಯಗಳು, ರುಚಿಕರ ಊಟ, ಚಹಾ ಒದಗಿಸಲಾಗುತ್ತದೆ. ಈಜು, ಕೇರಮ್, ಚೆಸ್, ಬಿಲಿಯರ್ಡ್ಸ್, ಟೇಬಲ್ ಸ್ನೂಕರ್ ಸೇರಿದಂತೆ ಹಲವು ಒಳಾಂಗಣ ಕ್ರೀಡೆಗಳ ಜತೆಗೆ ಕ್ರಿಕೆಟ್, ವಾಲಿಬಾಲ್, ಬ್ಯಾಡ್ಮಿಂಟನ್‌ನಂತಹ ಹೊರಾಂಗಣ ಆಟಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಒಟ್ಟಾರೆ ಈ ಪ್ಯಾಕೇಜ್‌ಗೆ ₹ 1,200 ನಿಗದಿಪಡಿಸಲಾಗಿದೆ.

ರೆಸಾರ್ಟ್ ಡೇ ಔಟಿಂಗ್ ಪ್ಯಾಕೇಜ್‌ನಲ್ಲಿ ಕೂಡ ಪಾನೀಯಗಳು, ಊಟ, ಚಹಾದ ಜತೆಗೆ ಕೆಲವು ಒಳಾಂಗಣ ಹಾಗೂ ಹೊರಾಂಗಣ ಆಟಗಳು ಇರುತ್ತವೆ. ಇದಕ್ಕೆ ₹ 900 ನಿಗದಿಪಡಿಸಲಾಗಿದೆ. ಮಾ.8ರಂದು ಥೀಮ್ ಪಾರ್ಕ್‌ನಲ್ಲಿ ಪುರುಷರಿಗೆ ಪ್ರವೇಶ ಇರುವುದಿಲ್ಲ. 10 ವರ್ಷದೊಳಗಿನ ಗಂಡು ಮಕ್ಕಳು ಬರಬಹುದಾಗಿದೆ. ಆ ದಿನ ಮಹಿಳೆಯರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ಬೆಳಿಗ್ಗೆ 11ರಿಂದ ಸಂಜೆ 6 ಗಂಟೆಯವರೆಗೆ ತೆರೆದಿರುತ್ತದೆ. ಆನ್‌ಲೈನ್ ಮೂಲಕ ಬುಕ್ಕಿಂಗ್ ಮಾಡುವವರು bookings.wonderla.comಗೆ ಭೇಟಿ ನೀಡಿ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಪರ್ಕಕ್ಕೆ ದೂ.: 080 37230300

# ನ್ಯಾಯಾಲಯದ ಮೊರೆ ಹೋದ ಆರು ಸಚಿವರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಮೇಶ ಜಾರಕಿಹೊಳಿ ಅವರ ಸಿ.ಡಿ ಪ್ರಕರಣ ಬಯಲಿಗೆ ಬಂದ ಬೆನ್ನಲ್ಲೇ ಮಾನಹಾನಿಕರ ಸುದ್ದಿಗಳನ್ನು ಪ್ರಸಾರ ಮಾಡದಂತೆ ಆರು ಸಚಿವರು ಸಿಟಿ ಸಿವಿಲ್ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಕ್ರೀಡೆ ಮತ್ತು ಯುವಜನ ಸಬಲೀಕರಣ, ಸಾಂಖ್ಯಿಕ ಮತ್ತು ಯೋಜನೆ ಸಚಿವ ಕೆ.ಸಿ. ನಾರಾಯಣಗೌಡ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್, ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಕೃಷಿ ಸಚಿವ ಬಿ.ಸಿ. ಪಾಟೀಲ ಮತ್ತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಚನ್ನಬಸಪ್ಪ ಎಂಬ ವಕೀಲರ ಮೂಲಕ ಅರ್ಜಿ ಸಲ್ಲಿಸಿದ್ದಾರೆ. ಶನಿವಾರ ವಿಚಾರಣೆಗೆ ಬರಲಿದೆ.

ಸರ್ಕಾರಿ ನೌಕರಿ ಕೊಡುವ ಆಮಿಷ ಒಡ್ಡಿ ಯುವತಿಯೊಬ್ಬಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡ ಆರೋಪಕ್ಕೆ ಸಿಲುಕಿರುವ ರಮೇಶ ಜಾರಕಿಹೊಳಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಮಾನಹಾನಿಕರ ಸುದ್ದಿ ಪ್ರಸಾರದ ಭೀತಿಯಿಂದ ಮತ್ತು ಅಂಥ ಸುದ್ದಿ ಪ್ರಸಾರವಾಗುವ ಮೊದಲೇ ನ್ಯಾಯಾಲಯದ ಮೂಲಕ ನಿರ್ಬಂಧ ವಿಧಿಸಲು ಸಚಿವರು ಮುಂದಾಗಿದ್ದಾರೆ ಎನ್ನಲಾಗಿದೆ. 67 ಸುದ್ದಿ ಸಂಸ್ಥೆಗಳನ್ನು ಪ್ರತಿವಾದಿ ಮಾಡಲಾಗಿದೆ. ಸಾಮಾಜಿಕ ಕಾರ್ಯಕರ್ತ ರಾಜಶೇಖರ ಮುಲಾಲಿ ಅವರನ್ನು 68ನೇ ಪ್ರತಿವಾದಿಯನ್ನಾಗಿ ಮಾಡಲಾಗಿದೆ. ಇನ್ನೂ 19 ರಾಜಕಾರಣಿಗಳ ಸಿ.ಡಿ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದು ಮುಲಾಲಿ ಎರಡು ದಿನಗಳ ಹಿಂದೆ ಹೇಳಿಕೆ ನೀಡಿದ್ದರು. ಪ್ರತಿವಾದಿಗಳ ಪಟ್ಟಿಯಲ್ಲಿ ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್, ವಾಟ್ಸ್‌ಆ್ಯಪ್ ಕೂಡ ಇವೆ.

## ಬಿಬಿಎಂಪಿಯಿಂದಲೇ ಪಾದಚಾರಿ ಮಾರ್ಗ ಒತ್ತುವರಿ: ಪಿಐಎಲ್

**ಬೆಂಗಳೂರು:** ನಗರದಲ್ಲಿ ಪಾದಚಾರಿ ಮಾರ್ಗಗಳನ್ನು ಖಾಸಗಿ ವ್ಯಕ್ತಿಗಳು ಮಾತ್ರವಲ್ಲದೇ ಪೊಲೀಸ್ ಮತ್ತು ಬಿಬಿಎಂಪಿಯಿಂದಲೇ ಒತ್ತುವರಿ ಮಾಡಲಾಗಿದೆ ಎಂದು ಆರೋಪಿಸಿ ಹೈಕೋರ್ಟ್‌ನಲ್ಲಿ ಲೆಟ್ಜ್ ಕಿಟ್ ಫೌಂಡೇಷನ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದೆ.

ಅರ್ಜಿಯಲ್ಲಿ ಉಲ್ಲೇಖಿಸಿರುವ ಸ್ಥಳಗಳನ್ನು ಪರಿಶೀಲಿಸಲು ಅಧಿಕಾರಿಗಳನ್ನು ನಿಯೋಜಿಸುವಂತೆ ಬಿಬಿಎಂಪಿಗೆ ನಿರ್ದೇಶನ ನೀಡಿದ ಪೀಠ, ಪ್ರತಿವಾದಿಗಳಿಗೆ ನೋಟಿಸ್ ನೀಡಲು ಆದೇಶಿಸಿತು.

'ಕೇಂದ್ರ ವಾಣಿಜ್ಯ ಪ್ರದೇಶದ(-ಸಿಬಿಡಿ) ಕೆಲ ರಸ್ತೆಗಳಲ್ಲಿ ಪಾದಚಾರಿ ಸ್ನೇಹಿಯಾದ ಮಾರ್ಗಗಳಿಲ್ಲ ಮತ್ತು ಅತಿಕ್ರಮಣವಾಗಿದೆ. ನಡಿಗೆದಾರರಿಗೆ ಅನುಕೂಲ ಆಗುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ಸುಸಜ್ಜಿತ ಪಾದಚಾರಿ ಮಾರ್ಗದ ಹಕ್ಕನ್ನು ಸಂವಿಧಾನದ ಅಡಿಯಲ್ಲಿ ಖಾತರಿಪಡಿಸಲಾಗಿದೆ. ಅರ್ಜಿಯಲ್ಲಿ ಸೂಚಿಸಿದ ಜಾಗಗಳನ್ನು ಪರಿಶೀಲಿಸಲು ಅಧಿಕಾರಿಯನ್ನು ನಿಯೋಜಿಸಲು ಬಿಬಿಎಂಪಿಗೆ ನಿರ್ದೇಶನ ನೀಡಲಾಗುತ್ತಿದೆ. ಅತಿಕ್ರಮಣ ಕಂಡುಬಂದರೆ ಕೂಡಲೇ ತೆರವುಗೊಳಿಸಬೇಕು' ಎಂದು ಪೀಠ ತಿಳಿಸಿತು.

# ದಂಡರಹಿತವಾಗಿ ಉದ್ದಿಮೆ ಪರವಾನಗಿ ನವೀಕರಣ: ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉದ್ದಿಮೆ ಪರವಾನಗಿಯನ್ನು ದಂಡರಹಿತವಾಗಿ 2021-22ನೇ ಸಾಲಿಗೆ ನವೀಕರಿಸುವ ಅವಧಿಯನ್ನು ಬಿಬಿಎಂಪಿ ವಿಸ್ತರಿಸಿದೆ.

ಉದ್ದಿಮೆ ಪರವಾನಗಿಯನ್ನು ಫೆಬ್ರುವರಿ ತಿಂಗಳವರೆಗೆ ನವೀಕರಿಸುವವರಿಗೆ ಬಿಬಿಎಂಪಿ ಯಾವುದೇ ದಂಡ ವಿಧಿಸುತ್ತಿರಲಿಲ್ಲ. ಮಾರ್ಚ್ ತಿಂಗಳಲ್ಲಿ ಪರವಾನಗಿ ನವೀಕರಿಸಿದರೆ ಪರವಾನಗಿ ಶುಲ್ಕದ ಶೇ 25ರಷ್ಟು ದಂಡ ಹಾಗೂ ಏಪ್ರಿಲ್ 1ರ ಬಳಿಕ ನವೀಕರಿಸಿದರೆ ಶೇ 100ರಷ್ಟು ದಂಡ ಪಾವತಿಸಬೇಕಿತ್ತು.

'2021ರ ಮಾರ್ಚ್ 31ರವರೆಗೆ ದಂಡನಾ ಶುಲ್ಕ ವಿಲ್ಲದೆಯೇ ಉದ್ದಿಮೆ ಪರವಾನಗಿ ನವೀಕರಿಸಬಹುದು' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಬಿ.ಕೆ.ವಿಜಯೇಂದ್ರ ಅವರು ಬುಧವಾರ ಸುತ್ತೋಲೆ ಹೊರಡಿಸಿದ್ದಾರೆ. ಏ. 1ರ ಬಳಿಕ ಉದ್ದಿಮೆ ಪರವಾನಗಿ ನವೀಕರಿಸುವವರು ಶೇ 100 ದಂಡನಾ ಶುಲ್ಕ ಕಟ್ಟಬೇಕಾಗುತ್ತದೆ ಎಂದು ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ದಂಡ ರಹಿತವಾಗಿ ಉದ್ದಿಮೆ ಪರವಾನಗಿ ನವೀಕರಿಸುವ ಅವಧಿಯನ್ನು ಮಾ .31ರವರೆಗೆ ವಿಸ್ತರಿಸುವಂತೆ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘವು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿತ್ತು.

## ನಗರದಲ್ಲಿ ಇಂದು

**ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ 'ಬಲಿಷ್ಠ ಮಹಿಳೆ-ಬಲಿಷ್ಠ ಪ್ರಪಂಚ' ಕಾರ್ಯಕ್ರಮ ಹಾಗೂ ಮಹಿಳೆಯರ ಆರೋಗ್ಯ ಸಮಸ್ಯೆಗಳ ಕುರಿತು ವೈದ್ಯಕೀಯ ಚರ್ಚೆ:** ಅತಿಥಿಗಳು-ನಟಿ ಮಾಳವಿಕಾ ಅವಿನಾಶ್, ಐಎಎಸ್ ಅಧಿಕಾರಿ ಕಲ್ಪನಾ ಗೋಪಾಲನ್, ಸ್ಪಂದನಾ ರಾವ್, ದೀಪ್ತಿ ವಿಜಯನ್, ವೈದ್ಯರಾದ ಆರತಿ ರಾಮಾ ರಾವ್, ಮೀನಾ ಮುತ್ತಯ್ಯ, ಗಾಯತ್ರಿ ಕಾರ್ತಿಕ್, ಹೇಮಾನಂದಿನಿ ಜಯರಾಮನ್, ಆಯೋಜನೆ-ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್, ಸಹಯೋಗ-ಮಣಿಪಾಲ್ ಆಸ್ಪತ್ರೆ, ಸ್ಥಳ-ಸ್ಟರ್ಲಿಂಗ್ ಮ್ಯಾಕ್ ಹೋಟೆಲ್, ಹಳೆಯ ವಿಮಾನ ನಿಲ್ದಾಣ ರಸ್ತೆ, ಬೆಳಿಗ್ಗೆ 11

ಮಾಳವಿಕಾ

**ಮಹಿಳಾ ದಿನದ ಅಂಗವಾಗಿ ಸಾಧಕರಿಗೆ ಸನ್ಮಾನ:** ಅಧ್ಯಕ್ಷತೆ-ಸಂಸದ ತೇಜಸ್ವಿ ಸೂರ್ಯ, ಸನ್ಮಾನಿತರು-ವೈ.ಕೆ.ಸಂಧ್ಯಾ ಶರ್ಮ, ಮಾಳವಿಕಾ, ಜಯಶ್ರೀ ಪ್ರಶಾಂತ್, ಮಂಗಮ್ಮ, ಅತಿಥಿಗಳು-ತೇಜಸ್ವಿನಿ ಅನಂತಕುಮಾರ್, ನಟಿ ತಾರಾ ಅನೂರಾಧ, ನೇತೃತ್ವ-ಶಾಸಕ ಉದಯ್ ಬಿ.ಗರುಡಾಚಾರ್, ಆಯೋಜನೆ-ಬಿಜೆಪಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ, ಸ್ಥಳ-ಮರಿಸ್ವಾಮಪ್ಪ ಕಲ್ಯಾಣ ಮಂಟಪ, ವಿಲ್ಸನ್ ಗಾರ್ಡನ್, ಬೆಳಿಗ್ಗೆ 10.30

**ವಿಶೇಷ ಮಾದರಿ ಜೀವವೈವಿಧ್ಯ ಯೋಜನೆಗೆ ಚಾಲನೆ ಹಾಗೂ 'ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಲಾಭ ಹಂಚಿಕೆ' ಕಾರ್ಯಾಗಾರ ಉದ್ಘಾಟನೆ**-ಪರಿಸರ ಸಚಿವ ಸಿ.ಪಿ. ಯೋಗೇಶ್ವರ್, ಅತಿಥಿ-ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ಆಯೋಜನೆ-ಕರ್ನಾಟಕ ಜೀವವೈವಿಧ್ಯ ಮಂಡಳಿ, ಸ್ಥಳ-ಸಭಾಂಗಣ, 8ನೇ ಮಹಡಿ, ಅರಣ್ಯ ಭವನ, ಮಲ್ಲೇಶ್ವರ, ಬೆಳಿಗ್ಗೆ 11

ಯೋಗೇಶ್ವರ್

**'ಮಾಂಟೇಜ್ ಆಫ್ ಮೆಮೊರೀಸ್'**-ಎಸ್.ಜಿ.ವಾಸುದೇವ್ ಅವರಿಂದ ಕೊಲಾಜ್‌ಗಳ ಪ್ರದರ್ಶನ:ಆಯೋಜನೆ, ಸ್ಥಳ-ಗ್ಯಾಲರಿ ಸುಮುಖ, ಬಿಟಿಎಸ್ ಡಿಪೊ ರಸ್ತೆ, ವಿಲ್ಸನ್ ಗಾರ್ಡನ್, ಬೆಳಿಗ್ಗೆ 11ರಿಂದ ಸಂಜೆ 5

**'ಹೊಸ ಓದು' ಮಾಸ್ತಿ-ಸೃಷ್ಟಿ ಕಥನ:** ಎಸ್.ಆರ್.ವಿಜಯಶಂಕರ ಅವರ ಕೃತಿ 'ಮಾಸ್ತಿ ವೆಂಕಟೇಶ ಅಯ್ಯಂಗಾರ್ ಬದುಕು-ಬರಹ' ಕುರಿತು ಮಾತುಕತೆ, ಆಯೋಜನೆ ಮತ್ತು ಸ್ಥಳ-ಸುಚಿತ್ರ ಸಭಾಂಗಣ, ಬಿ.ವಿ.ಕಾರಂತ ರಸ್ತೆ, ಬಸಶಂಕರಿ 2ನೇ ಹಂತ, ಸಂಜೆ 5.30

**'ಉತ್ತರ್ ದಕ್ಷಿಣ್' ಸಂಗೀತ ಜುಗಲ್‌ಬಂದಿ ಸರಣಿ:** ಕೊಳಲು ವಾದಕ ಪಂಡಿತ್ ರೋನು ಮುಜುಂದಾರ್ ಮತ್ತು ಮ್ಯಾಂಡೋಲಿನ್ ವಾದಕ ಯು.ರಾಜೇಶ್ ಅವರ ಜುಗಲ್‌ಬಂದಿ, ಬೆಂಗಳೂರು ವಿ.ಪ್ರವೀಣ್ ಮತ್ತು ವಿ.ನರಹರಿ, ಭಟ್ ಸಹೋದರಿಯರಾದ ರಮ್ಯಾ ಮತ್ತು ರೇಷ್ಮಾ ಅವರಿಂದ ಹಿಂದೂಸ್ತಾನಿ ಗಾಯನ, ಆಯೋಜನೆ-ವಿವಿಧ್ ಆರ್ಟ್ಸ್ ಎಂಟರ್‌ಟೈನ್‌ಮೆಂಟ್ ಹಾಗೂ ದಿ ಪಯೋನೀರ್ ಆರ್ಟ್ಸ್ ಎಜುಕೇಷನ್ ಸೊಸೈಟಿ, ಸಹಯೋಗ-ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಥಳ-ಚೌಡಯ್ಯ ಮೆಮೊರಿಯಲ್ ಹಾಲ್, ಸಂಜೆ 6

**ರಸಸಂಜೆ:** ವೆಂಕಟೇಶ ನಾಟ್ಯ ಮಂದಿರ ನೃತ್ಯ ಶಾಲೆಯ ವಿದ್ಯಾರ್ಥಿನಿಯರಿಂದ 'ನೀಲಾ ಮಾಧವ' ಭರತನಾಟ್ಯ ಏಕವ್ಯಕ್ತಿ ನೃತ್ಯ ಪ್ರದರ್ಶನ ಹಾಗೂ ಸತ್ಯನಾರಾಯಣ ರಾಜು, ಸೌಂದರ್ಯ ಐಗೋರ್ ಅವರಿಂದ ಭರತನಾಟ್ಯ 'ಮಾರ್ಗಂ' ಯುಗಳ ನೃತ್ಯ, ಅತಿಥಿ-ಅನನ್ಯಾ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಆರ್.ವಿ.ರಾಘವೇಂದ್ರ, ಸ್ಥಳ-ಎಡಿಎ ರಂಗಮಂದಿರ, ಸಂಜೆ 6

## ರೈತನ ಮಗಳಿಗೆ 4 ಚಿನ್ನದ ಪದಕ

**ತುಮಕೂರು:** ಕೃಷಿ ಕುಟುಂಬದಿಂದ ಬಂದ ವಿದ್ಯಾರ್ಥಿನಿ ಕೆ.ಎಸ್. ಪಾವನ ಕನ್ನಡ ವಿಭಾಗದ ಸ್ನಾತಕೋತ್ತರ ಪದವಿಯಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ತಿಪಟೂರು ತಾಲ್ಲೂಕು ಕೆ.ಬಿ. ಕ್ರಾಸ್ ಸಮೀಪದ ಕಾಮಗೊಂಡನಹಳ್ಳಿ ರೈತ ನರಸಿಂಹರಾಜು ಅವರ ಪುತ್ರಿ. ಹಳ್ಳಿಯಿಂದ ಪ್ರತಿದಿನವೂ ವಿಶ್ವವಿದ್ಯಾಲಯಕ್ಕೆ ಬಸ್‌ನಲ್ಲೇ ಪ್ರಯಾಣ ಮಾಡಿ, ಅಭ್ಯಾಸದಲ್ಲಿ ತೊಡಗಿಸಿಕೊಂಡು ರ್‍ಯಾಂಕ್ ಪಡೆದಿದ್ದಾರೆ. ಪ್ರಯಾಣದ ಸಮಯವನ್ನು ವ್ಯರ್ಥಮಾಡದೇ ಓದಿಗೆ ಬಳಕೆ ಮಾಡಿಕೊಂಡಿದ್ದಾರೆ. ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಉನ್ನತ ಸಾಧನೆ ಮಾಡಿದ್ದಾರೆ.

ತಂದೆ ಕೃಷಿಕರಾದರೂ ಮಗಳ ವಿದ್ಯಾಭ್ಯಾಸಕ್ಕೆ ಅನುವುಮಾಡಿ ಕೊಟ್ಟಿದ್ದಾರೆ. ನಗರಕ್ಕೆ ಕಳುಹಿಸಿ ಸಾಧನೆ ಮಾಡುವಂತೆ ಮಾಡಿದ್ದಾರೆ. ಮಗಳು ಚಿನ್ನದ ಪದಕ ಪಡೆಯುವುದನ್ನು ಕ್ಯಾಂಪಸ್‌ನಲ್ಲಿ ನರಸಿಂಹರಾಜು ಕಣ್ತುಂಬಿಕೊಂಡರು. 'ಪದವಿಯಲ್ಲೂ ರ್‍ಯಾಂಕ್ ಪಡೆದಿದ್ದೆ. ಇಲ್ಲಿಯೂ ರ್‍ಯಾಂಕ್ ನಿರೀಕ್ಷಿಸಿದ್ದೆ. ಹಳ್ಳಿಯಿಂದ ಬಂದು ಮಾಡಿದ ಸಾಧನೆ ಹೆಮ್ಮೆ ತಂದಿದೆ. ನಮ್ಮ ಊರಿನಲ್ಲಿ ನಾನೇ ಮೊದಲು ಎಂ.ಎ ಮಾಡುತ್ತಿರುವುದು. ನಮ್ಮೂರಿನ ಹೆಸರು ಪತ್ರಿಕೆಯಲ್ಲಿ ಬರುತ್ತಿರುವುದು ಕಂಡು ಖುಷಿ ತಂದಿದೆ. ಮುಂದೆ ಶಿಕ್ಷಕಿಯಾಗಲು ಬಯಸಿದ್ದೇನೆ' ಎಂದು ಪಾವನ ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಸದಸ್ಯರು ಗಾಂಧಿ ಪ್ರತಿಮೆ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

# 'ಸಂಘ- ಪರಿವಾರದಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಬುಡಮೇಲು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ದೇಶದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರು ಕ್ಲಿಷ್ಟಕರ ದಿನಗಳನ್ನು ಎದುರಿಸುತ್ತಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಕೊಟ್ಟಿರುವ ಸಂವಿಧಾನದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಸಂಘ- ಪರಿವಾರದವರು ಬುಡಮೇಲು ಮಾಡುತ್ತಿದ್ದಾರೆ' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಸಂಚಾಲಕ ಲಕ್ಷ್ಮಿನಾರಾಯಣ ನಾಗವಾರ ದೂರಿದರು.

'ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಸಂವಿಧಾನಬದ್ಧ ಹಕ್ಕುಗಳಿಗಾಗಿ ಹಾಗೂ ವಾರ್ಷಿಕ ₹ 15 ಲಕ್ಷ ವರಮಾನ ಹೆಚ್ಚಳ ಮಾಡಬೇಕು' ಎಂದು ಒತ್ತಾಯಿಸಿ ನಗರದ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಎದುರು ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

'ಮೀಸಲಾತಿ ವ್ಯವಸ್ಥೆಯನ್ನು ದಿನದಿಂದ ದಿನಕ್ಕೆ ನಾಶಗೊಳಿಸುತ್ತ ಹೊರಟಿದ್ದಾರೆ. ವಿದ್ಯಾರ್ಥಿ ವೇತನವನ್ನೂ ತಡೆಹಿಡಿದಿದ್ದಾರೆ. ಸರ್ಕಾರಿ ಸ್ವಾಮ್ಯದ ಉದ್ಯಮಗಳನ್ನು ಖಾಸಗೀಕರಣ ಮಾಡುತ್ತಿದ್ದಾರೆ' ಎಂದೂ ಆಕ್ರೋಶ ವ್ಯಕ್ತಪಡಿಸಿದರು.

'ಇತಿಹಾಸದ ಸತ್ಯವನ್ನು ಮುಚ್ಚಿಟ್ಟು ತಿರುಚುವ ಉದ್ದೇಶದಿಂದ, 6ನೇ ತರಗತಿಯ ಪಠ್ಯದಲ್ಲಿದ್ದ 'ಹೊಸ ಧರ್ಮಗಳ ಉದಯ' ಪಾಠವನ್ನು ಕೈಬಿಡಲಾಗಿದೆ. ಈ ಬಗ್ಗೆ ಶಿಕ್ಷಣ ಸಚಿವರು ಹೊರಡಿಸಿರುವ ಸುತ್ತೋಲೆಯನ್ನು ಕೂಡಲೇ ರದ್ದುಪಡಿಸಬೇಕು' ಎಂದೂ ಅವರು ಒತ್ತಾಯಿಸಿದರು.

ಬೆಂಗಳೂರು ವಿಭಾಗೀಯ ಸಂಚಾಲಕ ಜೀವನಹಳ್ಳಿ ವೆಂಕಟೇಶ್, 'ಶೋಷಿತರು, ನಿರ್ಲಕ್ಷ್ಯಕ್ಕೆ ಒಳಗಾದವರಿಗೆ ಮೀಸಲಾತಿ ಸಿಗಬೇಕು. ಬಲಿಷ್ಠರಿಗೆ, ಉಳ್ಳವರಿಗೆ ಮೀಸಲಾತಿ ಸಿಗುವಂಥ ಸ್ಥಿತಿಯನ್ನು ಕೇಂದ್ರ ಸರ್ಕಾರ ನಿರ್ಮಾಣ ಮಾಡುತ್ತಿದೆ' ಎಂದರು.

'ಬಡವರಿಗೆ ಸಹಕಾರ ಬ್ಯಾಂಕ್‌ಗಳಿಂದ ₹ 10 ಸಾವಿರ ಬಡ್ಡಿರಹಿತ ಸಾಲ ಸಿಗುತ್ತಿತ್ತು. ಇಂಥ ಬಡವರ ಬಂಧು ಯೋಜನೆಯನ್ನೇ ಏಕಾಏಕಿ ನಿಲ್ಲಿಸಲಾಗಿದೆ' ಎಂದು ದೂರಿದರು.

ಎನ್‌ಎಸ್‌ಎಸ್ ಪ್ರಾಂತೀಯ ಕೇಂದ್ರ ನಿರ್ದೇಶಕ ಖಾದ್ರಿ ನರಸಿಂಹಯ್ಯ ಅಭಿಮತ

# 'ಯುವಜನ ಸಂಪನ್ಮೂಲ ಬಳಕೆಯಿಂದ ಅಭಿವೃದ್ಧಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 55ರಷ್ಟು ಯುವಜನರಿದ್ದಾರೆ. ಈ ಯುವಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಂಡರೆ ದೇಶ ಇನ್ನೂ ಹೆಚ್ಚು ಅಭಿವೃದ್ಧಿ ಸಾಧಿಸುವುದರಲ್ಲಿ ಅನುಮಾನವಿಲ್ಲ' ಎಂದು ಎನ್‌ಎಸ್‌ಎಸ್ ಪ್ರಾಂತೀಯ ಕೇಂದ್ರ ನಿರ್ದೇಶಕ ಖಾದ್ರಿ ನರಸಿಂಹಯ್ಯ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಶುಕ್ರವಾರ ನಡೆದ ಸ್ಕೂಲ್ ಬೆಲ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಎನ್‌ಎಸ್‌ಎಸ್ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಏಳಿಗೆ ಮತ್ತು ಶ್ರೇಯೋಭಿವೃದ್ಧಿಗೆ ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಹೊಸದಾಗಿ ನೇಮಕಗೊಂಡ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಅವರನ್ನು ಸನ್ಮಾನಿಸಲಾಯಿತು. ಪ್ರೇಮ್ ಹಾಗೂ ವಿಶ್ವವಿದ್ಯಾಲಯದ ಸಂಯೋಜನಾಧಿಕಾರಿ ಡಾ. ಎನ್ ಸತೀಶ್ ಗೌಡ ಉಪಸ್ಥಿತರಿದ್ದರು.

ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಎನ್. ಸತೀಶ್ ಗೌಡ, 'ಕೋವಿಡ್ ಸಂದರ್ಭದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಅದ್ವಿತೀಯ ಕೆಲಸ ಮಾಡಿದ್ದಾರೆ. ಸ್ಕೂಲ್ ಬೆಲ್ ಕಾರ್ಯಕ್ರಮದ ಮೂಲಕ ಎಷ್ಟೋ ಬಡ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳಿಗೆ ನೆರವಾಗಲಿದ್ದಾರೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯ ಪ್ರೇಮ್,'ಶಾಲೆ ಬಿಟ್ಟಿರುವ ವಿದ್ಯಾರ್ಥಿಗಳು ಪುನಃ ಶಾಲೆಗೆ ಹಾಜರಾಗುವಂತೆ ಮಾಡಲಾಗುವುದಲ್ಲದೆ, ಬಾಲ್ಯವಿವಾಹ ತಡೆಗಟ್ಟುವ ಕೆಲಸವನ್ನು ಸ್ಕೂಲ್ ಬೆಲ್ ಕಾರ್ಯಕ್ರಮದ ಮೂಲಕ ಮಾಡಲಾಗುವುದು' ಎಂದರು.

### ಅವೆನ್ಯೂ ರಸ್ತೆ ಕಾಮಗಾರಿ ಪರಿಶೀಲಿಸಿದ ಬಿಬಿಎಂಪಿ ಆಯುಕ್ತ

# ‘10 ತಿಂಗಳಲ್ಲಿ ಕಾಮಗಾರಿ ಮುಗಿಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಅವೆನ್ಯೂ ರಸ್ತೆಯಲ್ಲಿ ನಡೆಯುತ್ತಿರುವ ಸ್ಮಾರ್ಟ್ ಸಿಟಿ ಟೆಂಡರ್ ಶ್ಯೂರ್ ಕಾಮಗಾರಿಯನ್ನು 10 ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಈ ರಸ್ತೆಯನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಶುಕ್ರವಾರ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು.

**ಮೂರು ಹಂತಗಳಲ್ಲಿ ಕಾಮಗಾರಿ:** 'ಅವೆನ್ಯೂ ರಸ್ತೆ 1 ಕಿ.ಮೀ 80 ಮೀಟರ್ ಉದ್ದವಿದ್ದು, ಎಲ್ಲ ಕಡೆ ರಸ್ತೆ ಅಗೆದರೆ ವ್ಯಾಪಾರ ವಹಿವಾಟು ಹಾಗೂ ಹೆಚ್ಚು ಸಂಚಾರದಟ್ಟಣೆಯಾಗಲಿದೆ ಎಂಬ ಕಾರಣಕ್ಕೆ ಸಂಚಾರ ಪೊಲೀಸ್ ವಿಭಾಗವು 300 ಮೀಟರ್‌ಗಳಂತೆ ಮೂರು ಹಂತಗಳಲ್ಲಿ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುಮತಿ ನೀಡಿದೆ' ಎಂದರು.

‘ಮೊದಲ ಹಂತದ 300 ಮೀಟರ್ ರಸ್ತೆಯಲ್ಲಿ ಎರಡೂ ಕಡೆ ಒಳಚರಂಡಿ ಮಾರ್ಗದ ಕಾಮಗಾರಿ ಮುಕ್ತಾಯವಾಗಿದೆ. ಇನ್ನು ಒಂದು ಭಾಗದಲ್ಲಿ 26 ಬೆಸ್ಕಾಂ ಕೇಬಲ್‌ಗಳು ಬರಲಿದ್ದು, 900 ಎಂ.ಎಂನ ರಾಜಕಾಲುವೆ ಮಾರ್ಗವೂ ಬರಲಿದೆ. 6 ಬೆಸ್ಕಾಂ ಕೇಬಲ್ ಹಾಗೂ 5 ಒ.ಎಫ್.ಸಿ ಕೇಬಲ್‌ಗಳು ಸೇರಿ 11 ಡಕ್ಟ್ ಬರಲಿವೆ' ಎಂದು ಮಾಹಿತಿ ನೀಡಿದರು.

ಅವೆನ್ಯು ರಸ್ತೆ ಕಾಮಗಾರಿ ಪರಿಶೀಲಿಸಿದ ಎನ್. ಮಂಜುನಾಥ್ ಪ್ರಸಾದ್

**ರಸ್ತೆ ಎತ್ತರಿಸಬೇಡಿ:** 'ಅಂಗಡಿಗಳ ಸಮಾನಕ್ಕೆ ರಸ್ತೆ ಎತ್ತರಿಸಿದರೆ ಮಳೆಗಾಲದ ವೇಳೆ ಅಂಗಡಿಗಳಿಗೆ ನೀರು ನುಗ್ಗಲಿದೆ. ಆದ್ದರಿಂದ ಅಂಗಡಿಗಳಿಗಿಂತ ಕೆಳ ಭಾಗಕ್ಕೆ ರಸ್ತೆ ಕಾಮಗಾರಿ ಮಾಡುವಂತೆ ವರ್ತಕರು ಮನವಿ ಮಾಡಿದ್ದಾರೆ. ಈ ಸಂಬಂಧ ರಸ್ತೆ ಎತ್ತರಿಸದೆ ಅಂಗಡಿ ವರ್ತಕರಿಗೆ ಯಾವುದೇ ತೊಂದರೆಯಾಗದಂತೆ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ' ಎಂದು ಆಯುಕ್ತರು ತಿಳಿಸಿದರು.

**ದೂಳು ನಿಯಂತ್ರಿಸಿ:** 'ಕಾಮಗಾರಿಗಾಗಿ ಪಾದಚಾರಿ ಮಾರ್ಗಗಳನ್ನು ಅಗೆದಿರುವ ಪರಿಣಾಮ ದೂಳು ಅಂಗಡಿಗಳಿಗೆ ಬರುತ್ತಿದೆ' ಎಂದು ವರ್ತಕರು ದೂರಿದರು.

'ಈ ಸಂಬಂಧ ದಿನಕ್ಕೆ ಎರಡು ಬಾರಿ ನೀರಿನ ಟ್ಯಾಂಕರ್ ಮೂಲಕ ರಸ್ತೆ ಮೇಲೆ ನೀರು ಸಿಂಪಡಿಸಿ ಅಂಗಡಿಗಳಿಗೆ ದೂಳು ಹೋಗದಂತೆ ಕ್ರಮವಹಿಸಬೇಕು' ಎಂದು ಆಯುಕ್ತರು ಸೂಚನೆ ನೀಡಿದರು.

ಸ್ಮಾರ್ಟ್ ಸಿಟಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್, ಸ್ಮಾರ್ಟ್ ಸಿಟಿ ಮುಖ್ಯ ಎಂಜಿನಿಯರ್ ರಂಗನಾಥ್ ನಾಯ್ಕ್ ಉಪಸ್ಥಿತರಿದ್ದರು.

# ಶುಲ್ಕ ಕಡಿತ: 11 ಶಾಲೆಗಳ ವಿರುದ್ಧ 91 ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ರಾಜ್ಯ ಸರ್ಕಾರ ಖಾಸಗಿ ಶಾಲೆಗಳ ಬೋಧನಾ ಶುಲ್ಕವನ್ನು ಶೇ 30ರಷ್ಟು ಕಡಿತ ಮಾಡಿದ್ದರೂ ಶಾಲಾ ಆಡಳಿತ ಮಂಡಳಿಗಳು ಅದನ್ನು ಪಾಲಿಸುತ್ತಿಲ್ಲ ಎಂಬ ಬೆಂಗಳೂರು ಉತ್ತರ ವಲಯ-4ರ ವ್ಯಾಪ್ತಿಯ 11 ಶಾಲೆಗಳ ವಿರುದ್ಧ ಒಟ್ಟು 91 ದೂರುಗಳು ದಾಖಲಾಗಿವೆ.

ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ದೇಶಕಿ ವಿ.ಸುಮಂಗಳಾ ಅಧ್ಯಕ್ಷತೆಯಲ್ಲಿ ಶುಕ್ರವಾರ ದೂರುಗಳ ಪರಿಶೀಲನಾ ಸಮಿತಿಯ ಸಭೆ ನಡೆಯಿತು.

ದೂರು ಇತ್ಯರ್ಥಪಡಿಸಿ ನ್ಯಾಯ ಒದಗಿಸುವಂತೆ ಪೋಷಕರು ಬೆಳಿಗ್ಗೆಯೇ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಜಮಾಯಿಸಿದ್ದರು. ನಿರ್ದೇಶಕರು ಬರುವುದು ತಡವಾಗಿದ್ದರಿಂದ 10 ಗಂಟೆಗೆ ಆರಂಭವಾಗಬೇಕಿದ್ದ ಸಭೆ 12 ಗಂಟೆಯ ನಂತರ ಆರಂಭವಾಯಿತು. ಇಂಥ ಗಂಭೀರ ವಿಚಾರವನ್ನು ಪರಿಶೀಲಿಸಿ ಇತ್ಯರ್ಥಪಡಿಸಲು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಪೋಷಕರು ಆರೋಪಿಸಿ, ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ದೂರುಗಳನ್ನು ಸಮಿತಿ ಪರಿಶೀಲಿಸಿತು. 11 ಶಾಲೆಗಳ ಪೈಕಿ 8 ಶಾಲೆಗಳ ಆಡಳಿತ ಮಂಡಳಿಯವರು ಸಭೆಗೆ ಹಾಜರಾಗಿದ್ದು, ಮೂರು ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಗೈರಾಗಿದ್ದರು. ಹಾಜರಾಗಿದ್ದ ಶಾಲೆಗಳ ಆಡಳಿತ ಮಂಡಳಿ ಮತ್ತು ಪೋಷಕರ ನಡುವಿನ ವಿವಾದ ಇತ್ಯರ್ಥಗೊಂಡಿದೆ. ಗೈರು ಹಾಜರಾದ ಶಾಲಾ ಆಡಳಿತ ಮಂಡಳಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

## ‘ಹೆಚ್ಚಿನ ತೆರಿಗೆ ಹೊರೆ ಇಲ್ಲ’

ಒಂದನೇ ಪುಟದಿಂದ

ಬೆಂಗಳೂರು ನಗರದ ಅಭಿವೃದ್ಧಿಗೆ ವೇಗ ನೀಡುವ ಮೂಲಕ ಮುಂದಿನ ಆರು ತಿಂಗಳಲ್ಲಿ ನಗರದ ಚಿತ್ರಣವನ್ನೇ ಬದಲಾಯಿಸುತ್ತೇವೆ ಎಂದರು.

ಕೇಂದ್ರ ಸರ್ಕಾರ ಹೆಚ್ಚು ಸಾಲ ಪಡೆಯಲು ಅವಕಾಶ ನೀಡಿರುವುದರಿಂದ ಬಜೆಟ್‌ನಲ್ಲಿ ಕೊರತೆ ಆಗುವುದಿಲ್ಲ. ಅಭಿವೃದ್ಧಿಗೆ ಅಗತ್ಯ ಹಣಕಾಸಿನ ನೆರವು ನೀಡಲಾಗುವುದು. ಸರ್ವ ಜನರ ಹಿತವನ್ನು ಬಜೆಟ್‌ನಲ್ಲಿ ಕಾಪಾಡುವ ಕೆಲಸ ಮಾಡಿದ್ದೇವೆ ಎಂದು ಯಡಿಯೂರಪ್ಪ ತಿಳಿಸಿದರು.

ಕಳೆದ ವರ್ಷ ಕೋವಿಡ್‌ನಿಂದಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಸಂಪನ್ಮೂಲ ಸಂಗ್ರಹವೇ ಆಗಿರಲಿಲ್ಲ. ಅಷ್ಟೇ ಅಲ್ಲ, ಕೋವಿಡ್ ವಿರುದ್ಧದ ಸಮರಕ್ಕಾಗಿ ₹6,000 ಕೋಟಿ ಖರ್ಚು ಮಾಡಲಾಯಿತು. ಬಜೆಟ್ ಗಾತ್ರ ಕಳೆದ ಬಾರಿಗಿಂತ ತುಸು ಹೆಚ್ಚಾಗಿರುತ್ತದೆ ಎಂದು ಅವರು ಹೇಳಿದರು.

## ‘ಯುವ ಸಬಲೀಕರಣ ನಿಗಮ ಸ್ಥಾಪಿಸಿ’

**ಬೆಂಗಳೂರು:** ‘ರಾಜ್ಯ ಸರ್ಕಾರವು ಯುವ ಸಬಲೀಕರಣ ನಿಗಮ ಸ್ಥಾಪಿಸಬೇಕು. ರಾಜ್ಯದ ಯುವಕರ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಅನುದಾನ ಮೀಸಲಿಡಬೇಕು. ಮಹಿಳಾ ಮತ್ತು ಮಕ್ಕಳ ಹಕ್ಕುಗಳಂತೆ ಯುವಜನರ ಹಕ್ಕುಗಳನ್ನು ಘೋಷಿಸಬೇಕು. ಯುವ ಸಮುದಾಯದ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೆ ಕಡಿವಾಣ ಹಾಕಬೇಕು’ ಎಂದು ಕರ್ನಾಟಕ ಯುವ ಮುನ್ನಡೆಯ ಸದಸ್ಯ ಹನುಮಂತ ಹಾಲಿಗೇರಿ ಒತ್ತಾಯಿಸಿದರು.

‘ಮಾರ್ಚ್ 6ರಂದು ಕೋಲಾರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ‘ಯುವಜನ ಹಕ್ಕಿನ ಮೇಳ-2021’ ಆಯೋಜಿಸಲಾಗಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಉದ್ಘಾಟಿಸಲಿದ್ದಾರೆ. ಕೋಲಾರ ಜಿಲ್ಲಾಧಿಕಾರಿ ಸೇರಿ ಹಲವು ಅಧಿಕಾರಿಗಳು ಹಾಗೂ ತಜ್ಞರು ನಮ್ಮೊಂದಿಗೆ ಇರಲಿದ್ದಾರೆ’ ಎಂದು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

### ಶುಲ್ಕ ಪಾವತಿಸಿದ 28 ಸಾವಿರ ಮನೆಗಳ ನೀರಿನ ಸಂಪರ್ಕ ಸಕ್ರಮ

# 52 ಸಾವಿರ ಮನೆ ಸಂಪರ್ಕ ಕಡಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಧಿಕೃತವಾಗಿ ನೀರು ಮತ್ತು ಒಳಚರಂಡಿ ಸಂಪರ್ಕ ಪಡೆದಿದ್ದ 52 ಸಾವಿರ ಮನೆಗಳ ನೀರಿನ ಸಂಪರ್ಕಗಳನ್ನು ಜಲಮಂಡಳಿಯು ಕಡಿತಗೊಳಿಸಿದ್ದು, ಶುಲ್ಕ ಪಾವತಿಸಿದ 28 ಸಾವಿರ ಮನೆಗಳ ಸಂಪರ್ಕ ಸಕ್ರಮಗೊಳಿಸಲಾಗಿದೆ.

‘ಜಲಮಂಡಳಿಗೆ ಯಾವುದೇ ಶುಲ್ಕ ನೀಡದೆ, ಗಮನಕ್ಕೆ ತರದೆ ನೀರು ಮತ್ತು ಒಳಚರಂಡಿ ಸಂಪರ್ಕ ಪಡೆದಿದ್ದ 52 ಸಾವಿರ ಮನೆಗಳನ್ನು ಗುರುತಿಸಲಾಗಿತ್ತು. ಈ ಪೈಕಿ, ಶುಲ್ಕ ಮತ್ತು ದಂಡ ಪಾವತಿಸಿದ 28 ಸಾವಿರ ಮನೆಗಳ ಸಂಪರ್ಕವನ್ನು ಸಕ್ರಮಗೊಳಿಸಲಾಗಿದೆ’ ಎಂದು ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೊದಲಿನಿಂದಲೂ ಈ ರೀತಿ ಅನಧಿಕೃತವಾಗಿ ಸಂಪರ್ಕ ಪಡೆಯುವುದು ನಡೆಯುತ್ತಲೇ ಇದೆ. ಅನಧಿಕೃತ ಸಂಪರ್ಕ ಪಡೆದವರ ಪತ್ತೆ ಕಾರ್ಯ ಚುರುಕುಗೊಂಡಿದೆ. ಈ ರೀತಿ ಕಾನೂನುಬಾಹಿರವಾಗಿ ಸಂಪರ್ಕ ಪಡೆದವರ ವಿರುದ್ಧ ಜಲಮಂಡಳಿ ಕಾಯ್ದೆಯಡಿ ನಿಯಾಮನುಸಾರ ದಂಡ ವಿಧಿಸಲಾಗುವುದು’ ಎಂದು ಹೇಳಿದರು.

**ಜಲಮಂಡಳಿ ಫೋನ್ ಇನ್ ಇಂದು**

ಜಲಮಂಡಳಿಯು ಇದೇ 6ರಂದು (ಶನಿವಾರ) ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅಹವಾಲು ಆಲಿಸಲಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಮತ್ತು ಕೊಳವೆಗಳಿಂದ ತ್ಯಾಜ್ಯ ನೀರು ಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ಹೇಳಬಹುದು.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 08022945119.

**₹4 ಸಾವಿರದವರೆಗೆ ದಂಡ:** ಅನಧಿಕೃತ ಸಂಪರ್ಕ ಪಡೆದ ಅವಧಿ ಮತ್ತು ಬಳಸಿದ ನೀರಿನ ಪ್ರಮಾಣ ಆಧರಿಸಿ ದಂಡ ವಿಧಿಸಲಾಗುತ್ತದೆ. ಗರಿಷ್ಠ ₹3000ದಿಂದ ₹4000ದವರೆಗೆ ದಂಡ ವಿಧಿಸಲು ಅವಕಾಶವಿದೆ. ದೊಡ್ಡ ವಸತಿ ಸಮುಚ್ಚಯ ಅಥವಾ ಅಪಾರ್ಟ್‌ಮೆಂಟ್ ಮತ್ತು ಸಣ್ಣ ಕೈಗಾರಿಕೆಗಳಿಂದ ಪ್ರೊರೇಟಾ ಶುಲ್ಕವನ್ನೂ ವಸೂಲಿ ಮಾಡಲಾಗುತ್ತದೆ.

ಪ್ರೊರೇಟಾ ಶುಲ್ಕ ಪಾವತಿಸುವವರು ನೀರಿನ ಸಂಪರ್ಕ ಪಡೆಯಲು ₹100 ಶುಲ್ಕ ಪಾವತಿಸಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿದ 42 ದಿನಗಳಲ್ಲಿ ಮಂಡಳಿಯ ಎಲ್ಲ ಕಾರ್ಯ ವಿಧಾನಗಳನ್ನು ಪಾಲನೆ ಮಾಡಬೇಕು. ಬಳಿಕ ನೀರಿನ ಸಂಪರ್ಕ ಕಲ್ಪಿಸಲಾಗುವುದು ಎಂದು ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

**ಗೃಹ ಬಳಕೆಗೆ 14 ದಿನಗಳೊಳಗೆ ಅರ್ಜಿ:** ಗೃಹೋಪಯೋಗಕ್ಕೆ ಸಂಪರ್ಕ ಪಡೆಯುವವರು ಮಂಡಳಿಯ ವೆಬ್‌ಸೈಟ್ www.bwssb.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ₹100 ಪಾವತಿಸಿ ಅರ್ಜಿ ಸಲ್ಲಿಸಿದ 14 ದಿನಗಳೊಳಗೆ ವಿಳಾಸ ಹಾಗೂ ಮಂಡಳಿ ಕೇಳಿರುವ ಇನ್ನಿತರ ಕಾರ್ಯ ವಿಧಾನ ಪಾಲಿಸಬೇಕಾಗುತ್ತದೆ. ಎಲ್ಲ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ನೀರಿನ ಸಂಪರ್ಕ ನೀಡಲಾಗುತ್ತದೆ.

# ‘ಉತ್ತಮ ಫಲಿತಾಂಶಕ್ಕಾಗಿ ಪಣ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಈಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಬೇಕು. ಆ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗೂಡಿ ಕೆಲಸ ಮಾಡಬೇಕು’ ಎಂದು ಸಂಸದ ತೇಜಸ್ವಿ ಸೂರ್ಯ ಗುರುವಾರ ಹೇಳಿದರು.

ಬೆಂಗಳೂರು ಸೌತ್ ಎಜುಕೇಷನ್ ಆ್ಯಂಡ್ ಸೋಷಿಯಲ್ ಟ್ರಾನ್ಸ್‌ಫರ್ಮೇಷನ್-2021 (ಬೆಸ್ಟ್) ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂಸದ ತೇಜಸ್ವಿ ಸೂರ್ಯ ಅವರು ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು –ಪ್ರಜಾವಾಣಿ ಚಿತ್ರ

‘ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಪ್ರಜ್ಞಾವಂತರು ಹಾಗೂ ವಿದ್ಯಾವಂತರೇ ಹೆಚ್ಚಿದ್ದಾರೆ. ಹೀಗಿದ್ದರೂ ನಾವು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಜಿಲ್ಲಾವಾರು ಫಲಿತಾಂಶದ ಪಟ್ಟಿಯಲ್ಲಿ ಹಿಂದಿನ 10 ವರ್ಷಗಳಿಂದ ಕೆಳಗಿನ ಸ್ಥಾನಗಳಲ್ಲೇ ಉಳಿದಿದ್ದೆವು. ನಾನು ಸಂಸದನಾದ ಬಳಿಕ ಇದನ್ನು ಗಂಭೀರವಾಗಿ ಪರಿಗಣಿಸಿದ್ದೆ. ಹೀಗಾಗಿಯೇ ಹೋದ ವರ್ಷ ‘ಬೆಸ್ಟ್’ ಕಾರ್ಯಕ್ರಮ ಜಾರಿಗೊಳಿಸಲಾಗಿತ್ತು. ಶಿಕ್ಷಕರು ಹಾಗೂ ಸ್ವಯಂ ಸೇವಕರ ಸಹಾಯದಿಂದ 120ಕ್ಕೂ ಅಧಿಕ ಶಾಲೆಗಳಲ್ಲಿ ವಿಶೇಷ ತರಗತಿಗಳನ್ನು ಆಯೋಜಿಸಿದ್ದೆವು. ಪರಿಣಾಮ ಹೋದ ವರ್ಷದ ಫಲಿತಾಂಶದ ರ‍್ಯಾಂಕಿಂಗ್‌ನಲ್ಲಿ ನಾವು ಮೂರು ಸ್ಥಾನ ಮೇಲೇರಿದ್ದೇವೆ’ ಎಂದರು.

‘ಈ ಬಾರಿ ನಮ್ಮ ಜಿಲ್ಲೆಯಿಂದ 65 ಸಾವಿರ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿದ್ದಾರೆ. ಅವರೆಲ್ಲರಿಗೂ ಸಂಸದರ ಕಚೇರಿಯಿಂದ ಉಚಿತವಾಗಿ ಸಂಜೀವಿನಿ ಮಾರ್ಗದರ್ಶಿ ಪುಸ್ತಕಗಳನ್ನು ಶೀಘ್ರವೇ ಎಲ್ಲಾ ಶಾಲೆಗಳಿಗೆ ತಲುಪಿಸಲಿದ್ದೇವೆ’ ಎಂದು ತಿಳಿಸಿದರು.

ಸಾಹಿತಿ ಹಂಪ ನಾಗರಾಜಯ್ಯ ಹಾಗೂ ಕಮಲಾ ಹಂಪನಾ ಅವರನ್ನು ಸನ್ಮಾನಿಸಲಾಯಿತು. ವೂಡೇ ಪಿ.ಕೃಷ್ಣ, ಸ.ಚಿ.ರಮೇಶ್, ಶೇಷಾದ್ರಿಪುರ ಪದವಿ ಕಾಲೇಜು ಪ್ರಾಂಶುಪಾಲ ಪ್ರೊ.ಜಯರಾಮ್, ಡಾ.ಮಂಜುನಾಥ್ ಇದ್ದಾರೆ.

# ‘ಗಾಂಧಿ ತತ್ವಗಳಿಗೆ ಜೈನ ಧರ್ಮ ಪ್ರೇರಕ’

ಪ್ರಜಾವಾಣಿ ವಾರ್ತೆ

**ಕೆಂಗೇರಿ:** ‘ಮಹಾತ್ಮ ಗಾಂಧೀಜಿ ಅವರು ತಮ್ಮ ಜೀವನದುದ್ದಕ್ಕೂ ಪ್ರತಿಪಾದಿಸಿದ ಸತ್ಯ ಹಾಗೂ ಅಹಿಂಸೆಗೆ ಜೈನ ಧರ್ಮದ ತತ್ವ ಮತ್ತು ಆದರ್ಶಗಳೇ ಪ್ರೇರಕ ಶಕ್ತಿಯಾಗಿದ್ದವು’ ಎಂದು ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ತಿಳಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಕೆಂಗೇರಿ ಉಪನಗರದ ಶೇಷಾದ್ರಿಪುರ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ‘ಜೈನ ಧರ್ಮದಲ್ಲಿ ಲೌಕಿಕ ಮತ್ತು ಬದುಕಿನ ಪರಿಕಲ್ಪನೆ’ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಜೈನ ಧರ್ಮದ ಮೂಲ ತತ್ವವಾದ ಅಹಿಂಸಾ ಭಾವದ ಅಚರಣೆಯಿಂದಲೇ ಗಾಂಧೀಜಿ ರಾಜಕೀಯ ಸಂತನಾಗಲು ಸಾಧ್ಯವಾಯಿತು’ ಎಂದರು.

ಸಾಹಿತಿ ಹಂಪ ನಾಗರಾಜಯ್ಯ,‘ರನ್ನ, ಪೊನ್ನ, ಜನ್ನ ಸೇರಿದಂತೆ ಹಲವಾರು ಜೈನ ಕವಿಗಳು ಕನ್ನಡ ಸಾಹಿತ್ಯ ಪ್ರಾಕಾರಕ್ಕೆ ಅಮೂಲಾಗ್ರ ಕೊಡುಗೆ ನೀಡಿದ್ದಾರೆ’ ಎಂದರು.

‘ಎಲ್ಲ ಜೀವಿಗೂ ಸ್ವತಂತ್ರವಾಗಿ, ನೆಮ್ಮದಿಯಿಂದ ಜೀವಿಸುವ ಅವಕಾಶ ನೀಡುವ ಜೈನ ಧರ್ಮ ನಿಜವಾದ ಅರ್ಥದಲ್ಲಿ ಪರಿಸರ ಸ್ನೇಹಿ ಧರ್ಮ’ ಎಂದರು.

‘ಎಲ್ಲ ಧರ್ಮಗಳಲ್ಲೂ ಒಳ್ಳೆಯ ಅಂಶಗಳಿರುತ್ತದೆ. ಧಾರ್ಮಿಕ ಜಿಜ್ಞಾಸೆಗಳನ್ನು ಬದಿಗಿಟ್ಟು, ಧರ್ಮದ ಸಾರವನ್ನು ಮಾತ್ರ ಗ್ರಹಿಸಬೇಕು ಎಂದು ಹೇಳುವ ಮೂಲಕ ಗಾಂಧಿ ಅವರಲ್ಲಿ ಹಿಂದೂ ಧರ್ಮದ ಬಗ್ಗೆ ಮೂಡಿದ್ದ ಗೊಂದಲಕ್ಕೆ ತೆರೆ ಎಳೆದಿದ್ದು ಜೈನ ಮುನಿಗಳು’ ಎಂದು ಸಾಹಿತಿ ಕಮಲಾ ಹಂಪನಾ ಹೇಳಿದರು.

ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಕುಲಪತಿ ಸ.ಚಿ.ರಮೇಶ್,‘ಜೈನ ಧರ್ಮ ಸ್ವಚ್ಛತೆ, ಶಾಂತಿ, ಅಹಿಂಸೆಯಿಂದ ಕೂಡಿದ ಜೀವನ ಕ್ರಮ ಪ್ರತಿಪಾದಿಸುತ್ತದೆ. ಜೈನ ತತ್ವಾದರ್ಶಗಳನ್ನು ಅರಿತು ಪಾಲಿಸಿದರೆ, ಗಾಂಧಿ ಮತ್ತು ಲೋಹಿಯಾ ಕಂಡ ಸಮ ಸಮಾಜ ನಿರ್ಮಾಣ ಸಾಧ್ಯ’ ಎಂದರು.

## ವಿಶ್ವಕರ್ಮ ಸಮುದಾಯ ಕೀಳರಿಮೆ ಬಿಡಲಿ: ಕಂಬಾರ

**ಬೆಂಗಳೂರು:** ‘ವಿಶ್ವಕರ್ಮರು ನಿರ್ಮಾಣ ಸಂಸ್ಕೃತಿಯ ಹರಿಕಾರರು. ಹಳ್ಳಿ ಹಾಗೂ ನಗರ ನಾಗರಿಕತೆಯನ್ನು ನಿರ್ಮಿಸಿದವರು. ಇಂತಹ ಕಲಾ ಸಮುದಾಯವು ನಾಚಿಕೆ ಹಾಗೂ ಕೀಳರಿಮೆ ಬಿಟ್ಟು ಜಾಗೃತಗೊಳ್ಳಬೇಕು’ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಹೇಳಿದರು.

ಕರ್ನಾಟಕ ರಾಜ್ಯ ವಿಶ್ವಕರ್ಮ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿವಂಗತ ಟಿ.ವಿ. ಮುತ್ತಾಚಾರ್ಯರ ಸಾಹಿತ್ಯ ಸಂಪುಟದ ಭಾಗ-1 ಗ್ರಂಥ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಕುಶಲತೆ, ಬೌದ್ಧಿಕತೆ ಹಾಗೂ ಶ್ರಮ ಸಂಸ್ಕೃತಿಯ ಮೂಲಕ ವಿಶ್ವಕರ್ಮ ಸಮುದಾಯದವರು ಈಗ ಎಲ್ಲಾ ಸ್ತರಗಳಲ್ಲೂ ಮುಂದೆ ಬರುತ್ತಿದ್ದಾರೆ. ಸ್ವಾಭಿಮಾನವನ್ನು ಮೈಗೂಡಿಸಿಕೊಂಡು ಇನ್ನಷ್ಟು ಎತ್ತರಕ್ಕೆ ಬೆಳೆಯಬೇಕು’ ಎಂದು ಕಿವಿಮಾತು ಹೇಳಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ್, ‘ವಿಶ್ವಕರ್ಮ ಸಮುದಾಯ ಜಗದಗಲ ವ್ಯಾಪಿಸಿದೆ. ಭಾರತೀಯ ದೇಗುಲಗಳು ಹಾಗೂ ಶಿಲ್ಪಗಳು ಈ ಸಮುದಾಯದ ಶ್ರೇಷ್ಠತೆಯನ್ನು ಸಾರುತ್ತವೆ. ಮುತ್ತಾಚಾರ್ಯರು ತಮ್ಮ ಕೃತಿಯ ಮೂಲಕ ಇಡೀ ಸಮುದಾಯವನ್ನು ಜಾಗೃತಗೊಳಿಸುವ ಕೆಲಸ ಮಾಡಿದ್ದಾರೆ’ ಎಂದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ತುಳಸಿ ಮಾಲಾ, ‘ವಿಶ್ವಕರ್ಮರ ಎದುರು ಈಗ ಹಲವು ಸವಾಲುಗಳಿವೆ. ತಮ್ಮ ಕುಲ ಕಸುಬಿನಲ್ಲಿ ಕುಶಲತೆ ಹಾಗೂ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ವಿದ್ಯಾವಂತರಾಗಿ ಸಮಾಜದಲ್ಲಿ ಉನ್ನತ ಸ್ಥಾನಕ್ಕೇರಬೇಕು’ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಕೆ.ಎಸ್.ಪ್ರಭಾಕರ್, ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಕೆ.ವಿ.ಕೃಷ್ಣಮೂರ್ತಿ, ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬು ಪತ್ತಾರ್ ಭಾಗವಹಿಸಿದ್ದರು. ಶ್ರೀ ಶಿವಾತ್ಮನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು.

# ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಹಾಗೂ ಜನರ ದಿನಬಳಕೆ ವಸ್ತುಗಳ ದರ ಏರಿಕೆ ಖಂಡಿಸಿ ರಾಜಾಜಿನಗರ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಶ್ರೀರಾಮಮಂದಿರ ಆಟದ ಮೈದಾನದಿಂದ ರಾಜಾಜಿನಗರದ ಆರ್.ಟಿ.ಒ.ಸಂಕೀರ್ಣದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ‘ಕೇಂದ್ರ ಸರ್ಕಾರ ದಿನೇ ದಿನೇ ದರ ಏರಿಸುವ ಮೂಲಕ ಬಡವರು ಹಾಗೂ ಮಧ್ಯಮ ವರ್ಗದ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ’ ಎಂದು ದೂರಿದರು.

ಪ್ರತಿಭಟನೆಯಲ್ಲಿ ರಾಮಲಿಂಗಾರೆಡ್ಡಿ, ಸಲೀಂ ಅಹಮದ್, ಜಿ.ಪದ್ಮಾವತಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಮಾಜಿ ಮೇಯರ್ ಜಿ.ಪದ್ಮಾವತಿ, ‘ಈಗ ತೈಲದರ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಸಿರುವುದರಿಂದ ಹಲವಾರು ಸಮಸ್ಯೆಗಳು ಉದ್ಭವಿಸಲಿವೆ. ಕೊರೊನಾ ಹೊಡೆತದಿಂದ ಅನೇಕರು ಉದ್ಯೋಗ ಕಳೆದುಕೊಂಡು ದಿಕ್ಕು ತೋಚದೆ ಕೂತಿದ್ದಾರೆ. ದರ ಏರಿಕೆಯು ಜನರನ್ನು ಮಾನಸಿಕ ಒತ್ತಡಕ್ಕೆ ತಳ್ಳಲಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

# ಮನೆ ತೆರವು: ಎನ್‌ಸಿಎಚ್‌ಆರ್‌ಒ ಖಂಡನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಗರಬಾವಿಯ ಹೊರ ವರ್ತುಲ ರಸ್ತೆಯಲ್ಲಿದ್ದ ಕೊಳೆಗೇರಿ ನಿವಾಸಿಗಳ ಮನೆಗಳನ್ನು ತೆರವುಗೊಳಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕ್ರಮವನ್ನು ನ್ಯಾಷನಲ್ ಕಾನ್ಫೆಡರೇಷನ್ ಆಫ್ ಹ್ಯೂಮನ್ ರೈಟ್ಸ್ ಆರ್ಗನೈಸೇಷನ್‌ನ (ಎನ್‌ಸಿಎಚ್‌ಆರ್‌ಒ) ಕರ್ನಾಟಕ ರಾಜ್ಯ ಸಮಿತಿಯು ಖಂಡಿಸಿದೆ.

‘150 ಕುಟುಂಬಗಳು ಸುಮಾರು 10 ವರ್ಷಗಳಿಂದ ಅಲ್ಲಿ ವಾಸವಿದ್ದು ಬದುಕು ಕಟ್ಟಿಕೊಂಡಿದ್ದರು. ಬಿಡಿಎ ಅಧಿಕಾರಿಗಳು ಏಕಾಏಕಿ ದಾಳಿ ನಡೆಸಿ ಸುಮಾರು 70 ಮನೆಗಳನ್ನು ತೆರವುಗೊಳಿಸಿದ್ದಾರೆ. ಇದರಿಂದ ಆ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ಬೀದಿಗೆ ಬಂದಿದ್ದಾರೆ’ ಎಂದು ಸಮಿತಿ ಹೇಳಿದೆ.

‘ಸರ್ಕಾರ ತಕ್ಷಣವೇ ಮಧ್ಯಪ್ರವೇಶಿಸಿ ಬಿಡಿಎ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಸೂರು ಕಳೆದುಕೊಂಡವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಡಬೇಕು’ ಎಂದು ಸಮಿತಿ ಆಗ್ರಹಿಸಿದೆ.

# ‘ಇಸ್ಲಾಮಿಯಾ ಸಂಸ್ಥೆಯಿಂದ ಒತ್ತುವರಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬೆಂಗಳೂರು ನಗರ ದಕ್ಷಿಣ ತಾಲ್ಲೂಕಿನ ಹುಳಿಮಾವು ಗ್ರಾಮದಲ್ಲಿ ಇಸ್ಲಾಮಿಯಾ ತಾಂತ್ರಿಕ ಶಿಕ್ಷಣ ಸಂಸ್ಥೆಯು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದು, ಹೈಕೋರ್ಟ್‌ನ ಆದೇಶದಂತೆ ಅದನ್ನು ಸರ್ಕಾರ ವಶಕ್ಕೆ ಪಡೆಯಬೇಕು’ ಎಂದು ಬಿಜೆಪಿ ಸದಸ್ಯ ಎನ್. ರವಿಕುಮಾರ್ ಒತ್ತಾಯಿಸಿದರು.

ವಿಧಾನ ಪರಿಷತ್‌ನಲ್ಲಿ ನಿಯಮ 330ರಡಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಐದು ಎಕರೆ ಸರ್ಕಾರಿ ಜಾಗದಲ್ಲಿ ಸಂಸ್ಥೆಯ ನಾಮಫಲಕ ಹಾಕಲಾಗಿದೆ. ಶಿಕ್ಷಣ ಇಲಾಖೆಯ ಅಧಿಕಾರಿಗಳೇ ಇದಕ್ಕೆ ಅನುಮತಿ ನೀಡಿದ್ದಾರೆ. ಸುಳ್ಳು ದಾಖಲೆ-ತಪ್ಪು ಮಾಹಿತಿಗಳನ್ನು ಪಡೆದು ಎಂಜಿನಿಯರಿಂಗ್ ಕಾಲೇಜಿಗೆ ಅನುಮತಿ ಕೊಟ್ಟವರು ಯಾರು ಎಂಬುದನ್ನು ಬಹಿರಂಗಪಡಿಸಬೇಕು’ ಎಂದು ಆಗ್ರಹಿಸಿದರು.

‘ಇದು ಸರ್ಕಾರ ಜಾಗ ಎಂದು 2016ರಲ್ಲಿ ಕಂದಾಯ ಇಲಾಖೆ ಹೇಳಿದೆ. ಹೀಗಿದ್ದೂ ಶಿಕ್ಷಣ ಇಲಾಖೆ ಹೇಗೆ ಅನುಮತಿ ಕೊಟ್ಟಿತು. ಮುಖ್ಯವಾಗಿ 5 ಎಕರೆ ಜಾಗ ಸರ್ಕಾರಕ್ಕೆ ಸೇರಿದ್ದು, ಅದನ್ನು ವಶಪಡಿಸಿಕೊಳ್ಳಬೇಕು ಎಂದು ಹೈಕೋರ್ಟ್ ಸೂಚಿಸಿದೆ’ ಎಂದೂ ಮಾಹಿತಿ ನೀಡಿದರು.

‘ಈ ಕಾಲೇಜು 1979-80ರಲ್ಲಿಯೇ ಆರಂಭವಾಗಿದೆ. ಜಾಗಕ್ಕೆ ಪ್ರಾಥಮಿಕ ಅಧಿಸೂಚನೆ ಆದಾಗ ಸಂಸ್ಥೆ ₹5.85 ಲಕ್ಷವನ್ನೂ ಸಂಸ್ಥೆ ಪಾವತಿಸಿದೆ. ಜಾಗವನ್ನು ತಮಗೆ ಮಂಜೂರು ಮಾಡುವಂತೆ ಸಂಸ್ಥೆ ಸರ್ಕಾರಕ್ಕೆ ಸಲ್ಲಿಸಿದ ಮನವಿಯು ಸರ್ಕಾರದಿಂದ ಮುಂದಿದೆ. ಹೈಕೋರ್ಟ್ ಆದೇಶ ಪ್ರಶ್ನಿಸಿ ಸಂಸ್ಥೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ’ ಎಂದು ಕಾಂಗ್ರೆಸ್ ಸದಸ್ಯ ನಸೀರ್ ಅಹ್ಮದ್ ಹೇಳಿದರು.

‘ಬೇರೆ ಧರ್ಮಕ್ಕೆ ಸೇರಿದ ಶಿಕ್ಷಣ ಸಂಸ್ಥೆಗಳವರಿಗೆ ಒಂದೆರಡು ವರ್ಷಗಳಲ್ಲಿಯೇ ಸರ್ಕಾರದಿಂದ ಅನುಮತಿ ಸಿಗುತ್ತದೆ. ಮೂರು ದಶಕಗಳೇ ಕಳೆದರೂ ಇಸ್ಲಾಮಿಯಾ ಶಿಕ್ಷಣ ಸಂಸ್ಥೆಗೆ ಅನುಮತಿ ಸಿಗುತ್ತಿಲ್ಲ. ಇದು ತಾರತಮ್ಯವಲ್ಲದೆ ಮತ್ತೇನು’ ಎಂದೂ ಅವರು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಕಂದಾಯ ಸಚಿವ ಆರ್. ಅಶೋಕ್, ‘ಇದೇ 8ರಂದು ಸುಪ್ರೀಂಕೋರ್ಟ್ ಮುಂದೆ ಅರ್ಜಿ ವಿಚಾರಣೆಗೆ ಬರಲಿದೆ. ರಾಜ್ಯ ಸರ್ಕಾರ ಪ್ರಮಾಣಪತ್ರ ಸಲ್ಲಿಸಬೇಕಿದೆ. ಜೊತೆಗೆ ಜಾಗ ನಮಗೆ ಮಂಜೂರು ಮಾಡಿ ಎಂದು ಸಂಸ್ಥೆ ಸಲ್ಲಿಸಿರುವ ಮನವಿ ಸರ್ಕಾರದ ಮುಂದೆ ಬಾಕಿ ಇದೆ. ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಏನಾಗುತ್ತದೆ ಎಂದು ನೋಡಿ, ಮುಂದೆ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

ಇದಕ್ಕೂ ಮುನ್ನ, ರವಿಕುಮಾರ್ ಅವರ ಪ್ರಸ್ತಾಪಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್, ‘ಈ ವಿಷಯ ಸುಪ್ರೀಂಕೋರ್ಟ್‌ನಲ್ಲಿದೆ. ಹಾಗಾಗಿ, ಸದನದಲ್ಲಿ ಪ್ರಸ್ತಾಪಿಸಿ, ಸರ್ಕಾರದಿಂದ ಉತ್ತರ ಪಡೆಯಲು ಅವಕಾಶವಿಲ್ಲ’ ಎಂದರು.

‘ನಿಯಮದಲ್ಲಿ ಇದಕ್ಕೆ ಅವಕಾಶವಿದೆ’ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಕೃಷಿ ಸಚಿವ ಬಿ.ಸಿ. ಪಾಟೀಲ ಅವರು ವಿಕಾಸಸೌಧದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ 'ಚಾಲೆಂಜಿಂಗ್ ಸ್ಟಾರ್' ದರ್ಶನ್‌ಗೆ 'ಕೃಷಿ ಕಾಯಕ'ದ ರಾಯಭಾರಿ ಅಧಿಕಾರ ಪ್ರದಾನ ಮಾಡಿದರು – ಪ್ರಜಾವಾಣಿ ಚಿತ್ರ

## ಸೋಮವಾರ 12.05 ಕ್ಕೆ ಬಜೆಟ್

**ಬೆಂಗಳೂರು:** ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸೋಮವಾರ ಮಧ್ಯಾಹ್ನ 12.05 ಕ್ಕೆ ಬಜೆಟ್ ಮಂಡಿಸಲಿದ್ದಾರೆ. ಅಂದು ಮಧ್ಯಾಹ್ನ 12 ಕ್ಕೆ ವಿಧಾನಸಭೆ ಸಮಾವೇಶಗೊಳ್ಳಲಿದೆ.

2019 ರಲ್ಲಿ ಯಡಿಯೂರಪ್ಪ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಎರಡನೇ ಬಾರಿ ಬಜೆಟ್ ಮಂಡಿಸುತ್ತಿದ್ದಾರೆ. ಸಾಮಾನ್ಯವಾಗಿ ಬೆಳಿಗ್ಗೆ 11 ಕ್ಕೆ ಮಂಡಿಸಲಾಗುತ್ತಿತ್ತು, ಈ ಬಾರಿ ಮುಹೂರ್ತ ನೋಡಿ, ಬಜೆಟ್ ಮಂಡಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

### 'ಒಂದು ರಾಷ್ಟ್ರ ಒಂದು ಚುನಾವಣೆ': ಸಚಿವ ಬಸವರಾಜ ಬೊಮ್ಮಾಯಿ ವಾಗ್ದಾಳಿ

# ಹಳಿ ತಪ್ಪಿಸಿದ್ದೇ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ದೇಶದಲ್ಲಿ 1967 ರವರೆಗೆ ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿ ಚಾಲ್ತಿಯಲ್ಲಿತ್ತು. ಕಾಂಗ್ರೆಸ್ ಪಕ್ಷವೇ ಅದನ್ನು ಹಳಿ ತಪ್ಪಿಸಿತು' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ 'ಒಂದು ರಾಷ್ಟ್ರ ಒಂದು ಚುನಾವಣೆ' ವಿಷಯ ಪ್ರಸ್ತಾಪಿಸಿದ ಅವರು, 'ಅಂದಿನ ರಾಷ್ಟ್ರಪತಿ ಮೂಲಕ 7 ರಾಜ್ಯಗಳ ಸರ್ಕಾರಗಳನ್ನು ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರದ ನೇತಾರರು ವಿಸರ್ಜಿಸಿದರು. ರಾಷ್ಟ್ರಪತಿ ಆಡಳಿತವನ್ನು ಹೇರಿ, ದೇಶದ ದಾರಿ ತಪ್ಪಿಸಿದರು. ಇದರಿಂದಾಗಿ ಸಂಸತ್ ಮತ್ತು ವಿಧಾನಸಭೆಗಳಿಗೆ ಬೇರೆ ಬೇರೆ ಕಾಲದಲ್ಲಿ ಚುನಾವಣೆ ನಡೆಯಲು ಆರಂಭವಾಯಿತು' ಎಂದು ಹೇಳಿದರು.



ಬಸವರಾಜ ಬೊಮ್ಮಾಯಿ

ಈ ಪದ್ಧತಿ ಮತ್ತೆ ಜಾರಿ ಬಂದರೆ ಚುನಾವಣೆಯಲ್ಲಿ ಅಕ್ರಮಕ್ಕೆ ಕಡಿವಾಣ ಹಾಕಬಹುದು. ಸಮಯ ಹಣವನ್ನೂ ಉಳಿಸಬಹುದು. ಆದರೆ ಭ್ರಷ್ಟ ಮತ್ತು ಸ್ವಾರ್ಥಪರ ರಾಜಕಾರಣಿಗಳಿಗೆ ಈ ಪದ್ಧತಿ ಮತ್ತೆ ಬರುವುದು ಬೇಕಿಲ್ಲ ಎಂದು ಬೊಮ್ಮಾಯಿ ಕಿಡಿಕಾರಿದರು.

'ಇದೇ ಕಾಂಗ್ರೆಸ್ಸಿನವರು ತುರ್ತು ಪರಿಸ್ಥಿತಿ ಹೇರಿ ದೇಶದ ಜನರ ಎಲ್ಲ ಹಕ್ಕುಗಳನ್ನೂ ಮೊಟಕುಗೊಳಿಸಿದರು. ಮಾಧ್ಯಮ ಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಿದ್ದರು. ಇಂತಹ ಸ್ಥಿತಿಯ ವಿರುದ್ಧ ಹೋರಾಡಿ ಪ್ರಜಾತಂತ್ರವನ್ನು ಉಳಿಸಿಕೊಂಡಿದ್ದು, ಈ ದೇಶದ ಜನರು. ಕಾಂಗ್ರೆಸ್ ತನ್ನ ಅಧಿಕಾರ ಉಳಿಸಿಕೊಳ್ಳಲು ಸಾಕಷ್ಟು ಕಸರತ್ತು ನಡೆಸಿತ್ತು ಎಂದು ಅವರು ಹೇಳಿದರು.

ದೇಶದಲ್ಲಿ ಸಮ್ಮಿಶ್ರ ಸರ್ಕಾರದ ಯುಗ ಆರಂಭವಾಯಿತು. ಆ ಬಳಿಕ ಪ್ರತಿ ತಿಂಗಳು ಒಂದಲ್ಲ ಒಂದು ಚುನಾವಣೆ ನಡೆಯುವ ಪರಿಪಾಟ ಆರಂಭವಾಯಿತು. ಇದು ದೇಶದ ಅಭಿವೃದ್ಧಿಗೆ ಅಡ್ಡಿ ಆಗಿದೆ ಎಂದು ಹೇಳಿದರು.

### ಪ್ರಗತಿ ಬಯಸದ ಕಾಂಗ್ರೆಸ್‌ನಿಂದ ವಿರೋಧ

ಪ್ರತಿ ಚುನಾವಣೆ ಬಂದಾಗ ಅಧಿಕಾರಿಗಳು ಕನಿಷ್ಠ ಮೂರು ತಿಂಗಳು ಅದರಲ್ಲಿ ತೊಡಗಿಸಿಕೊಳ್ಳುತ್ತಾರೆ. ಇದರಿಂದ ಎಲ್ಲ ಅಭಿವೃದ್ಧಿ ಕಾರ್ಯಗಳು ನಿಂತು ಹೋಗುತ್ತವೆ. ಪ್ರಗತಿಯ ಚಕ್ರಕ್ಕೆ ಪದೇ ಪದೇ ಬರುವ ಚುನಾವಣೆಗಳು ಅಡ್ಡಿ ಆಗುವುದು ಎಂದು ಬಿಜೆಪಿಯ ಪಿ.ರಾಜೀವ್ ಹೇಳಿದರು.

ಚುನಾವಣೆಗಳು ಪ್ರಗತಿಗೆ ಮಾರಕವಾಗಬಾರದು. ದೇಶದ ಉಜ್ವಲ ಭವಿಷ್ಯದ ದೃಷ್ಟಿಯಿಂದ ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿ ಜಾರಿ ಮಾಡಬೇಕು. ಅಭಿವೃದ್ಧಿ ಬಯಸದ ಕಾಂಗ್ರೆಸ್ ಪಕ್ಷ ಇದನ್ನು ವಿರೋಧಿಸುತ್ತಿದೆ ಎಂದರು.

ಪ್ರಜಾವಾಣಿ

ಜಸ್ಟ್ ಮ್ಯೂಸಿಕ್– ಹಿತಾನುಭವ

ಬೆಳಿಗ್ಗೆ ಆಘಾತ, ಸಂಜೆ ಆಶೀರ್ವಾದ!

ಬೆಳ್ಳಂಬೆಳಿಗ್ಗೆ ನಡೆದ ಅಪಘಾತದಲ್ಲಿ ಅವರು ಪವಾಡ ಸದೃಶ್ಯ ರೀತಿಯಲ್ಲಿ ಪಾರಾಗುತ್ತಾರೆ. ಸಂಜೆ ಶ್ರೀಶಾರದೆಯ ಆಶೀರ್ವಾದಕ್ಕೆ ಪಾತ್ರರಾಗುತ್ತಾರೆ. ಏನದು ಆಶ್ಚರ್ಯ? ಈ ವಿಡಿಯೊ ನೋಡಿ.

https://bit.ly/3eaOPCe

ಪ್ರಜಾವಾಣಿ facebook LIVE

FB.com/prajavani.net



ಅಂತರರಾಷ್ಟ್ರೀಯ ಖ್ಯಾತಿಯ ಗಾಯಕಿ

ಸ್ಮಿತಾ ಕಾರ್ತಿಕ್

ಅವರಿಂದ

ಮಹಿಳಾ ದಿನದ ವಿಶೇಷ

ಗಾಯನ ಗೋಷ್ಠಿ

ಸೋಮವಾರ, 08 ಮಾರ್ಚ್ 2021 ಸಂಜೆ 6ರಿಂದ

## ವಿದ್ವಾನ್ ಶೇಷಗೋಪಾಲನ್‌ಗೆ ಪ್ರಶಸ್ತಿ

**ಬೆಂಗಳೂರು:** ಶ್ರೀ ರಾಮ ಸೇವಾ ಮಂಡಳಿ ಟ್ರಸ್ಟ್ ನೀಡುವ 'ಎಸ್.ವಿ. ನಾರಾಯಣಸ್ವಾಮಿ ರಾವ್ ರಾಷ್ಟ್ರೀಯ ಪ್ರಶಸ್ತಿ–2021'ಕ್ಕೆ ವಿದ್ವಾನ್ ಮಧುರೈ ಟಿ.ಎನ್. ಶೇಷಗೋಪಾಲನ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 50 ಸಾವಿರ ನಗದು ಹಾಗೂ ₹ 40 ಸಾವಿರ ಮೌಲ್ಯದ ಶ್ರೀರಾಮನ ಪಂಚಲೋಹದ ಪ್ರತಿಮೆಯನ್ನು ಒಳಗೊಂಡಿದೆ. ಇವರು ವಿಶ್ವದ ಶ್ರೇಷ್ಠ ವೀಣಾ ವಾದಕ, ಗಾಯಕರಲ್ಲಿ ಒಬ್ಬರಾಗಿದ್ದಾರೆ. ಮೇ 01ರ ಸಂಜೆ 5.30ಕ್ಕೆ ಕೆ.ಆರ್. ರಸ್ತೆಯಲ್ಲಿರುವ ಗಾಯನ ಸಮಾಜ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ಟ್ರಸ್ಟ್ ತಿಳಿಸಿದೆ.

### ವಿಧಾನ ಪರಿಷತ್‌ನಲ್ಲಿ ಜೆಡಿಎಸ್, ಬಿಜೆಪಿ ಸದಸ್ಯರಿಂದ ಬೇಡಿಕೆ

# ಹಳೆ ಪಿಂಚಣಿ ಯೋಜನೆ ಮರು ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರದ ಎಲ್ಲ ನೌಕರರಿಗೂ ಅನ್ವಯವಾಗುವಂತೆ ಹಳೆ ಪಿಂಚಣಿ ಯೋಜನೆಯನ್ನು (ಒಪಿಎಸ್) ಪುನಃ ಜಾರಿಗೆ ತರಬೇಕು ಎಂದು ಜೆಡಿಎಸ್ ಮತ್ತು ಬಿಜೆಪಿ ಸದಸ್ಯರು ಶುಕ್ರವಾರ ವಿಧಾನ ಪರಿಷತ್‌ನಲ್ಲಿ ಸರ್ಕಾರವನ್ನು ಆಗ್ರಹಿಸಿದರು.

ಬಿಜೆಪಿಯ ಪುಟ್ಟಣ್ಣ ಮತ್ತು ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಮಂಡಿಸಿದ ಗಮನ ಸೆಳೆಯುವ ಸೂಚನೆ ಕುರಿತು ಮಾತನಾಡಿದ ಎರಡೂ ಪಕ್ಷಗಳ ಸದಸ್ಯರು, 2006ರಿಂದ ಈಚೆಗೆ ನೇಮಕಗೊಂಡಿರುವ ಸರ್ಕಾರಿ ನೌಕರರನ್ನು ಒಪಿಎಸ್‌ನಿಂದ ಹೊರಗಿಟ್ಟು ಹೊಸ ಪಿಂಚಣಿ ಯೋಜನೆಯಡಿ (ಎನ್‌ಪಿಎಸ್) ತಂದಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಶ್ರೀಕಂಠೇಗೌಡ ಮಾತನಾಡಿ, 'ಎನ್‌ಪಿಎಸ್ ಜಾರಿಯಾದ ಬಳಿಕ ಇಡೀ ಪಿಂಚಣಿ ವ್ಯವಸ್ಥೆಯೇ ಗೊಂದಲಮಯವಾಗಿದೆ. ಸರ್ಕಾರಿ ನೌಕರರು ನಿವೃತ್ತಿಯಾದಾಗ ಪಿಂಚಣಿ ಭದ್ರತೆಯನ್ನು ಕಳೆದುಕೊಂಡ ಸ್ಥಿತಿಯಲ್ಲಿದ್ದಾರೆ. ಅನುದಾನಿತ ಮತ್ತು ಅರೆ ಸರ್ಕಾರಿ ಸಂಸ್ಥೆಗಳ ನೌಕರರಿಗೆ ಯಾವುದೇ ವಿಧದ ಪಿಂಚಣಿ ದೊರಕುತ್ತಿಲ್ಲ' ಎಂದರು.

**ಅವರು ಮನುಷ್ಯರಲ್ಲವೆ?:** '2006ರ ನಂತರ ನೇಮಕಾತಿ ಹೊಂದಿದ ಸರ್ಕಾರಿ ನೌಕರರಿಗೆ ಎನ್‌ಪಿಎಸ್ ಕಡ್ಡಾಯ ಮಾಡಲಾಗಿದೆ. 2006ರ ನಂತರ ಆಯ್ಕೆಯಾದ ಶಾಸಕರು, ಸಂಸದರು, ಸಚಿವರಿಗೆ ಒಪಿಎಸ್ ನೀಡಲಾಗುತ್ತಿದೆ. ಸರ್ಕಾರಿ ನೌಕರರು ಮನುಷ್ಯರಲ್ಲವೆ? ಎನ್‌ಪಿಎಸ್ ಒಳ್ಳೆಯ ಯೋಜನೆಯೇ ಆಗಿದ್ದರೆ ಶಾಸಕರು, ಸಂಸದರು, ಸಚಿವರಿಗೂ ಅದನ್ನೇ ನೀಡಬೇಕು' ಎಂದು ಬಿಜೆಪಿಯ ಆಯನೂರು ಮಂಜುನಾಥ್ ಆಗ್ರಹಿಸಿದರು.

ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಮಾತನಾಡಿ, 'ಎನ್‌ಪಿಎಸ್ ಎಂದರೆ 'ನೋ ಪೆನ್ಷನ್ ಸ್ಕೀಂ' ಎಂಬಂತಹ ಸ್ಥಿತಿ ನಿರ್ಮಾಣವಾಗಿದೆ. ತಿಂಗಳಿಗೆ ₹ 84,000 ವೇತನ ಪಡೆಯುತ್ತಿದ್ದ ನೌಕರರೊಬ್ಬರು ಎನ್‌ಪಿಎಸ್ ಆಯ್ದುಕೊಂಡಿದ್ದರು. ನಿವೃತ್ತರಾದ ಬಳಿಕ ಸರಿಯಾಗಿ ಪಿಂಚಣಿಯೇ ಬರುತ್ತಿಲ್ಲ. ತಿಂಗಳಿಗೆ ₹ 10,000 ವೇತನ ಇರುವ ಕೆಲಸ ಕೊಡಿಸುವಂತೆ ನನ್ನ ಬಳಿ ಬಂದಿದ್ದರು' ಎಂದು ಹೇಳಿದರು.

ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, ಬಿಜೆಪಿಯ ಪ್ರೊ. ಎಸ್.ವಿ. ಸಂಕನೂರ, ತಳವಾರ ಸಾಬಣ್ಣ, ಹಣಮಂತ ನಿರಾಣಿ, ಶಶೀಲ್ ಜಿ. ನಮೋಶಿ ಎನ್‌ಪಿಎಸ್ ವಿರೋಧಿಸಿದರು. ಎಲ್ಲ ಸರ್ಕಾರಿ ನೌಕರರಿಗೂ ಅನ್ವಯವಾಗುವಂತೆ ಹಳೆ ಪಿಂಚಣಿ ಯೋಜನೆಯನ್ನು ಮತ್ತೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಉತ್ತರ ನೀಡಿದ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ, 'ಹಳೆ ಪಿಂಚಣಿ ಯೋಜನೆ ಮರು ಜಾರಿಗೊಳಿಸಬೇಕೆಂಬ ಬೇಡಿಕೆ ಕುರಿತು ಪರಿಶೀಲನೆಗೆ 2018ರಲ್ಲೇ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ನೇಮಿಸಲಾಗಿತ್ತು. ಈವರೆಗೂ ವರದಿ ಬಂದಿಲ್ಲ. ಈಗ ಸಮಸ್ಯೆ ಕುರಿತು ಚರ್ಚಿಸಲು ಮುಖ್ಯಮಂತ್ರಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಿಗದಿಗೊಳಿಸಲು ಪ್ರಯತ್ನಿಲಾಗುವುದು' ಎಂದು ಭರವಸೆ ನೀಡಿದರು.

### ಆರ್ಥಿಕ ಇಲಾಖೆಯಲ್ಲಿ ಪ್ರಸ್ತಾವ ಬಾಕಿ

1995ರಿಂದ 2005ರವರೆಗಿನ ಅವಧಿಯಲ್ಲಿ ಆರಂಭವಾಗಿರುವ ಕನ್ನಡ ಮಾಧ್ಯಮ ಶಾಲಾ, ಕಾಲೇಜುಗಳಿಗೆ ವೇತನಾನುದಾನ ಮಂಜೂರು ಮಾಡುವ ಪ್ರಸ್ತಾವವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿತ್ತು. ಕೋವಿಡ್ ಸಂಕಷ್ಟದ ಕಾರಣದಿಂದ ಹಣಕಾಸು ಇಲಾಖೆ ಒಪ್ಪಿಗೆ ನೀಡಿಲ್ಲ ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ನಿಯಮ 330ರಡಿ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಅವರು ನಡೆಸಿದ ಚರ್ಚೆಗೆ ಉತ್ತರಿಸಿದ ಅವರು, 'ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಬಳಿಕ ಹಣಕಾಸು ಇಲಾಖೆಯ ಒಪ್ಪಿಗೆ ಪಡೆದು ವೇತನಾನುದಾನ ಮಂಜೂರು ಮಾಡಲು ಪ್ರಯತ್ನಿಸಲಾಗುವುದು' ಎಂದು ಭರವಸೆ ನೀಡಿದರು.

# ಗದ್ದಲದಲ್ಲೇ ಕಲಾಪ ಅಂತ್ಯ

ಒಂದನೇ ಪುಟದಿಂದ

'ಈ ಚರ್ಚೆ ಆರ್‌ಎಸ್‌ಎಸ್ ಅಜೆಂಡಾ ಆಗಿರುವುದರಿಂದ ಇದರಲ್ಲಿ ಭಾಗವಹಿಸುವುದಿಲ್ಲ. ಕಲಾಪ ನಡೆಯಲೂ ಬಿಡುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು. ಇದಕ್ಕೆ ಧ್ವನಿಗೂಡಿಸಿದ ಕಾಂಗ್ರೆಸ್ ಸದಸ್ಯರು 'ಸರ್ಕಾರ ಮತ್ತು ಸ್ಪೀಕರ್ ಅವರು ಆರ್‌ಎಸ್‌ಎಸ್ ಕೈಗೊಂಬೆ' ಎಂದು ಘೋಷಣೆ ಕೂಗಿದರು. ಇನ್ನೂ ಜೋರಾಗಿ ಕೂಗಿ ಎಂದು ಸಿದ್ದರಾಮಯ್ಯ ತಮ್ಮ ಸದಸ್ಯರನ್ನು ಹುರಿದುಂಬಿಸಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಸದಸ್ಯರು ಆರ್‌ಎಸ್‌ಎಸ್‌ಗೆ ಜೈ ಎಂದು ಘೋಷಣೆ ಕೂಗಿದರು.

ಆಗ ಮಧ್ಯ ಪ್ರವೇಶಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ, 'ಕಾಂಗ್ರೆಸ್‌ಗೆ ಇಂತಹ ಉಪಯುಕ್ತ ಚರ್ಚೆಯಲ್ಲಿ ಭಾಗವಹಿಸಲು ಆಸಕ್ತಿ ಇಲ್ಲ. ಅವರಿಗೆ ಪ್ರಜಾಪ್ರಭುತ್ವ ಬಲಪಡಿಸುವ ಉದ್ದೇಶವೂ ಇಲ್ಲ. ಇದು ಸರಿಯಾದ ನಡವಳಿಕೆ ಅಲ್ಲ ' ಎಂದರು.

'ನಿಮಗೆ ಚರ್ಚೆಯಲ್ಲಿ ಭಾಗವಹಿಸಲು ಇಚ್ಛೆ ಇಲ್ಲದಿದ್ದರೆ, ಇತರ ಸದಸ್ಯರು ಮಾತನಾಡಲು ಅಡ್ಡಿ ಮಾಡಿ ಅವರ ಹಕ್ಕು ಮೊಟಕು ಮಾಡುವುದು ಸರಿಯಲ್ಲ. ಇದು ಪ್ರಜಾತಂತ್ರದ ಲಕ್ಷಣವೂ ಅಲ್ಲ. ಸಂಗಮೇಶ್ವರ ಅವರ ಬೇಜವಾಬ್ದಾರಿ ವರ್ತನೆ ಖಂಡಿಸದೇ ಅಮಾನತ್ತು ಹಿಂದಕ್ಕೆ ಪಡೆಯಿರಿ ಎಂದು ವಿಷಯಾಂತರ ಮಾಡುವುದೂ ಸರಿಯಲ್ಲ. ಸದನಕ್ಕೆ ಘನತೆ, ಗೌರವವಿದೆ. ಪ್ರಜಾಪ್ರಭುತ್ವದ ದೇಗುಲದಲ್ಲಿ ಅದರ ಪಾವಿತ್ರ್ಯಕ್ಕೆ ಧಕ್ಕೆ ತರುವುದು ಸರಿಯಲ್ಲ' ಎಂದು ಕಾಗೇರಿ ಹೇಳಿದರು.

ಈ ಮಧ್ಯೆ ಸಭಾಧ್ಯಕ್ಷರು ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿಯ ಪಿ.ರಾಜೀವ್ ಅವರಿಗೆ ಮಾತನಾಡಲು ಅವಕಾಶ ನೀಡಿದರು. ಆದರೆ, ಕಾಂಗ್ರೆಸ್ ಸದಸ್ಯರ ಗದ್ದಲದಲ್ಲಿ ತಮ್ಮ ವಾದವನ್ನು ಮಂಡಿಸಲು ಸಾಧ್ಯವಾಗಲಿಲ್ಲ. ಗದ್ದಲವೇ ತುಂಬಿದ್ದರಿಂದ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು. ಜೆಡಿಎಸ್ ಸದಸ್ಯರು ಧರಣಿಯಲ್ಲಿ ಭಾಗವಹಿಸಲಿಲ್ಲ.

> ಇಲ್ಲಿನ ಅಬ್ಬರ, ಗದ್ದಲ, ಕೂಗಾಟ ನೋಡಿದರೆ ಇದು ವಿಧಾನಸಭೆಯೋ ಅಥವಾ ಕ್ಯಾಬರೆ ಕ್ಲಬ್ ಅಂತ ಸಂದೇಹ ಬರುತ್ತಿದೆ
> **ಆರಗ ಜ್ಞಾನೇಂದ್ರ,** ಬಿಜೆಪಿ ಸದಸ್ಯ

> ಇವತ್ತು ಅಂಗಿ ತೆಗೆಯುತ್ತಾರೆ, ಸುಮ್ಮನಿದ್ದರೆ ನಾಳೆ ಚಡ್ಡಿಯನ್ನೂ ಬಿಚ್ಚುತ್ತಾರೆ. ಇವೆಲ್ಲವನ್ನೂ ನೋಡಿಕೊಂಡು ಸುಮ್ಮನೆ ಇರಲು ಸಾಧ್ಯವಿಲ್ಲ
> **ಬಸನಗೌಡ ಪಾಟೀಲ ಯತ್ನಾಳ,** ಬಿಜೆಪಿ ಸದಸ್ಯ

> ವಿಧಾನಪರಿಷತ್ತಿನಲ್ಲಿ ಉಪಸಭಾಪತಿಯನ್ನು ಎಳೆದು ಹಾಕಿದಂತೆ ಇಲ್ಲಿ ಯಾರೂ ನಡೆದುಕೊಂಡಿಲ್ಲ. ಸಂಗಮೇಶ್ವರ ಅವರ ಅಮಾನತು ವಾಪಸ್ ಪಡೆಯಿರಿ
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

**ಪ್ರತಿಭಟನೆ** 'ಒಂದು ರಾಷ್ಟ್ರ– ಒಂದು ಚುನಾವಣೆ' ವಿಶೇಷ ಚರ್ಚೆ ವಿರೋಧಿಸಿ ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಶುಕ್ರವಾರ ಎರಡನೇ ದಿನವೂ ಧರಣಿ, ಗದ್ದಲ ನಡೆಸಿದರು

# ಸಚಿವರ ಬದಲು ಪಿ.ಎ ಪತ್ರ: ಸಭಾಪತಿ ಹೊರಟ್ಟಿ ಗರಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನ ಪರಿಷತ್ ಅಧಿವೇಶನಕ್ಕೆ ಶುಕ್ರವಾರ ಗೈರಾಗುವ ಕುರಿತು ಸಚಿವ ಆನಂದ್ ಸಿಂಗ್ ಪರವಾಗಿ ಅವರ ಆಪ್ತ ಸಹಾಯಕ ಪತ್ರ ಬರೆದು ಮಾಹಿತಿ ನೀಡಿರುವುದಕ್ಕೆ ಸಭಾಪತಿ ಬಸವರಾಜ ಹೊರಟ್ಟಿ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಶುಕ್ರವಾರ ಬೆಳಿಗ್ಗೆ ಸದನದ ಕಲಾಪ ಆರಂಭವಾದಾಗ ಬಹುತೇಕ ಸಚಿವರು ಸದನಕ್ಕೆ ಬಂದಿರಲಿಲ್ಲ. ಅಧಿಕಾರಿಗಳ ಗ್ಯಾಲರಿಯೂ ಖಾಲಿ ಇತ್ತು. ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, 'ಸಚಿವರೂ ಇಲ್ಲ, ಅಧಿಕಾರಿಗಳೂ ಇಲ್ಲ. ಯಾರಿಗಾಗಿ ಸದನ ನಡೆಸಬೇಕು? ಸರ್ಕಾರ ಕಲಾಪವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ' ಎಂದು ಆಕ್ಷೇಪಿಸಿದರು.

ಹೆಚ್ಚಿನ ಸಚಿವರು ವಿಧಾನಸಭೆಯಲ್ಲಿ ಇದ್ದಾರೆ ಎಂದು ಸಮಜಾಯಿಷಿ ನೀಡಲು ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಯತ್ನಿಸಿದರು. ವಿರೋಧ ಪಕ್ಷದ ಸದಸ್ಯರು ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿದರು.

ಮಧ್ಯ ಪ್ರವೇಶಿಸಿದ ಸಭಾಪತಿ ಹೊರಟ್ಟಿ, 'ಸಚಿವ ಆನಂದ್ ಸಿಂಗ್ ಅವರು ಪೂರ್ವ ನಿಯೋಜಿತ ಕಾರ್ಯಕ್ರಮಗಳ ಕಾರಣದಿಂದ ಸದನಕ್ಕೆ ಗೈರಾಗುತ್ತಾರೆ ಎಂದು ಅವರ ಆಪ್ತ ಸಹಾಯಕ ಪತ್ರ ಬರೆದಿದ್ದಾರೆ. ಸಭಾಪತಿಗೆ ಸಚಿವರೇ ಪತ್ರದ ಮೂಲಕ ಮಾಹಿತಿ ನೀಡುವುದು ಕ್ರಮ. ರಮೇಶ್ ಬಾಬು ಎಂಬ ಆಪ್ತ ಸಹಾಯಕನ ಹೆಸರಿನಲ್ಲಿ ಪತ್ರ ಬಂದಿದೆ. ನಾನು ಪತ್ರ ನೋಡಿದ ತಕ್ಷಣ ರಮೇಶ್ ಬಾಬು ಎಂಬ ಹೊಸ ಸಚಿವರು ಇರಬಹುದು ಅಂದುಕೊಂಡೆ' ಎಂದು ವ್ಯಂಗ್ಯವಾಗಿಯೇ ಅಸಮಾಧಾನ ಹೊರಹಾಕಿದರು.

## ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆ ವಿರುದ್ಧ ಕಾನೂನು ಹೋರಾಟ

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆ ವಿರುದ್ಧ ಏಪ್ರಿಲ್ ಕೊನೆಯ ವಾರದಲ್ಲಿ ಕಾನೂನು ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಶ್ರೀರಾಮಸೇನೆ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಸೀದಿಗಳಲ್ಲಿ ಧ್ವನಿವರ್ಧಕ ಬಳಸಬಾರದು ಎಂದು ಸುಪ್ರೀಂ ಕೋರ್ಟ್ ಕೂಡ ಆದೇಶ ನೀಡಿದೆ. ಆದರೂ ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆ ಮಾಡಲಾಗುತ್ತಿದೆ. ಧ್ವನಿವರ್ಧಕದ ಶಬ್ದ ಇಷ್ಟೇ ಡೆಸಿಬಲ್ ಇರಬೇಕು ಎಂಬ ನಿಯಮ ಕೂಡ ಇದೆ. ಆದರೆ, ಯಾವುದೂ ಪಾಲನೆಯಾಗುತ್ತಿಲ್ಲ. ಆಸ್ಪತ್ರೆ, ಶಾಲಾ–ಕಾಲೇಜುಗಳ ಸಮೀಪದ ಮಸೀದಿಗಳಲ್ಲಿ ಧ್ವನಿವರ್ಧಕ ಬಳಸುವ ವಿರುದ್ಧ ರಾಜ್ಯದಾದ್ಯಂತ ದೂರು ದಾಖಲಿಸುವ ಆಂದೋಲನ ನಡೆಸುತ್ತೇವೆ' ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ತೀರ್ಪಿನ ನಂತರವೂ 'ವಿವಾದಿತ ರಾಮಮಂದಿರ' ಎಂಬ ಪದ ಬಳಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧವೂ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವ ಕುರಿತು ಚಿಂತನೆ ನಡೆಸಲಾಗಿದೆ ಎಂದ ಅವರು, 'ಆರ್‌ಎಸ್‌ಎಸ್ ಸಂಘಟನೆಯನ್ನು ಪಾಕಿಸ್ತಾನದ ಮದರಸಾಗಳಿಗೆ ಹೋಲಿಕೆ ಮಾಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿಕೆ ಖಂಡನೀಯ. ಆರ್‌ಎಸ್‌ಎಸ್ ಏನು ಮಾಡುತ್ತದೆ; ಪಾಕಿಸ್ತಾನದ ಮದರಸಾಗಳು ಏನು ಮಾಡುತ್ತವೆ ಎಂಬ ಕನಿಷ್ಠ ಜ್ಞಾನವೂ ಅವರಿಗೆ ಇಲ್ಲ. ಅವರು ತಕ್ಷಣ ಹೇಳಿಕೆಯನ್ನು ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

## ಸೂಲಗಿತ್ತಿ ಹನುಮವ್ವ ಗಿಡ್ಡೇರಗೆ 'ಆರೂಢಶ್ರೀ'

ಹನುಮವ್ವ

**ಚಿತ್ರದುರ್ಗ:** ಕಬೀರಾನಂದ ಆಶ್ರಮ ಪ್ರದಾನ ಮಾಡುವ 'ಆರೂಢಶ್ರೀ' ಪ್ರಶಸ್ತಿಗೆ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹೊಂಕಣ ಗ್ರಾಮದ ಸೂಲಗಿತ್ತಿ ಹನುಮವ್ವ ಗಿಡ್ಡೇರ ಅವರನ್ನು ಆಯ್ಕೆ ಮಾಡಲಾಗಿದೆ.

ಮಹಾಶಿವರಾತ್ರಿ ಅಂಗವಾಗಿ ಮಾರ್ಚ್ 11ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿರುತ್ತದೆ ಎಂದು ಕಬೀರಾನಂದ ಆಶ್ರಮದ ಶಿವಲಿಂಗಾನಂದ ಸ್ವಾಮೀಜಿ ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

86 ವರ್ಷದ ಹನುಮವ್ವ 40 ವರ್ಷಗಳಿಂದ ಸೂಲಗಿತ್ತಿ ಕೆಲಸ ಮಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಹೆರಿಗೆ ಮಾಡಿಸಿದ್ದಾರೆ. ಶಾಲೆಯ ಮೆಟ್ಟಿಲು ತುಳಿಯದಿದ್ದರೂ ಹೆರಿಗೆಯ ಬಗ್ಗೆ ಅಪಾರ ಜ್ಞಾನ ಹೊಂದಿದ್ದಾರೆ.

# ಸಾರಿಗೆ ನಿಗಮಗಳಿಗೆ ₹2,980 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರಿ ಸ್ವಾಮ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ₹ 4,000 ಕೋಟಿಯಷ್ಟು ಆದಾಯ ಕೊರತೆ ಉಂಟಾಗಿದ್ದು, ₹ 2,980 ಕೋಟಿ ನಿವ್ವಳ ನಷ್ಟದಲ್ಲಿವೆ ಎಂದು ಸಾರಿಗೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಪ್ರಶ್ನೋತ್ತರ ಕಲಾಪದಲ್ಲಿ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಸಾರಿಗೆ ನಿಗಮಗಳು ಸದ್ಯ ತೀವ್ರವಾದ ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ಈ ಬಜೆಟ್‌ನಲ್ಲಿ ಹೆಚ್ಚಿನ ನೆರವಿನ ನಿರೀಕ್ಷೆಯಲ್ಲಿ ಇದ್ದೇವೆ' ಎಂದರು.

**ಆಸನಗಳ ಸಂಖ್ಯೆ ಹೆಚ್ಚಳ:** ಕಾಂಗ್ರೆಸ್‌ನ ಆರ್. ಪ್ರಸನ್ನಕುಮಾರ್ ಪ್ರಶ್ನೆಗೆ ಉತ್ತರಿಸಿದ ಲಕ್ಷ್ಮಣ ಸವದಿ, 'ಮ್ಯಾಕ್ಸಿಕ್ಯಾಬ್ ವಾಹನಗಳ ಚಕ್ರತಳದ ಅಳತೆಯ ಆಧಾರದ ಮೇಲೆ ಆಸನಗಳ ಸಂಖ್ಯೆಯನ್ನು 20 ಮತ್ತು 22ಕ್ಕೆ ಹೆಚ್ಚಿಸಲಾಗಿದೆ. ಪರಿಷ್ಕೃತ ಆದೇಶದಂತೆ ತೆರಿಗೆ ಪಾವತಿಸದ ವಾಹನಗಳ ಮಾಲೀಕರ ವಿರುದ್ಧ ಸಾರಿಗೆ ಇಲಾಖೆ ಅಧಿಕಾರಿಗಳು ಕ್ರಮ ಜರುಗಿಸುತ್ತಿದ್ದಾರೆ' ಎಂದು ತಿಳಿಸಿದರು.

ನಿಯಮ ಉಲ್ಲಂಘನೆ ಆರೋಪದಡಿ 2018ರಲ್ಲಿ 2.88 ಲಕ್ಷ ಪ್ರಕರಣ ದಾಖಲಿಸಿದ್ದು, ₹ 3.75 ಕೋಟಿ ದಂಡ ವಿಧಿಸಲಾಗಿದೆ. 2019ರಲ್ಲಿ 4.65 ಲಕ್ಷ ಪ್ರಕರಣಗಳಲ್ಲಿ ₹ 8.80 ಕೋಟಿ ದಂಡ ಮತ್ತು 2020ರಲ್ಲಿ 8.21 ಲಕ್ಷ ಪ್ರಕರಣ ದಾಖಲಿಸಿದ್ದು, ₹ 18.37 ಕೋಟಿ ದಂಡ ವಿಧಿಸಲಾಗಿದೆ ಎಂದು ಸದನಕ್ಕೆ ತಿಳಿಸಿದರು.

**ಶೇ 50ಕ್ಕಿಂತ ಹೆಚ್ಚು ಹುದ್ದೆ ಖಾಲಿ:** ರಾಜ್ಯದ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಮಂಜೂರಾದ 6,342 ಹುದ್ದೆಗಳ ಪೈಕಿ ಶೇಕಡ 50ಕ್ಕಿಂತಲೂ ಹೆಚ್ಚು (3,512) ಹುದ್ದೆಗಳು ಖಾಲಿ ಇವೆ ಎಂಬ ಮಾಹಿತಿಯನ್ನು ಕೃಷಿ ಸಚಿವ ಬಿ.ಸಿ. ಪಾಟೀಲ ಅವರು ವಿಧಾನ ಪರಿಷತ್‌ಗೆ ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ 2,215 ಹುದ್ದೆಗಳಲ್ಲಿ 985 ಹುದ್ದೆಗಳು ಭರ್ತಿಯಾಗಿದ್ದು, 1,230 ಹುದ್ದೆಗಳು ಖಾಲಿ ಇವೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ 1,669 ಹುದ್ದೆಗಳ ಪೈಕಿ 786 ಹುದ್ದೆಗಳು ಭರ್ತಿ ಇದ್ದು, 883 ಹುದ್ದೆಗಳು ಖಾಲಿ ಇವೆ. ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ 1,513 ಹುದ್ದೆಗಳ ಪೈಕಿ 811 ಖಾಲಿ ಇವೆ. ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯದಲ್ಲಿ 945 ಹುದ್ದೆಗಳ ಪೈಕಿ 588 ಖಾಲಿ ಇವೆ ಎಂದು ಉತ್ತರಿಸಿದರು.

**ಕಾಲೇಜು ಆರಂಭಕ್ಕೆ ತಡೆ:** ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಆಲಮೇಲದಲ್ಲಿ ಹೊಸ ತೋಟಗಾರಿಕಾ ಕಾಲೇಜು ಆರಂಭಿಸುವ ಪ್ರಸ್ತಾವಕ್ಕೆ ಆರ್ಥಿಕ ಇಲಾಖೆ ತಡೆ ನೀಡಿದೆ ಎಂದು ತೋಟಗಾರಿಕೆ ಸಚಿವ ಆರ್. ಶಂಕರ್ ಬಿಜೆಪಿಯ ಅರುಣ್ ಶಹಾಪುರ ಅವರ ಪ್ರಶ್ನೆಗೆ ಉತ್ತರಿಸಿದರು.

## ಲಿಂಬಾವಳಿಗೆ ಪ.ಬಂಗಾಳ ಚುನಾವಣಾ ಜವಾಬ್ದಾರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸುವ ಉದ್ದೇಶದಿಂದ ಹಲವು ನಾಯಕರನ್ನು ತೊಡಗಿಸಿಕೊಳ್ಳುತ್ತಿರುವ ಬಿಜೆಪಿ ವರಿಷ್ಠರು, ರಾಜ್ಯ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರನ್ನೂ ಕರೆಯಿಸಿಕೊಂಡಿದೆ.

ಕಲಬುರ್ಗಿ ಪ್ರವಾಸದಲ್ಲಿರುವ ಸಚಿವ ಅರವಿಂದ ಲಿಂಬಾವಳಿ ಅವರಿಗೆ ದೆಹಲಿಯಿಂದ ಅಮಿತ್ ಶಾ ಮತ್ತು ಜೆ.ಪಿ.ನಡ್ಡಾ ಅವರ ತುರ್ತು ಕರೆ ಬಂದ ಕಾರಣ ತಮ್ಮ ಪ್ರವಾಸ ಮೊಟಕುಗೊಳಿಸಿ ದೆಹಲಿಗೆ ತೆರಳಿದರು.

ಅರವಿಂದ

ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ ಅವರೂ ಈಗಾಗಲೇ ಚುನಾವಣೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ತೆಲಂಗಾಣ ಸೇರಿ ವಿವಿಧ ರಾಜ್ಯಗಳ ಚುನಾವಣೆಯಲ್ಲಿ ಕಾರ್ಯ ನಿರ್ವಹಿಸಿ ಅನುಭವ ಹೊಂದಿರುವ ಅರವಿಂದ್ ಅವರನ್ನು ಪಶ್ಚಿಮಬಂಗಾಳದಲ್ಲಿ ತೊಡಗಿಸಿಕೊಳ್ಳುವಂತೆ ವರಿಷ್ಠರು ನಿರ್ಧರಿಸಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

# ಸಿದ್ದರಾಮಯ್ಯ– ಇಬ್ರಾಹಿಂ 'ರಾಜಕೀಯ' ಚರ್ಚೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾಂಗ್ರೆಸ್ ಹಿರಿಯ ನಾಯಕ, ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿ ಮಾತುಕತೆ ನಡೆಸಿದರು.

ಜೆಡಿಎಸ್‌ನತ್ತ ಇಬ್ರಾಹಿಂ ಒಲವು ಹೊಂದಿದ್ದಾರೆ ಎಂಬ ಸುದ್ದಿಯ ಮಧ್ಯೆ ಇಬ್ಬರ 'ರಾಜಕೀಯ' ಚರ್ಚೆ ಕುತೂಹಲ ಮೂಡಿಸಿದೆ. ಸಿದ್ದರಾಮಯ್ಯ ನಿವಾಸಕ್ಕೆ ಭೇಟಿ ನೀಡಿದ ಇಬ್ರಾಹಿಂ, ಪಕ್ಷಕ್ಕೆ ಸಂಬಂಧಿಸಿದ ಕೆಲವು ಮಹತ್ವದ ವಿಷಯಗಳ ಬಗ್ಗೆ ಸಮಾಲೋಚನೆ ನಡೆಸಿದರು.



ಸಿದ್ದರಾಮಯ್ಯ ಮತ್ತು ಸಿ.ಎಂ. ಇಬ್ರಾಹಿಂ

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಶುಭ ಶುಕ್ರವಾರ, ಎಲ್ಲವೂ ಒಳ್ಳೆಯದಾಗುತ್ತದೆ. ರಾಜಕೀಯ ವಿಚಾರವಾಗಿ ಚರ್ಚೆ ನಡೆಸಿದ್ದೇವೆ' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್ ಬಲವರ್ಧನೆಗೆ ಯಾವ ರೀತಿಯ ಕ್ರಮ ಕೈಗೊಳ್ಳಬೇಕು, ಏನು ಮಾಡಬೇಕು, ಇದರಲ್ಲಿ ನನ್ನ ಪಾತ್ರ ಏನು, ಯಾವ ಯಾವ ಸಮಾಜದವರನ್ನು ಹೇಗೆ ಕರೆದೊಯ್ಯಬೇಕು. ಅಲ್ಪಸಂಖ್ಯಾತರ ಪಾತ್ರವೇನು, ಬಹುಸಂಖ್ಯಾತರ ಪಾತ್ರವೇನು ಎಂಬ ವಿಚಾರವಾಗಿ ಚರ್ಚಿಸಿದ್ದೇವೆ' ಎಂದರು.

'ಜೆಡಿಎಸ್‌ಗೆ ಸೇರುವ ವಿಚಾರ ಇಲ್ಲಿ ತೀರ್ಮಾನ ಆಗಿಲ್ಲ. ದೆಹಲಿಯಲ್ಲಿ ತೀರ್ಮಾನ ಆಗುತ್ತದೆ. ಸಮಯ ಸಿಕ್ಕಾಗ ದೆಹಲಿಗೆ ಹೋಗಿ ಬರುತ್ತೇನೆ' ಎಂದ ಅವರು, 'ಮೈಸೂರು ಮೇಯರ್ ಆಯ್ಕೆ ವಿಚಾರದಲ್ಲಿ ಉಂಟಾದ ಗೊಂದಲ ಪರಿಹಾರ ಆಗಲಿದೆ' ಎಂದರು.

'ಕಾಂಗ್ರೆಸ್ ಪಕ್ಷದಲ್ಲಿ ನಿರ್ಧಾರ ಕೈಗೊಳ್ಳುವ ನಾಯಕರ ಪಟ್ಟಿಯಲ್ಲಿ ನಾನಿದ್ದೇನೆಯೇ, ಇಲ್ಲವೇ ಎಂಬುವುದನ್ನು ತಿಳಿದುಕೊಳ್ಳಬೇಕಲ್ಲವೇ. ನಾವು ಬಂಡವಾಳ ಇಲ್ಲದೆ ರಾಜಕೀಯಕ್ಕೆ ಬಂದವರಲ್ಲ. ನಮಗೆ ಇರುವುದನ್ನು ನಮಗೆ ಕೊಟ್ಟರೆ ಸಾಕು. ನಾನು ಒಂದು ರೂಪಾಯಿ ನೀಡಿ 50 ಪೈಸೆ ವಾಪಸ್ ಕೇಳುತ್ತಿದ್ದೇನೆ. ಇಲ್ಲಿ ಒಂದು ರೂಪಾಯಿನೂ ಹಾಕದೇ ಎರಡು ರೂಪಾಯಿ ತೆಗೆದುಕೊಂಡು ಹೋಗುವವರಿದ್ದಾರೆ. ನಾವೇನು ಪುಗಸಟ್ಟೆ ಕೇಳುತ್ತಿದ್ದೇವಾ' ಎಂದರು.

### ನಟ ಸುದೀಪ್ ನಗೆ ಚಟಾಕಿ

# ಕೆಂಪು–ಹಳದಿ ಶಾಲು ಕಂಡರೆ ಭಯ

ಪ್ರಜಾವಾಣಿ ವಾರ್ತೆ

**ರಾಮನಗರ:** 'ಈಗೀಗ ಯಾರಾದರೂ ಕೆಂಪು–ಹಳದಿ (ಕನ್ನಡದ) ಶಾಲು ಹಾಕಿಕೊಂಡು ನನ್ನ ಮನೆ ಮುಂದೆ ಬಂದು ನಿಂತರೆ ನನಗೆ ಭಯ, ಗೊಂದಲ ಆಗುತ್ತಿದೆ' ಎಂದು ನಟ ಸುದೀಪ್ ನಗೆ ಚಟಾಕಿ ಹಾರಿಸಿದರು.

ದುಬೈನ ಬುರ್ಜ್ ಖಲೀಫಾ ಕಟ್ಟಡದಲ್ಲಿ ಕನ್ನಡ ಬಾವುಟ ಪ್ರದರ್ಶನ ಹಿನ್ನೆಲೆಯಲ್ಲಿ ಕನ್ನಡಪರ ಸಂಘಟನೆಗಳಿಂದ ಬಿಡದಿ ಇನೋವೇಟಿವ್ ಫಿಲ್ಮ್ ಸಿಟಿಯಲ್ಲಿ ಶುಕ್ರವಾರ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ಕನ್ನಡ ಶಾಲು ಹಾಕಿಕೊಂಡವರನ್ನು ಕಂಡರೆ ಅವರು ನಮ್ಮನ್ನು ಹೊಗಳಲು ಬಂದಿದ್ದಾರಾ, ಇಲ್ಲ ಹೊಡೆಯಲು ಬಂದಿದ್ದಾರಾ ಎನ್ನುವ ಗೊಂದಲ ಆಗುತ್ತದೆ' ಎಂದರು.

ಜಗ್ಗೇಶ್‌ರಿಗೆ ದರ್ಶನ್ ಅಭಿಮಾನಿಗಳಿಂದ ಘೇರಾವ್ ಕುರಿತು ಮಾತನಾಡಿದ ಸುದೀಪ್, 'ಒಬ್ಬ ಕಲಾವಿದನಿಗೆ ನಾಡಿನಾದ್ಯಂತ ಸಾವಿರಾರು ಅಭಿಮಾನಿಗಳು ಇದ್ದಾರೆ. ನೀವು ಆ ಕಲಾವಿದನಿಗೆ ಬಯ್ಯಲು ಬಂದಾಗ ಅವನೊಬ್ಬನೇ ಇರಬಹುದು. ಯಾವುದೇ ವ್ಯಕ್ತಿಯಿಂದ ತಪ್ಪಾದರೂ ಅದರ ವಿರುದ್ಧ ಭಾವೋದ್ವೇಗಕ್ಕೆ ಒಳಗಾಗಿ ಪ್ರತಿಕ್ರಿಯಿಸಬೇಡಿ. ಸಮಾಧಾನವಾಗಿ ಕುಳಿತು ಆ ಬಗ್ಗೆ ವಿಚಾರ ಮಾಡಿ ನಂತರ ತೀರ್ಮಾನಕ್ಕೆ ಬನ್ನಿ' ಎಂದು ಸಂಘಟನೆಗಳ ಸದಸ್ಯರಿಗೆ ಸಲಹೆ ನೀಡಿದರು.

ಸುದೀಪ್

**ಗೊಂದಲ ಬಗೆಹರಿಸಿಕೊಳ್ಳಿ:** ನಾಡಿನ ಕನ್ನಡಪರ ಸಂಘಟನೆಗಳಲ್ಲೇ ಗೊಂದಲ ಇದೆ. ಮೊದಲು ನೀವು ಕುಳಿತುಕೊಂಡು ಮಾತನಾಡಿ ನಿಮ್ಮಲ್ಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ ಎಂದು ಸುದೀಪ್ ಕಿವಿಮಾತು ಹೇಳಿದರು.

'ಕನ್ನಡ ಮಾತನಾಡಲು ಬಂದರೆ ಬಯ್ಯುತ್ತೀರಾ. ಬರದೇ ಹೋದರೂ ಬಯ್ಯುತ್ತೀರಾ. ಅನ್ಯಭಾಷಿಕರು ನಮ್ಮಲ್ಲಿ ಬಂದು ಕನ್ನಡ ಮಾತನಾಡುತ್ತಾರೆ ಎಂದರೆ ಅವರನ್ನು ಹಂಗಿಸಬಾರದು. ಅವರು ಯಾವ ರೀತಿ ಮಾತನಾಡುತ್ತಾರೆ ಎಂಬುದು ಮುಖ್ಯ ಅಲ್ಲ. ಅವರ ಪ್ರಯತ್ನ ಶ್ಲಾಘಿಸಬೇಕು. ಎಲ್ಲ ಭಾಷೆ ಬಗ್ಗೆ ನಮಗೆ ಅಭಿಮಾನ ಇರಬೇಕು' ಎಂದರು.

'ಕನ್ನಡವನ್ನು ಉಳಿಸಬೇಕು ಎಂದು ಯಾರೂ ಹೇಳಬಾರದು. ಏಕೆಂದರೆ ಭಾಷೆ ಕಿತ್ತುಕೊಳ್ಳುವ ತಾಕತ್ತು ಯಾರಿಗೂ ಇಲ್ಲ. ಹೀಗಾಗಿ ನಾವೆಲ್ಲ ಕನ್ನಡ ಬೆಳೆಸೋಣ ಎನ್ನಬೇಕು. ಭಾಷೆ ಬರದವರಿಗೆ ಕನ್ನಡ ಕಲಿಸುವ ಪ್ರಯತ್ನ ಆಗಬೇಕು' ಎಂದು ಆಶಿಸಿದರು.

ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು ಈ ಸಂದರ್ಭ ಸುದೀಪ್ ಅವರನ್ನು ಅಭಿನಂದಿಸಿದರು.

# ಬಲಿಜ ಸಮುದಾಯ: 'ಪ್ರವರ್ಗ 2ಎ' ಮೀಸಲಾತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಮೈಸೂರು:** ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ 'ಪ್ರವರ್ಗ 2ಎ'ಗೆ ಸೇರ್ಪಡೆಯಾಗಿರುವ ಬಲಿಜ ಸಮುದಾಯವನ್ನು ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲೂ ಇದೇ ವರ್ಗಕ್ಕೆ ಸೇರಿಸಬೇಕು ಎಂದು ಮೈಸೂರು ಯೋಗಿನಾರೇಯಣ ಬಣಜಿಗ (ಬಲಿಜ) ಸಂಘ ಶುಕ್ರವಾರ ಇಲ್ಲಿ ಒತ್ತಾಯಿಸಿದೆ.

'ಹಾವನೂರು ಆಯೋಗವು ಮಾಡಿದ ಶಿಫಾರಸ್ಸಿನಂತೆ ಬಲಿಜ ಸಮುದಾಯವನ್ನು ಪ್ರವರ್ಗ 2ಎಗೆ ಸೇರಿಸಲಾಗಿತ್ತು. ಆದರೆ, ರಾಜಕೀಯ ಒತ್ತಡದಿಂದ, ಅಸಾಂವಿಧಾನಿಕವಾಗಿ 1994ರಲ್ಲಿ 3ಎ ಪ್ರವರ್ಗಕ್ಕೆ ಸೇರಿಸಲಾಯಿತು. ಸತತ ಒತ್ತಾಯದ ನಂತರ, 2011ರಲ್ಲಿ ಶಿಕ್ಷಣದ ಉದ್ದೇಶಕ್ಕೆ ಮಾತ್ರ 2ಎ ಪ್ರವರ್ಗದ ಸೌಲಭ್ಯ ಕಲ್ಪಿಸಲಾಯಿತು' ಎಂದ ಸಂಘದ ಗೌರವ ಅಧ್ಯಕ್ಷ ಎಚ್.ಎ.ವೆಂಕಟೇಶ್, ಈಗ ಸಂಪೂರ್ಣವಾಗಿ 'ಪ್ರವರ್ಗ 2ಎ'ಕ್ಕೇ ಸೇರಿಸಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ವೆಂಕಟೇಶ್

'ನಾವೇನು ಹೊಸ ಮೀಸಲಾತಿಗೆ ಬೇಡಿಕೆ ಇಟ್ಟಿಲ್ಲ. ಈ ಹಿಂದೆ ನಮಗೆ ಕೊಟ್ಟಿದ್ದ ನಮಗೆ 'ಪ್ರವರ್ಗ 2ಎ' ಮೀಸಲಾತಿಯನ್ನು ಎಲ್ಲಾ ಕ್ಷೇತ್ರದಲ್ಲೂ ನೀಡಿ ಎಂದಷ್ಟೇ ಕೇಳುತ್ತಿದ್ದೇವೆ. ಬಲಿಜ ಸಮುದಾಯವು ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಇನ್ನೂ ಹಿಂದುಳಿದಿದೆ' ಎಂದು ಹೇಳಿದರು.

'ರಾಜ್ಯದಲ್ಲಿರುವ ಮೀಸಲಾತಿ ನಿಜಕ್ಕೂ ಅವೈಜ್ಞಾನಿಕ ಹಾಗೂ ಅಸಾಂವಿಧಾನಿಕವಾಗಿದೆ. ದೇವರಾಜ ಅರಸು ನಂತರ ಯಾವೊಬ್ಬ ಮುಖ್ಯಮಂತ್ರಿಯೂ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ವಿಧಾನಸಭೆಯಲ್ಲಿ ಚರ್ಚಿಸಿಲ್ಲ. ಯಾವುದೇ ಆಯೋಗದ ಶಿಫಾರಸು ಇಲ್ಲದೇ, ಒಂದು ಸಾಮಾನ್ಯ ವರ್ಗಾವಣೆ ಆದೇಶದಂತೆ ಸಮುದಾಯವನ್ನು ಒಂದು ಪ್ರವರ್ಗದಿಂದ ಮತ್ತೊಂದು ಪ್ರವರ್ಗಕ್ಕೆ ವರ್ಗಾಯಿಸಲಾಗುತ್ತಿದೆ' ಎಂದು ಅವರು ಹರಿಹಾಯ್ದರು.

## ಗಡಿಯಲ್ಲಿ ಪ್ರವೇಶ ನಿರ್ಬಂಧ: ಪಿಐಎಲ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇರಳದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ನಾಗರಿಕರ ಪ್ರವೇಶ ನಿರ್ಬಂಧ ಆದೇಶವನ್ನು ಮಾರ್ಪಡಿಸಲಾಗಿದೆ ಎಂದು ರಾಜ್ಯ ಸರ್ಕಾರವನ್ನು ಹೈಕೋರ್ಟ್ ಪ್ರಶ್ನೆ ಮಾಡಿದೆ.

ನೆರೆ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾದ ಕಾರಣಕ್ಕೆ ಫೆ.22ರಂದು ಹೊರಡಿಸಿರುವ ಪ್ರವೇಶ ನಿರ್ಬಂಧ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

‘ಕೇಂದ್ರ ಗೃಹ ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ ಅಂತರರಾಜ್ಯ ಪ್ರವೇಶಕ್ಕೆ ನಿರ್ಬಂಧ ಇಲ್ಲ’ ಎಂದು ಕೇಂದ್ರ ಸರ್ಕಾರದ ಪರ ವಕೀಲರು ಪೀಠಕ್ಕೆ ತಿಳಿಸಿದರು.

27 ರಸ್ತೆಗಳಲ್ಲಿ 4 ರಸ್ತೆಗಳನ್ನು ಮಾತ್ರ ತೆರೆಯಲಾಗಿದೆ. ಉಳಿದ ರಸ್ತೆಗಳಲ್ಲಿ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದರು. ಕೇರಳದಿಂದ ಬರುವ ಪ್ರಯಾಣಿಕರ ಕೋವಿಡ್–19 ನೆಗೆಟಿವ್ ವರದಿ ಪರಿಶೀಲಿಸಲು ರಾಜ್ಯ ಸರ್ಕಾರ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಬಹುದು ಎಂದು ಪೀಠ ತಿಳಿಸಿತು.

ಬಿಬಿಎಂಪಿ ವ್ಯಾಪ್ತಿಯಲ್ಲಿ 3ನೇ ಹಂತದ ಕೋವಿಡ್ ಲಸಿಕೆ ನೀಡುವ ತರಬೇತಿ ಕಾರ್ಯಾಗಾರ

# ಲಸಿಕೆ: 300 ಆಸ್ಪತ್ರೆಗಳು ಸಜ್ಜು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕಡಿಮೆ ಸಮಯದಲ್ಲಿ ಹೆಚ್ಚು ಮಂದಿಗೆ ಲಸಿಕೆ ನೀಡುವ ನಿಟ್ಟಿನಲ್ಲಿ ಬಿಬಿಎಂಪಿ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಮುಂದಿನ ವಾರದಿಂದ ಲಸಿಕೆ ನೀಡುವ ಕಾರ್ಯ ಇನ್ನೂ ಚುರುಕುಗೊಳ್ಳಲಿದ್ದು, ಇನ್ನೂ 300 ಆಸ್ಪತ್ರೆಗಳು ಇದಕ್ಕಾಗಿ ಸಜ್ಜುಗೊಂಡಿವೆ’ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಹೇಳಿದರು.

ನಗರದ ಪುರಭವನದಲ್ಲಿ ಈ ಕುರಿತು ಶುಕ್ರವಾರ ನಡೆದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ‘ಬೆಂಗಳೂರನ್ನು ಸುರಕ್ಷಿತ ಮತ್ತು ಆರೋಗ್ಯಕರ ನಗರವನ್ನಾಗಿಸುವುದು ನಮ್ಮ ಗುರಿ’ ಎಂದು ಹೇಳಿದರು.

ಲಸಿಕೆ ನೀಡಲು ಆಸ್ಪತ್ರೆಗಳಲ್ಲಿ ಯಾವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು, 3ನೇ ಹಂತದಲ್ಲಿ ಲಸಿಕೆ ಪಡೆಯಲು ಯಾರು ಅರ್ಹರಾಗಿದ್ದಾರೆ, ಕೋವಿನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ವಿಧಾನ, ಆಸ್ಪತ್ರೆಗಳಲ್ಲಿ ಮಾಡಿಕೊಳ್ಳಬೇಕಿರುವ ತಯಾರಿಯ ಬಗ್ಗೆ ಆಯುಕ್ತರು ಮಾಹಿತಿ ನೀಡಿದರು.

**29ನೇ ದಿನ ಎರಡನೇ ಡೋಸ್:** ‘ಮೊದಲು ಲಸಿಕೆ ಪಡೆದವರು 29ನೇ ದಿನ ಎರಡನೇ ಡೋಸ್ ಪಡೆಯಬೇಕಿದ್ದು, ಅದೇ ದಿನ ಲಸಿಕೆ ಪಡೆಯದಿದ್ದರೆ ಮತ್ತೊಂದು ದಿನ ಲಸಿಕೆ ಪಡೆಯಲು ಅವಕಾಶವಿದೆ. ಅದಲ್ಲದೆ ಬೆಂಗಳೂರಲ್ಲಿ ಲಸಿಕೆ ಪಡೆದವರು ಬೇರೆ ನಗರಗಳಿಗೆ ತೆರಳಿದ್ದರೆ ಅಲ್ಲಿಯೇ 2ನೇ ಡೋಸ್ ಪಡೆಯಬಹುದಾಗಿದೆ’ ಎಂದು ಮಂಜುನಾಥ ಪ್ರಸಾದ್ ಹೇಳಿದರು.

‘45 ರಿಂದ 59 ವರ್ಷದ ಅನ್ಯ ಕಾಯಿಲೆಗಳಿಂದ ಬಳಲುತ್ತಿರುವವರಿಗೆ 3ನೇ ಹಂತದಲ್ಲಿ ಕೋವಿಡ್ ಲಸಿಕೆ ಪಡೆಯುತ್ತಿದ್ದು, ಈ ಸಂಬಂಧ ಅನ್ಯ ಕಾಯಿಲೆಗಳಿಂದ ಬಳಲುತ್ತಿರುವವರು ದಾಖಲಾತಿಗಳ ಜೊತೆಗೆ ಯಾವ ಕಾಯಿಲೆಯಿದೆ ಎಂಬ ಪ್ರಮಾಣಪತ್ರವನ್ನೂ ವೈದ್ಯರಿಂದ ತರಬೇಕು’ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವೈದ್ಯರು ಮತ್ತು ಅಧಿಕಾರಿಗಳು

– ಪ್ರಜಾವಾಣಿ ಚಿತ್ರ

### ಆಸ್ಪತ್ರೆಗಳಲ್ಲಿ ಸಿದ್ಧತೆ ಹೇಗಿರಬೇಕು ?

- ಲಸಿಕೆ ನೀಡುವ ಬಗ್ಗೆ ಸಮರ್ಪಕ ಮಾಹಿತಿಯುಳ್ಳ ಸೂಚನಾ ಫಲಕಗಳ ಅಳವಡಿಕೆ
- ಕಾಯುವ, ಲಸಿಕೆ ನೀಡುವ, ವೀಕ್ಷಣಾ ಕೊಠಡಿಗಳ ವ್ಯವಸ್ಥೆ
- ಲಸಿಕೆ ಸಂಗ್ರಹಿಸಲು ಕೋಲ್ಡ್ ಚೈನ್ ಪಾಯಿಂಟ್
- ಕೋವಿನ್ ಪೋರ್ಟಲ್ ನೋಂದಣಿಗೆ ವ್ಯವಸ್ಥೆ
- ಲಸಿಕೆ ವಿತರಣೆಗೆ ಅವಶ್ಯಕ ಸಿಬ್ಬಂದಿ ನಿಯೋಜನೆ
- ದಾಖಲಾತಿ ಪರಿಶೀಲಿಸಲು ಮೇಲ್ವಿಚಾರಕರ ನೇಮಕ

### ಲಸಿಕೆ ನೀಡಿಕೆಗೆ ಸಜ್ಜು

| 141 | 26 | 6 | 157 |
|---|---|---|---|
| ಪ್ರಾಥಮಿಕ ಆರೋಗ್ಯ ಕೇಂದ್ರಗಳು | ಹೆರಿಗೆ ಆಸ್ಪತ್ರೆಗಳು | ರೆಫರೆಲ್ ಆಸ್ಪತ್ರೆಗಳು | ಖಾಸಗಿ ಆಸ್ಪತ್ರೆಗಳು |

## ಸುದ್ದಿ 2 ನಿಮಿಷ

### ಜಲ ನಿರ್ವಹಣೆ: ಗುರುದತ್ತ ‘ಯುವ ರಾಯಭಾರಿ’

**ಬೆಂಗಳೂರು:** ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಕಾಸಮ್ ಗುರುದತ್ತ ಅವರು ಇಂಡಿಯನ್ ವಾಟರ್ ವರ್ಕ್ಸ್ ಅಸೋಸಿಯೇಷನ್ (ಐಡಬ್ಲ್ಯುಡಬ್ಲ್ಯುಎ) ನೀಡುವ ‘ಯುವ ರಾಯಭಾರಿ’ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಹೈದರಾಬಾದ್‌ನಲ್ಲಿ ಶುಕ್ರವಾರ ನಡೆದ ಐಡಬ್ಲ್ಯುಡಬ್ಲ್ಯುಎ 53ನೇ ವಾರ್ಷಿಕ ಸಮ್ಮೇಳನದಲ್ಲಿ ತೆಲಂಗಾಣ ವಿಧಾನಸಭಾಧ್ಯಕ್ಷ ಪೋಚಾರಾಂ ಶ್ರೀನಿವಾಸ ರೆಡ್ಡಿ ಅವರು ಗುರುದತ್ತ ಅವರನ್ನು ಸನ್ಮಾನಿಸಿದರು

ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಐದನೇ ಸೆಮಿಸ್ಟರ್ ವ್ಯಾಸಂಗ ಮಾಡುತ್ತಿರುವ ಗುರುದತ್ತ, ಜಲ ನಿರ್ವಹಣೆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ.

### ಮಾ.8ಕ್ಕೆ ‘ಮಹಿಳಾ ದಿನದ ರಂಗ ಸಂಭ್ರಮ’ ಕಾರ್ಯಕ್ರಮ

**ಬೆಂಗಳೂರು:** ಬೆಂಗಳೂರಿನ ಅನೇಕಾ ರಂಗ ಸಂಸ್ಥೆಯು ಮೈಸೂರಿನ ರಂಗಾಯಣದ ಸಹಯೋಗದಲ್ಲಿ ‘ಮಹಿಳಾ ದಿನದ ರಂಗ ಸಂಭ್ರಮ’ ಕಾರ್ಯಕ್ರಮವನ್ನು ಇದೇ 8ರಂದು ಮಧ್ಯಾಹ್ನ 3 ಗಂಟೆಗೆ ನಯನ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ಕಾರ್ಯಕ್ರಮದಲ್ಲಿ ಎಂ.ಎಸ್.ಆಶಾದೇವಿ ಅಧ್ಯಕ್ಷತೆಯಲ್ಲಿ ‘ಸ್ತ್ರೀ ದನಿ–ರಂಗ ಮಾರ್ದನಿ’ ಕುರಿತು ರಂಗ ಸಂವಾದ ನಡೆಯಲಿದೆ. ರೂಮಿ ಹರೀಶ್, ಶರಣ್ಯಾ ರಾಮ್ ಪ್ರಕಾಶ್, ಲೇಖಾ ನಾಯ್ಡು, ಎಚ್.ಎಲ್.ಪುಷ್ಪಾ, ಬಿ.ವಿ.ಸಂಧ್ಯಾರಾಣಿ, ಕೆ.ಎಸ್.ವಿಮಲಾ, ಎನ್.ಮಂಗಳಾ, ಬಿ.ವಿ.ಭಾರತಿ, ಉಷಾ ಭಂಡಾರಿ, ಅನನ್ಯಾ ಕಾಸರವಳ್ಳಿ, ಮಮತಾ ಜಿ.ಸಾಗರ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ಸಂಜೆ 6 ಗಂಟೆಗೆ ರಂಗಾಯಣ ಹಾಗೂ ಮೈಸೂರಿನ ಮಹಿಳಾ ರಂಗ ಕಾರ್ಯಾಗಾರದ ಕಲಾವಿದೆಯರಿಂದ ‘ಕೊಡೋದಿಲ್ಲ..ಬಿಡೋದಿಲ್ಲ!’ ನಾಟಕ ಪ್ರದರ್ಶನ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಸಾವಿರಕ್ಕೂ ಅಧಿಕ ರೋಗಿಗಳಲ್ಲಿ ಸೋಂಕು ಪತ್ತೆ

# ಕೊರೊನಾ ಗೆದ್ದ ಕ್ಯಾನ್ಸರ್ ಪೀಡಿತರು!

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ 9 ತಿಂಗಳಲ್ಲಿ ತಪಾಸಣೆಗೆ ಒಳಪಟ್ಟ ಕ್ಯಾನ್ಸರ್ ರೋಗಿಗಳಲ್ಲಿ ಸಾವಿರಕ್ಕೂ ಅಧಿಕ ಮಂದಿಯಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಅವರಲ್ಲಿ ಶೇ 99.73ರಷ್ಟು ಮಂದಿ ಕೋವಿಡ್ ಕಾಯಿಲೆಯನ್ನು ಜಯಿಸಿದ್ದಾರೆ.

ಕ್ಯಾನ್ಸರ್ ಪೀಡಿತರಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುವ ಕಾರಣ ಅವರನ್ನು ಅಪಾಯದ ವಲಯದಲ್ಲಿರುವವರು ಎಂದು ಆರೋಗ್ಯ ಇಲಾಖೆ ಗುರುತಿಸಿದೆ. ಕೋವಿಡ್ ಪ್ರಕರಣಗಳು ಏರುಗತಿ ಪಡೆದ ಅವಧಿಯಲ್ಲಿ ನಿಯಮಿತ ಚಿಕಿತ್ಸೆಗೆ ಆಸ್ಪತ್ರೆಗೆ ತೆರಳಲು ಹಿಂದೇಟು ಹಾಕಿ, ಸ್ವಯಂ ಆರೈಕೆ ವಿಧಾನ ಹಾಗೂ ವಿಡಿಯೋ ಸಂವಾದವನ್ನು ಕ್ಯಾನ್ಸರ್ ರೋಗಿಗಳು ಹೆಚ್ಚಾಗಿ ಅನುಸರಿಸಿದ್ದರು. ಚಿಕಿತ್ಸೆ ಮುಂದೂಡಿದಲ್ಲಿ ಸಮಸ್ಯೆಯಾಗುತ್ತದೆ ಎಂಬ ಕಾರಣಕ್ಕೆ ಕಿದ್ವಾಯಿ ಆಸ್ಪತ್ರೆಯು ಹಂತ ಹಂತವಾಗಿ ಎಲ್ಲ ಬಗೆಯ ಚಿಕಿತ್ಸೆಗಳನ್ನು ಪುನರಾರಂಭ ಮಾಡಿದೆ. ರೋಗಿಗಳಿಗೆ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಗಳನ್ನು ನಡೆಸಿ, ಚಿಕಿತ್ಸೆ ಒದಗಿಸಲಾಗುತ್ತಿದೆ.

ಕೋವಿಡ್‌ಗೂ ಮುನ್ನ ಕಿದ್ವಾಯಿ ಆಸ್ಪತ್ರೆಗೆ ಪ್ರತಿನಿತ್ಯ ಸಾವಿರಕ್ಕೂ ಅಧಿಕ ಹೊರರೋಗಿಗಳು ಬರುತ್ತಿದ್ದರು. ಎಲ್ಲೆಡೆ ಕೋವಿಡ್ ಪ್ರಕರಣಗಳು ವರದಿಯಾದ ಕಾರಣ ಕಳೆದ ಏಪ್ರಿಲ್ ವೇಳೆಗೆ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆಯಲ್ಲಿ ಶೇ 85 ರಷ್ಟು ಇಳಿಕೆಯಾಗಿತ್ತು. ಬಳಿಕ ಸಂಸ್ಥೆಯು ಎಲ್ಲ ರೋಗಿಗಳಿಗೂ ಪರೀಕ್ಷೆ ನಡೆಸಿ, ಚಿಕಿತ್ಸೆ ಒದಗಿಸುತ್ತಿದೆ. ಕಳೆದ 10 ತಿಂಗಳಿಂದ ಪ್ರತಿ ನಿತ್ಯ ಸರಾಸರಿ 700 ಹೊರರೋಗಿಗಳು ಬರುತ್ತಿದ್ದಾರೆ. ಅಲ್ಲಿಗೆ ತೆರಳಿ, ಪರೀಕ್ಷೆಗೆ ಒಳಪಟ್ಟ ಕ್ಯಾನ್ಸರ್ ರೋಗಿಗಳಲ್ಲಿ ಏಪ್ರಿಲ್‌ನಿಂದ ಡಿಸೆಂಬರ್ ಅಂತ್ಯಕ್ಕೆ 1,105 ಮಂದಿಯಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಸಂಸ್ಥೆಯ ಮಾಹಿತಿ ಪ್ರಕಾರ ಅವರಲ್ಲಿ ಮೂವರು ಮಾತ್ರ ಮೃತಪಟ್ಟಿದ್ದು, ಉಳಿದವರು ಚೇತರಿಸಿಕೊಂಡಿದ್ದಾರೆ.

**ಪ್ರತಿಕಾಯಗಳು ವೃದ್ಧಿ:** ‘ಕೋವಿಡ್ ಕಾರಣ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ. ಪ್ರಾರಂಭಿಕ ದಿನಗಳಲ್ಲಿ ಭಯಭೀತರಾಗಿದ್ದ ಕ್ಯಾನ್ಸರ್ ಪೀಡಿತರು ಆಸ್ಪತ್ರೆಗೆ ಬರಲು ಹಿಂದೇಟು ಹಾಕುತ್ತಿದ್ದರು. ಈಗ ಆಸ್ಪತ್ರೆಗೆ ಬರುವವರ ಸಂಖ್ಯೆ ಏರುಗತಿ ಪಡೆದಿದೆ. ಬಹುತೇಕರಲ್ಲಿ ಪ್ರತಿಕಾಯ ವೃದ್ಧಿಯಾಗಿರುವ ಕಾರಣ ಕೋವಿಡ್ ಕಾಯಿಲೆಯ ತೀವ್ರತೆ ಕಡಿಮೆಯಾಗಿದೆ. ಹೀಗಾಗಿ, ಕೊರೊನಾ ಸೋಂಕಿನಿಂದ ಕ್ಯಾನ್ಸರ್ ರೋಗಿಗಳು ಕೂಡ ಬೇಗ ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

### ಅಂಕಿ–ಅಂಶಗಳು

**650** ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಒಳರೋಗಿಗಳು

**700** ಪ್ರತಿನಿತ್ಯ ಚಿಕಿತ್ಸೆಗೆ ಬರುತ್ತಿರುವ ಸರಾಸರಿ ಹೊರರೋಗಿಗಳು

### ಸೋಂಕಿತರಿಗೆ ಚಿಕಿತ್ಸೆ ಮುಂದೂಡಿಕೆ

ಸಂಸ್ಥೆಯಲ್ಲಿ ಹೊರರೋಗಿ ಹಾಗೂ ಒಳರೋಗಿಗಳಿಗೆ ಕೋವಿಡ್ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ. ಗಂಟಲ ದ್ರವದ ಮಾದರಿಗಳ ಪರೀಕ್ಷೆಗೆ ಅತ್ಯಾಧುನಿಕ ಮಾಲಿಕ್ಯೂಲರ್ ಪ್ರಯೋಗಾಲಯವನ್ನು ಸಂಸ್ಥೆ ಬಳಸಿಕೊಂಡಿದೆ. ಪರೀಕ್ಷೆಗೆ ಒಳಗಾದವರಿಗೆ ವರದಿ ಬಂದ ಬಳಿಕ ದಾಖಲಿಸಿಕೊಂಡು, ಚಿಕಿತ್ಸೆ ನೀಡಲಾಗುತ್ತಿದೆ. ತುರ್ತಾಗಿ ಚಿಕಿತ್ಸೆ ಅಗತ್ಯವಿದ್ದಲ್ಲಿ ಪರೀಕ್ಷೆ ವರದಿ ಬರುವ ಮುನ್ನವೇ ಪ್ರತ್ಯೇಕ ನಿಗಾ ಕೊಠಡಿಯಲ್ಲಿ ಇರಿಸಿ, ಚಿಕಿತ್ಸೆ ಒದಗಿಸಲಾಗುತ್ತಿದೆ. ತುರ್ತಾಗಿ ಚಿಕಿತ್ಸೆ ಇಲ್ಲದವರು ಸೋಂಕಿತರಾದಲ್ಲಿ ಕೋವಿಡ್ ವಾಸಿಯಾದ ಬಳಿಕ ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲಾಗುತ್ತಿದೆ.

### ಸಂಸ್ಥೆಯಲ್ಲಿ ದೃಢಪಟ್ಟ ಪ್ರಕರಣಗಳ ವಿವರ

(ಸೋಂಕಿತರಾದ ಕ್ಯಾನ್ಸರ್ ರೋಗಿಗಳು)

| ತಿಂಗಳು | ಸಂಖ್ಯೆ |
|---|---|
| ಜೂನ್ | 19 |
| ಜುಲೈ | 284 |
| ಆಗಸ್ಟ್ | 196 |
| ಸೆಪ್ಟೆಂಬರ್ | 302 |
| ಅಕ್ಟೋಬರ್ | 192 |
| ನವೆಂಬರ್ | 46 |
| ಡಿಸೆಂಬರ್ | 66 |

## ಮಾ.8ಕ್ಕೆ ಮಹಿಳಾ ಉದ್ಯಮಿಗಳ ಸಮಾವೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಸ್ವಉದ್ಯೋಗ ಮಾಡಿಕೊಂಡಿರುವ ಮಹಿಳಾ ಉದ್ಯಮಿಗಳ ಸಮಾವೇಶವನ್ನು ಗಾಂಧಿ ಬಜಾರ್‌ನ ಶ್ರೇಷ್ಠ ಉತ್ಪನ್ನ ಮಳಿಗೆಯಲ್ಲಿ ಇದೇ 8ರಂದು ಮಧ್ಯಾಹ್ನ3ರಿಂದ ಸಂಜೆ 7 ಗಂಟೆಯವರೆಗೆ ಆಯೋಜಿಸಲಾಗಿದೆ.

ಸಮಾವೇಶದ ಜೊತೆಗೆ ಗೃಹ ಉತ್ಪನ್ನ ವಸ್ತುಗಳ ಪ್ರದರ್ಶನ ಹಾಗೂ ಮಾರಾಟವೂ ಇರಲಿದೆ.

‘ದಿನಬಳಕೆಯ ವಸ್ತುಗಳು, ಗೃಹಾಲಂಕಾರ ವಸ್ತುಗಳು, ರುಚಿಕರ ಉತ್ಪನ್ನಗಳು ಸೇರಿದಂತೆ ಗೃಹೋದ್ಯಮ ನಡೆಸುತ್ತಿರುವ ಮಹಿಳೆಯರಿಗೆ ಈ ಸಮಾವೇಶದ ಮೂಲಕ ವೇದಿಕೆ ಕಲ್ಪಿಸಲಾಗಿದೆ. ಮಾರಾಟದ ಜೊತೆ ಮಹಿಳೆಯರು ಸ್ವಉದ್ಯೋಗದ ಕುರಿತು ತಮ್ಮ ಅನುಭವಗಳು, ಸವಾಲುಗಳು, ಜಾಲತಾಣಗಳ ಮೂಲಕ ಉತ್ಪನ್ನಗಳ ಮಾರಾಟ, ಅಲ್ಲಿನ ಲಾಭ–ನಷ್ಟ, ಗ್ರಾಹಕಸ್ನೇಹಿ ಮಾರಾಟ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

## ಅಪಾರ್ಟ್‌ಮೆಂಟ್: ವಾರದಲ್ಲಿ 8 ಮಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿಕ್ಕಲಸಂದ್ರದ ವಸಂತಪುರದಲ್ಲಿನ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಒಂದು ವಾರದ ಅವಧಿಯಲ್ಲಿ 8 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಸಾಯಿ ಕುಟೀರ ಎಂಬ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಫೆ.25ರಿಂದ ಮಾ.3ರವರೆಗೆ ಕೋವಿಡ್ ಪ್ರಕರಣಗಳು ಕಾಣಿಸಿಕೊಂಡಿದ್ದು, ಬಿಬಿಎಂಪಿ ಅಧಿಕಾರಿಗಳು ಈ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಅದೇ ರೀತಿ, ಸೋಂಕಿತರ ಸಂಪರ್ಕಿತರ ಪತ್ತೆ ಕಾರ್ಯ ಕೂಡ ಭರದಿಂದ ಸಾಗಿದೆ. ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 40 ಮನೆಗಳಿವೆ. ಅದರಲ್ಲಿ 10 ಮನೆಗಳು ಖಾಲಿಯಿವೆ. ಅಲ್ಲಿ ಸುಮಾರು 108 ಮಂದಿ ವಾಸಿಸುತ್ತಿದ್ದಾರೆ.

ಫೆ.25ರಂದು ಅಲ್ಲಿ ನಾಲ್ಕು ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದವು. ಬಳಿಕ ಎಲ್ಲ ನಿವಾಸಿಗಳು ಹಾಗೂ ಸಂಪರ್ಕಿತರಿಗೆ ಫೆ.26 ಮತ್ತು ಫೆ.27ರಂದು ಆರ್‌ಟಿ–ಪಿಸಿಆರ್ ಪರೀಕ್ಷೆಗಳನ್ನು ನಡೆಸಲಾಗಿತ್ತು. ಆ ವೇಳೆ ಮತ್ತಿಬ್ಬರು ಕೋವಿಡ್ ಪೀಡಿತರಾಗಿರುವುದು ಖಚಿತಪಟ್ಟಿತು. ಕೋವಿಡ್ ಮಾರ್ಗಸೂಚಿಯ ಪ್ರಕಾರ ಸಂಪರ್ಕಿತರಿಗೆ 7ನೇ ದಿನ ಎರಡನೇ ಬಾರಿ ಪರೀಕ್ಷೆ ನಡೆಸಬೇಕಾಗುತ್ತದೆ. ಅದರಂತೆ ಮಾ.3ರಂದು 60 ಮಂದಿಗೆ ಎರಡನೇ ಬಾರಿ ಪರೀಕ್ಷೆ ನಡೆಸಲಾಗಿತ್ತು. ಅವರಲ್ಲಿ ಮತ್ತೆ ಇಬ್ಬರಿಗೆ ಸೋಂಕು ಕಾಣಿಸಿಕೊಂಡಿದೆ.

‘ಅಪಾರ್ಟ್‌ಮೆಂಟ್ ಸಮುಚ್ಚಯದ ಎಲ್ಲ ಮಹಡಿಗಳನ್ನು ಸೋಂಕು ನಿವಾರಕದಿಂದ ಸ್ವಚ್ಛಪಡಿಸಲಾಗಿದೆ. ಮಾರ್ಗಸೂಚಿ ಅನುಸಾರ ಕ್ಲಸ್ಟರ್ ಎಂದು ಘೋಷಿಸಿ, ಕಂಟೈನ್‌ಮೆಂಟ್‌ಗೆ ಸಂಬಂಧಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

**ಪ್ರಶಸ್ತಿ ಪ್ರದಾನ**

ಮಲ್ಲೇಶ್ವರದ ಹಿತೈಷಿ ಮಹಿಳಾ ಮನರಂಜನಾ ಕೂಟವು ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನ ಕಾರ್ಯಕ್ರಮದಲ್ಲಿ ಕೋವಿಡ್ ರೋಗಿಗಳಿಗೆ ಸೇವೆ ಸಲ್ಲಿಸಿದ ಯೂತ್ ಫಾರ್ ಸೇವಾ ಸಂಸ್ಥೆಯ ವಲಯ ಸಂಯೋಜಕಿ ದಿವ್ಯ ಡಿ.ಸೋಲಂಕಿ ಅವರಿಗೆ ‘ಮಹಿಳಾ ರತ್ನ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಘಟನೆಯ ಅಧ್ಯಕ್ಷೆ ಶ್ರೀರಂಗಮಣಿ ಹಾಗೂ ಸದಸ್ಯರು ಇದ್ದಾರೆ

ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ 2,315 ದೂರುಗಳು ದಾಖಲು

# ಕೋವಿಡ್ ಬಳಿಕ ಹೆಚ್ಚಿದ ಮಹಿಳಾ ದೌರ್ಜನ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಮಹಿಳಾ ದೌರ್ಜನ್ಯ ಪ್ರಕರಣಗಳು ಹೆಚ್ಚಳವಾಗಿದ್ದು, ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ 2,315 ದೂರುಗಳು ಬಂದಿವೆ. ಅವುಗಳಲ್ಲಿ ಆಯೋಗವು 1,030 ಪ್ರಕರಣಗಳನ್ನು ಇತ್ಯರ್ಥಗೊಳಿಸಿದೆ.

ಆಯೋಗದ ಅಧ್ಯಕ್ಷರಾಗಿ ಒಂದು ವರ್ಷ ಪೂರೈಸಿದ ಕಾರಣ ಇಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಮೀಳಾ ನಾಯ್ಡು, ‘ಕೋವಿಡ್ ಮತ್ತು ಲಾಕ್‌ಡೌನ್‌ನಿಂದಾಗಿ ಮಹಿಳೆಯರು ಹೆಚ್ಚಿನ ಸಮಯವನ್ನು ಮನೆಯಲ್ಲಿಯೇ ಕಳೆದಿದ್ದಾರೆ. ಇದರಿಂದಾಗಿ ಕೌಟುಂಬಿಕ ದೌರ್ಜನ್ಯ ಸೇರಿದಂತೆ ವಿವಿಧ ಸಮಸ್ಯೆಗಳ ಸಂಬಂಧ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ದೂರು ನೀಡಿದ್ದರು. ಸದ್ಯ 1,285 ಪ್ರಕರಣಗಳು ವಿಚಾರಣೆ ಸೇರಿದಂತೆ ವಿವಿಧ ಹಂತಗಳಲ್ಲಿವೆ. ಲಾಕ್‌ಡೌನ್ ಅವಧಿಯಲ್ಲಿ ಕೆಲ ಪ್ರಕರಣಗಳು ಬೆಳಕಿಗೆ ಬರದಿದ್ದರೂ ಮಾಧ್ಯಮಗಳ ನೆರವಿನಿಂದ 348 ದೂರುಗಳನ್ನು ಆಲಿಸಿ, ಪರಿಹಾರ ಕಲ್ಪಿಸಲಾಯಿತು. ಇ -ಮೇಲ್ ವಿಳಾಸಕ್ಕೆ 77 ದೂರು ಅರ್ಜಿಗಳು ಬಂದಿದ್ದವು. ಆ ಅರ್ಜಿಗಳಲ್ಲಿ ತಿಳಿಸಲಾಗಿದ್ದ ಸಮಸ್ಯೆಗಳಿಗೆ ಕೂಡ ಸ್ಪಂದಿಸಿದ್ದೇವೆ’ ಎಂದು ಅವರು ತಿಳಿಸಿದರು.

‘ಲಾಕ್‌ಡೌನ್ ಅವಧಿಯಲ್ಲಿ ಹಲವಾರು ಮಂದಿ ಕೆಲಸಗಳನ್ನು ಕಳೆದುಕೊಂಡರು. ಈ ಸಮಯದಲ್ಲಿ ಆರ್ಥಿಕ ಸಂಕಷ್ಟದ ಜತೆಗೆ ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಕುಟುಂಬ ನಿರ್ವಹಿಸುವ ಸವಾಲುಗಳು ಕೂಡ ಅವರ ಮುಂದಿತ್ತು. ಇದರಿಂದ ಹಲವರು ಆತ್ಮಸ್ಥೈರ್ಯ ಕಳೆದುಕೊಂಡಿದ್ದರು. ಅಂತಹವರಿಗೆ ಧೈರ್ಯ ತುಂಬಿ, ಕೌನ್ಸೆಲಿಂಗ್ ಮಾಡಲಾಯಿತು. ಬಡ ಕುಟುಂಬಗಳ ಮಹಿಳೆಯರಿಗೆ ಔಷಧಗಳು, ಆಹಾರದ ಕಿಟ್‌ಗಳನ್ನು ಕೂಡ ಒದಗಿಸಿದೆವು. ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳು ಅಗತ್ಯ ಸಹಕಾರ ನೀಡಿದವು’ ಎಂದು ಅವರು ವಿವರಿಸಿದರು.

ಪ್ರಮೀಳಾ ನಾಯ್ಡು

**ಆ್ಯಪ್ ಅಭಿವೃದ್ಧಿ:** ‘ದೂರು ಅರ್ಜಿಗಳನ್ನು ಇತ್ಯರ್ಥಗೊಳಿಸಲು ವಿವಿಧ ಇಲಾಖೆಗಳ ನೆರವು ಅತ್ಯಗತ್ಯ. ಅಪಹರಣ, ನಾಪತ್ತೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಒತ್ತಾಯ ಪೂರ್ವಕವಾಗಿ ಹಿರಿಯ ನಾಗರಿಕರಿಂದ ಕುಟುಂಬದ ಸದಸ್ಯರು ಆಸ್ತಿ ಬರೆಸಿಕೊಳ್ಳುತ್ತಿದ್ದಾರೆ. ಇಂತಹ ಪ್ರಕರಣಗಳಲ್ಲಿ ಕೂಡ ನ್ಯಾಯ ಒದಗಿಸಿಕೊಡಲು ಶ್ರಮಿಸುತ್ತಿದ್ದೇವೆ. ಮರ್ಯಾದೆ ಹೆಸರಿನಲ್ಲಿ ನಡೆಯುತ್ತಿರುವ ಹತ್ಯೆ ಪ್ರಕರಣಗಳಿಗೆ ಕಡಿವಾಣ ಹಾಕಬೇಕಿದೆ. ಕಾಲ ಕಾಲಕ್ಕೆ ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳಿಗೆ ಸಹ ತಿದ್ದುಪಡಿಯಾಗಬೇಕು. ಮಹಿಳೆಯರ ದೂರುಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸುವ ಉದ್ದೇಶದಿಂದ ಪ್ರತ್ಯೇಕ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲು ಮುಂದಾಗಿದ್ದೇವೆ’ ಎಂದು ಹೇಳಿದರು.

### ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

**4,07,269** ಒಟ್ಟು ಸೋಂಕಿತರು

**3,98,183** ಗುಣಮುಖರಾದವರು

**4,592** ಸಕ್ರಿಯ ಪ್ರಕರಣ

**4,493** ಸಾವು

#### ಶುಕ್ರವಾರದ ಏರಿಕೆ

**444** ದೃಢಪಟ್ಟ ಪ್ರಕರಣ

**208** ಗುಣಮುಖ

**02** ಸಾವು

#### ವರ್ಷವಾರು ನೋಂದಣಿಯಾದ ಪ್ರಕರಣಗಳು

| ಪ್ರಕರಣಗಳು | ವರ್ಷ |
|---|---|
| 3,068 | 2016-17 |
| 2,811 | 2017-18 |
| 2,696 | 2018-19 |
| 2,149 | 2019-20 |
| 2,315 | 2020-21 (ಫೆಬ್ರವರಿ ಅಂತ್ಯಕ್ಕೆ) |

#### 2020-21ನೇ ಸಾಲಿನಲ್ಲಿ ಆಯೋಗಕ್ಕೆ ಸಲ್ಲಿಕೆಯಾದ ದೂರು ಅರ್ಜಿಗಳು

| ಪ್ರಕರಣಗಳ ವಿವರ | ಸ್ವೀಕೃತಿ | ಇತ್ಯರ್ಥ | ಬಾಕಿ |
|---|---|---|---|
| ಕೌಟುಂಬಿಕ ದೌರ್ಜನ್ಯ | 527 | 169 | 358 |
| ರಕ್ಷಣೆ | 670 | 437 | 233 |
| ವರದಕ್ಷಿಣೆ ಕಿರುಕುಳ | 90 | 23 | 67 |
| ವರದಕ್ಷಿಣೆ ಸಾವು | 09 | 06 | 03 |
| ಅತ್ಯಾಚಾರ | 09 | 01 | 08 |
| ಅತ್ಯಾಚಾರದಿಂದ ಸಾವು | 01 | 00 | 01 |
| ಲೈಂಗಿಕ ಕಿರುಕುಳ | 35 | 09 | 26 |
| ಕೆಲಸದ ಸ್ಥಳದಲ್ಲಿ ಕಿರುಕುಳ | 94 | 14 | 80 |
| ಪ್ರೇಮ ಪ್ರಕರಣ | 36 | 07 | 29 |
| ಜೀವನಾಂಶ | 03 | 02 | 01 |
| ಆಸ್ತಿ ವಿವಾದ | 70 | 42 | 28 |
| ಪೊಲೀಸ್ ದೌರ್ಜನ್ಯ | 73 | 23 | 50 |
| ಹಣ ವಂಚನೆ | 41 | 28 | 13 |
| ವಿಚ್ಛೇದನ | 01 | 01 | 00 |
| ಜಾತಿ ನಿಂದನೆ | 02 | 00 | 02 |
| ಸೈಬರ್ ಕ್ರೈಂ | 09 | 03 | 06 |
| ಇತರೆ | 645 | 265 | 380 |

## 3 ತಿಂಗಳಲ್ಲಿ ಒಕ್ಕಲಿಗರ ಸಂಘಕ್ಕೆ ಚುನಾವಣೆ: ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಒಕ್ಕಲಿಗರ ಸಂಘಕ್ಕೆ ಮುಂದಿನ ಮೂರು ತಿಂಗಳಲ್ಲಿ ಚುನಾವಣೆ ನಡೆಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶ ನೀಡಿದೆ.

ಕೃಷ್ಣೇಗೌಡ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್‌ಕುಮಾರ್ ಅವರಿದ್ದ ಪೀಠ, ಅರ್ಜಿ ಇತ್ಯರ್ಥಪಡಿಸಿತು.

‘ಸಂಘದ ಪದಾಧಿಕಾರಿಗಳ ನಡುವೆ ಭಿನ್ನಾಭಿಪ್ರಾಯ ಉಂಟಾಗಿದ್ದ ಕಾರಣದಿಂದ ಹಿಂದಿನ ಕಾರ್ಯಕಾರಿ ಸಮಿತಿಯನ್ನು ಪದಚ್ಯುತಿಗೊಳಿಸಲಾಗಿತ್ತು. ಸಂಘದ ಕಾರ್ಯಗಳ ನಿರ್ವಹಣೆಗೆ ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ. ಶಂಕರಲಿಂಗೇಗೌಡ ಅವರನ್ನು ಸರ್ಕಾರ ನೇಮಿಸಿತ್ತು. ಕಾನೂನಿನ ಪ್ರಕಾರ ಆಡಳಿತಾಧಿಕಾರಿ ಅವಧಿ ಆರು ತಿಂಗಳು ಮಾತ್ರ. ಅಷ್ಟರಲ್ಲಿ ಚುನಾವಣೆ ನಡೆಸಬೇಕು. ಆದರೆ, ಎರಡೂವರೆ ವರ್ಷಗಳಿಂದ ಆಡಳಿತಾಧಿಕಾರಿ ಅವಧಿ ವಿಸ್ತರಣೆ ಮಾಡಿಕೊಂಡೇ ಬರಲಾಗುತ್ತಿದೆ. ಚುನಾವಣೆ ನಡೆಸುತ್ತಿಲ್ಲ’ ಎಂದು ಅರ್ಜಿದಾರರ ಪರ ವಕೀಲ ಧರ್ಮಪಾಲಗೌಡ ವಾದ ಮಂಡಿಸಿದರು.

‘ನಿಯಮಗಳ ಪ್ರಕಾರ ಆಡಳಿತಾಧಿಕಾರಿ ಅವಧಿ ಆರು ತಿಂಗಳು ಮಾತ್ರ. ಆದ್ದರಿಂದ ಚುನಾವಣೆ ನಡೆಸಬೇಕು’ ಎಂದು ಪೀಠ ನಿರ್ದೇಶನ ನೀಡಿತು.

## ಪ್ರತಿಭಟನೆಯಿಂದ ಸಂಚಾರ ದಟ್ಟಣೆ: ಸ್ವಯಂ ಪ್ರೇರಿತ ಅರ್ಜಿ ದಾಖಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರತಿಭಟನೆ ಮತ್ತು ರ‍್ಯಾಲಿಗಳಿಂದ ಉಂಟಾಗುವ ಸಂಚಾರ ದಟ್ಟಣೆ ಸಂಬಂಧ ಹೈಕೋರ್ಟ್ ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡಿದೆ.

ಹಲವು ಪ್ರತಿಭಟನೆಗಳಿಂದ ಮಾರ್ಚ್ 2ರಂದು ಬೆಳಿಗ್ಗೆ ಸಂಚಾರಕ್ಕೆ ಆಗಿದ್ದ ತೊಂದರೆ ಕುರಿತ ಪತ್ರಿಕಾ ವರದಿ ಉಲ್ಲೇಖಿಸಿ ನ್ಯಾಯಮೂರ್ತಿ ಅರವಿಂದ ಕುಮಾರ್ ಅವರು ಮುಖ್ಯ ನ್ಯಾಯಮೂರ್ತಿ ಅವರಿಗೆ ಪತ್ರ ಬರೆದಿದ್ದರು. ಪತ್ರವನ್ನೇ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಎಂದು ಪರಿಗಣಿಸುವಂತೆ ಅವರು ಮನವಿ ಮಾಡಿದ್ದರು. ಅದನ್ನು ಆಧರಿಸಿ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡಿದೆ.

‘ಕೇಂದ್ರ ಸರ್ಕಾರದ ವಸತಿ ಇಲಾಖೆಯ ಸೂಚ್ಯಂಕದಲ್ಲಿ ಬೆಂಗಳೂರನ್ನು ಅತ್ಯಂತ ವಾಸಯೋಗ್ಯ ನಗರವೆಂದು ಹೇಳಲಾಗಿದೆ. ಆದ್ದರಿಂದ, ನಗರದಲ್ಲಿ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸಂಬಂಧಪಟ್ಟ ಎಲ್ಲರ ಜವಾಬ್ದಾರಿ. ಬೆಳಿಗ್ಗೆ ಮತ್ತು ಸಂಜೆ ವೇಳೆ ನಗರದ ಹೃದಯಭಾಗದಲ್ಲಿ ಸಂಚಾರ ದಟ್ಟಣೆ ನಿಭಾಯಿಸುವುದು ಸವಾಲಿನ ಕೆಲಸ’ ಎಂದು ಪೀಠ ಹೇಳಿತು.

‘ಪ್ರತಿಭಟನೆಗಳಿಂದಾಗಿ ನಗರದಲ್ಲಿ ಇತ್ತೀಚೆಗೆ ಹಲವು ಬಾರಿ ನಾಗರಿಕರು ತೊಂದರೆ ಅನುಭವಿಸಿದ್ದಾರೆ. ಶಾಂತಿಯುತ ಪ್ರತಿಭಟನೆ ನಡೆಸುವುದು ಅವರ ಮೂಲಭೂತ ಹಕ್ಕಾಗಿದ್ದರೂ ಅದು ಇತರರ ಹಕ್ಕುಗಳ ಮೇಲೆ ಪರಿಣಾಮ ಬೀರಬಾರದು. ಪ್ರತಿಭಟನೆಗೆ ಗೊತ್ತುಪಡಿಸಿದ ಸ್ಥಳವಾದ ಸ್ವಾತಂತ್ರ್ಯ ಉದ್ಯಾನವನ್ನು ಅದಕ್ಕೆ ಬಳಸಿಕೊಳ್ಳಬೇಕು’ ಎಂದು ಪೀಠ ತಿಳಿಸಿತು.

ರಾಜ್ಯ ಸರ್ಕಾರ, ಬೆಂಗಳೂರು ನಗರ ಪೊಲೀಸ್ ಕಮಿಷನರ್, ಬಿಬಿಎಂಪಿ, ರಾಜಕೀಯ ಪಕ್ಷಗಳನ್ನು ಪ್ರತಿವಾದಿಗಳನ್ನಾಗಿ ಮಾಡಲು ರಿಜಿಸ್ಟ್ರಾರ್ ಅವರಿಗೆ ಪೀಠ ನಿರ್ದೇಶನ ನೀಡಿತು.

ಸಣ್ಣ ಕೈಗಾರಿಕೆ ಸಚಿವ ಸಿ.ಸಿ.ಪಾಟೀಲ್ ಹೇಳಿಕೆ

## ‘ಅಂತರರಾಷ್ಟ್ರೀಯ ಮಟ್ಟಕ್ಕೆ ಕರಕುಶಲ ಮಾರುಕಟ್ಟೆ’

ಪ್ರಜಾವಾಣಿ ವಾರ್ತೆ

**ಬೊಮ್ಮನಹಳ್ಳಿ:** ‘ರಾಜ್ಯದ ಕರಕುಶಲ ಮಾರುಕಟ್ಟೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಸಣ್ಣ ಕೈಗಾರಿಕೆ ಸಚಿವ ಸಿ.ಸಿ.ಪಾಟೀಲ ತಿಳಿಸಿದರು.

ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಹಾಗೂ ಕೇಂದ್ರ ಸರ್ಕಾರದ ಕರಕುಶಲ ಜವಳಿ ಮಂತ್ರಾಲಯದ ಸಹಯೋಗದಲ್ಲಿ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ.ರೂಪಾ,‘ಕರಕುಶಲ ವಸ್ತುಗಳ ಮಾರಾಟ ಕೊರೊನಾ ಹೊಡೆತದಿಂದ ಗಣನೀಯವಾಗಿ ಇಳಿಕೆಯಾಗಿತ್ತು. ವಹಿವಾಟು ಪುನಶ್ಚೇತನಗೊಳಿಸಲು ಫ್ಲಿಪ್ ಕಾರ್ಟ್, ಅಮೆಜಾನ್, ಸರ್ಕಾರದ ಇ-ಮಾರ್ಕೆಟ್ ವೆಬ್ ತಾಣದ ಮೂಲಕವೂ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ’ ಎಂದು ವಿವರಿಸಿದರು.

**12 ಸ್ಥಳಗಳಲ್ಲಿ ಕರಕುಶಲ ಮಳಿಗೆ:** ‘ಕರಕುಶಲ ಅಭಿವೃದ್ಧಿ ನಿಗಮದ ವತಿಯಿಂದ ತಿರುಪತಿ, ಅಯೋಧ್ಯೆ, ಉಡುಪಿ, ಶಿರಡಿ, ನವದೆಹಲಿ ಸೇರಿದಂತೆ ದೇಶದ 12 ಸ್ಥಳಗಳಲ್ಲಿ ನಿಗಮದ ವತಿಯಿಂದ ಮಳಿಗೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ಈ ಕುರಿತು ಸವಿಸ್ತಾರವಾಗಿ ಯೋಜನೆ ರೂಪಿಸಿ, ಪ್ರಸ್ತಾವನೆ ಸಲ್ಲಿಸಲಾಗಿದೆ’ ಎಂದು ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ತಿಳಿಸಿದರು.

‘ಎಚ್‌ಎಸ್‌ಆರ್ ಬಡಾವಣೆಯ ವೈಟ್‌ಹೌಸ್ ಕನ್ವೆಂಷನ್ ಹಾಲ್‌ನಲ್ಲಿ ಇದೇ 11ರವರೆಗೆ ನಡೆಯಲಿರುವ ಕರಕುಶಲ ಮೇಳದಲ್ಲಿ 50ಕ್ಕೂ ಹೆಚ್ಚು ಮಳಿಗೆಗಳಿವೆ. ಖಾದಿ, ಕೈಮಗ್ಗದ ವಸ್ತ್ರಗಳು, ಮನೆಯ ಅಲಂಕಾರಿಕ ವಸ್ತುಗಳು, ಮಣ್ಣಿನ ಮಡಿಕೆಗಳು, ಮರದ ಕಲಾಕೃತಿಗಳು ಕುಶಕರ್ಮಿಗಳಿಂದ ನೇರವಾಗಿ ಗ್ರಾಹಕರ ಕೈಸೇರುವ ವೇದಿಕೆ ಕಲ್ಪಿಸಿದ್ದೇವೆ’ ಎಂದು ಮೇಳದ ಆಯೋಜಕರು ತಿಳಿಸಿದರು.

ಮೇಳದಲ್ಲಿದ್ದ ಕರಕುಶಲ ವಸ್ತುಗಳನ್ನು ಸಚಿವ ಸಿ.ಸಿ.ಪಾಟೀಲ್ ವೀಕ್ಷಿಸಿದರು. ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಡಿ.ರೂಪಾ, ಶಾಸಕ ಎಂ.ಸತೀಶ್ ರೆಡ್ಡಿ, ಬೇಳೂರು ರಾಘವೇಂದ್ರ ಶೆಟ್ಟಿ ಹಾಗೂ ಇತರರು ಇದ್ದರು.

# ದೇಶ ಬಿಟ್ಟುಹೋಗಲೊಪ್ಪದೆ ಎಸಿಪಿ ಕಚೇರಿ ಕುರ್ಚಿ ಕದ್ದ!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದಿದ್ದ ಜಪಾನ್ ಪ್ರಜೆಯೊಬ್ಬ, ದೇಶ ಬಿಟ್ಟು ಹೋಗಲು ಒಪ್ಪದೇ ಜೆ.ಸಿ.ನಗರ ಉಪವಿಭಾಗದ ಎಸಿಪಿ ಕಚೇರಿಯಲ್ಲಿ ಕುರ್ಚಿ ಕದ್ದು ಆರೋಪಿಯಾಗಿಲು ಯತ್ನಿಸಿದ್ದ ಘಟನೆ ಇತ್ತೀಚೆಗೆ ನಡೆದಿದೆ.

'ಹಿರೊತೋಶಿ ಎಂಬಾತ, 2019ರಲ್ಲಿ ಬೆಂಗಳೂರಿಗೆ ಬಂದಿದ್ದ. ಆತನ ವೀಸಾ ಅವಧಿ ಮುಗಿದಿತ್ತು. ಹೀಗಾಗಿ, ತವರಿಗೆ ವಾಪಸು ಹೋಗಬೇಕಿತ್ತು. ಆದರೆ, ಆತನಿಗೆ ತವರಿಗೆ ಹೋಗಲು ಮನಸ್ಸಿರಲಿಲ್ಲ. ಕುರ್ಚಿ ಕದ್ದು ಕಳ್ಳತನ ಪ್ರಕರಣದಲ್ಲಿ ಜೈಲಿಗೆ ಹೋದರೆ ಮತ್ತಷ್ಟು ದಿನ ನಗರಲ್ಲೇ ಉಳಿದುಕೊಳ್ಳಬಹುದೆಂದು ಆತ ಕೃತ್ಯ ಎಸಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕದ್ದುಕೊಂಡು ಹೋಗಿದ್ದ ಕುರ್ಚಿಯನ್ನು ಆರೋಪಿ ವಾಪಸು ತಂದುಕೊಟ್ಟಿದ್ದಾನೆ. ಆತನನ್ನು ವಶಕ್ಕೆ ಪಡೆದು, ನೆಲಮಂಗಲ ಬಳಿಯ ಅಕ್ರಮ ವಲಸಿಗರ ಬಂಧನ ಕೇಂದ್ರಕ್ಕೆ ಕಳುಹಿಸಲಾಗಿದೆ. ಸದ್ಯದಲ್ಲೇ ಆತನನ್ನು ತವರಿಗೆ ಕಳುಹಿಸಲು ವ್ಯವಸ್ಥೆ ಮಾಡಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

**ಜೈಲಿಗೆ ಹೋಗಿ ಬಂದಿದ್ದ:** 'ನಗರದ ಇಂಗ್ಲಿಷ್ ಭಾಷಾ ಅಧ್ಯಯನ ಕೇಂದ್ರವೊಂದರಲ್ಲಿ ಹಿರೊತೋಶಿ ವಿದ್ಯಾರ್ಥಿಯಾಗಿದ್ದ. ಕ್ಷುಲ್ಲಕ ಕಾರಣಕ್ಕೆ ಕೇಂದ್ರದ ಮಾಲೀಕರ ಜೊತೆ ಗಲಾಟೆ ಮಾಡಿ, ಹಲ್ಲೆ ಮಾಡಿದ್ದ. ಅದೇ ಪ್ರಕರಣದಡಿ ಆತನನ್ನು ಬಂಧಿಸಲಾಗಿತ್ತು. ನ್ಯಾಯಾಲಯದಲ್ಲಿ ತಪ್ಪೊಪ್ಪಿಕೊಂಡಿದ್ದ ಆತನಿಗೆ ಶಿಕ್ಷೆಯೂ ಆಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಿಕ್ಷೆ ಅವಧಿ ಮುಗಿದಿದ್ದರಿಂದ ಆರೋಪಿ, ಜೈಲಿನಿಂದ ಬಿಡುಗಡೆಯಾಗಿದ್ದ. ಅದೇ ಸಮಯಕ್ಕೆ ಆತನ ವೀಸಾ ಅವಧಿ ಸಹ ಮುಗಿದಿತ್ತು. ಹೀಗಾಗಿ, ದೇಶ ತೊರೆದು ತವರಿಗೆ ಹೋಗುವಂತೆ ರಾಯಭಾರಿ ಕಚೇರಿ ಅಧಿಕಾರಿಗಳು ಸೂಚನೆ ನೀಡಿದ್ದರು. ಆದರೆ, ಒಪ್ಪದ ಆರೋಪಿ, ಜೆ.ಸಿ.ನಗರ ಠಾಣೆ ಉಪವಿಭಾಗದ ಎಸಿಪಿ ಕಚೇರಿಗೆ ಹೋಗಿ ಕುರ್ಚಿಯೊಂದನ್ನು ಕದ್ದೊಯ್ದಿದ್ದ.'

ಹಿರೊತೋಶಿ

'ಕುರ್ಚಿ ಕದ್ದಿರುವುದಾಗಿ ಫೋಟೊ ಸಮೇತ ಟ್ವೀಟ್ ಮಾಡಿದ್ದ. ಕುರ್ಚಿ ಕದ್ದಿರುವ ಬಗ್ಗೆ ಮತ್ತೊಂದು ಪ್ರಕರಣ ದಾಖಲಾದರೆ, ಮತ್ತಷ್ಟು ದಿನ ನಗರದಲ್ಲೇ ಉಳಿಯಬಹುದೆಂದು ಆತ ಅಂದುಕೊಂಡಿದ್ದ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಹಿರೊತೋಶಿ ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದ. ಆತನನ್ನು ಠಾಣೆಗೆ ಕರೆಸಿ ಬುದ್ಧಿವಾದ ಹೇಳಲಾಯಿತು. ಕುರ್ಚಿ ವಾಪಸು ತಂದುಕೊಟ್ಟ ನಂತರ ಪ್ರಕರಣ ಸುಖಾಂತ್ಯ ಕಂಡಿತು' ಎಂದೂ ಹೇಳಿವೆ.

### 'ಹಣಕ್ಕಾಗಿ ಸುಳ್ಳು ಪ್ರಕರಣ'

'ಹಣಕ್ಕಾಗಿ ಆರ್.ಟಿ.ನಗರ ಠಾಣೆ ಪೊಲೀಸರು 2019ರಲ್ಲಿ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಿದ್ದರು' ಎಂದು ಆರೋಪಿ ಹಿರೊತೋಶಿ ಟ್ವೀಟ್ ಮಾಡಿದ್ದ.

'ನನಗೆ ಸಹಾಯ ಮಾಡಿ. ಸದ್ಯ ನನಗಾದ ಅನ್ಯಾಯದ ಬಗ್ಗೆ ಮಾನವ ಹಕ್ಕುಗಳ ಆಯೋಗ ವಿಚಾರಣೆ ನಡೆಸುತ್ತಿದೆ. ನ್ಯಾಯ ಸಿಗುವವರೆಗೂ ನಾನು ಇಲ್ಲಿ ಇರುತ್ತೇನೆ' ಎಂದೂ ಹೇಳಿದ್ದ.

## ಮುಂಬೈನ ₹ 40 ಲಕ್ಷ ಮೌಲ್ಯದ ಡ್ರಗ್ಸ್ ಮಾರಾಟ

ಜಪ್ತಿ ಮಾಡಲಾದ ಎಂಡಿಎಂಎ ಡ್ರಗ್ಸ್

ಅಪರಾಧ ಸುದ್ದಿ

**ಬೆಂಗಳೂರು:** ಮುಂಬೈನಿಂದ ಡ್ರಗ್ಸ್ ತರಿಸಿಕೊಂಡು ನಗರದಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ನೈಜೀರಿಯಾದ ಯುಗೋಚುಕ್ವು ವಿಕ್ಟರ್‌ನನ್ನು (34) ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿ, ಹೆಣ್ಣೂರು ಬಳಿ ವಾಸವಿದ್ದ. ಆತನಿಂದ ₹ 40 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಹಾಗೂ ಎರಡು ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಡ್ರಗ್ಸ್ ಮಾರಾಟ ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿ, ಮುಂಬೈನಲ್ಲಿರುವ ಡ್ರಗ್ ಪೆಡ್ಲರ್ ಮೈಕಲ್ ಜೊತೆ ಒಡನಾಟವಿಟ್ಟುಕೊಂಡಿದ್ದ. ಆತನ ಮೂಲಕ ಮುಂಬೈನಿಂದ ನಗರಕ್ಕೆ ಡ್ರಗ್ಸ್ ತರಿಸಿಕೊಳ್ಳುತ್ತಿದ್ದ. ಕೆಲ ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿಗಳ ಉದ್ಯೋಗಿಗಳು, ಕೆಲ ಉದ್ಯಮಿಗಳಿಗೆ ಡ್ರಗ್ಸ್ ಮಾರುತ್ತಿದ್ದ' ಎಂದೂ ತಿಳಿಸಿದರು.

'ಹೆಣ್ಣೂರಿನ ವಡ್ಡರಪಾಳ್ಯದ ಕಾವೇರಿನಗರದ ಮನೆಯಲ್ಲಿ ಆರೋಪಿ ಬಾಡಿಗೆಗೆ ಇದ್ದ. ಮನೆ ಹಾಗೂ ಇತರೆಡೆ ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡಿದ್ದ. ಆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆತನನ್ನು ಬಂಧಿಸಲಾಯಿತು' ಎಂದೂ ಪೊಲೀಸರು ಹೇಳಿದರು.

'2018ರಿಂದಲೇ ಆರೋಪಿ ಕೃತ್ಯ ಎಸಗುತ್ತಿದ್ದ. ಡ್ರಗ್ಸ್ ಮಾರಾಟದಿಂದ ಬಂದ ಹಣದಲ್ಲಿ ಆತ ಐಷಾರಾಮಿ ಜೀವನ ನಡೆಸುತ್ತಿದ್ದ. ಆತನ ವಿರುದ್ಧ ಕೋರಮಂಗಲ ಠಾಣೆಯಲ್ಲೂ ಪ್ರಕರಣ ದಾಖಲಾಗಿತ್ತು' ಎಂದೂ ತಿಳಿಸಿದರು.

## ಗೂಂಡಾ ಕಾಯ್ದೆ; ರೌಡಿ ಸಾಗರ್ ಬಂಧನ

**ಬೆಂಗಳೂರು:** ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಸಾರ್ವಜನಿಕರನ್ನು ಬೆದರಿಸುತ್ತಿದ್ದ ಎನ್ನಲಾದ ರೌಡಿ ಸಾಗರ್ ಅಲಿಯಾಸ್ ಚಿಟ್ಟಿಮಾಡ ಸಾಗರ್‌ನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ.

'ಬನಶಂಕರಿ ಮೂರನೇ ಹಂತದ ಇಟ್ಟಮಡು ನಿವಾಸಿ ಸಾಗರ್, ತನ್ನದೇ ಗ್ಯಾಂಗ್ ಕಟ್ಟಿಕೊಂಡು ಅಪರಾಧ ಕೃತ್ಯ ಎಸಗುತ್ತಿದ್ದ. ಹಲವು ಬಾರಿ ಜೈಲಿಗೂ ಹೋಗಿ, ಜಾಮೀನು ಮೇಲೆ ಹೊರಬಂದಿದ್ದ. ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆಯ ರೌಡಿ ಪಟ್ಟಿಯಲ್ಲಿ ಆತನ ಹೆಸರಿದೆ' ಎಂದು ಪೊಲೀಸರು ಹೇಳಿದರು.



ರೌಡಿ ಸಾಗರ್

'ಕೊಲೆ, ಕೊಲೆ ಯತ್ನ, ದರೋಡೆ, ಸುಲಿಗೆ ಹಾಗೂ ಸರ್ಕಾರಿ ನೌಕರರ ಮೇಲೆ ಹಲ್ಲೆ ಮಾಡಿದ್ದ ಪ್ರಕರಣದಲ್ಲಿ ರೌಡಿ ಸಾಗರ್ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಓಡಾಡುತ್ತಿದ್ದ ಸಾಗರ್ ಹಾಗೂ ಆತನ ಸಹಚರರು, ಸಾರ್ವಜನಿಕರನ್ನು ಹೆದರಿಸುತ್ತಿದ್ದರು.'

'ಆತನ ಕೃತ್ಯಗಳ ಬಗ್ಗೆ ಮಾಹಿತಿ ಬಂದಿತ್ತು. ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಆತನ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

## ಪಾದಯಾತ್ರೆ: ಪೂರ್ವಭಾವಿ ಸಭೆ ನಾಳೆ

ಪ್ರಜಾವಾಣಿ ವಾರ್ತೆ

**ಹರಿಹರ:** ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಅನುಷ್ಠಾನಕ್ಕೆ ಆಗ್ರಹಿಸಿ ಮಾರ್ಚ್ 25ರಿಂದ ನಡೆಯಲಿರುವ ಪಾದಯಾತ್ರೆ ಹೋರಾಟದ ಪೂರ್ವಭಾವಿ ಸಭೆಯನ್ನು ನಗರದ ಪಿ.ಬಿ. ರಸ್ತೆಯಲ್ಲಿರುವ ಲೋಕೋಪಯೋಗಿ ಮತ್ತು ಬಂದರು ಇಲಾಖೆ ಪ್ರವಾಸಿ ಮಂದಿರದಲ್ಲಿ ಭಾನುವಾರ ಮಧ್ಯಾಹ್ನ 12ಕ್ಕೆ ಆಯೋಜಿಸಲಾಗಿದೆ.

ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ

ಆದಿಜಾಂಬವ ಗುರುಪೀಠದ ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ ಸಭೆಯ ಸಾನಿಧ್ಯ ವಹಿಸುವರು. ಸಮಾಜದ ಜನಪ್ರತಿನಿಧಿಗಳು, ಮುಖಂಡರು ಹಾಗೂ ಹಿರಿಯರು ಭಾಗವಹಿಸುವರು. ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಆಯೋಜಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಡಿ.ಜೆ ಹಳ್ಳಿ ಪ್ರಕರಣ: 29 ಆರೋಪಿಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

**ಬಳ್ಳಾರಿ:** ಬೆಂಗಳೂರಿನ ಡಿಜೆ ಹಳ್ಳಿ–ಕೆಜೆ ಹಳ್ಳಿಯಲ್ಲಿ ನಡೆದಿದ್ದ ಗಲಭೆ ಪ್ರಕರಣದ 29 ಆರೋಪಿಗಳನ್ನು ಆರು ತಿಂಗಳ ಬಳಿಕ ಇಲ್ಲಿನ ಕೇಂದ್ರ ಕಾರಾಗೃಹದಿಂದ ಶುಕ್ರವಾರ ರಾತ್ರಿ ಬಿಡುಗಡೆ ಮಾಡಲಾಯಿತು.

ರಾತ್ರಿ 10.30ರ ವೇಳೆಗೆ ಆರೋಪಿಗಳನ್ನು ವಿಶೇಷ ಬಸ್‌ನಲ್ಲಿ ನಗರದಿಂದ ಬೆಂಗಳೂರು ಕಡೆಗೆ ಕರೆದೊಯ್ಯಲಾಯಿತು. ಈ ಸಂದರ್ಭದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಆರೋಪಿಗಳು 'ನಮಗೇನೂ ಗೊತ್ತಿಲ್ಲ. ನಾವು ಅಮಾಯಕರು' ಎಂದು ಪ್ರತಿಪಾದಿಸಿದರು.

ಗಲಭೆ ಬಳಿಕ ನೂರಕ್ಕೂ ಹೆಚ್ಚು ಆರೋಪಿಗಳನ್ನು ಬೆಂಗಳೂರಿನಿಂದ ಮೂರು ಬಸ್‌ನಲ್ಲಿ ಕರೆತಂದು ಕಾರಾಗೃಹದಲ್ಲಿಡಲಾಗಿತ್ತು.

### ನಡುರಾತ್ರಿ ಆರೋಪಿ ಹಿಡಿಯಲು ಹೋದ ಪೊಲೀಸ್ ಮೇಲೆ ಹಲ್ಲೆ

## ದೂರು ದಾಖಲಿಸಿದ ಸಬ್ ಇನ್‌ಸ್ಪೆಕ್ಟರ್

ಪ್ರಜಾವಾಣಿ ವಾರ್ತೆ

**ಕೆಜಿಎಫ್:** ಆರೋಪಿಯನ್ನು ಹಿಡಿಯಲು ನಡುರಾತ್ರಿ ಬಂದು ಹಲ್ಲೆಗೊಳಗಾದ ಬೆಂಗಳೂರಿನ ಮಹದೇವಪುರ ಠಾಣೆ ಸಬ್ ಇನ್‌ಸ್ಪೆಕ್ಟರ್ ಹರಿನಾಥ್ ಆರೋಪಿಗಳ ವಿರುದ್ಧ ಆಂಡರ್‌ಸನ್‌ಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

'ಮಹದೇವಪುರ ಠಾಣೆಯಲ್ಲಿ ದಾಖಲಾದ ನಾಲ್ಕು ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಅಪ್ಪೆನ್ ತನ್ನ ವಾಸದ ಮನೆಯಲ್ಲಿ ಇದ್ದಾನೆ ಎಂಬ ಮಾಹಿತಿ ಪಡೆದು ರಾತ್ರಿ 12.40ಕ್ಕೆ ಆತನ ಮನೆಯ ಬಾಗಿಲನ್ನು ತಟ್ಟಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿಯಾದ ಅರ್ಜುನ್, ಭಾಸ್ಕರ್ ಕಂಬಾರ, ಸಿದ್ದಪ್ಪ ಸಿಂಧಗಿ, ಕೆ.ಎಲ್. ರವಿ ಮತ್ತು ಮಮತೇಶ್ ಗೌಡ ಇದ್ದರು. ಆ ಸಮಯದಲ್ಲಿ ಮನೆ ಹಿಂಬಾಗಿಲಿನಿಂದ ಹುಡುಗನೊಬ್ಬ ಬಂದ. ಆತನನ್ನು ಹಿಡಿದು ವಿಚಾರಣೆ ನಡೆಸುತ್ತಿದ್ದಾಗ, ಅಪ್ಪೆನ್ ಮತ್ತು ಇನ್ನೊಬ್ಬ ವ್ಯಕ್ತಿ ಲಾಂಗ್ ಮತ್ತು ದೊಣ್ಣೆ ಹಿಡಿದು ಓಡಿಬಂದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ತಾವು ಮಹದೇವಪುರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮತ್ತು ಸಿಬ್ಬಂದಿ ಎಂದು ಪರಿಚಯ ಮಾಡಿಕೊಳ್ಳುತ್ತಿದ್ದಾಗ, ಆರೋಪಿಗಳು ಲಾಂಗ್‌ನಿಂದ ಕೊಲೆ ಮಾಡುವ ಉದ್ದೇಶದಿಂದ ಹೊಡೆಯಲು ಬಂದರು. ಆಗ ತಪ್ಪಿಸಿಕೊಳ್ಳಲು ಕೈ ಅಡ್ಡ ಹಿಡಿದಾಗ, ಎರಡೂ ಕೈಗೆ ತೀವ್ರ ಸ್ವರೂಪದ ಗಾಯಗಳಾದವು. ನಂತರ ಸರ್ವೀಸ್ ರಿವಾಲ್ವಾರ್‌ನಿಂದ ಒಂದು ಸುತ್ತು ಗುಂಡು ಹಾರಿಸಲಾಯಿತು. ನಂತರ ಜೊತೆಗಿದ್ದ ಭಾಸ್ಕರ್ ಕುಂಬಾರ ಅವರಿಗೆ ದೊಣ್ಣೆಯಿಂದ ಹೊಡೆದು ಓಡಿ ಹೋದರು. ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಅವರ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

### ಲೂರ್ದ ನಗರದಲ್ಲಿ ನಡುರಾತ್ರಿ ದಾಳಿ

ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಅಪ್ಪೆನ್‌ನನ್ನು ಹಿಡಿಯಲು ಬಂದ ಮಹದೇವಪುರ ಪೊಲೀಸರು ದಾಳಿಯ ಮಾಹಿತಿಯನ್ನು ಸ್ಥಳೀಯ ಪೊಲೀಸರ ಜೊತೆ ಹಂಚಿಕೊಳ್ಳದೆ ಇರುವುದು ರಾದ್ಧಾಂತಕ್ಕೆ ಕಾರಣವಾಗಿದೆ ಎಂದು ತಿಳಿದುಬಂದಿದೆ.

ಮಹದೇವಪುರ ಮತ್ತಿತರ ಪ್ರದೇಶದಲ್ಲಿ ನಡೆದ ಕಳ್ಳತನ ಪ್ರಕರಣಗಳಲ್ಲಿ ಅಪ್ಪೆನ್ ಆರೋಪಿಯಾಗಿದ್ದ. ಆತನ ವಿವರ ಹಿಡಿದು ಪೊಲೀಸರು ಮಫ್ತಿಯಲ್ಲಿ ನಡುರಾತ್ರಿ ಲೂರ್ದ ನಗರಕ್ಕೆ ಬಂದಿದ್ದರು.

ಸ್ಥಳೀಯ ಪೊಲೀಸರೇ ಈ ಸುತ್ತಮುತ್ತಲಿನ ಪ್ರದೇಶಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲದೆ ಒಳನುಗ್ಗುವ ಧೈರ್ಯ ಮಾಡುವುದಿಲ್ಲ. ಅದರಲ್ಲಿಯೂ ರಾತ್ರಿ ಹೊತ್ತು ಮಫ್ತಿಯಲ್ಲಿ ಹೋದ ಮಹದೇವಪುರ ಠಾಣೆಯ ಪೊಲೀಸರ ಕಾರ್ಯಶೈಲಿ ಬಗ್ಗೆ ಅನುಮಾನಗಳು ವ್ಯಕ್ತವಾಗುತ್ತಿವೆ. ಸಬ್ ಇನ್‌ಸ್ಪೆಕ್ಟರ್ ನೀಡಿದ ದೂರಿನನ್ವಯ ಆರೋಪಿ ಲಾಂಗ್‌ನಿಂದ ಎರಡೂ ಕೈಗೆ ತೀವ್ರ ಸ್ವರೂಪದ ಹಲ್ಲೆ ನಡೆಸಿದ ಎಂದು ತಿಳಿಸಲಾಗಿದೆ. ಎರಡೂ ಕೈಗೆ ತೀವ್ರ ಸ್ವರೂಪದ ಗಾಯಗಳಾದ ಮೇಲೆ ಸೊಂಟದಲ್ಲಿದ್ದ ಸರ್ವೀಸ್ ರಿವಾಲ್ವಾರ್ ತೆಗೆದು, ಅದನ್ನು ಲೋಡ್ ಮಾಡಿ ಫೈರ್ ಮಾಡಲು ಹೇಗೆ ಸಾಧ್ಯ ಎಂದು ಪೊಲೀಸ್ ವಲಯದಲ್ಲಿ ಚರ್ಚೆ ನಡೆಯುತ್ತಿದೆ.

ಅದರಲ್ಲಿಯೂ ಲೂರ್ದ್ ನಗರ ಸಣ್ಣ ಸಣ್ಣ ಓಣಿ ಇರುವ ಪ್ರದೇಶ. ಕತ್ತಲಲ್ಲಿ ಓಡಿ ಹೋದ ಆತನನ್ನು ಬೆನ್ನಟ್ಟಿ ಹೋಗಿ ಫೈರ್ ಮಾಡುವುದು ಅಸಾಧ್ಯ ಎಂಬ ಮಾತುಗಳು ಕೇಳಿಬರುತ್ತಿವೆ. ರಾತ್ರಿ ಇಷ್ಟೆಲ್ಲಾ ಘಟನೆಗಳು ನಡೆದರೂ, ಸ್ಥಳೀಯ ಪೊಲೀಸರು ಸ್ಥಳಕ್ಕೆ ಬೆಳಿಗ್ಗೆ 9 ಗಂಟೆಯ ನಂತರ ಆಗಮಿಸಿದರು. ನಂತರ ಹಿರಿಯ ಅಧಿಕಾರಿಗಳು ಸ್ಥಳ ತನಿಖೆ ನಡೆಸಿದರು. ಘಟನೆ ನಡೆದ ತಕ್ಷಣವಾದರೂ ಸ್ಥಳೀಯ ಪೊಲೀಸರಿಗೆ ಯಾಕೆ ಮಾಹಿತಿ ನೀಡಲಿಲ್ಲ ಎಂಬ ಪ್ರಶ್ನೆಯೂ ಉದ್ಭವಿಸಿದೆ.

## ಮಗು ಮಾರಾಟ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಮಗು ಮಾರಾಟ ಜಾಲವನ್ನು ಭೇದಿಸಿರುವ ನಗರ ಪೊಲೀಸರು, ಐದು ತಿಂಗಳ ಹೆಣ್ಣು ಮಗುವನ್ನು ರಕ್ಷಿಸಿದ್ದಾರೆ.

'ಮೂಲ್ಕಿಯ ರೈಹಾನ್ ಬಂಧಿತ ಆರೋಪಿಯಾಗಿದ್ದು, ಮಗುವನ್ನು ಮಾರಾಟ ಮಾಡಿದ ಮತ್ತು ತೆಗೆದುಕೊಂಡವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಆಯುಕ್ತ ಶಶಿಕುಮಾರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರಿನ ಒಡನಾಡಿ ಸಂಸ್ಥೆಯನ್ನು ಸಂಪರ್ಕಿಸಿದ್ದ ಆರೋಪಿ ರೈಹಾನ್, 'ಮಗುವೊಂದು ಮಾರಾಟಕ್ಕಿದೆ. ಬೇಕಿದ್ದರೆ ತಿಳಿಸಿ' ಎಂದಿದ್ದ. ಅಲ್ಲದೆ 'ನಾನು ಈ ಹಿಂದೆ ಮಗು ಮಾರಾಟ ಮಾಡಿದ್ದೇನೆ. ಗಂಡು ಮಗುವಿಗೆ ₹6 ಲಕ್ಷ ಮತ್ತು ಹೆಣ್ಣು ಮಗುವಿಗೆ ₹4 ಲಕ್ಷ ನೀಡಬೇಕು. ಮುಂಗಡ ಹಣ ನೀಡಿದ ಒಂದೂವರೆ ತಿಂಗಳೊಳಗೆ ಮಗುವನ್ನು ಕೊಡುವುದಾಗಿ' ತಿಳಿಸಿದ್ದ.

ಅದರಂತೆ ಒಡನಾಡಿ ಸಂಸ್ಥೆಯ ಸಿದ್ದಾರ್ಥ್ ಮತ್ತು ದೀಕ್ಷಿತ್ ಎಂಬುವವರು ನಗರಕ್ಕೆ ಬಂದು ರೈಹಾನ್‌ನನ್ನು ಸಂಪರ್ಕಿಸಿ ಮಾತುಕತೆ ನಡೆಸಿದ್ದಾರೆ. ಈ ಬಗ್ಗೆ ಪೊಲೀಸರಿಗೂ ಮಾಹಿತಿ ನೀಡಿದ್ದಾರೆ. ಪಾಂಡೇಶ್ವರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಶೀತಲ್ ನೇತೃತ್ವದಲ್ಲಿ ಪೊಲೀಸ್ ತಂಡ ಆರೋಪಿಯನ್ನು ಬಂಧಿಸಿದೆ.

'ಆರೋಪಿ ಈ ಹಿಂದೆಯೂ ಹಲವು ಮಕ್ಕಳನ್ನು ಮಾರಾಟ ಮಾಡಿದ್ದಾನೆ ಎನ್ನಲಾಗಿದೆ. ಮೂಲ್ಕಿಯಲ್ಲಿ ಕೋಳಿ ಮಾರಾಟದ ಅಂಗಡಿ, ಫ್ಯಾನ್ಸಿ ಅಂಗಡಿ ನಡೆಸುತ್ತಿದ್ದ ಈತ, ಮಕ್ಕಳನ್ನು ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ. ಹಾಸನದ ದಂಪತಿಯಿಂದ ಹೆಣ್ಣು ಮಗುವನ್ನು ₹3 ಲಕ್ಷಕ್ಕೆ ಪಡೆದಿದ್ದ ಈತ, ಕಾರ್ಕಳದ ಕವಿತಾ ಎಂಬುವವರಿಗೆ ₹6 ಲಕ್ಷ ಕ್ಕೆ ಮಾರಾಟ ಮಾಡಿದ್ದಾನೆ. ಇದೀಗ ಮಗುವನ್ನು ರಕ್ಷಿಸಲಾಗಿದೆ' ಎಂದು ಎನ್. ಶಶಿಕುಮಾರ್ ತಿಳಿಸಿದ್ದಾರೆ.

## ಚಿನ್ನಸಾಗಣೆ: ಕೇರಳ ಸಿ.ಎಂ ವಿರುದ್ಧ ಸ್ವಪ್ನಾ ಸುರೇಶ್ ಆರೋಪ

**ಕೊಚ್ಚಿ (ಪಿಟಿಐ):** ಕೇರಳದ ಚಿನ್ನ ಕಳ್ಳಸಾಗಣೆ ಪ್ರಕರಣದ ಪ್ರಮುಖ ಆರೋಪಿ ಸ್ವಪ್ನಾ ಸುರೇಶ್ ಅವರು ತನಿಖೆಯ ವೇಳೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಸ್ಪೀಕರ್ ಪಿ. ಶ್ರೀರಾಮಕೃಷ್ಣನ್ ಮತ್ತು ಕೆಲ ಸಚಿವರ ಮೇಲೆ ಆರೋಪ ಮಾಡಿದ್ದಾರೆ.

ಪ್ರಕರಣದ ತನಿಖೆ ನಡೆಸುತ್ತಿರುವ ಕಸ್ಟಮ್ಸ್ ಇಲಾಖೆಯ ಅಧಿಕಾರಿಗಳು ಕೇರಳ ಹೈಕೋರ್ಟ್‌ಗೆ ಈ ಕುರಿತು ಪ್ರಮಾಣಪತ್ರ ಸಲ್ಲಿಸಿದ್ದಾರೆ. ಹಗರಣದಲ್ಲಿ ಯುಇಎ ರಾಯಭಾರ ಕಚೇರಿ ಅಧಿಕಾರಿಗಳು ಭಾಗಿಯಾಗಿರುವ ಆರೋಪವಿದೆ.

ಸ್ವಪ್ನಾ ಸುರೇಶ್ ಅವರು ನೀಡಿರುವ ಹೇಳಿಕೆಯಲ್ಲಿ ಈ ಮಾಹಿತಿ ಇದೆ ಎಂದು ಕಸ್ಟಮ್ಸ್ (ನಿಯಂತ್ರಣ) ಕಮಿಷನರ್ ಸುಮಿತ್ ಕುಮಾರ್ ಪ್ರಮಾಣ ಪತ್ರದಲ್ಲಿ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಅವರಿಗೆ ಯುಎಇ ರಾಯಭಾರ ಕಚೇರಿಯ ಹಿಂದಿನ ರಾಯಭಾರಿ ಜೊತೆಗೆ ಒಡನಾಟ ಇತ್ತು. ನಿಯಮಬಾಹಿರವಾಗಿ ಹಣಕಾಸು ವಹಿವಾಟು ನಡೆಯುತ್ತಿತ್ತು. ಮುಖ್ಯಮಂತ್ರಿ ಮತ್ತು ಸ್ಪೀಕರ್ ಅವರ ಸೂಚನೆಯ ಮೇರೆಗೆ ವಿದೇಶಿ ಕರೆನ್ಸಿಯನ್ನು ಸಾಗಿಸುತ್ತಿದ್ದೆ ಎಂದು ಸ್ವಪ್ನಾ ಸುರೇಶ್ ಸ್ಪಷ್ಟವಾಗಿ ಹೇಳಿದ್ದಾರೆ' ಎಂದು ಉಲ್ಲೇಖಿಸಿದ್ದಾರೆ. ಯುಎಇ ಕಾನ್ಸುಲೇಟ್‌ನ ಹಣಕಾಸು ವಿಭಾಗದ ಮಾಜಿ ಮುಖ್ಯಸ್ಥೆಯು ತಿರುವನಂತಪುರಂನಿಂದ ಮಸ್ಕತ್‌ಗೆ ಸುಮಾರು ₹1.30 ಕೋಟಿಗೆ ಸಮನಾದ ಡಾಲರ್ ಸಾಗಣೆ ಕುರಿತ ಪ್ರಕರಣಕ್ಕೆ ಸಂಬಂಧಿಸಿ ಈ ಹೇಳಿಕೆ ನೀಡಿದ್ದಾರೆ ಎಂದು ವಿವರಿಸಿದ್ದಾರೆ.

## ಕಾವೇರಿ ವನ್ಯಧಾಮ: ಬೆಂಕಿ

ಕಾವೇರಿ ವನ್ಯಧಾಮದ ಬಾವಿಗುಡ್ಡದಲ್ಲಿ ಕಾಣಿಸಿಕೊಂಡ ಬೆಂಕಿ

**ಹನೂರು:** ತಾಲ್ಲೂಕಿನ ಕಾವೇರಿ ವನ್ಯಧಾಮದ ಹನೂರು ವನ್ಯಜೀವಿ ವಲಯದಲ್ಲಿ ಶುಕ್ರವಾರ ಬೆಂಕಿ ಬಿದ್ದಿದ್ದು, ನೂರಾರು ಎಕರೆ ಅರಣ್ಯ ಪ್ರದೇಶ ಸುಟ್ಟಿದೆ ಎಂದು ಹೇಳಲಾಗಿದೆ.

ಹನೂರು ವನ್ಯಜೀವಿ ವಲಯದ ಬಂಡಳ್ಳಿ ಬೀಟ್‌ನ ಬಾವಿಗುಡ್ಡ ಬಳಿ ಶುಕ್ರವಾರ ಮಧ್ಯಾಹ್ನದ ವೇಳೆ ಬೆಂಕಿ ಕಾಣಿಸಿಕೊಂಡಿದ್ದು, ರಾತ್ರಿ ಎಂಟು ಗಂಟೆಯವರೆಗೂ ಉರಿದಿದೆ. ವಲಯ ಅರಣ್ಯಾಧಿಕಾರಿ ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿರುವ ಕಾವೇರಿ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಡಾ.ಎಸ್.ರಮೇಶ್, 'ಬಂಡಳ್ಳಿ ಬೆಟ್ಟದಲ್ಲಿ ಅರಣ್ಯದ ಮಧ್ಯದಲ್ಲಿ ಕಿಡಿಗೇಡಿಗಳು ಬೆಂಕಿ ಇಟ್ಟಿದ್ದಾರೆ. ಕಿಚ್ಚು ನಂದಿಸಲು ಸಿಬ್ಬಂದಿ ಶ್ರಮಿಸುತ್ತಿದ್ದಾರೆ' ಎಂದರು.

## ಹೈಕೋರ್ಟ್‌ಗೆ ನ್ಯಾಯಮೂರ್ತಿ ನೇಮಕ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಹಿರಿಯ ವಕೀಲ ನಾಗೇಂದ್ರ ರಾಮಚಂದ್ರ ನಾಯ್ಕ ಅವರನ್ನು ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಯನ್ನಾಗಿ ನೇಮಕಗೊಳಿಸಲಾಗಿದೆ.

ಮಾರ್ಚ್ 2ರಂದು ಸಭೆ ಸೇರಿದ್ದ ಸುಪ್ರೀಂ ಕೋರ್ಟ್ ಕೊಲಿಜಿಯಮ್‌ನ ಶಿಫಾರಸ್ಸಿನ ಮೇರೆಗೆ ಶುಕ್ರವಾರ ಈ ನೇಮಕದ ಆದೇಶ ಹೊರಡಿಸಲಾಗಿದೆ.

ಕೇರಳ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಪಂಜಾಬ್ ಮತ್ತು ಹರಿಯಾಣ ಹಾಗೂ ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ಗಳಿಗೂ ನ್ಯಾಯಮೂರ್ತಿಗಳನ್ನು ನೇಮಕ ಮಾಡಲಾಗಿದೆ.

## 75ನೇ ಸ್ವಾತಂತ್ರ್ಯೋತ್ಸವ ಆಚರಣೆ: ಪ್ರಧಾನಿ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿ ರಚನೆ

**ನವದೆಹಲಿ:** ದೇಶದ 75ನೇ ಸ್ವಾತಂತ್ರ್ಯೋತ್ಸವ ಆಚರಣೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ 259 ಸದಸ್ಯರನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ಕೇಂದ್ರ ಸರ್ಕಾರ ಶುಕ್ರವಾರ ರಚಿಸಿದೆ.

75ನೇ ಸ್ವಾತಂತ್ರ್ಯ ದಿನವನ್ನು ಅರ್ಥಪೂರ್ಣವಾಗಿ ಆಚರಿಸುವ ಸಂಬಂಧ ಈ ಸಮಿತಿ ಮಾರ್ಗಸೂಚಿಗಳನ್ನು ನೀಡುವುದು. ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವ ರೀತಿಯ ಕಾರ್ಯಕ್ರಮಗಳನ್ನು ಆಯೋಜನೆ ಮಾಡಬೇಕು ಎಂಬ ಬಗ್ಗೆಯೂ ಸಮಿತಿ ನಿರ್ದೇಶನ ನೀಡುವುದು ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ನರೇಂದ್ರ ಮೋದಿ

ಮಾಜಿ ರಾಷ್ಟ್ರಪತಿ ಪ್ರತಿಭಾ ಪಾಟೀಲ, ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಎಸ್.ಎ.ಬೊಬಡೆ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್, 28 ಮುಖ್ಯಮಂತ್ರಿಗಳು, ಹಿನ್ನೆಲೆ ಗಾಯಕಿ ಲತಾ ಮಂಗೇಶ್ಕರ್, ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್, ಬಿಜೆಪಿಯ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ, ಹಲವು ರಾಜ್ಯಪಾಲರು, ಬಹುತೇಕ ಎಲ್ಲ ಕೇಂದ್ರ ಸಚಿವರು ಈ ಸಮಿತಿಯಲ್ಲಿ ಇದ್ದಾರೆ ಎಂದು ಮೂಲಗಳು ಹೇಳಿವೆ.

ವಿರೋಧ ಪಕ್ಷಗಳ ಮುಖಂಡರಾದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಎನ್‌ಸಿಪಿ ವರಿಷ್ಠ ಶರದ್ ಪವಾರ್, ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಮುಲಾಯಂ ಸಿಂಗ್ ಯಾದವ್, ಮಾಯಾವತಿ ಅವರೂ ಸಮಿತಿಯಲ್ಲಿದ್ದಾರೆ.

## ವಿಡಿಯೊ: ಪಂಜಾಬ್ ಸಿ.ಎಂ ಜೊತೆ ಹೆಜ್ಜೆ ಹಾಕಿದ ಫಾರೂಕ್

**ಚಂಡೀಗಡ:** 'ಆಜ್ ಕಲ್ ತೇರೆ ಮೇರೆ ಪ್ಯಾರ್ ಕೇ...' ಹಾಡಿಗೆ ಹೆಜ್ಜೆ ಹಾಕುತ್ತ, ಪಂಜಾಬ್ ಸಿ.ಎಂ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನೂ ಕೈಹಿಡಿದು ತನ್ನತ್ತ ಸೆಳೆದು ಉತ್ಸಾಹದ ಕ್ಷಣಗಳನ್ನು ಅನುಭವಿಸುತ್ತಿದ್ದರು ಫಾರೂಕ್ ಅಬ್ದುಲ್ಲಾ.

ಚಂಡೀಗಡದಲ್ಲಿ ನಡೆದ ಸಿಎಂ ಅಮರಿಂದರ್ ಅವರ ಮೊಮ್ಮಗಳು ಶೆಹರಿಂದರ್ ಕೌರ್ ವಿವಾಹ ಸಮಾರಂಭದಲ್ಲಿ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಭಾಗಿಯಾಗಿದ್ದರು. ಕೇಂದ್ರ ಸರ್ಕಾರದ ವಿರುದ್ಧ ಸದಾ ವಾಗ್ದಾಳಿ ಮಾಡುವ ಫಾರೂಕ್ ಅಬ್ದುಲ್ಲಾಅಮರಿಂದರ್ ಸಿಂಗ್ ಅವರೊಂದಿಗೆ ಹೆಜ್ಜೆ ಹಾಕಿದರು.

ದೆಹಲಿ ಮೂಲದ ಉದ್ಯಮಿಯ ಪುತ್ರ ಆದಿತ್ಯ ನಾರಂಗ್ ಜೊತೆಗೆ ಭಾನುವಾರ ಅಮರಿಂದರ್ ಅವರ ಮೊಮ್ಮಗಳ ಮದುವೆ ನಡೆಯಿತು. ಸಿಸ್ವಾನ್ ಫಾರ್ಮ್‌ಹೌಸ್‌ನಲ್ಲಿ ನಡೆದ ಸಮಾರಂಭದಲ್ಲಿ ಸಿಎಂ ಅಮರಿಂದರ್ ಅವರು ಪಂಜಾಬಿ ಸುಹಾಗ್ ಶೈಲಿಯ ಹಾಡುಗಳನ್ನು ಹಾಡಿದರು.

ಫಾರೂಕ್ – ಅಮರಿಂದರ್ ಜೋಡಿಯ ಡ್ಯಾನ್ಸ್ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ. 'ರಾಜಕೀಯ ನಾಯಕರಿಗೆ ಇಂಥ ಉಲ್ಲಾಸದ ಕ್ಷಣಗಳ ಅಗತ್ಯವಿದೆ....' ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ.

## ಶಾಂತಿ ನೆಲೆಸಲು ಸೇನೆಯ ಸಂಪೂರ್ಣ ಹಿಂತೆಗೆತ ಅಗತ್ಯ: ಭಾರತ

**ಬೀಜಿಂಗ್/ನವದೆಹಲಿ:** ಪೂರ್ವ ಲಡಾಖ್ ಗಡಿಯಲ್ಲಿ ಸಂಘರ್ಷ ಏರ್ಪಟ್ಟಿದ್ದ ಇತರ ಸ್ಥಳಗಳಿಂದಲೂ ಸೇನೆಯನ್ನು ಹಿಂಪಡೆಯುವುದು ಮುಖ್ಯ ಎಂದು ಚೀನಾದಲ್ಲಿನ ಭಾರತದ ರಾಯಭಾರಿ ವಿಕ್ರಮ್ ಮಿಸ್ರಿ ಶುಕ್ರವಾರ ಪ್ರತಿಪಾದಿಸಿದರು.

ಚೀನಾದ ವಿದೇಶಾಂಗ ಉಪಸಚಿವ ಲುವೊ ಜಾಹುಯಿ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ಸೇನೆಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಂಡಾಗ ಮಾತ್ರ ಗಡಿಯಲ್ಲಿ ಶಾಂತಿ–ನೆಮ್ಮದಿ ಸ್ಥಾಪನೆ ಸಾಧ್ಯ' ಎಂದು ಪುನರುಚ್ಚರಿಸಿದರು ಎಂದು ಇಲ್ಲಿನ ಭಾರತ ರಾಯಭಾರಿ ಕಚೇರಿ ಟ್ವೀಟ್ ಮಾಡಿದೆ.

ಪ್ಯಾಂಗ್ಯಾಗ್ ಸರೋವರದ ಉತ್ತರ ಮತ್ತು ದಕ್ಷಿಣ ತೀರಗಳಿಂದ ಸೇನೆಯನ್ನು ಸಂಪೂರ್ಣವಾಗಿ ಹಿಂಪಡೆಯುವ ಪ್ರಕ್ರಿಯೆಯನ್ನು ಉಭಯ ದೇಶಗಳು ಮುಕ್ತಾಯಗೊಳಿಸಿದ ಬೆನ್ನಲ್ಲೇ, ಈ ಮಾತುಕತೆ ನಡೆದಿದೆ.

ನವದೆಹಲಿಯಲ್ಲಿ ವಿದೇಶಾಂಗ ಸಚಿವಾಲಯದ ವಕ್ತಾರ ಅನುರಾಗ್ ಶ್ರೀವಾಸ್ತವ ಅವರೂ ಟ್ವೀಟ್ ಮಾಡಿದ್ದು, 'ದ್ವಿಪಕ್ಷೀಯ ಸಮಾಲೋಚನೆ ಕಾರ್ಯವಿಧಾನಗಳ ಮೂಲಕ ಸೇನೆ ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಅದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಜತೆಯಾಗಿ ಕೆಲಸ ಮಾಡುವುದನ್ನು ಎದುರುನೋಡುತ್ತಿದ್ದೇವೆ' ಎಂದು ಹೇಳಿದ್ದಾರೆ.

'ಎರಡೂ ಕಡೆಯವರು ಪೂರ್ವ ಲಡಾಖ್‌ನಿಂದ ಸೇನೆ ಹಿಂಪಡೆಯುವಿಕೆ ಪೂರ್ಣಗೊಳಿಸುವುದು ಶಾಂತಿ ಮತ್ತು ನೆಮ್ಮದಿಯ ಸ್ಥಾಪನೆಗೆ ಕಾರಣವಾಗಲಿದೆ.

ದ್ವಿಪಕ್ಷೀಯ ಬಾಂಧವ್ಯದ ವೃದ್ಧಿಗೆ ಪೂರಕವಾಗಲಿದೆ' ಎಂದೂ ಅವರು ಹೇಳಿದ್ದಾರೆ.

## ನಾಟಿ ಕೋಳಿ ಮಾರಾಟ ಜೋರು

**ಶ್ರೀನಿವಾಸಪುರ:** ಪಟ್ಟಣದಲ್ಲಿ ಫಾರಂನಲ್ಲಿ ಸಾಕಿದ ನಾಟಿ ಕೋಳಿ ಖರೀದಿ ಜೋರಾಗಿ ನಡೆಯುತ್ತಿದೆ. ಕಡಿಮೆ ಬೆಲೆಗೆ ಸಿಗುತ್ತಿರುವ ಈ ಕೋಳಿಗಳನ್ನು ಗ್ರಾಹಕರು ಮುಗಿಬಿದ್ದು ಖರೀದಿಸಿ ಕೊಂಡೊಯ್ಯುತ್ತಿದ್ದಾರೆ.

ಇಲ್ಲಿನ ರೈತರು ಸಾಕಿದ ನಾಟಿ ಕೋಳಿ ಕೆಜಿಯೊಂದಕ್ಕೆ ₹400ರಂತೆ ಮಾರಾಟವಾಗುತ್ತಿದೆ. ಆದರೆ ತಮಿಳುನಾಡಿನಿಂದ ತರಲಾಗಿರುವ ಫಾರಂಗಳಲ್ಲಿ ಸಾಕಿದ ನಾಟಿ ಕೋಳಿ ಬೆಲೆ ಕೆಜಿಯೊಂದಕ್ಕೆ ₹ 220 ರಂತೆ ಮಾರಾಟವಾಗುತ್ತಿದೆ. ಕಡಿಮೆ ಬೆಲೆ ಗ್ರಾಹಕರನ್ನು ಆಕರ್ಷಿಸಿದೆ

### ಇದೇ 24ರಂದು ವೈರಮುಡಿ ಕಿರೀಟ ಧಾರಣಾ ಮಹೋತ್ಸವ

## ಮೇಲುಕೋಟೆ: ಸಹಸ್ರ ಕಳಶಾಭಿಷೇಕ

ಪ್ರಜಾವಾಣಿ ವಾರ್ತೆ

**ಮೇಲುಕೋಟೆ:** ಇದೇ 24ರಂದು ನಡೆಯುವ ವೈರಮುಡಿ ಕಿರೀಟ ಧಾರಣಾ ಮಹೋತ್ಸವಕ್ಕೆ ಮುನ್ನ, ಪ್ರಾಯಶ್ಚಿತ್ತಪೂರ್ವಕವಾಗಿ ಮೇಲುಕೋಟೆ ದೇವಾಲಯದಲ್ಲಿ ಚೆಲುವನಾರಾಯಣಸ್ವಾಮಿಗೆ ಶುಕ್ರವಾರ ಸಹಸ್ರ ಕಳಶಾಭಿಷೇಕ ನೆರವೇರಿತು.

ಕೋವಿಡ್ ಕಾರಣದಿಂದ ಕಳೆದ ವರ್ಷ ವೈರಮುಡಿ ಬ್ರಹ್ಮೋತ್ಸವ ರದ್ದಾಗಿತ್ತು. ಈ ಕಾರಣದಿಂದ ಈ ಬಾರಿಯ ಜಾತ್ರಾ ಮಹೋತ್ಸವಕ್ಕೂ ಮುನ್ನ ಅಮ್ಮನವರ ಸನ್ನಿಧಿಯ ಮುಂಭಾಗ 25 ಆರಾಧನೆಯೊಂದಿಗೆ 600 ದ್ರವ್ಯಗಳಿಂದ ರಾಮಾನುಜರು, ಆಳ್ವಾರರು ಮತ್ತು ಶ್ರೀದೇವಿ-ಭೂದೇವಿ ಸಮೇತ ವಿರಾಜಮಾನನಾದ ಉತ್ಸವಮೂರ್ತಿ ಚೆಲುವನಾರಾಯಣಸ್ವಾಮಿಗೆ ಸಾವಿರ ಕುಂಭಗಳಿಂದ ಅಭಿಷೇಕ ನಡೆಯಿತು.

ವೇದಘೋಷದೊಂದಿಗೆ ನೆರವೇರಿದ ಈ ಕಾರ್ಯಕ್ರಮದಲ್ಲಿ ಯದುಗಿರಿ ಯತಿರಾಜ ಶ್ರೀಮನ್ನಾರಾಯಣ ಜೀಯರ್, ಮೈಸೂರು ರಾಜಗುರು ಪರಕಾಲಶ್ರೀ, ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಭಾಗಿಯಾದರು.

25 ಬಗೆಯ ಪುಷ್ಪಗಳು, ಒಣಹಣ್ಣುಗಳಿಂದ, ಹಲವು ಬಗೆಯ ಅಲಂಕೃತ ಕಿರೀಟಗಳಿಂದ ಉತ್ಸವಮೂರ್ತಿಯನ್ನು ಅಲಂಕರಿಸಲಾಗಿತ್ತು. ಮೂಲಮೂರ್ತಿ ಚೆಲ್ವತಿರುನಾರಾಯಣಸ್ವಾಮಿಗೆ, ಕುಂಭದ ತೀರ್ಥಪ್ರೋಕ್ಷಣೆ ಮಾಡಿ ಅಭಿಷೇಕದ ವಿಧಿವಿಧಾನ ನೆರವೇರಿಸಲಾಯಿತು. ಸಂಪತ್ಕುಮಾರ ಭಟ್ಟರ್ ಈ ಕಾರ್ಯ ನೆರವೇರಿಸಿಕೊಟ್ಟರು.

ದೇವಾಲಯದ ಆಡಳಿತಾಧಿಕಾರಿ, ಪಾಂಡವಪುರ ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ತಹಶೀಲ್ದಾರ್ ಪ್ರಮೋದ್ ಪಾಟೀಲ, ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ಮಂಗಳಮ್ಮ ಸಮಕ್ಷಮದಲ್ಲಿ ಬೆಳಿಗ್ಗೆ 8 ಗಂಟೆಗೆ ಕಳಶಾರಾಧನೆಯೊಂದಿಗೆ ಆರಂಭವಾದ ಮಹಾಭಿಷೇಕ ಸಂಜೆವರೆಗೂ ನೆರವೇರಿತು.

ಮೂಲಮೂರ್ತಿಯ ದರ್ಶನಕ್ಕೂ ಭಕ್ತರು ಮತ್ತು ಗಣ್ಯರಿಗೆ ಅವಕಾಶ ಮಾಡಿಕೊಡಲಾಗಿತ್ತು.



ಮೇಲುಕೋಟೆ ಚೆಲುವನಾರಾಯಣಸ್ವಾಮಿಗೆ ಸಹಸ್ರಕಳಶಾಭಿಷೇಕ ವೇಳೆ ನಡೆದ ಪ್ರಥಮ ಅಲಂಕಾರ

## ಚಿತ್ರಾವಳಿ



1. ನಗರದ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಶುಕ್ರವಾರ 'ಅಸಮಾನತೆ, ಕೃಷಿಕರ ಸಮಸ್ಯೆ ಮತ್ತು ಹೊಸ ಕೃಷಿ ಕಾನೂನುಗಳು' ಕುರಿತ ಉಪನ್ಯಾಸ ಕಾರ್ಯಕ್ರಮದ ವೇಳೆ ಪತ್ರಕರ್ತ ಪಿ. ಸಾಯಿನಾಥ್ ಅವರನ್ನು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಮತ್ತು ಪ್ರಧಾನ ಕಾರ್ಯದರ್ಶಿ ಎ.ಎನ್. ಗಂಗಾಧರಯ್ಯ ಸನ್ಮಾನಿಸಿದರು.
2. ವಿಧಾನಸೌಧದ ಎರಡನೇ ಮಹಡಿಯಲ್ಲಿ ಗೋಡೆಗಳಿಗೆ ಕಾರ್ಮಿಕರು ಶುಕ್ರವಾರ ಸುಣ್ಣ–ಬಣ್ಣ ಬಳಿದರು.
3. ದೇವಾಂಗ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯಿಸಿ ಕೊಪ್ಪಳದಲ್ಲಿ ದೇವಾಂಗ ಸಮಾಜದವರು ಶುಕ್ರವಾರ ಪ್ರತಿಭಟನಾ ಜಾಥಾ ನಡೆಸಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು
4. ನಗರದಲ್ಲಿ ನಡೆದ ರಾಜ್ಯಮಟ್ಟದ 'ಎಸ್‌ವಿ ಫಿದಾ ಕರ್ನಾಟಕ ಐಕಾನ್–2021' ಸೌಂದರ್ಯ ಸ್ಪರ್ಧೆಯ ವಿಭಾಗಗಳಲ್ಲಿ (ಎಡದಿಂದ) ಭಾವನಾ ಭಾಗವತ್ (ಮಿಸ್ ಕರ್ನಾಟಕ), ಧೀರಜ್ ಎಸ್.ಗೌಡ (ಮಿಸ್ಟರ್ ಕರ್ನಾಟಕ) ಹಾಗೂ ಎ.ನಮ್ರತಾ (ಮಿಸಸ್ ಕರ್ನಾಟಕ) ವಿಜೇತರಾದರು. –ಪ್ರಜಾವಾಣಿ ಚಿತ್ರಗಳು

# 'ತುಳುವಿಗೆ ಅಧಿಕೃತ ರಾಜ್ಯ ಭಾಷೆ ಮನ್ನಣೆ–ವಿಚಾರಗೋಷ್ಠಿ'

ಬೆಂಗಳೂರು: 'ತುಳು ಭಾಷೆಯನ್ನು ಅಧಿಕೃತ ರಾಜ್ಯ ಭಾಷೆಯನ್ನಾಗಿ ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸುವುದು ಹೇಗೆ' ಎಂಬ ವಿಷಯದ ಕುರಿತು ವಿಚಾರಗೋಷ್ಠಿ ಏರ್ಪಡಿಸಲಾಗಿದೆ. 'ಇದೇ 7ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 2018, 2019 ಹಾಗೂ 2020ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನ ಪ್ರದಾನ ಸಮಾರಂಭದ ವೇಳೆಯೇ ಗೋಷ್ಠಿ ಜರುಗಲಿದೆ' ಎಂದು ಅಕಾಡೆಮಿಯ ಅಧ್ಯಕ್ಷ ದಯಾನಂದ ಜಿ. ಕತ್ತಲ್‌ಸಾರ್ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಬೆಳಿಗ್ಗೆ 9ರಿಂದ ರಾತ್ರಿ 8 ಗಂಟೆವರೆಗೆ ಸಮಾರಂಭ ಆಯೋಜಿಸಲಾಗಿದೆ. ಸಂಜೆ 4ರಿಂದ 6ರವರೆಗೆ ಗೌರವ ಪ್ರಶಸ್ತಿ ಪ್ರದಾನ ನಡೆಯಲಿದೆ. ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಕೊರೊನಾ ಹಾಗೂ ಇನ್ನಿತರ ಕಾರಣಗಳಿಂದ ಹಿಂದಿನ ಮೂರು ವರ್ಷ ಪ್ರಶಸ್ತಿ ಪ್ರದಾನ ಸಮಾರಂಭ ನಡೆದಿರಲಿಲ್ಲ. ಈ ಬಾರಿ ಒಂದೇ ವೇದಿಕೆಯಲ್ಲಿ ಎಲ್ಲರನ್ನೂ ಸತ್ಕರಿಸಲು ತೀರ್ಮಾನಿಸಿದ್ದೇವೆ' ಎಂದರು.

ಶಾಸಕ ರಮೇಶ ಜಾರಕಿಹೊಳಿ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ವಿಚಾರ

# ಮಹಿಳಾ ಆಯೋಗದಿಂದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದಲ್ಲಿ ಮಹಿಳೆಯ ರಕ್ಷಣೆಗೆ ಕರ್ನಾಟಕ ರಕ್ಷಣಾ ವೇದಿಕೆ ಮನವಿ ಸಲ್ಲಿಸಿದ್ದು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

'ಸಂತ್ರಸ್ತ ಮಹಿಳೆಗೆ ರಕ್ಷಣೆ ಒದಗಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ಮನವಿ ಮಾಡಿಕೊಂಡಿದೆ. ಈ ಪ್ರಕರಣವನ್ನು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮಹಿಳೆಯು ಆಯೋಗಕ್ಕೆ ಯಾವುದೇ ದೂರನ್ನು ಈವರೆಗೂ ನೀಡಿಲ್ಲ. ಆದ್ದರಿಂದ ನಾವು ವಿಚಾರಣೆ ನಡೆಸಲು ಸಾಧ್ಯವಿಲ್ಲ. ಮಹಿಳೆಗೆ ಜೀವ ಬೆದರಿಕೆ ಇದೆ ಎಂಬ ಕಾರಣಕ್ಕೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಹೆಚ್ಚು ಮಾಹಿತಿ ನಮ್ಮನ್ನು ಸಂಪರ್ಕಿಸಿದಲ್ಲಿ ಅವರಿಗೆ ಅಗತ್ಯ ರಕ್ಷಣೆ ಒದಗಿಸಲಾಗುತ್ತದೆ. ಪೊಲೀಸರು ತನಿಖಾ ವರದಿ ನೀಡಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ತಿಳಿಸಿದರು.

'ನೆರವು ಬಯಸಿ ಆಯೋಗದ ಕದ ತಟ್ಟುವ ಅಸಹಾಯಕ, ಸಂತ್ರಸ್ತ ಮಹಿಳೆಯರಿಗೆ ಅಗತ್ಯ ನೆರವನ್ನು ಒದಗಿಸಲು ಬದ್ಧವಾಗಿದ್ದೇವೆ. ಅವರ ಗೌಪ್ಯತೆಯನ್ನು ಕೂಡ ಕಾಯ್ದುಕೊಂಡು, ಅಗತ್ಯ ರಕ್ಷಣೆಯನ್ನು ನೀಡುತ್ತೇವೆ. ಈ ಬಗ್ಗೆ ಸಂದೇಹ ಬೇಡ' ಎಂದು ಹೇಳಿದರು.

## ₹5 ಕೋಟಿ ಡೀಲ್: ಎಚ್‌ಡಿಕೆ

ಮೈಸೂರು: 'ನನಗೆ ಲಭಿಸಿರುವ ಮಾಹಿತಿ ಪ್ರಕಾರ, ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದಲ್ಲಿ ₹5 ಕೋಟಿ ಡೀಲ್ ನಡೆದಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಶುಕ್ರವಾರ ಇಲ್ಲಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ಪ್ರಕರಣದ ಹಿಂದೆ ದೊಡ್ಡವರ ಕೈವಾಡವಿದೆ. ದೂರು ನೀಡಿದ ವ್ಯಕ್ತಿಯನ್ನು ಬಂಧಿಸಬೇಕು. ಸಿ.ಡಿ. ಮುಂದಿಟ್ಟು ಮೂರು ತಿಂಗಳ ಹಿಂದೆಯೇ ದುಡ್ಡಿನ ವ್ಯವಹಾರ ನಡೆದಿದೆ. ಆತನ ಬಳಿ ಸಿ.ಡಿ ಎಲ್ಲಿಂದ ಬಂತು ಎಂಬುದರ ಬಗ್ಗೆ ತನಿಖೆಯಾಗಬೇಕು' ಎಂದು ಆಗ್ರಹಿಸಿದರು. 'ರಾಜಕಾರಣಿಗಳ ಸಿ.ಡಿ ಇದೆ ಎಂದು ಹೇಳಿ ಬ್ಲ್ಯಾಕ್‌ಮೇಲ್ ಮಾಡುವವರನ್ನು ಒದ್ದು ಒಳಗೆ ಹಾಕಿ, ಏರೋಪ್ಲೇನ್ ಹತ್ತಿಸಬೇಕು. ಅವರ ಬಳಿ ಇರುವ ಸಿ.ಡಿ.ಗಳನ್ನು ವಶಪಡಿಸಿಕೊಂಡು, ಸರ್ಕಾರವೇ ಅವುಗಳನ್ನು ಬಿಡುಗಡೆ ಮಾಡಬೇಕು' ಎಂದ ಅವರು, ಸಿ.ಡಿ ಹೆಸರಿನಲ್ಲಿ ನಡೆಯುವ ಬ್ಲ್ಯಾಕ್‌ಮೇಲ್‌ಗಳು ನಿಲ್ಲಬೇಕು ಎಂಬುದೇ ತಮ್ಮ ಉದ್ದೇಶ ಎಂದು ಹೇಳಿದರು.

# ವಿಚಾರಣೆಗೆ ದೂರುದಾರ

ಬೆಂಗಳೂರು: ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದ ವಿಚಾರಣೆಗೆ ಭದ್ರತೆ ನಡುವೆಯೇ ಗುರುವಾರ ಗೈರಾಗಿದ್ದ ದೂರುದಾರ ದಿನೇಶ್ ಕಲ್ಲಹಳ್ಳಿ, ಶುಕ್ರವಾರ ಮಧ್ಯಾಹ್ನ ದಿಢೀರ್ ಆಗಿ ಪೊಲೀಸರ ಎದುರು ವಿಚಾರಣೆಗೆ ಹಾಜರಾದರು.

ಕಬ್ಬನ್ ಪಾರ್ಕ್ ಠಾಣೆಗೆ ಬಂದ ದಿನೇಶ್, ಇನ್‌ಸ್ಪೆಕ್ಟರ್, ಎಸಿಪಿ ಹಾಗೂ ಡಿಸಿಪಿ ಅವರ ಎದುರು ವಿಚಾರಣೆ ಎದುರಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಸಿದ್ಧಪಡಿಸಿಟ್ಟುಕೊಂಡಿದ್ದ ಪ್ರಶ್ನೆಗಳಿಗೆ ಉತ್ತರಿಸಿದರು.

'ರಮೇಶ ಜಾರಕಿಹೊಳಿ ಅವರು ಕೆಲಸದ ಆಮಿಷವೊಡ್ಡಿ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡು ದೌರ್ಜನ್ಯ ಎಸಗಿದ್ದಾರೆ. ಜೀವ ಬೆದರಿಕೆ ಹಾಕಿದ್ದಾರೆ' ಎಂಬುದಾಗಿ ಆರೋಪಿಸಿದ್ದ ದೂರಿನಲ್ಲಿರುವ ಗೊಂದಲಗಳ ಬಗ್ಗೆಯೂ ಪೊಲೀಸರು ಸ್ಪಷ್ಟನೆ ಪಡೆದುಕೊಂಡರು.

'ಸಿ.ಡಿ ಕೊಟ್ಟಿದ್ದು ಯಾರು? ಸಂತ್ರಸ್ತೆ ಹೆಸರು ಹಾಗೂ ವಿಳಾಸ ಗೊತ್ತಾ? ಪ್ರಕರಣದ ಬಗ್ಗೆ ಸಿ.ಡಿ ಬಿಟ್ಟು ಬೇರೆ ಯಾವುದೇ ಪುರಾವೆಗಳು ನಿಮ್ಮ ಬಳಿ ಇವೆಯೇ' ಎಂಬುದು ಸೇರಿದಂತೆ ಹಲವು ಪ್ರಶ್ನೆಗಳಿಗೆ ದಿನೇಶ್ ಉತ್ತರ ನೀಡಿರುವುದಾಗಿ ಗೊತ್ತಾಗಿದೆ.

ವಿಚಾರಣೆ ಮುಗಿಸಿ ಠಾಣೆಯಿಂದ ಹೊರಬಂದು ಸುದ್ದಿಗಾರರ ಜೊತೆ ಮಾತನಾಡಿದ ದಿನೇಶ್, 'ನನ್ನಲ್ಲಿರುವ ಸಂಪೂರ್ಣ ಮಾಹಿತಿಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ. ಪೊಲೀಸರು ದೂರು ದಾಖಲಿಸಿಕೊಳ್ಳುವ ವಿಶ್ವಾಸವಿದೆ' ಎಂದರು. 'ಯುವತಿ ನನ್ನ ಸಂಪರ್ಕದಲ್ಲಿ ಇಲ್ಲ. ಅವರ ಕುಟುಂಬಸ್ಥರೊಬ್ಬರು ನನ್ನನ್ನು ಭೇಟಿಯಾಗಿದ್ದರು. ಯುವತಿ ಪರ ಹೋರಾಟ ಮಾಡಿ ಎಂದಿದ್ದಕ್ಕೆ ಪೊಲೀಸರಿಗೆ ದೂರು ನೀಡಿದ್ದೇನೆ. ನನ್ನ ದೂರಿಗೆ ಬದ್ಧನಾಗಿದ್ದೇನೆ.' ಎಂದರು.


## ಮಂಗಳೂರು ಮಹಾನಗರ ಪಾಲಿಕೆ

DMA/2020-21/WORK INDENT NO.110146/Call-2 ದಿನಾಂಕ: 04.03.2021

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು ಸಾಮಾನ್ಯ ಅನುದಾನದಡಿಯಲ್ಲಿ ನಿರ್ವಹಿಸುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.03.2021 ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ https://eproc.karnataka.gov.in ಹೆಚ್ಚಿನ ವಿವರವನ್ನು ಪಡೆಯಬಹುದು.

| ಕ್ರ.ಸಂ. | ಕೆಲಸದ ಹೆಸರು | ಅಂದಾಜು ಮೊತ್ತ ರೂ.ಗಳಲ್ಲಿ |
|---|---|---|
| 1 | ಮ.ನ.ಪಾ. ವ್ಯಾಪ್ತಿಯ ಒಳಚರಂಡಿ ವಿಭಾಗದ ಮಾಧವ ನಗರ ಒಳಚರಂಡಿ ತ್ಯಾಜ್ಯ ಸಂಸ್ಕರಣ ಘಟಕ, 3 ಸಂಖ್ಯೆ ವೆಟ್‌ವೆಲ್ ಹಾಗೂ 1 ಸಂಖ್ಯೆಯ ಇಂಟರ್ ಮೀಡಿಯೇಟ್ ಪಂಪಿಂಗ್ ಸ್ಟೇಷನ್ ನಿರ್ವಹಣೆ ಕಾಮಗಾರಿ. (Indent No.110146/Call-2) | 99,68,000.00 |

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

DIPR/ADM/MCA/1017/20-21 dt: 5.3.2021

## ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಉಗ್ರಾಣ ಮತ್ತು ಖರೀದಿ ಇಲಾಖೆ, ಶಾಂತಿನಗರ, ಬೆಂಗಳೂರು – 560027.
ದೂರವಾಣಿ: 080–22952009, ಫ್ಯಾಕ್ಸ್:080–22952545
ಇ–ಮೇಲ್: cosp@mybmtc.com ವೆಬ್‌ಸೈಟ್: www.bmtc.in

ಸಂಖ್ಯೆ:ಬೆಮಸಾಸಂ/ಉ&ಖ/ಕೇಂಉ/ಎಸ್.ಎಸ್.ಡಿ/2020–21 ದಿನಾಂಕ: 05–03–2021

ಇ–ಹರಾಜು ಪ್ರಕಟಣೆ

ಬೆಂ.ಮ.ಸಾರಿಗೆ ಸಂಸ್ಥೆಯ ಸ್ಕ್ರಾಪ್ ವಾಹನಗಳನ್ನು ಮೆ॥ ಎಂ.ಎಸ್.ಟಿ.ಸಿ (ಭಾರತ ಸರ್ಕಾರದ ಅಧೀನ ಸಂಸ್ಥೆ) ಇವರು ನಡೆಸುವ ಇ–ಹರಾಜು ಪ್ರಕ್ರಿಯೆಯ ಮೂಲಕ ಮಾರಾಟ ಮಾಡಲಾಗುವುದು.

ಸ್ಕ್ರಾಪ್ ವಾಹನಗಳ ಇ–ಹರಾಜು ಜರಗುವ ದಿನಾಂಕ: 17–03–2021 & 18.03.2021.

ಆಸಕ್ತಿಯುಳ್ಳ ಬಿಡ್ಡುದಾರರು ವೆಬ್ ಸೈಟ್: www.mstcecommerce.com ಗೆ ಲಾಗ್‌ಆನ್ ಆಗಬಹುದು ಮತ್ತು ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು.

ಕಛೇರಿ ವಿಳಾಸ: ಮೆ॥ ಎಂ.ಎಸ್.ಟಿ.ಸಿ ಲಿಮಿಟೆಡ್, ನಂ 19/5, 19/6 ಮೂರನೆ ಮಹಡಿ, ಕರೀಮ್ ಟವರ್, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560052. ದೂರವಾಣಿ ಸಂಖ್ಯೆ: 080–22260054/ 22266417/ 22287356, ಫ್ಯಾಕ್ಸ್ 080–22256365.
ಬೆಂ.ಮ.ಸಾರಿಗೆ ಸಂಸ್ಥೆ ರವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760991157 / 7760991159 ಅಥವಾ 080–22952009.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ, ಬೆಂ.ಮ.ಸಾ.ಸಂಸ್ಥೆ, ಬೆಂಗಳೂರು.

ವಾಸಾಸಂಇ/ಬೆಂ.ನ/ಅಡ್ವರ್ಟೋರ್/3017/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪೂರ್ವವಲಯ, ಆರ್.ಟಿ. ನಗರ, ಬೆಂಗಳೂರು–560 032. ದೂರವಾಣಿ: 080–23530771, 23430305,
ಇ–ಮೇಲ್: ddccl_eastzone@rediffmail.com | eastzonertnagar@gmail.com

ಸಂಖ್ಯೆ: ನಕೇಗ್ರಂ/ಪೂವ/ಆ.ವಿ./ಗ್ರಮ.ಪೀ.ಖ./78/2020–21 ದಿನಾಂಕ: 04.03.2021

ಸಂಕ್ಷಿಪ್ತ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪೂರ್ವವಲಯ ಕಛೇರಿ ಹಾಗೂ ಇದರ ವ್ಯಾಪ್ತಿಯಲ್ಲಿ ಬರುವ ಶಾಖಾ ಗ್ರಂಥಾಲಯಗಳಿಗೆ ಮರದ ಹಾಗೂ ಕಬ್ಬಿಣದ ಪೀಠೋಪಕರಣಗಳನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದೆ. ಸದರಿ ಕೆಲಸದಲ್ಲಿ ಆಸಕ್ತಿಯುಳ್ಳ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಬಹುದು.

ಇ–ಟೆಂಡರ್ ವಿವರಣೆ: 1) ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 2,00,00,000/– (ರೂಪಾಯಿ ಎರಡು ನೂರು ಲಕ್ಷಗಳು ಮಾತ್ರ) 2) ಪೂರ್ವಬಾವಿ ಸಭೆ ದಿನಾಂಕ: 06.03.2021. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 12.03.2021 ಸಾಯಂಕಾಲ 17:30 ಗಂಟೆಯವರೆಗೆ. 4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ: 15.03.2021 ಬೆಳಿಗ್ಗೆ 11:30 ಗಂಟೆಗೆ. 5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ: 17.03.2021 ಬೆಳಿಗ್ಗೆ 11:30 ಗಂಟೆಗೆ. 6) ಟೆಂಡರ್‌ನಲ್ಲಿ ಭಾಗವಹಿಸುವವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಾಗಿನ್ ಆಗಿ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ವಿಳಾಸ https://eproc.karnataka.gov.inನಲ್ಲಿ ಪಡೆದುಕೊಳ್ಳಬಹುದ ಅಥವಾ ಸಹಾಯವಾಣಿ: 080–25501212, 25501216/227ನ್ನು ಸಂಪರ್ಕಿಸಬಹುದು.

ಸಹಿ/– ಉಪನಿರ್ದೇಶಕರು (ಪ್ರ), ನಗರ ಕೇಂದ್ರ ಗ್ರಂಥಾಲಯ, ಪೂರ್ವವಲಯ, ಬೆಂಗಳೂರು

ವಾಸಾಸಂಇ/ಬೆಂ.ನ/ಜಿಎ/3013/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಶಿವಮೊಗ್ಗ
## ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ

No: EE/RWSS/Dvn/SMG/AE-II/JJM/E-Proc/2020-21/2818 Date : 04.03.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯ 2020–21ನೇ ಸಾಲಿನ ಸಾಗರ ತಾಲ್ಲೂಕುಗಳ ಈ ಕೆಳಕಂಡ ಕಾಮಗಾರಿಗಳ ಪ್ರತಿ ಮನೆ ಮನೆಗಳಿಗೆ ಕಾರ್ಯಾತ್ಮಕ ನಲ್ಲಿ ನೀರು ಸಂಪರ್ಕ ಕಲ್ಪಿಸಲು ಜಲ ಜೀವನ್ ಮಿಷನ್ ಅಡಿ ಟೆಂಡರ್‌ಅನ್ನು ಕಾಮಗಾರಿ ಅನುಮೋದಿತ ಐಟಂವಾರು ಟೆಂಡರ್‌ನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ 2020–2025 ರವರೆಗೆ ನೋಂದಾಯಿಸಿರುವ (3ನೇ ದರ್ಜೆ ಮತ್ತು ಮೇಲ್ಪಟ್ಟು) ಅಧಿಕೃತ ಗುತ್ತಿಗೆದಾರರಿಂದ STANDARD TENDER DOCUMENTS For E-Procurement of work KW -2 & 3 ರಲ್ಲಿ ಆಹ್ವಾನಿಸಲಾಗಿದೆ. ಫಾರಂ ಫೀ & ಇ.ಎಂ.ಡಿ.ಯನ್ನು ಇ–ಪೇಮೆಂಟ್‌ನಲ್ಲಿ ಸಲ್ಲಿಸುವವರು ಕ್ರೆಡಿಟ್/ಡೆಬಿಟ್‌ಕಾರ್ಡ್ ಮುಖಾಂತರ ಸಲ್ಲಿಸಬಹುದು.

1. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್ ಲೈನ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಸಲ್ಲಿಸಲುಕೊನೆಯ ದಿನಾಂಕ: 18.03.2021 ಸಾಯಂಕಾಲ 17.30 ರವರೆಗೆ. 2. ತಾಂತ್ರಿಕ ತೆರೆಯುವ ದಿನಾಂಕ ಹಾಗೂ: 20.03.2021, 11.30 ಗಂಟೆ. 3. ಆರ್ಥಿಕ ಬಿಡ್ ತೆರೆಯುವ ದಿನಾಂಕ: 22.03.2021, 11.30ಗಂಟೆ. 4. ಕಾಲಾವಧಿ: 60 ದಿನಗಳು.

ಮೇಲ್ಕಾಣಿಸಿದ ದಿನವೇನಾದರು ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನೊಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖಾ ವೆಬ್‌ಸೈಟ್ www.eproc.karnataka.gov.in ರಲ್ಲಿ ಪಡೆಯಬಹುದು.

| SI.NO | Indent No |
|---|---|
| 1 | RWSSD/2020- 21/WS/WORK_INDENT32876 |
| 2 | RWSSD/2020- 21/WS/WORK_INDENT32877 |
| ST CONTRACTORS ONLY | |
| 3 | RWSSD/2020- 21/WS/WORK_INDENT32888 |
| 4 | RWSSD/2020- 21/WS/WORK_INDENT32893 |
| SC CONTRACTORS ONLY | |
| 5 | RWSSD/2020- 21/WS/WORK_INDENT32846 |
| 6 | RWSSD/2020- 21/WS/WORK_INDENT32848 |

ವಾ.ಸಾ.ಸಂ.ಇ./ಶಿ/ನಂ.39–03 ಝೇಂಕಾರ್/2020–21

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ&ನೈ ವಿಭಾಗ, ಶಿವಮೊಗ್ಗ

## ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ.

No.EE/MID/VJP/AE-2/SCP-M&R/TND/2020-21/3472 Date: 04.03.2021

-: ಅಲ್ಪಾವಧಿ ಟೆಂಡರ್ ಪ್ರಕಟಣೆ :-

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ.

ಎಸ್.ಸಿ.ಪಿ. ಕಾಮಗಾರಿಗಳು: ಒಟ್ಟು 1 ಕಾಮಗಾರಿ, ಅಂದಾಜು ಮೊತ್ತ ರೂ. 14.83 ಲಕ್ಷ, ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.

ಎಂ & ಆರ್ ಕಾಮಗಾರಿಗಳು: ಒಟ್ಟು 10 ಕಾಮಗಾರಿಗಳು / ಪ್ಯಾಕೇಜ್ ಕಾಮಗಾರಿಗಳು, ಅಂದಾಜು ಮೊತ್ತ ರೂ. 306.69 ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ https://eproc.karnataka.gov.in/eportal/index.seam ನಲ್ಲಿ ಲಾಗಿನ್ ಆಗಿ ದಿನಾಂಕ: 12.03.2021 ರಿಂದ Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಇ.ಎಂ.ಡಿ ಹಾಗೂ ಟೆಂಡರ್ ಶುಲ್ಕದೊಂದಿಗೆ (ವೆಬ್‌ಸೈಟ್‌ನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ್ ಮಾತ್ರ) "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ https://eproc.karnataka.gov.in/eportal/index.seam ನಲ್ಲಿ ಲಾಗಿನ್ ಆಗಿ ದಿನಾಂಕ: 20.03.2021ರ 16:00 ಗಂಟೆವರೆಗೆ ಸ್ವೀಕರಿಸಲಾಗುವುದು. ಟೆಂಡರ್ ಭರಿಸುವಾಗ "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್‌ನಲ್ಲಿ ನೀಡಿರುವ ಇ.ಎಂ.ಡಿ. ಘೋಷಣಾ ಪತ್ರವನ್ನು ತಪ್ಪದೇ ಭರ್ತಿ ಮಾಡಿ ಸಲ್ಲಿಸುವುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ:19.03.2021ರ 16:00 ಗಂಟೆವರೆಗೆ ವಿಭಾಗ ಕಛೇರಿಯಲ್ಲಿ (ಫೋನ್:08352–277148) ಅಥವಾ "ಇ–ಪ್ರೊಕ್ಯೂರ್‌ಮೆಂಟ್" ಹೆಲ್ಪ್‌ಡೆಸ್ಕ್‌ನಿಂದ (ಫೋನ್: 080–25501216 ಮತ್ತು 080–25501227) ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ.

ವಾಸಾಸಂಇ/ವಿಜಯಪುರ/598/ಜಿಎ/2020–21

## ಕರ್ನಾಟಕ ಸರ್ಕಾರ
## ಜಿಲ್ಲಾ ಪಂಚಾಯತ್, ಕೊಪ್ಪಳ
## ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2020–21/2194 ದಿನಾಂಕ:04.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ತೃತೀಯ ಕರೆ & ನಾಲ್ಕನೇಯ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2020–21 ನೇ ಸಾಲಿನ ಜಲ ಜೀವನ್ ಮಿಶನ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ತೃತೀಯ ಹಾಗೂ ನಾಲ್ಕನೇಯ ಕರೆಯ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ:05/03/2021 ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ : ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : 6 ತಿಂಗಳು (ಮಳೆಗಾಲ ಸೇರಿದಂತೆ). ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : 10/03/2021 ಸಮಯ 11:00 ಗಂಟೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : 15/03/2021 ಸಮಯ 16:00 ಗಂಟೆ. ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : 17/03/2021 ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/– (ಎಸ್.ಎಂ.ಸುಭಾನ್ ಸಾಹೇಬ್)
ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/444/ಎಂಸಿಎ/2020–21

## ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910/835 Email: purchase@kmf.coop

ಕಹಾಮ/ಖರೀದಿ/ ಟೆಂಡರ್–291/2020–21 ದಿನಾಂಕ: 05.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳಿ ಘಟಕವಾದ ಮದರ್ ಡೇರಿಯಿಂದ ಬೆಂಗಳೂರು ಮಹಾನಗರದ ಮಾರುಕಟ್ಟೆ ಪ್ರದೇಶದ ವ್ಯಾಪ್ತಿಯಲ್ಲಿ ಹಾಗೂ ವಿವಿಧ ಬಡಾವಣೆಗಳಲ್ಲಿರುವ ಮದರ್ ಡೇರಿಯ ರೀಟೇಲ್/ಏಜೆನ್ಸಿದಾರರಿಗೆ ಬೆಳಗಿನ ಜಾವ ಮತ್ತು ಮಧ್ಯಾಹ್ನದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಮತ್ತು ವಿತರಿಸುವ ಸಲುವಾಗಿ 2010 ಮತ್ತು ನಂತರದ ವರ್ಷದ ಮಾಡಲ್ (ಇನ್ಸುಲೇಟೆಡ್ ಕಂಟೈನರ್‌ವುಳ್ಳ) ವಾಹನಗಳ ಅವಶ್ಯಕತೆ ಇದ್ದು ವಾಹನಗಳ ಮಾಲೀಕರುಗಳಿಂದ ಎರಡು ವರ್ಷಗಳ ಅವಧಿಗೆ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ದಾಸ್ತಾವೇಜುಗಳನ್ನು eProcurement website http://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

| ಕ್ರ ಸಂ | ಸೇವೆಯ ವಿವರ | ಸಾಮರ್ಥ್ಯ | ವಾಹನಗಳ ಸಂಖ್ಯೆ | ಇ.ಎಮ್.ಡಿ ಪ್ರತಿ ವಾಹನಕ್ಕೆ |
|---|---|---|---|---|
| 01 | ಸ್ಯಾಚೆಟ್ ಮಾರ್ಗಗಳು | 3 ಟನ್ | 16 | 25,000/– |
| 02 | ಸ್ಯಾಚೆಟ್ ಮಾರ್ಗಗಳು | 6 ಟನ್ | 12 | 50,000/– |

| | |
|---|---|
| ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ | 06.03.2021 ರಿಂದ |
| ಟೆಂಡರ್ ಪೂರ್ವಭಾವಿ ಸಭೆ ದಿನಾಂಕ | 09.03.2021 ರಂದು ಪೂರ್ವಾಹ್ನ 11.00 ಗಂಟೆಗೆ |
| ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ | 20.03.2021 ರಂದು ಸಂಜೆ 5.00 ಗಂಟೆಯವರೆಗೆ |
| ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ | 22.03.2021 ರಂದು ಪೂರ್ವಾಹ್ನ 11.00 ಗಂಟೆಗೆ |
| ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ | ತಾಂತ್ರಿಕ ಟೆಂಡರ್ ಪರಿಶೀಲನೆಯ ನಂತರ |

ಆಸಕ್ತಿಯುಳ್ಳ ಟೆಂಡರ್‌ದಾರರು ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಇ.ಎಂ.ಡಿ ಪಾವತಿಸಿ ಭಾಗವಹಿಸಬಹುದಾಗಿದೆ.

ವಿ.ಸೂ:
1. ಪ್ರತಿ ಮಾರ್ಗಕ್ಕೆ ವಾಹನ ದಾಖಲಾತಿಗಳ ಪ್ರತಿಗಳನ್ನು ಪ್ರತ್ಯೇಕವಾಗಿ ತಾಂತ್ರಿಕ ಟೆಂಡರ್ ಜೊತೆಯಲ್ಲಿ ಲಗತ್ತಿಸಿ ಹಾಕುವುದು, ಒಂದು ವೇಳೆ ಒಂದೇ ವಾಹನದ ದಾಖಲಾತಿಗಳು ಇತರೆ ಮಾರ್ಗಗಳಲ್ಲಿ ಹಾಕಿರುವುದು ಕಂಡುಬಂದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
2. ತಾಂತ್ರಿಕ ಟೆಂಡರ್‌ನ್ನು ತೆರೆದ ನಂತರ ವಾಹನದ ಮೂಲ ದಾಖಲಾತಿಗಳನ್ನು ಹಾಗೂ ವಾಹನ ಪೂರ್ಣ ತಪಾಸಣೆಯ ವರದಿಯನ್ನು ಆಧರಿಸಿ, ವಾಣಿಜ್ಯ ಟೆಂಡರ್ ತೆರೆಯಲಾಗುವುದು.

ಕರ್ನಾಟಕ ಹಾಲು ಮಹಾಮಂಡಳಿ ಪರವಾಗಿ ಸಹಿ/– ನಿರ್ದೇಶಕರು (ಖರೀದಿ)

## ಕರ್ನಾಟಕ ಸರ್ಕಾರ
## ಕರ್ನಾಟಕ ಅರಣ್ಯ ಇಲಾಖೆ
## ಹಳಿಯಾಳ ವಿಭಾಗ, ಹಳಿಯಾಳ

As per Government Notification No. FEE./168/FDP2017, Bangalore Dated: 14.11.2017, As per Government Notification No. FEE./168/FDP 2017, Bangalore Dated: 27.02.2018, As per APCCF(FRM) Bengaluru Office letter No. APCCF(FRM)/B3/Sales /CR-03/2019-20 Date: 25.02.2021

ಕರ್ನಾಟಕ ಅರಣ್ಯ ಕೋಡ್, 1976 ಅನುಬಂಧ XVIII A (ನಿಯಮ 64)

ನಂ. B5/DTS/FEBRUARY-2021/MSTC/CR-/2020-21 ದಿನಾಂಕ: 25.02.2021

ಹಳಿಯಾಳ ವಿಭಾಗ, ಹಳಿಯಾಳದ ದಾಂಡೇಲಿ, ಭಗವತಿ, ಜಗಲ್‌ಬೇಟ್ ಮತ್ತು ಕುಳ್ಗಿ ಡಿಪೋದಲ್ಲಿರುವ ಟಿಂಬರ್ ಮತ್ತು ಇತರ ಅರಣ್ಯ ಉತ್ಪನ್ನಗಳ ಇ–ಟೆಂಡರ್ ಕಂ ಹರಾಜಿನ ವಿವರವಾದ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ಹಳಿಯಾಳ ವಿಭಾಗ, ಹಳಿಯಾಳದ ದಾಂಡೇಲಿ, ಭಗವತಿ, ಜಗಲ್‌ಬೇಟ್ ಮತ್ತು ಕುಳ್ಗಿ ಸರ್ಕಾರಿ ಟಿಂಬರ್ ಡಿಪೋಗಳಲ್ಲಿ ಈ ಕೆಳಗಿನಂತೆ ವಿವರಿಸಲಾಗಿರುವ ಮರದ ಜಾತಿ ಮತ್ತು ಪ್ರಮಾಣದ ಟಿಂಬರ್ ಮತ್ತು ಇತರ ಅರಣ್ಯ ಉತ್ಪನ್ನಗಳ ಸಂಗ್ರಹವನ್ನು ದಿನಾಂಕ: 25.03.2021 & 26.03.2021(All Four Sessions) ರಂದು ದಾಂಡೇಲಿ ಡಿಪೋದಲ್ಲಿ, ದಿನಾಂಕ: 29.03.2021(I & II Session) ರಂದು ಭಗವತಿ ಡಿಪೋದಲ್ಲಿ, ದಿನಾಂಕ: 29.03.2021 (III & IV Session) ರವರೆಗೆ ಜಗಲ್‌ಬೇಟ್ ಡಿಪೋದಲ್ಲಿ ಮತ್ತು ದಿನಾಂಕ: 30.03.2021 (I & II Session) ರಂದು ಕುಳ್ಗಿ ಡಿಪೋದಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಸಂಪೂರ್ಣ ಸಂಗ್ರಹದ ಬಿಡ್ಡಿಂಗ್ ಮುಗಿಯುವವರೆಗೆ ಒಂದು ಅಥವಾ ಹೆಚ್ಚಿನ ಅವಧಿಗಳಲ್ಲಿ ಇ–ಟೆಂಡರ್ ಹಾಗೂ ಹರಾಜು ಮುಖೇನ ಮಾರಾಟ ಮಾಡಲಾಗುತ್ತದೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹಳಿಯಾಳ ವಿಭಾಗ, ಹಳಿಯಾಳ ಇವರು ಮಾರಾಟ ನಿರ್ವಹಣಾಧಿಕಾರಿಯಾಗಿರುತ್ತಾರೆ. ಸಾಮಾನ್ಯ ಹಾಗೂ ಷರತ್ತುಗಳನ್ನು ಒಳಗೊಂಡಿರುತ್ತದೆ.

ಯಾವುದೇ ಸ್ಪಷ್ಟೀಕರಣಕ್ಕಾಗಿ, ನೀವು ಸಂಪರ್ಕಿಸಹುದು:
Assistant Conservator of Forests, Govt. Timber Depot, Dandeli: acfgtd.dandeli@gmail.com Ph: 08284-231237, Range Forest Officer, Virnoli (Kulgi Depot): virnolirfo96@gmail.com Ph: 08284-258050, Range Forest Officer, Bhagawati: bjtirfo97@gmail.com Ph: 08284-267818, Range Forest Officer, Jagalbet: rfojbt93@gmail.com Ph: 08383-252767, Deputy Conservator of Forests, Haliyal: dcfhalyal@gmail.com Ph: 08284-220128
Sri. Damodhar, Manager, MSTC Limited Bangalore Mob No: 9841002253

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹಳಿಯಾಳ ವಿಭಾಗ, ಹಳಿಯಾಳ

DIPR/ADK/MCA/802/20-21 Dt.4.3.2021

## ಸುವರ್ಣ ಕರ್ನಾಟಕ
## ನಗರ ಸಭೆ ಕಾರ್ಯಾಲಯ, ಬಾಗಲಕೋಟ–587103
## CITY MUNICIPAL COUNCIL, BAGALKOT - 587103

E-mail ID: itstaff_ulb_bagalkote@yahoo.co.in Post Box No.19 STD: 08354 :200335
Website:www.bagalkotecity.mrc.gov.in FAX No: 235732, Help Line: 235792
ಕರ್ನಾಟಕ ರಾಜ್ಯ State: Karanataka ಜಿಲ್ಲಾ: ಬಾಗಲಕೋಟ District : Bagalkot

ಕ್ರ.ಸಂ:ನಸಬಾ/ಆಶಾ/ಘವನಿ/ಟೆಂಡರ/2020–21/1423 ದಿನಾಂಕ : 04–03–2021

E-Proceurement portal
-: ಟೆಂಡರ್ ಪ್ರಕಟಣೆ e-protal: https://eproc.karnataka.gov.in :-

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟೆ ನಗರಸಭೆ ಸನ್ 2021–22 ಸಾಲಿಗೆ ಆರೋಗ್ಯ ಶಾಖೆಯ ಘನತ್ಯಾಜ್ಯ ವಸ್ತು ನಿರ್ವಹಣೆ ಹೊರಗುತ್ತಿಗೆ ಆಧಾರದ ಮೇಲೆ ಮಾನವಸಂಪನ್ಮೂಲ ಪಡೆಯುವ ಕುರಿತು E-Procurement portal ದಲ್ಲಿ ನೋಂದಾಯಿತ ಗುತ್ತಿಗೆದಾರರು ಹಾಗೂ ಪೂರೈಕೆದಾರರಿಂದ E-Procurement ಟೆಂಡರ ಪದ್ಧತಿಯಲ್ಲಿ Standard Tender Documents KC-8 ರಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್ ಆಧಾರದ ಮೇಲೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ http://eproc.karnataka. gov.in ನಲ್ಲಿ ಸಂಪರ್ಕಿಸಬಹುದಾಗಿದೆ.

1.DMA/2020-21/OW/WORK_ IND.114346
2.DMA/2020-21/OW/WORK_ IND.114348
3.DMA/2020-21/OW/WORK_ IND.114349

ಆಸಕ್ತಿಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರನ್ನು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕವಾಗಿ ಆನ್ ಲೈನ್ ದಲ್ಲಿ E-Proceurement portal ಮುಖಾಂತರ ಮಾತ್ರ ಸಲ್ಲಿಸುವದು ಮತ್ತು ಇತರ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಆನ್ ಲೈನ್ ದಲ್ಲಿ ಸಲ್ಲಿಸುವುದುದು. ಹಾಗೂ ಇ.ಎಂ.ಡಿ. ಮತ್ತು ಟೆಂಡರ ಪ್ರೊಸೆಸಿಂಗ ಫೀ ಯನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ http://eproc. karnataka.gov.in ದಲ್ಲಿ ಅಥವಾ ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

1.Last date of submission of Technical and Financial bid seperately through E-procurement portal before : 03-04-2021 At 16.30 hours.
2. Opening of Technical bid is on : 06-04-2021 at 11.30 AM.
3. Opening of Financial bid is on : 07-04-2021 at 11.30 AM.

ಸಹಿ/– ಪೌರಾಯುಕ್ತರು, ನಗರಸಭೆ,ಬಾಗಲಕೋಟ

ವಾ.ಸಾ.ಇ/ಬಾಗಲಕೋಟೆ/568/2020–21/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
## ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.

ಸಂ:ಕಾಇಂ/ವಿಜನನಿ/ಎಯೋವಿ.3/ಅ/ಟೆಂ.ಪ್ರ/2020–21/1250 ದಿನಾಂಕ:04.03.2021

ಶೇಕಡಾವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 02/2020–21 ದಿ :04.03.2021 (ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ ಇವರು ವಿಶ್ವೇಶ್ವರಯ್ಯ ಜಲ ನೀರಾವರಿ ನಿಗಮ ನಯಮಿತ/ಕರ್ನಾಟಕ ನೀರಾವರಿ ನಿಗಮದಡಿಯಲ್ಲಿ ನೊಂದಾಯಿತ ಅರ್ಹ 1ನೇ ವರ್ಗ ಗುತ್ತಿಗೆದಾರರುಗಳಿಂದ/ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ ಗುತ್ತಿಗೆದಾರರುಗಳಿಂದ, ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ವ್ಯಾಪ್ತಿಗೆ ಒಳಪಡುವ ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು ಮತ್ತು ಅರಸೀಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಸ್ತೆ ಅಭಿವೃದ್ಧಿ ಪ್ಯಾಕೇಜ್ ಕಾಮಗಾರಿಗೆ ಶೇಕಡಾವಾರು ಅಲ್ಪಾವಧಿ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಸಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ.5187.00ಲಕ್ಷಗಳು. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಇ.ಎಮ್.ಡಿ/ಷರತ್ತುಗಳು/ಬಿಡ್ಡುದಾರರ ಅರ್ಹತೆ/ಪೂರ್ವಭಾವಿ ಸಭೆಯ ವಿವರ/ ಟೆಂಡರ್ ನಿಭಂಧನೆಗಳು/ಪೂರ್ವ ಅರ್ಹತಾ ಮಾನದಂಡ ಹಾಗೂ ಇತರೆ ವಿವರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕ:12.03.2021 ರಿಂದ ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಹೆಚ್ಚಿನ ವಿವರಗಳಿಗೆ ಇ–ಸಂಗ್ರಹಣಾ ಕೋಶ, ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, http://www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ನೀಡಿರುವ ಕಛೇರಿಯ ವಿಳಾಸದಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಪಡೆಯ ಬಹುದಾಗಿದೆ. ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ, ದೂರವಾಣಿ ಸಂಖ್ಯೆ:08174233111 e-mail: eeypd3ask@gmail.com

ಸಹಿ/– ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3 ಅರಸೀಕೆರೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## NIMCET-2021
NIT MCA COMMON ENTRANCE TEST
Coordinating Institute : NIT Raipur

Admission to Master of Computer Applications (MCA) Programme in 11 participating NITs of the country is made through 'NIMCET only. The campus placement opportunities of MCA students in these NITs are normally at par with B.Tech. (CSE / IT) students.

For details on eligibility criteria, online application form and information brochure, please visit the official website i.e. https:\\www.nimcet.in.

The Application fee is Rs.1250/- for SC/ST/PwD and Rs.2500/- for UR/OBC candidates.
Date of opening of online application: 11th March 2021
Date of closing of online application: 7th April 2021

Date of Examination: 23 May 2021 (Sunday)

ASA Secretary, NIMCET-2021

## ಕರ್ನಾಟಕ ಸರ್ಕಾರ
## ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್.ಟಿ ಸಂಖ್ಯೆ 16/2020–21 ದಿನಾಂಕ 04–03–2021

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಮೈಸೂರು ಜಿಲ್ಲೆಯ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ ಹುಣಸೂರು ,ಪಿರಿಯಾಪಟ್ಟಣ ಹಾಗೂ ಕೆ.ಆರ್.ನಗರ ತಾಲ್ಲೂಕಿನಲ್ಲಿ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕಾಮಗಾರಿಗಳನ್ನು "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೊಂದಾಯಿತ ಸಮುಚಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ " ನಲ್ಲಿನ ಷರತ್ತುಗಳಿಗನುಗುಣವಾಗಿ ಒಟ್ಟು–10 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ದಾಖಲಾತಿಗಳನ್ನು ದಿನಾಂಕ: 04.03.2021 ರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ ರೂ.195.26 ಲಕ್ಷಗಳು ಮತ್ತು ಕನಿಷ್ಠ ರೂ.6.16 ಲಕ್ಷಗಳು (Regarding EMD the contractor has to submit the Declaration Form) ಗುತ್ತಿಗೆ ಕಾಲಾವಧಿ ಗರಿಷ್ಠ 6–ತಿಂಗಳು ಮತ್ತು ಕನಿಷ್ಠ 1–ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: 12.03.2021 (16.00 ಗಂಟೆಯವರೆಗೆ) ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ವಿಶೇಷ ವಿಭಾಗ, ಹುಣಸೂರು

DIPR/DDMYS/MCA/1104/2020-21

## ಮಂಗಳೂರು ಮಹಾನಗರ ಪಾಲಿಕೆ

ಮಂಮಪಾ/ಇಇ/ಟೆಂಡರ್–69/2020–21 ದಿನಾಂಕ: 04.03.2021

ಟೆಂಡರ್ ಪ್ರಕಟಣೆ

ಈ ಕೆಳಗೆ ಸೂಚಿಸಿರುವ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಕೆ.ಡಬ್ಲ್ಯೂ–1 ನಿಯಮದನ್ವಯ ಮ್ಯಾನುವಲ್ ಟೆಂಡರ್‌ನ್ನು ಮ.ನ.ಪಾ ಸ್ಥಳೀಯ ಸದಸ್ಯರ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ನಿರ್ವಹಿಸುವ ಬಗ್ಗೆ ಮಹಾನಗರಪಾಲಿಕಾ ನೊಂದಾಯಿತ ಗುತ್ತಿಗೆದಾರರಿಂದ ಐಟಂವಾರು ನೆಲೆಯಲ್ಲಿ ಮೊಹರಾದ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ನೋಂದಾವಣಿ ಹೊಂದಿರುವ ಬಗ್ಗೆ ದಾಖಲೆಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

| ಕ್ರ. ಸಂ. | ಕೆಲಸದ ಹೆಸರು | ಒಟ್ಟು ಕಾಮಗಾರಿಗಳು | ಟೆಂಡರ್ ಮೊತ್ತ |
|---|---|---|---|
| 1 | ಮಹಾನಗರಪಾಲಿಕಾ ವ್ಯಾಪ್ತಿಯಲ್ಲಿ ವಿಭಾಗ ನಂಬ್ರ 32, 34, 39ರ ವ್ಯಾಪ್ತಿಯಲ್ಲಿ ಒಳಚರಂಡಿ, ಚರಂಡಿ, ರಸ್ತೆ ಅಭಿವೃದ್ಧಿ, ನೀರು ಸರಬರಾಜು, ವಿದ್ಯುತ್ ಇತ್ಯಾದಿ ಕಾಮಗಾರಿಗಳು (ಕಾಮಗಾರಿಗಳ ಸ್ಥಳ ವಿವರ ಅಂದಾಜು ಮೊತ್ತ ಇ.ಎಂ.ಡಿ ಫಾರಂ ಬಗ್ಗೆ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರ ವಿಭಾಗದಲ್ಲಿ ಪಡೆಯಬಹುದು) | 33 | ರೂ. 75.00 ಲಕ್ಷಗಳು |

(1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಖಾಲಿ ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ: 21.04.2021 (2) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವ ಕೊನೆಯ ದಿನಾಂಕ: 22.04.2021 ಅಪರಾಹ್ನ 4.00 ಗಂಟೆವರೆಗೆ. ಸಾಧ್ಯವಾದರೆ ಅದೇ ದಿನ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಅಭಿಯಂತರರಲ್ಲಿ ಕಛೇರಿ ಸಮಯದಲ್ಲಿ ಕೇಳಿ ತಿಳಿಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು ಮಹಾನಗರಪಾಲಿಕೆ, ಮಂಗಳೂರು

DIPR/ADM/MCA/1010/20-21 dt: 5.3.2021

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
## ಇಂಜಿನಿಯರಿಂಗ್ ಘಟಕ

(ಪ್ರಧಾನ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಟರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560023)
(ದೂರವಾಣಿ ಸಂಖ್ಯೆ: 080–29557023 E-mail: cekhsdrp@gmail.com & cekhsdrp-hfws@karnataka.gov.in)

ಸಂಖ್ಯೆ: ಆಕುಕ/ಇಂ.ಘ/ಪ್ರ.ಇಂ/ತಾ.ಸ–2 /ಸ.ಇಂ–7/ಕ–ಜೆರಿಯಾಟ್ರಿಕ್ ವಾರ್ಡ್ & ಡಿ.ಇ.ಐ.ಸಿ/2020–2021/3777 ದಿನಾಂಕ:05.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

ಪ್ರಧಾನ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರುರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಒಂದನೇ ದರ್ಜೆ ಗುತ್ತಿಗೆದಾರರಿಂದ, ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ದ್ವಿ ಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement) ಮೂಲಕ 2 ಪ್ಯಾಕೇಜ್ ಕಾಮಗಾರಿಗಳಿಗೆ ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು–
1. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : 18.03.2021 ರಂದು 16.00 ಗಂಟೆಯವರೆಗೆ. 2. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : 20.03.2021 ರಂದು 16.00 ಗಂಟೆಗೆ.

ಸೂಚನೆ: ಸರ್ಕಾರದ ಆದೇಶದಂತೆ ಇ.ಎಂ.ಡಿ ಗೆ ಬದಲಾಗಿ ಇ.ಎಂ.ಡಿ. Declaration ನಮೂನೆಯನ್ನು ಟೆಂಡರ್‌ಗಳೊಂದಿಗೆ ಲಗತ್ತಿಸುವುದು.

ಟೆಂಡರ್‌ಗಳ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್‌ಗಳ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಕಾಮಗಾರಿಗಳ ವಿವರಗಳಿಗೆ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯುಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಪ್ರಧಾನ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

# ಕೋವಿಡ್ ಸಂಕಟ ಯುವತಿಯರ ಸದ್ದಿಲ್ಲದ ಹೋರಾಟ

ಸುಧಾ ಹೆಗಡೆ

ಕೋವಿಡ್-19 ಪಿಡುಗು ಶುರುವಾದಾಗ 29ರ ಹರೆಯದ ನರ್ಸ್ ಕಿರಣ್ಮಯಿಯ ಬದುಕು ಅಕ್ಷರಶಃ ಮೂರಾಬಟ್ಟೆಯಾಯಿತು. ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಆಕೆ ಹೆಚ್ಚಾಗಿ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ರೂಢಿ ಇಟ್ಟುಕೊಂಡಿದ್ದಳು. ಆರನೇ ತರಗತಿ ಓದುತ್ತಿದ್ದ ಮಗಳು ಶಾಲೆಗೆ ಹೋದಾಗ ಆರಾಮವಾಗಿ ನಿದ್ರೆ; ಸಂಜೆ ನಾಲ್ಕು ಗಂಟೆಗೆ ಹಿಂದಿರುಗುತ್ತಿದ್ದ ಮಗಳ ಜೊತೆ ಆಟ, ಹೋಂವರ್ಕ್, ನಂತರ ಬರುವ ಪತಿಯ ಜೊತೆ ಮಾತುಕತೆ.. ಒಂದಿಷ್ಟು ಹೊಂದಾಣಿಕೆಗಳ ಜೊತೆ ಜೀವನ ಆರಾಮವಾಗೇ ಸಾಗುತ್ತಿತ್ತು.

> ಜಗತ್ತಿನಾದ್ಯಂತ ಕಳೆದ ಒಂದು ವರ್ಷದಿಂದ ಸದ್ದಿಲ್ಲದ, ಆದರೆ ತೀವ್ರತರದ ಹೋರಾಟವೇ ನಡೆಯುತ್ತಿದೆ. ಪುಟ್ಟ ಮಕ್ಕಳ ತಾಯಂದಿರು ಉದ್ಯೋಗ ನಷ್ಟ, ಮಕ್ಕಳ ಪೋಷಣೆಯ ಹೊಣೆ, ಆರ್ಥಿಕ ಸಮಸ್ಯೆ ಎಲ್ಲದರ ಮಧ್ಯೆಯೂ ಉತ್ತಮ ಬದುಕು ಕಟ್ಟಿಕೊಳ್ಳಲು ಹೋರಾಟ ನಡೆಸಿದ್ದಾರೆ. ಈ ಬಾರಿಯ ಮಹಿಳಾ ದಿನಾಚರಣೆಯ ಧ್ಯೇಯವಾಕ್ಯ (ವಿಶ್ವಸಂಸ್ಥೆ) 'ನಾಯಕತ್ವದಲ್ಲಿ ಮಹಿಳೆಯರು: ಕೋವಿಡ್-19 ಇರುವ ಜಗತ್ತಿನಲ್ಲಿ ಸಮಾನ ಭವಿಷ್ಯವನ್ನು ಸಾಧಿಸುವುದು..' ಎಂಬುದನ್ನು ಅಕ್ಷರಶಃ ನಿಜ ಮಾಡಿದ್ದಾರೆ.

ಆದರೆ ಕೊರೊನಾ ಸೋಂಕಿನ ಪ್ರಕರಣಗಳು ಪತ್ತೆಯಾಗಲು ಆರಂಭಿಸಿದಾಗ ಕಿರಣ್ಮಯಿಯನ್ನು ಕೋವಿಡ್ ವಾರ್ಡ್‌ಗೆ ವರ್ಗಾಯಿಸಲಾಯಿತು. ಮಗಳಿಗೂ ತನ್ನಿಂದ ಸೋಂಕು ತಗಲಿದರೆ ಎಂಬ ಭಯದಿಂದ ಕೆಲಸ ಬಿಟ್ಟು ಮನೆಯಲ್ಲೇ ಕುಳಿತ ಆಕೆ ಮಗಳ ಜೊತೆ ಆನ್‌ಲೈನ್ ತರಗತಿಗೆ ಕೂರಲಾರಂಭಿಸಿದಳು. ಆದರೆ ಒಂದೆರಡು ತಿಂಗಳಲ್ಲೇ ಇನ್ನೊಂದು ಆಘಾತ ಕಾದಿತ್ತು. ಖಾಸಗಿ ಕಂಪನಿಯಲ್ಲಿ ದುಡಿಯುತ್ತಿದ್ದ ಪತಿ ಕೆಲಸ ಕಳೆದುಕೊಂಡು ಮನೆಯಲ್ಲೇ ಕೂರಬೇಕಾಯಿತು. ಆದಾಯವಿಲ್ಲದ್ದರಿಂದ ಕುಟುಂಬ ಚಿಕ್ಕಮಗಳೂರಿನ ಪುಟ್ಟ ಊರಿನಲ್ಲಿರುವ ಪೋಷಕರ ಮನೆಗೆ ಸ್ಥಳಾಂತರಗೊಂಡಿದೆ. ಇರುವ ಸಣ್ಣ ಜಮೀನಿನಲ್ಲಿ ಕೃಷಿ ಕೆಲಸ ಮಾಡಿಕೊಂಡು ಹೇಗೋ ಬದುಕು ಸಾಗಿಸುತ್ತಿದೆ.

'ಈ ಕೋವಿಡ್ ಪಿಡುಗು ಬರುವುದಕ್ಕಿಂತ ಮುಂಚೆ ಆರ್ಥಿಕವಾಗಿ ಚೆನ್ನಾಗೇ ಇದ್ದೆವು. ಹೂಡಿಕೆಯನ್ನು ಕೂಡ ಮಾಡಿದ್ದೆ. ಆದರೆ ಈಗ ಎಲ್ಲವನ್ನೂ ಕಳೆದುಕೊಂಡು ಬರಿಗೈಯಲ್ಲಿ ಹಿಂದಿರುಗಬೇಕಾಯಿತು' ಎನ್ನುವುದು ಕಿರಣ್ಮಯಿ ಅಳಲು.

ಕೋವಿಡ್ ಎಂಬುದು ಯಾರನ್ನೂ, ಯಾವ ಪ್ರದೇಶವನ್ನೂ ಸುಮ್ಮನೆ ಬಿಟ್ಟಿಲ್ಲ. ಆದರೆ ಮಿಲೇನಿಯಲ್ ಯುವತಿ (25- 35 ವರ್ಷ ವಯಸ್ಸಿನವರು)ಯರ ಮೇಲೆ ತೀವ್ರತರದ ಪರಿಣಾಮ ಬೀರಿದೆ. ಚಿಕ್ಕ ಮಕ್ಕಳ ಪಾಲನೆ, ಉದ್ಯೋಗ ನಷ್ಟ.. ಇನ್ನಿಲ್ಲದಂತೆ ಕಂಗೆಡಿಸಿದೆ.

### ಮಾನಸಿಕ ಒತ್ತಡ

ತಮ್ಮ ಪರಿಸ್ಥಿತಿ ಬಗ್ಗೆ ಮಾತನಾಡಿದವರಲ್ಲಿ ಹೆಚ್ಚಿನವರು ನಾಳೆಗಳ ಬಗ್ಗೆ ಆಶಾಭಾವನೆ ಇಟ್ಟುಕೊಂಡವರು. ಈ ಪರಿಸ್ಥಿತಿ ತಾತ್ಕಾಲಿಕ. ಕುಟುಂಬದವರು, ಸಂಬಂಧಿಕರ ಬೆಂಬಲದಿಂದ ಹೇಗೋ ಜಯಿಸಿ ಮೊದಲಿನ ಬದುಕಿಗೆ ಹಿಂದಿರುಗಬಹುದು ಎಂಬ ಸಕಾರಾತ್ಮಕ ಧೋರಣೆ ಇಟ್ಟುಕೊಂಡವರು. ಮನದೊಳಗೆ ಆತಂಕ, ಒತ್ತಡ ಇದ್ದರೂ ಕೂಡ ಮಕ್ಕಳ ಪಾಲನೆ, ಉದ್ಯೋಗ ನಿರ್ವಹಣೆಯ ವಿಷಯದಲ್ಲಿ ಒಂದಿಷ್ಟು ಹೊಂದಾಣಿಕೆ ಮಾಡಿಕೊಳ್ಳಬಹುದು ಎಂಬ ಧೋರಣೆ ಅವರದು.

ಸಿಂಗಲ್ ತಾಯಂದಿರಲ್ಲಿ ಮಾನಸಿಕ ತೊಳಲಾಟವಿದೆ. ಹಣಕಾಸಿನ ಸಮಸ್ಯೆ ಬಗ್ಗೆ ಚಿಂತೆಯಿದೆ. ಒಳಗೊಳಗೇ ಇದ್ದ ಒತ್ತಡ ದೀರ್ಘಕಾಲದಲ್ಲಿ ಆತಂಕ, ಖಿನ್ನತೆಯಂತಹ ಮಾನಸಿಕ ಸಮಸ್ಯೆಯಾಗಿ ಕಾಡಬಹುದು ಎಂಬ ಆತಂಕ ತಜ್ಞರದ್ದು.

### ಬದುಕು ಸಂಭಾಳಿಸಲು ಹೋರಾಟ

ಹೌದು, ಲಸಿಕೆ ನೀಡುವ ಕಾರ್ಯಕ್ರಮ ಆರಂಭವಾಗಿದೆ. ಕೆಲವೆಡೆ ಕೋವಿಡ್‌ನ ಎರಡನೇ ಅಲೆ ಶುರುವಾದರೂ ಹಲವೆಡೆ ಕೊರೊನಾ ಅಬ್ಬರ ಕಮ್ಮಿಯಾಗಿದೆ. ಆರ್ಥಿಕತೆಯೂ ಚೇತರಿಸಿಕೊಳ್ಳುತ್ತಿದೆ. ಆದರೆ ಸುಮಾರು 10 ತಿಂಗಳಲ್ಲಿ ಇಂತಹ ಯುವತಿಯರು ಅನುಭವಿಸಿದ ನೋವು, ಎದುರಿಸಿದ ಏರಿಳಿತಗಳು ಎಷ್ಟಿವೆಯೆಂದರೆ ಈಗಲೂ ಕೂಡ ಬದುಕನ್ನು ಸಂಭಾಳಿಸಲು ಹೋರಾಟ ನಡೆಸುವಂತಹ ಪರಿಸ್ಥಿತಿ ಇದೆ.

ಶಾಲೆಗಳು ಮುಚ್ಚಿವೆ; ಡೇ ಕೇರ್‌ಗಳು ಕೆಲವು ಕಡೆ ತೆರೆದರೂ ಅಲ್ಲಿ ಮಕ್ಕಳನ್ನು ಬಿಡಲು ಆತಂಕ. ಹೀಗಾಗಿ ಮಕ್ಕಳ ಪೋಷಣೆಯ ಹೊಣೆ ತಾಯಂದಿರ ಹೆಗಲಿಗೆ ಪೂರ್ಣ ಪ್ರಮಾಣದಲ್ಲಿ ಬಿದ್ದಿದೆ. ವೈರಸ್ ಸೋಂಕು ಶುರುವಾಗುವುದಕ್ಕಿಂತ ಮೊದಲೂ ಕೂಡ ಮಕ್ಕಳ ಪಾಲನೆ-ಪೋಷಣೆ, ಮನೆಗೆಲಸದ ಜವಾಬ್ದಾರಿ ಮಹಿಳೆಯರದ್ದೇ ಆಗಿತ್ತು. ಆದರೆ ಇಂತಹ ಕೆಲಸಗಳಿಗಾಗಿ ಈಗ ಹೆಚ್ಚಿನ ಸಮಯ ಮೀಸಲಿಡಬೇಕಾದ ಅನಿವಾರ್ಯತೆ ಇದೆ.

ಉದ್ಯೋಗಸ್ಥ ತಾಯಂದಿರ ಮೇಲೆ ಈ ಪಿಡುಗು ತೀವ್ರ ಪರಿಣಾಮ ಬೀರಿದೆ. ಕಳೆದ ಒಂದು ವರ್ಷದಲ್ಲಿ ದೇಶದಲ್ಲಿ ಉದ್ಯೋಗ ತ್ಯಜಿಸಿದ ಇಂಥವರ ಸಂಖ್ಯೆ 20 ಲಕ್ಷವನ್ನೂ ದಾಟಿದೆ ಎನ್ನುತ್ತದೆ ಸಮೀಕ್ಷೆ. ಸಾಮಾನ್ಯವಾಗಿ 40 ವರ್ಷವೆಂದರೆ ಉದ್ಯೋಗದಲ್ಲಿ ಬಡ್ತಿ, ಉನ್ನತ ಸ್ಥಾನಮಾನ, ಹೆಚ್ಚಿನ ವೇತನ ಎಲ್ಲವನ್ನೂ ಪಡೆಯುವ ವಯಸ್ಸು. ಅಂತಹ ಸಂದರ್ಭದಲ್ಲಿ ಅನಿವಾರ್ಯ ಕಾರಣಗಳನ್ನು ಬಿಟ್ಟರೆ ಉದ್ಯೋಗವನ್ನು ತ್ಯಜಿಸುವ ನಿರ್ಧಾರ ಮಾಡುವವರು ಕಡಿಮೆ. ಆದರೆ ಈ ಪಿಡುಗು ಎನ್ನುವುದು ಮಿಲೇನಿಯಲ್ ತಾಯಂದಿರನ್ನು ಎಂತಹ ಪರಿಸ್ಥಿತಿಗೆ ದೂಡಿದೆಯೆಂದರೆ ಉದ್ಯೋಗ ಕ್ಷೇತ್ರದಲ್ಲಿ ಯುವತಿಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಕೆಲವು ದಶಕಗಳಷ್ಟು ಹಿಂದಿನ ಮಟ್ಟಕ್ಕೆ ಕುಸಿದಿದೆ ಎಂದು ವಿಶ್ವಸಂಸ್ಥೆಯ ವರದಿ ಕೂಡ ಹೇಳಿದೆ.

### ಹೊಂದಾಣಿಕೆ

ಹಾಗಂತ ಎಲ್ಲಾ ಯುವತಿಯರೂ ಪರಿಸ್ಥಿತಿಯ ಬಗ್ಗೆ ಆತಂಕಪಡುತ್ತ ಕೂತಿಲ್ಲ. ತಮ್ಮ ಕುಟುಂಬವನ್ನು ಸಂಭಾಳಿಸಲು ಕೆಲವು ಹೊಂದಾಣಿಕೆಗಳನ್ನು ಮಾಡಿಕೊಂಡು ಬದುಕನ್ನು ಹಳಿಗೆ ತರಲು ಹೋರಾಡುತ್ತಿದ್ದಾರೆ.

ನೀತಾ ಸಾಗರ್ ಅಂಥವರಲ್ಲೊಬ್ಬರು. ಇಬ್ಬರು ಪುಟ್ಟ ಮಕ್ಕಳಿರುವ ಆಕೆ ಉದ್ಯೋಗದ ಮೂಲಕ ಅಸ್ಮಿತೆಯನ್ನು ಕಂಡುಕೊಳ್ಳಲು ಟಿವಿ ಚಾನೆಲ್ ಒಂದರಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದರು. ಕೋವಿಡ್ ಶುರುವಾದ ನಂತರ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಉದ್ಯೋಗ ತ್ಯಜಿಸಿದರೂ, ಯೂಟ್ಯೂಬ್ ಚಾನೆಲ್‌ನಲ್ಲಿ ಅಡುಗೆ, ಕಸೂತಿಯ ವಿಡಿಯೊ ಮಾಡಿ ಸಾಕಷ್ಟು ಸಂಪಾದಿಸುತ್ತಿದ್ದಾರೆ. ಪತಿಯೂ ಕೆಲಸದಲ್ಲಿರುವುದರಿಂದ ಅಷ್ಟೊಂದು ಸಮಸ್ಯೆಯಾಗಿಲ್ಲ ಎನ್ನುವ ನೀತಾ, ಕುಟುಂಬದ ನಿರ್ವಹಣೆ ವೆಚ್ಚವನ್ನು ಕಡಿಮೆ ಮಾಡಿರುವುದಾಗಿ ಒಪ್ಪಿಕೊಳ್ಳುತ್ತಾರೆ.

ಆದರೆ ಬಹುತೇಕ ತಾಯಂದಿರು ಮಾನಸಿಕ ಒತ್ತಡ ಅನುಭವಿಸಿದ್ದಂತೂ ನಿಜ. ಕೆಲಸ ಕಳೆದುಕೊಂಡ ಅಥವಾ ಕಳೆದುಕೊಳ್ಳುವ ಭೀತಿ, ಮಕ್ಕಳ ಪಾಲನೆಯ ಜೊತೆ ಅವರ ಸುರಕ್ಷತೆಯ ಆತಂಕ, ಪೋಷಕರಿದ್ದರೆ ಅವರ ಆರೋಗ್ಯದ ನಿರ್ವಹಣೆಯ ಹೊಣೆ... ಇವೆಲ್ಲವೂ ಕಂಗಡಿಸಿಬಿಟ್ಟಿವೆ.

ಕೋವಿಡ್ ಶುರುವಾಗುವುದಕ್ಕಿಂತ ಮೊದಲೂ ಎಷ್ಟೋ ಮಂದಿ ತಾಯಂದಿರು ಮಕ್ಕಳ ಸಲುವಾಗಿ ಉದ್ಯೋಗ ಬಿಟ್ಟು ಮನೆಯಲ್ಲೇ ಇರುವುದು ಸಾಮಾನ್ಯ ಎಂಬಂತಾಗಿತ್ತು. 'ಮಗಳು ಹುಟ್ಟಿದ ಮೇಲೆ ಎರಡು ವರ್ಷ ಬ್ರೇಕ್ ತಗೊಂಡೆ. ಪುನಃ ಒಂದೆರಡು ವರ್ಷ ಕೆಲಸ ಮಾಡಿದೆ. ನಂತರ ಅನಾಥ ಗಂಡು ಮಗುವನ್ನು ದತ್ತು ತಗೊಂಡೆ. ಅವನು ಬಹಳ ತುಂಟ. ಹೀಗಾಗಿ ನಾಲ್ಕೈದು ವರ್ಷಗಳಿಂದ ಎಲ್ಲೂ ಕೆಲಸ ಮಾಡುತ್ತಿಲ್ಲ' ಎನ್ನುವ ಇಂಗ್ಲಿಷ್ ದೈನಿಕವೊಂದರಲ್ಲಿ ಉಪ ಸಂಪಾದಕಿಯಾಗಿದ್ದ ಜಯಾ, 'ಮಕ್ಕಳನ್ನು ಶಾಲೆಗೆ, ಷಾಪಿಂಗ್‌ಗೆ, ಪಾರ್ಕ್‌ಗೆ, ಪ್ರವಾಸಕ್ಕೆಂದು ಕರೆದೊಯ್ಯುವುದರಲ್ಲಿ ಖುಷಿಯಿತ್ತು. ಅವರ ಬಗ್ಗೆ ಕನಸು ಕಾಣುವುದರಲ್ಲೂ ಸುಖವಿತ್ತು. ಆದರೆ ಈಗ ಭಯವಾಗುತ್ತಿದೆ. ಮಕ್ಕಳ ಸುರಕ್ಷತೆ, ಅವರ ಭವಿಷ್ಯದ ಬಗ್ಗೆ ಯೋಚಿಸಿದರೆ ತಲೆ ಕೆಟ್ಟು ಹೋಗಬಹುದು' ಎನ್ನುತ್ತಾರೆ.

ಕೊನೆಯಲ್ಲೊಂದು ಆಶಾಭಾವನೆ- ಈ ಕೋವಿಡ್ ಎಂಬುದು ಬಹಳ ದಿನಗಳ ಕಾಲ ಕಾಡಲಾರದು. ಶೀಘ್ರ ಎಲ್ಲವೂ ಸರಿಹೋಗಬಹುದು. ❖

# ಬಿಂದಿ ಅಲರ್ಜಿ

## ಪರಿಹಾರಕ್ಕಿದೆ ಸರಳ ಮನೆಮದ್ದು

ಡಾ. ಬ್ರಹ್ಮಾನಂದ ನಾಯಕ

**ಹೆಣ್ಣುಮಕ್ಕಳು** ಎಷ್ಟೇ ಮೇಕಪ್ ಮಾಡಿಕೊಂಡರೂ ಕೊನೆಯಲ್ಲಿ ಅವರ ಅಂದ ಹೆಚ್ಚಿಸುವುದು ಹಣೆಯ ಮೇಲೆ ಕಂಗೊಳಿಸುವ ಬಿಂದಿ. ಹಿಂದೆಲ್ಲಾ ಪುಡಿ ಅಥವಾ ದ್ರವ ರೂಪದ ಕುಂಕುಮವನ್ನು ಬಿಂದಿ ರೂಪದಲ್ಲಿ ಇರಿಸಿಕೊಳ್ಳುತ್ತಿದ್ದರು. ಆದರೆ ಕಾಲ ಬದಲಾದಂತೆ ಬಿಂದಿಯ ಜಾಗವನ್ನು ಬಗೆ ಬಗೆ ವಿನ್ಯಾಸದ, ಬಣ್ಣದ ಸ್ಟಿಕ್ಕರ್‌ಗಳು ಅಲಂಕರಿಸಿವೆ. ಆದರೆ ಇತ್ತೀಚೆಗೆ ಮಹಿಳೆಯರಲ್ಲಿ ಬಿಂದಿ ಇರಿಸುವ ಜಾಗದಲ್ಲಿ ತ್ವಚೆಯ ಅಲರ್ಜಿ ಸಮಸ್ಯೆ ಹೆಚ್ಚು ಕಾಡುತ್ತಿದೆ. ಬದಲಾದ ಬಿಂದಿಯ ಸ್ವರೂಪದ ಕಾರಣದಿಂದ ಆ ಜಾಗದಲ್ಲಿ ತುರಿಕೆ, ಅಲರ್ಜಿ ಹಾಗೂ ಕೆಂಪು ದದ್ದಿನಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಸ್ಟಿಕ್ಕರ್‌ಗೆ ಅಂಟಿಸುವ ಗಮ್ ಕೂಡ ಇದಕ್ಕೆ ಕಾರಣ ಎನ್ನಬಹುದು. ಜೊತೆಗೆ ಬಿಂದಿಗೆ ಬಳಸುವ ರಾಸಾಯನಿಕವೂ ಅಲರ್ಜಿಗೆ ಕಾರಣವಾಗಬಹುದು.

### ಬಿಂದಿ ಅಲರ್ಜಿಯ ಲಕ್ಷಣಗಳು

- ಪ್ರತಿದಿನ ಬಿಂದಿ ಬಳಸುವವರಲ್ಲಿ ಬಿಂದಿ ಇಡುವ ಜಾಗದಲ್ಲಿ ಅತಿಯಾದ ತುರಿಕೆ ಹಾಗೂ ಕಿರಿಕಿರಿ ಉಂಟಾಗುವುದು.
- ಬಿಳಿ ಮಚ್ಚೆಗಳು ಉಂಟಾಗುವುದು.
- ದದ್ದು ಉಂಟಾಗುವುದು ಅಥವಾ ಆ ಜಾಗ ಸಂಪೂರ್ಣವಾಗಿ ಕೆಂಪಾಗುವುದು.
- ಬಿಂದಿ ಇಟ್ಟ ಜಾಗದ ಸುತ್ತ ಚಿಕ್ಕ ಚಿಕ್ಕ ಕೆಂಪು ಗುಳ್ಳೆಗಳಾಗುವುದು.
- ನಿರಂತರ ತುರಿಕೆ.

### ಬಿಂದಿ ಅಲರ್ಜಿಗೆ ಮನೆಮದ್ದು

ಬಿಂದಿ ಅಲರ್ಜಿ ಕಾಣಿಸಿಕೊಂಡ ತಕ್ಷಣ ಬಿಂದಿ ಬಳಕೆಯನ್ನು ನಿಲ್ಲಿಸುವುದೇ ಮೊದಲ ಮದ್ದು. ಬಿಂದಿ ಬದಲು ಶುದ್ಧ ಕುಂಕುಮ ಇರಿಸಿಕೊಳ್ಳುವುದು ಸೂಕ್ತ. ಶುದ್ಧ ಕುಂಕುಮ ಔಷಧಿಯಾಗಿಯೂ ಕೆಲಸ ಮಾಡುತ್ತದೆ, ಅಲ್ಲದೇ ಇದರಿಂದ ಚರ್ಮಕ್ಕೆ ಯಾವುದೇ ಕಿರಿಕಿರಿ ಇರುವುದಿಲ್ಲ. ಬಿಂದಿಯಿಂದ ಉಂಟಾದ ಚರ್ಮದ ಕಿರಿಕಿರಿಯನ್ನು ತಪ್ಪಿಸಲು ಶುದ್ಧ ಕುಂಕುಮವನ್ನು ವ್ಯಾಸಲಿನ್‌ನೊಂದಿಗೆ ಬಳಸಬೇಕು. ಇದು ಬೇಗನೆ ಅಲರ್ಜಿಯನ್ನು ಕಡಿಮೆ ಮಾಡುತ್ತದೆ.

**ಜೇನುಮೇಣ ಹಾಗೂ ತುಳಸಿ:** ಜೇನುಮೇಣ ಹಾಗೂ ತುಳಸಿ ಮಿಶ್ರಣವನ್ನು ಹಚ್ಚಿಕೊಂಡು ಅದರ ಮೇಲೆ ಕುಂಕುಮ ಹಚ್ಚುವುದರಿಂದ ಚರ್ಮದ ಅಲರ್ಜಿಯನ್ನು ತಪ್ಪಿಸಬಹುದು. ಜೇನುಮೇಣ ಹಾಗೂ ತುಳಸಿರಸವನ್ನು ಮಿಶ್ರಣ ಮಾಡಿ ಹುಬ್ಬುಗಳ ನಡುವೆ ಹಚ್ಚಿ ಅದರ ಮೇಲೆ ಕುಂಕುಮ ಇರಿಸಿಕೊಳ್ಳಿ.

**ಅರಿಸಿನ ಮತ್ತು ಬೇವು:** ಒಂದು ಚಮಚ ಅರಿಸಿನ ಹಾಗೂ 1 ಚಮಚ ಬೇವಿನಸೊಪ್ಪನ್ನು 2 ಕಪ್ ನೀರಿಗೆ ಸೇರಿಸಿ 1ಕಪ್‌ಗೆ ಇಳಿಯುವಂತೆ ಚೆನ್ನಾಗಿ ಕುದಿಸಿ. ಆ ನೀರಿನಿಂದ ಅಲರ್ಜಿ ಉಂಟಾದ ಜಾಗವನ್ನು ದಿನಕ್ಕೆ 4 ರಿಂದ 5 ಬಾರಿ ತೊಳೆಯಿರಿ.

**ತೆಂಗಿನೆಣ್ಣೆ:** ಚರ್ಮದ ಅಲರ್ಜಿಗೆ ತೆಂಗಿನೆಣ್ಣೆ ಉತ್ತಮ ಮದ್ದು. ಅಲರ್ಜಿ ಉಂಟಾದ ಜಾಗದಲ್ಲಿ ತೆಂಗಿನೆಣ್ಣೆ ಹಚ್ಚಿ ಚೆನ್ನಾಗಿ ಮಸಾಜ್ ಮಾಡಿ.

**ಲೋಳೆಸರದ ತಿರುಳು:** ಲೋಳೆಸರದ ತಿರುಳು ಚರ್ಮ ಕೆಂಪಾಗುವುದು, ತುರಿಕೆ ಹಾಗೂ ಸುಟ್ಟ ಗಾಯದಂತಾಗುವ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಲೋಳೆಸರದ ಎಲೆಯಿಂದ ತಿರುಳನ್ನು ತೆಗೆದು ಅಲರ್ಜಿ ಉಂಟಾದ ಜಾಗದಲ್ಲಿ ಉಜ್ಜಿ.

**ತುಳಸಿ ಎಲೆಗಳು:** ತುಳಸಿಎಲೆಯನ್ನು ಜಜ್ಜಿ ಪೇಸ್ಟ್ ತಯಾರಿಸಿ ಅದಕ್ಕೆ ಉಪ್ಪು ಸೇರಿಸಿ. ಅಲರ್ಜಿ ಉಂಟಾದ ಜಾಗಕ್ಕೆ ಹಚ್ಚಿ 15 ನಿಮಿಷ ಹಾಗೇ ಬಿಟ್ಟು ತಣ್ಣೀರಿನಿಂದ ತೊಳೆಯಿರಿ. ಇದು ನೋವು ಕಡಿಮೆ ಮಾಡುವುದಲ್ಲದೇ ಅಲರ್ಜಿಯಿಂದ ಉಂಟಾದ ದದ್ದನ್ನು ನಿವಾರಿಸುತ್ತದೆ. ತುಳಸಿರಸ ತಲೆನೋವಿಗೂ ಮದ್ದು.

**ಅಡುಗೆಸೋಡಾ:** ಅಡುಗೆಸೋಡವನ್ನು ಹತ್ತಿಯಲ್ಲಿ ಅದ್ದಿ ಅಲರ್ಜಿ ಉಂಟಾದ ಜಾಗಕ್ಕೆ ಹಚ್ಚಿ 20 ನಿಮಿಷ ಬಿಟ್ಟು ತಣ್ಣೀರಿನಿಂದ ತೊಳೆಯಿರಿ.

**ಆ್ಯಪಲ್ ಸೈಡರ್ ವಿನೆಗರ್:** ಆ್ಯಪಲ್ ಸೈಡರ್ ವಿನೆಗರ್‌ನಲ್ಲಿ ಆಸಿಟಿಕ್ ಆಮ್ಲದ ಅಂಶ ಇರುವುದರಿಂದ ಇದು ಬೇಗನೆ ಗಾಯವನ್ನು ಗುಣ ಮಾಡುತ್ತದೆ.

**ನಿಂಬೆರಸ ಹಾಗೂ ಜೇನುತುಪ್ಪ:** ಜೇನುತುಪ್ಪ ಹಾಗೂ ನಿಂಬೆರಸ ಎರಡರಲ್ಲೂ ಅಲರ್ಜಿಯ ವಿರುದ್ಧ ಹೋರಾಡುವ ಗುಣವಿದೆ. ಒಂದು ಬೌಲ್‌ನಲ್ಲಿ ಜೇನುತುಪ್ಪ ಹಾಕಿ ಅದಕ್ಕೆ ನಿಂಬೆರಸ ಸೇರಿಸಿ ಮಿಶ್ರಣ ಮಾಡಿ ಬಿಂದಿ ಅಲರ್ಜಿಯಾದ ಜಾಗಕ್ಕೆ ಹಚ್ಚಿ 15 ನಿಮಿಷ ಬಿಟ್ಟು ನೀರಿನಿಂದ ತೊಳೆಯಿರಿ.

(ಲೇಖಕ: ಆಯುರ್ವೇದ ವೈದ್ಯರು ಬೆಂಗಳೂರು)

### ಬಿಂದಿ ಅಲರ್ಜಿ ನಿವಾರಣೆಗೆ ಆಯುರ್ವೇದ ತೈಲಗಳು

**ದುರ್ವಾದಿ ತೈಲ:** ಇದು ತುರಿಕೆಯನ್ನು ಕಡಿಮೆ ಮಾಡುತ್ತದೆ. ಜೊತೆಗೆ ಗಾಯವನ್ನು ಬೇಗನೆ ಗುಣವಾಗುವಂತೆ ಮಾಡುತ್ತದೆ. ಸ್ನಾನ ಮಾಡಲು ಒಂದು ಗಂಟೆ ಇರುವಾಗ ಇದನ್ನು ಹಚ್ಚಿ ಅರ್ಧ ಗಂಟೆ ಬಿಟ್ಟು ತೊಳೆಯಿರಿ.
ನಂತರ ಸ್ನಾನ ಮಾಡಿ.

**ಜಾತ್ಯಾದಿ ತೈಲ:** ಇದು ಬೇಗನೆ ಗಾಯ ವಾಸಿ ಮಾಡುವುದಲ್ಲದೇ ನೋವನ್ನೂ ಶಮನ ಮಾಡುತ್ತದೆ. ಜೊತೆಗೆ ತುರಿಕೆ, ಕಿರಿಕಿರಿಯನ್ನು ನಿಲ್ಲಿಸುತ್ತದೆ.

**ಕಾರಂಜ ತೈಲ:** ಇದು ಅಲರ್ಜಿಯಿಂದ ಉಂಟಾಗುವ ಉರಿಯೂತ ಮತ್ತು ಇತರ ರೋಗಲಕ್ಷಣಗಳನ್ನು ನಿವಾರಿಸುತ್ತದೆ. ವೈದ್ಯರ ಸಲಹೆಯಂತೆ
ಕಾರಂಜ ತೈಲವನ್ನು ಬಳಸಬೇಕಾಗುತ್ತದೆ.

**ಬೇವಿನೆಣ್ಣೆ:** ಇದು ನಂಜುನಿರೋಧಕ ಮತ್ತು ನೋವು ನಿವಾರಕ ಗುಣಲಕ್ಷಣಗಳನ್ನು ಹೊಂದಿರುವ ನೈಸರ್ಗಿಕ ಮಾಯಿಶ್ಚರೈಸರ್ ಆಗಿದೆ. ನಂಜು ಉಂಟಾದ ಜಾಗದಲ್ಲಿ ಕೆಲವು ಹನಿ ಬೇವಿನೆಣ್ಣೆಯನ್ನು ಹಚ್ಚಿ. ಅಲರ್ಜಿಯಿಂದ ಉಂಟಾದ ತುರಿಕೆಯನ್ನೂ ಇದು ಕಡಿಮೆ ಮಾಡುತ್ತದೆ.

# ಸಲಿಂಗಕಾಮ - ಆತ್ಮಸಮ್ಮಾನ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

**• 26ರ ಎಂ.ಎಸ್‌ಸಿ, ಬಿ.ಎಡ್ ಓದಿರುವ ಯುವಕ. ಸರ್ಕಾರಿ ಉದ್ಯೋಗಕ್ಕೆ ಪ್ರಯತ್ನಿಸುತ್ತಿದ್ದೇನೆ. ಓದಲು ಏಕಾಗ್ರತೆ ಸಾಧ್ಯವಾಗುತ್ತಿಲ್ಲ. ನೀಲಿಚಿತ್ರಗಳನ್ನು ನೋಡುವ ಗೀಳಿದೆ. ಹುಡುಗರ ಬಗ್ಗೆ ಹೆಚ್ಚಿನ ಆಕರ್ಷಣೆಯಿದೆ. ಅವರೊಡನೆ ಸೇರುವ ಬಯಕೆಯುಂಟಾಗದಿದ್ದರೂ ಬೆತ್ತಲಾಗಿ ನೋಡುವುದು ರೋಚಕವೆನ್ನಿಸುತ್ತದೆ. ಹುಡುಗಿಯರನ್ನು ನೋಡಿದರೆ ಉದ್ರೇಕವಾಗುವುದಿಲ್ಲ. ಇದರಿಂದ ಹೊರಬರಲಾಗದೆ ಹಿಂಸೆಯಾಗುತ್ತಿದೆ. ನನ್ನ ಸ್ನೇಹಿತರೆಲ್ಲಾ ಉದ್ಯೋಗ, ಮದುವೆ ಎಂದೆಲ್ಲ ಆರಾಮವಾಗಿದ್ದಾರೆ. ನಾನು ಹಳ್ಳಿಯಲ್ಲಿದ್ದು ಸಮಯ ಕಳೆಯುತ್ತಿದ್ದೇನೆ. ಪ್ರೀತಿಸುವ ತಂದೆ-ತಾಯಿಗೆ ಮೋಸ ಮಾಡುತ್ತಿದ್ದೇನೆ ಎನ್ನಿಸುತ್ತಿದೆ. ಹಿಂದಿನದರ ಕುರಿತು ಯೋಚಿಸುತ್ತಾ ನಾನು ಸ್ಪರ್ಧಾತ್ಮಕ ಜಗತ್ತಿಗೆ ಯೋಗ್ಯನಲ್ಲವೇನೋ ಎನ್ನಿಸುತ್ತದೆ. ಇವೆಲ್ಲವುಗಳಿಂದ ಹೊರಬರುವುದು ಹೇಗೆ?**

**ಹೆಸರು ಬರೆದಿಲ್ಲ,** ಬಳ್ಳಾರಿ.

ದೀರ್ಘವಾದ ಪತ್ರದಲ್ಲಿ ನಿಮ್ಮ ಮಾನಸಿಕ ನೋವುಗಳನ್ನು ಹಿಂಜರಿಕೆಯಿಲ್ಲದೆ ಹೇಳಿಕೊಂಡಿದ್ದೀರಿ. ನಿಮ್ಮ ಸದ್ಯದ ಸಮಸ್ಯೆಗಳನ್ನು ಎರಡು ಕೋನಗಳಿಂದ ನೋಡೋಣ. ಮೊದಲನೆಯದು ನಿಮ್ಮ ಲೈಂಗಿಕತೆ. ನೀವು ಸಲಿಂಗಕಾಮಿಯೋ ಅಥವಾ ಗಂಡುಹೆಣ್ಣುಗಳಿಬ್ಬರಲ್ಲಿಯೂ ಆಸಕ್ತಿ ಇರುವವರೋ ಎನ್ನುವುದನ್ನು ತಿಳಿಯಲು ಹೆಚ್ಚಿನ ಮಾಹಿತಿಯ ಅಗತ್ಯವಿದೆ. ಸಲಿಂಗಕಾಮ ಸಾಮಾಜಿಕ ಕಳಂಕವೆನ್ನಿಸಿದರೂ ಕಾಯಿಲೆಯಂತೂ ಅಲ್ಲ. ಇದರಿಂದ ಹೊರಬರುವ ಪ್ರಯತ್ನ ನಿಮ್ಮ ಹತಾಶೆಯನ್ನು ಹೆಚ್ಚಿಸುತ್ತದೆ. ನಿಮ್ಮ ಲೈಂಗಿಕ ಆಕರ್ಷಣೆಗಳನ್ನು ಸಹಜವೆಂದು ಒಪ್ಪಿಕೊಂಡು ಆನಂದಿಸಿ. ಮದುವೆಯಾಗುವ ಕುರಿತು ಯೋಚಿಸುವ ಮೊದಲು ತಜ್ಞ ಲೈಂಗಿಕ ಚಿಕಿತ್ಸಕರೊಡನೆ ಸಮಾಲೋಚನೆ ನಡೆಸಿ. ಲೈಂಗಿಕ ಆಯ್ಕೆಗಳ ಗೊಂದಲ, ಹಿಂಜರಿಕೆಗಳು ನಿಮ್ಮ ಆತ್ಮಗೌರವವನ್ನು ಹೇಗೆ ನಾಶಮಾಡಿವೆ ಎಂದು ಗುರುತಿಸಿದ್ದೀರಾ? ಲೈಂಗಿಕ ಆಸಕ್ತಿಗಳು ಖಾಸಗಿಯಾದದ್ದು. ಅದರ ಹೊರತಾಗಿ ನಿಮ್ಮೊಳಗೆ ನೂರಾರು ಉತ್ತಮ ಅಂಶಗಳಿಲ್ಲವೇ? ಸಲಿಂಗಕಾಮಿಯಾಗಿದ್ದೂ ನೀವೊಬ್ಬ ಉತ್ತಮ ಅಧ್ಯಾಪಕ, ಉದ್ಯೋಗಿ, ಕೃಷಿಕ, ಮಗ, ಅಣ್ಣ, ತಮ್ಮ, ಸ್ನೇಹಿತ, ಪ್ರಜೆ ಹೀಗೆ ಏನೆಲ್ಲಾ ಆಗಬಹುದಲ್ಲವೇ? ಲೈಂಗಿಕತೆಯ ಕುರಿತು ಮಾತ್ರ ಯೋಚಿಸುತ್ತಾ ಇವುಗಳನ್ನು ಕಡೆಗಣಿಸಿದ್ದೀರಲ್ಲವೇ? ನಿಮ್ಮ ಕಣ್ಣಿನಲ್ಲಿ ನೀವೇ ಕೀಳಾಗಿರುವುದರಿಂದಾಗಿ ಅನುಭವಿಸುವ ನೋವನ್ನು ಮರೆಯಲು ನೀಲಿಚಿತ್ರಗಳಿಗೆ ಅಂಟಿಕೊಂಡಿದ್ದೀರಿ. ಸದ್ಯಕ್ಕೆ ಉದ್ಯೋಗವನ್ನು ಪಡೆದು ಜೀವನ ರೂಪಿಸಿಕೊಳ್ಳುವ ಕುರಿತು ಮಾತ್ರ ಯೋಚಿಸಿ. ನಿಮ್ಮ ಸೀಮಿತ ಜಗತ್ತಿನಿಂದ ಹೊರಬಂದರೆ ಏನೆಲ್ಲಾ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.

**• 22ರ ಯುವಕ. ವಾರಕ್ಕೆರೆಡು ಬಾರಿ ಹಸ್ತಮೈಥುನ ಮಾಡುತ್ತೇನೆ. ಆಗ ಶಿಶ್ನದಲ್ಲಿ ನೋವಾಗುತ್ತದೆ ಮತ್ತು ಶೀಘ್ರಸ್ಖಲನವಾಗುತ್ತದೆ. ಕಾರಣವೇನಿರಬಹುದು?**

**ಹೆಸರಿಲ್ಲ,** ಬೆಂಗಳೂರು.

ಹಸ್ತಮೈಥುನದ ಸಮಯದಲ್ಲಿನ ಘರ್ಷಣೆಯ ಒತ್ತಡದಿಂದಾಗಿ ನೋವಾಗುವ ಸಾಧ್ಯತೆಗಳಿವೆ. ಇದಕ್ಕಾಗಿ ಜಾರುಕಗಳನ್ನು (ಲ್ಯುಬ್ರಿಕೇಶನ್) ಬಳಸಿ. ನಿಮ್ಮದೇ ಜೊಲ್ಲುರಸ ಅತ್ಯುತ್ತಮವಾದ ಆರೋಗ್ಯಕರವಾದ ಜಾರುಕ. ಶೀಘ್ರಸ್ಖಲನದ ಕುರಿತು ಬಹಳ ತಪ್ಪುತಿಳಿವಳಿಕೆಗಳಿವೆ. ಮದುವೆಯಾದ ಮೇಲೆ ಪತ್ನಿಯ ಜೊತೆ ಲೈಂಗಿಕ ಸುಖವನ್ನು ಹಂಚಿಕೊಳ್ಳಲಾಗದಿದ್ದರೆ ಮಾತ್ರ ಲೈಂಗಿಕ ಚಿಕಿತ್ಸಕರನ್ನು ಸಂಪರ್ಕಿಸಿ. ಸದ್ಯಕ್ಕೆ ವಿದ್ಯಾಭ್ಯಾಸ, ಉದ್ಯೋಗದ ಕಡೆ ಹೆಚ್ಚು ಗಮನವಿಡಿ.

**• ಸ್ನಾತಕೋತ್ತರ ಪದವೀಧರ. ಪದವಿ ಪರೀಕ್ಷೆಯ ನಂತರ ಬೆಂಗಳೂರಿನಲ್ಲಿ 3-4 ವರ್ಷ ಉದ್ಯೋಗವನ್ನು ಮಾಡಿದೆ. ನಂತರ ವ್ಯಾಪಾರದಲ್ಲಿ ಮೋಸಹೋಗಿ ಸ್ನಾತಕೋತ್ತರ ಪದವಿ ಪಡೆದು ಮೂರ್ನಾಲ್ಕು ವರ್ಷಗಳಾಗಿದೆ. ರೈತಾಪಿ ಕುಟುಂಬದವನಾಗಿದ್ದು ಕೃಷಿಯಲ್ಲಿ ಆಸಕ್ತಿಯಿದ್ದರೂ ಅಪ್ಪನಿಂದ ಸ್ವಾತಂತ್ರ್ಯವಿಲ್ಲ. ಸರ್ಕಾರಿ ನೌಕರಿ ಪಡೆಯಬೇಕಾಗಿದೆ. ಅಪ್ಪನ ಮೇಲಿನ ಅವಲಂಬನೆ ಮತ್ತು ವಯಸ್ಸಿನ ಒತ್ತಡಕ್ಕೆ ಸಿಲುಕಿದ್ದೇನೆ. ಪರಿಹಾರವೇನು?**

**ಹೆಸರು,** ಊರು ಇಲ್ಲ.

ಏನಾದರೂ ಸಾಧಿಸಬೇಕು ಎನ್ನುವ ನಿಮ್ಮ ಉದ್ದೇಶ ಪ್ರಾಮಾಣಿಕವಾದದ್ದಲ್ಲವೇ? ಅದನ್ನು ಹುಡುಕುವ ದಾರಿಯಲ್ಲಿ ಕೆಲವು ತಪ್ಪು ನಿರ್ಧಾರಗಳಾಗಿರಬಹುದಲ್ಲವೇ? ತಕ್ಷಣಕ್ಕೆ ಎಲ್ಲವನ್ನೂ ಸರಿಪಡಿಸುವ ಒತ್ತಡದಲ್ಲಿ ಹೆಚ್ಚಿನ ನೋವನ್ನು ಅನುಭವಿಸುತ್ತಿದ್ದೀರಲ್ಲವೇ? ಹಳೆಯ ತಪ್ಪು ನಿರ್ಧಾರಗಳ ಭಯದಿಂದ ತಂದೆಯವರು ನಿಮಗೆ ಸ್ವಾತಂತ್ರ್ಯ ಕೊಡಲು ಹಿಂಜರಿಯುತ್ತಿರಬಹುದು. ತಪ್ಪನ್ನು ಕಲಿಕೆಯ ಭಾಗ ಎಂದು ಒಪ್ಪಿಕೊಂಡು ಅವರೊಡನೆ ಚರ್ಚೆಮಾಡಿ. ಕನಿಷ್ಠ ಎರಡು ವರ್ಷಗಳ ಯೋಜನೆಯನ್ನು ಹಾಕಿಕೊಂಡು ಹಂತಹಂತವಾಗಿ ಮುಂದುವರೆಯಿರಿ.

### ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

# ಒಂದೆಲಗದ ತಂಬುಳಿ, ಬೆಟ್ಟದ ನೆಲ್ಲಿಕಾಯಿ ತೊಕ್ಕು

ನಳಪಾಕ

ನಿತ್ಯಾ ಅಶೋಕ್

### ಬೆಟ್ಟದ ನೆಲ್ಲಿಕಾಯಿ ತೊಕ್ಕು

**ಬೇಕಾಗಿರುವ ಸಾಮಗ್ರಿಗಳು:** ಬೆಟ್ಟದ ನೆಲ್ಲಿಕಾಯಿ – 2 ಕಪ್, ಒಣ ಮೆಣಸಿನಕಾಯಿ – 30 ರಿಂದ 40, ಇಂಗು – ಸ್ವಲ್ಪ, ಕರಿಬೇವು – 8ರಿಂದ 10 ಎಸಳು, ಸಾಸಿವೆ – 1 ಚಮಚ, ಎಣ್ಣೆ – 4 ಚಮಚ, ಉಪ್ಪು – ರುಚಿಗೆ

**ತಯಾರಿಸುವ ವಿಧಾನ:** ಕುಕರ್‌ನಲ್ಲಿ ಬೆಟ್ಟದ ನೆಲ್ಲಿಕಾಯಿಗಳನ್ನು ಇಟ್ಟು 2 ವಿಷಲ್ ಕೂಗಿಸಬೇಕು. ಒಣಮೆಣಸನ್ನು ಎಣ್ಣೆ ಹಾಕದೇ ಬಾಣಲಿಯಲ್ಲಿ ಹುರಿದುಕೊಳ್ಳಬೇಕು. ಮಿಕ್ಸಿ ಜಾರಿಗೆ ಹುರಿದಿರುವ ಒಣಮೆಣಸು, ಬೇಯಿಸಿದ ನೆಲ್ಲಿಕಾಯಿ, ಉಪ್ಪು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ದೊಡ್ಡ ಬಾಣಲೆಯೊಂದರಲ್ಲಿ ಎಣ್ಣೆ ಹಾಕಿ ಬಿಸಿಯಾದ ಮೇಲೆ ಸಾಸಿವೆ, ಕರಿಬೇವು, ಇಂಗು ಹಾಗೂ ರುಬ್ಬಿಕೊಂಡ ಮಿಶ್ರಣವನ್ನು ಹಾಕಿ ಸಣ್ಣ ಉರಿಯಲ್ಲಿ 10 ರಿಂದ 15 ನಿಮಿಷಗಳ ಕಾಲ ಎಣ್ಣೆ ಬಿಡುವ ತನಕ ಬಾಡಿಸಿಕೊಳ್ಳಬೇಕು. ತಣ್ಣಗಾದ ನಂತರ ಗಾಜಿನ ಪಾತ್ರೆಯಲ್ಲಿ ಹಾಕಿ ತಿಂಗಳುಗಟ್ಟಲೆ ಬಳಸಬಹುದು. ಇದು ಆರೋಗ್ಯಕ್ಕೂ ಉತ್ತಮ.

### ಹುಳಿ ಗೊಜ್ಜು

**ಬೇಕಾಗುವ ಸಾಮಗ್ರಿಗಳು:** ಹುಣಸೆಹಣ್ಣು – 1 ಬಟ್ಟಲು, ಹುರಿಗಡಲೆ – 2 ಚಮಚ, ಹಸಿ ಮೆಣಸಿನಕಾಯಿ – 6 ರಿಂದ 8, ಸಾಸಿವೆ– 1 ಚಮಚ, ಕರಿಬೇವು – 8 ರಿಂದ 10 ಎಸಳು, ಉಪ್ಪು – ರುಚಿಗೆ ತಕ್ಕಷ್ಟು, ಎಣ್ಣೆ – 2 ಚಮಚ

**ತಯಾರಿಸುವ ವಿಧಾನ:** ಮೊದಲು ಮಿಕ್ಸಿ ಜಾರಿನಲ್ಲಿ ಹುರಿಗಡಲೆಯನ್ನು ಪುಡಿ ಮಾಡಿಕೊಳ್ಳಬೇಕು. ಅದೇ ಜಾರಿಗೆ ಹುಣಸೆಹಣ್ಣನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಬೇಕು. ನಂತರ ಒಂದು ಕಡಾಯಿಯಲ್ಲಿ ಎಣ್ಣೆ ಹಾಕಿ ಸಣ್ಣ ಉರಿಯಲ್ಲಿ ಬಿಸಿ ಮಾಡಬೇಕು. ಅದಕ್ಕೆ ಸಾಸಿವೆ, ಕರಿಬೇವು, ಹಸಿ ಮೆಣಸಿನಕಾಯಿಯನ್ನು 20 ಸೆಕೆಂಡುಗಳ ಕಾಲ ಬಾಡಿಸಿಕೊಳ್ಳಬೇಕು. ಇದಕ್ಕೆ ರುಬ್ಬಿಕೊಂಡಿರುವ ಮಿಶ್ರಣವನ್ನು ಹಾಕಿ, ಒಂದು ಲೋಟ ನೀರು ಸೇರಿಸಿ ಚೆನ್ನಾಗಿ ಕಲಸಬೇಕು. ಇದಕ್ಕೆ ಉಪ್ಪು ಸೇರಿಸಿ 2ರಿಂದ 3 ನಿಮಿಷಗಳ ಕಾಲ ಕುದಿಯಲು ಬಿಡಬೇಕು. ಈ ಹುಳಿ ಗೊಜ್ಜನ್ನು ಪೊಂಗಲ್, ಇಡ್ಲಿ, ದೋಸೆಯ ಜೊತೆ ತಿನ್ನಬಹುದು.

### ಒಂದೆಲಗ ಸೊಪ್ಪಿನ ತಂಬುಳಿ

**ಬೇಕಾಗುವ ಸಾಮಗ್ರಿಗಳು:** ಒಂದೆಲಗ ಎಲೆ – 20 ರಿಂದ 30, ಹಸಿ ಮೆಣಸಿನಕಾಯಿ – 5 ರಿಂದ 7, ಜೀರಿಗೆ – 1 ಚಮಚ, ಕಾಳುಮೆಣಸು – 7, ಗಟ್ಟಿ ಮೊಸರು – ಒಂದೂವರೆ ಕಪ್, ತೆಂಗಿನತುರಿ – 1 ಕಪ್, ಎಣ್ಣೆ – 2 ಚಮಚ, ಉಪ್ಪು – ರುಚಿಗೆ

**ತಯಾರಿಸುವ ವಿಧಾನ:** ಪಾತ್ರೆಗೆ ಸ್ವಲ್ಪ ಎಣ್ಣೆ ಹಾಕಿ ಬಿಸಿಯಾದ ಮೇಲೆ ಅದಕ್ಕೆ ಜೀರಿಗೆ, ಕಾಳುಮೆಣಸು, ಹಸಿ ಮೆಣಸಿನಕಾಯಿ ಹಾಗೂ ಹೆಚ್ಚಿರುವ ಒಂದೆಲಗ ಸೊಪ್ಪು ಹಾಕಿ ಸಣ್ಣ ಉರಿಯಲ್ಲಿ ಬಾಡಿಸಿಕೊಳ್ಳಿ ಎಣ್ಣೆಯಿಂದ ತೆಗೆಯಿರಿ. ಅದಕ್ಕೆ ತೆಂಗಿನತುರಿ ಹಾಕಿ 1 ನಿಮಿಷ ಹುರಿದುಕೊಳ್ಳಿ. ಹುರಿದುಕೊಂಡ ಸಾಮಗ್ರಿಗಳು ತಣ್ಣಗಾದ ಮೇಲೆ ಅದಕ್ಕೆ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಮಿಕ್ಸಿ ಜಾರಿನಲ್ಲಿ ನೀರು ಹಾಕದೇ ರುಬ್ಬಿಕೊಳ್ಳಿ. ನಂತರ ಅದಕ್ಕೆ ಮೊಸರು ಸೇರಿಸಿ ರುಬ್ಬಿಕೊಳ್ಳಿ. ಇದಕ್ಕೆ ಒಗ್ಗರಣೆ ಹಾಕಿದರೆ ಒಂದೆಲಗ ಸೊಪ್ಪಿನ ತಂಬುಳಿ ಸವಿಯಲು ಸಿದ್ಧ. ಇದನ್ನು ಅನ್ನ, ರಾಗಿ ಮುದ್ದೆಯ ಜೊತೆ ತಿನ್ನಲು ಚೆನ್ನಾಗಿರುತ್ತದೆ.

ಪ್ರಜಾವಾಣಿ ನೋಡಿಯೊ

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪಶ್ಚಿಮ ಬಂಗಾಳ: ಒಂದು ಕಾಲದ ಆಪ್ತ ಸುವೇಂದು ಅಧಿಕಾರಿಗೆ ನೇರ ಸವಾಲೆಸೆದ ಟಿಎಂಸಿ ಮುಖ್ಯಸ್ಥೆ

# ನಂದಿಗ್ರಾಮದಿಂದ ಮಮತಾ ಸ್ಪರ್ಧೆ

**ಕೋಲ್ಕತ್ತ (ಪಿಟಿಐ):** ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಎಡಪಕ್ಷಗಳು, ಕಾಂಗ್ರೆಸ್ ಹಾಗೂ ಇಂಡಿಯನ್ ಸೆಕ್ಯುಲರ್ ಫ್ರಂಟ್ ಅನ್ನು ಒಳಗೊಂಡ ಮೈತ್ರಿಕೂಟ ಪಶ್ಚಿಮ ಬಂಗಾಳದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯ ಅಭ್ಯರ್ಥಿಗಳ ಪಟ್ಟಿಯನ್ನು ಘೋಷಿಸಿವೆ.

ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು 291 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದಾರೆ. ತಾನು ಈ ಬಾರಿ ನಂದಿಗ್ರಾಮ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಅವರು ಘೋಷಿಸಿದ್ದಾರೆ. ಆ ಮೂಲಕ ಒಂದು ಕಾಲದಲ್ಲಿ ತಮ್ಮ ಆತ್ಮೀಯರಾಗಿದ್ದು, ಇತ್ತೀಚೆಗಷ್ಟೇ ಬಿಜೆಪಿಗೆ ಸೇರ್ಪಡೆಯಾಗಿರುವ ಸುವೇಂದು ಅಧಿಕಾರಿ ಅವರಿಗೆ ನೇರವಾಗಿ ಸವಾಲೆಸೆದಿದ್ದಾರೆ.

ಮಮತಾ ಅವರು ಈಗ ಪ್ರತಿನಿಧಿಸುತ್ತಿರುವ ಭವಾನಿಪುರದಿಂದ ಸೋವನ್‌ದೇಬ್ ಚಟ್ಟೋಪಾಧ್ಯಾಯ ಅವರು ಕಣಕ್ಕಿಳಿಯಲಿದ್ದಾರೆ. ಮಿತ್ರಪಕ್ಷವಾದ ಗೂರ್ಖಾ ಜನಮುಕ್ತಿ ಮೋರ್ಚಾಗೆ (ಜಿಜೆಎಂ) ಮೂರು ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದ್ದಾರೆ.

> **ಮಾರ್ಚ್ 9ರಂದು ನಾವು ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಲಿದ್ದೇವೆ. 10ರಂದು ನಂದಿಗ್ರಾಮ ಕ್ಷೇತ್ರದ ಸ್ಪರ್ಧಿಯಾಗಿ ನಾಮಪತ್ರ ಸಲ್ಲಿಸುತ್ತೇನೆ**
> **ಮಮತಾ ಬ್ಯಾನರ್ಜಿ,** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

‘20ಕ್ಕೂ ಹೆಚ್ಚು ಹಾಲಿ ಶಾಸಕರಿಗೆ ಈ ಬಾರಿ ಟಿಕೆಟ್ ನಿರಾಕರಿಸಲಾಗಿದೆ. ಅವರಲ್ಲಿ ಕೆಲವರು ಅನಾರೋಗ್ಯದ ನಿಮಿತ್ತ ಸ್ಪರ್ಧಿಸದಿರಲು ತೀರ್ಮಾನಿಸಿದ್ದಾರೆ ಎಂದು ಹೇಳಿದ್ದಾರೆ. ಯುವಕರು, ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಹಿಂದುಳಿದ ವರ್ಗಗಳಿಗೆ ಆದ್ಯತೆ ನೀಡಿದ್ದೇವೆ. ಸುಮಾರು 50 ಮಂದಿ ಮಹಿಳೆಯರು, 42 ಮಂದಿ ಮುಸ್ಲಿಮರು, ಪರಿಶಿಷ್ಟ ಜಾತಿಯ 79 ಮಂದಿ ಹಾಗೂ ಪರಿಶಿಷ್ಟ ಪಂಗಡದ ಸುಮಾರು 17 ಮಂದಿಗೆ ಟಿಕೆಟ್ ನೀಡಲಾಗಿದೆ ಎಂದು ಮಮತಾ ತಿಳಿಸಿದ್ದಾರೆ.

‘ಇದು ಟಿಎಂಸಿ ಈವರೆಗೆ ಎದುರಿಸಿರುವ ಚುನಾವಣೆಗಳಲ್ಲೇ ಅತ್ಯಂತ ಸುಲಭದ ಚುನಾವಣೆ ಆಗಲಿದೆ. ನಾವು ಹೆಚ್ಚಿನ ಸ್ಥಾನಗಳನ್ನು ಗೆದ್ದು ಅಧಿಕಾರ ಹಿಡಿಯುವುದು ಖಚಿತ. ಅಧಿಕಾರಕ್ಕೆ ಮರಳಿದ ಬಳಿಕ ವಿಧಾನ ಪರಿಷತ್ ರಚಿಸಿ, ಹಿರಿಯ ಮತ್ತು ಅನುಭವಿ ನಾಯಕರಿಗೆ ಅಲ್ಲಿ ಅವಕಾಶ ಕಲ್ಪಿಸುತ್ತೇವೆ. ಆದರೆ, 80 ವರ್ಷ ವಯಸ್ಸು ಮೀರಿದವರಿಗೆ ಸ್ಥಾನ ಕಲ್ಪಿಸಲಾಗದು’ ಎಂದು ಮಮತಾ ಹೇಳಿದ್ದಾರೆ.

‘ನೀವು ಎಷ್ಟು ಬೇಕೋ ಅಷ್ಟು ಕೇಂದ್ರೀಯ ಪಡೆಗಳನ್ನು ನೇಮಿಸಿ, ಚುನಾವಣೆಯಲ್ಲಿ ಟಿಎಂಸಿಯೇ ಗೆಲ್ಲಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹಸಚಿವ ಅಮಿತ್ ಶಾ ಅವರಿಗೆ ಮಮತಾ ಸವಾಲು ಹಾಕಿದ್ದಾರೆ.

**ಮೈತ್ರಿಕೂಟದ ಪಟ್ಟಿ ಬಿಡುಗಡೆ:** ಎಡಪಕ್ಷಗಳು, ಕಾಂಗ್ರೆಸ್ ಹಾಗೂ ಹೊಸದಾಗಿ ರಚನೆಯಾಗಿರುವ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಮೈತ್ರಿಕೂಟವೂ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿವೆ.

ಮೈತ್ರಿಗೆ ಅನುಗುಣವಾಗಿ ತಾವು ಸ್ಪರ್ಧಿಸುವ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಆಯಾ ಪಕ್ಷಗಳು ಘೋಷಿಸಲಿವೆ. ಎಡಪಕ್ಷಗಳು ಮಾತ್ರ ಶುಕ್ರವಾರ ಅಭ್ಯರ್ಥಿಗಳ ಹೆಸರು ಘೋಷಿಸಿದ್ದು, ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಕಾಂಗ್ರೆಸ್ ಹಾಗೂ ಐಎಸ್‌ಎಫ್ ಹೇಳಿವೆ.

‘ಮಮತಾ ಅವರು ಸ್ಪರ್ಧಿಸಲಿರುವ ನಂದಿಗ್ರಾಮ ಕ್ಷೇತ್ರವೂ ಸೇರಿದಂತೆ ಕೆಲವು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಒಮ್ಮತದ ತೀರ್ಮಾನವಾಗಿಲ್ಲ’ ಎಂದು ಎಡಪಕ್ಷಗಳ ಅಧ್ಯಕ್ಷ ಬಿಮನ್ ಬೋಸ್ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಮಾರ್ಚ್ 27ರಿಂದ ಆರಂಭವಾಗಿ ಏಪ್ರಿಲ್ 29ರವರೆಗೆ ಒಟ್ಟು ಎಂಟು ಹಂತಗಳಲ್ಲಿ ಚುನಾವಣೆ ನಡೆಯಲಿದೆ.

ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಪಶ್ಚಿಮಬಂಗಾಳ ವಿಧಾನಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

## ಅಂತಿಮವಾಗದ ಬಿಜೆಪಿ ನಿರ್ಧಾರ

ಒಂದು ಕಾಲದಲ್ಲಿ ಮಮತಾ ಬ್ಯಾನರ್ಜಿ ಅವರ ನಿಕಟವರ್ತಿಯಾಗಿದ್ದ ಮತ್ತು ಟಿಎಂಸಿಯ ಪ್ರಭಾವಿ ನಾಯಕರಾಗಿದ್ದ ಸುವೇಂದು ಅಧಿಕಾರಿ ಅವರು ಟಿಎಂಸಿ ತ್ಯಜಿಸಿದ ನಂತರ, ‘ಮಮತಾ ಅವರ ವಿರುದ್ಧ ನೇರ ಹೋರಾಟಕ್ಕೆ ನಾನು ಸಿದ್ಧ’ ಎಂದಿದ್ದರು.

2007ರಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ಭೂಸ್ವಾಧೀನ ವಿರೋಧಿ ಹೋರಾಟದಲ್ಲಿ ಈ ಇಬ್ಬರು ನಾಯಕರು ನಿರ್ಣಾಯಕ ಪಾತ್ರ ವಹಿಸಿದ್ದರು. ಅಂದಿನಿಂದಲೂ ಈ ಭಾಗದಲ್ಲಿ ತಮ್ಮ ಪ್ರಭಾವವನ್ನು ಉಳಿಸಿಕೊಂಡಿದ್ದಾರೆ. ಆ ಕಾರಣಕ್ಕಾಗಿಯೇ ಸುವೇಂದು ಅವರನ್ನು ಬಿಜೆಪಿಯು ತನ್ನತ್ತ ಸೆಳೆದುಕೊಂಡಿದೆ. ಆದರೆ ಪಕ್ಷವು ಅವರನ್ನೇ ನಂದಿಗ್ರಾಮದಿಂದ ಕಣಕ್ಕಿಳಿಸುವುದೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಪಶ್ಚಿಮ ಬಂಗಾಳ: ದೀದಿಗೆ ಅಗ್ನಿ ಪರೀಕ್ಷೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

## ‘ಮುಖ್ಯಮಂತ್ರಿ ಅಭ್ಯರ್ಥಿ ನಿರ್ಧಾರವಾಗಿಲ್ಲ’

**ಪತ್ತನಂತಿಟ್ಟ (ಪಿಟಿಐ):** ‘ಕೇರಳದಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿಯ ಬಗ್ಗೆ ನಾನು ಯಾವುದೇ ಘೋಷಣೆ ಮಾಡಿರಲಿಲ್ಲ. ಬದಲಿಗೆ, ಮೆಟ್ರೊಮ್ಯಾನ್ ಶ್ರೀಧರನ್ ಅವರು ಪಕ್ಷದ ನೇತೃತ್ವ ವಹಿಸುವುದನ್ನು ಪಕ್ಷದ ಕಾರ್ಯಕರ್ತರು ಬಯಸುತ್ತಾರೆ ಎಂದು ಹೇಳಿದ್ದೆ’ ಎಂದು ಬಿಜೆಪಿಯ ಕೇರಳ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಶುಕ್ರವಾರ ಸ್ಪಷ್ಟಪಡಿಸಿದ್ದಾರೆ.

‘ರಾಜ್ಯದಲ್ಲಿ ನಾನು ಪಕ್ಷದ ಮುಖ್ಯಸ್ಥ. ನಾನು ಏನು ಹೇಳಿದ್ದೇನೆ ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ಶ್ರೀಧರನ್ ಅವರ ನಾಯಕತ್ವವನ್ನು ರಾಜ್ಯದ ಜನರು ಬಯಸುತ್ತಾರೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂಬುದನ್ನು ಬಿಟ್ಟು, ಬೇರೇನನ್ನೂ ನಾನು ಗುರುವಾರ ಹೇಳಿರಲಿಲ್ಲ. ಮಾಧ್ಯಮಗಳು ನನ್ನ ಮಾತನ್ನು ತಪ್ಪಾಗಿ ಅರ್ಥೈಸಿವೆ. ಮುಖ್ಯಮಂತ್ರಿ ಅಭ್ಯರ್ಥಿಯ ಆಯ್ಕೆಯ ವಿಚಾರವನ್ನು ಪಕ್ಷದ ಕೇಂದ್ರ ನಾಯಕತ್ವ ಮಾತ್ರ ನಿರ್ಧರಿಸಬಲ್ಲದು’ ಎಂದು ಅವರು ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುತ್ತಾ ಹೇಳಿದ್ದಾರೆ.

‘ಶ್ರೀಧರನ್ ಅವರು ಕೇರಳದಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿಯಾಗಿರುತ್ತಾರೆ’ ಎಂದು ಕೇಂದ್ರದ ಸಚಿವ ವಿ. ಮುರಳೀಧರನ್ ಅವರು ಗುರುವಾರ ಟ್ವೀಟ್ ಮಾಡಿದ್ದರು. ಆದರೆ ಸ್ವಲ್ಪ ಸಮಯದಲ್ಲೇ ಆ ಟ್ವೀಟ್ ಅನ್ನು ಅಳಿಸಿಹಾಕಿದ್ದರು. ಇದಾದ ನಂತರ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಯಾಗಿದೆ.

## ಅಂತಿಮವಾಗದ ಸೀಟುಹಂಚಿಕೆ

**ಚೆನ್ನೈ (ಪಿಟಿಐ):** ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆ ವಿಚಾರವಾಗಿ ಮಿತ್ರಪಕ್ಷ ಡಿಎಂಕೆ ಜತೆಗೆ ಕಾಂಗ್ರೆಸ್‌ನ ಮಾತುಕತೆ ನಿರೀಕ್ಷಿತ ಫಲ ನೀಡದಿರುವುದರಿಂದ ಕಾಂಗ್ರೆಸ್‌ಗೆ ಇರಿಸುಮುರುಸು ಉಂಟಾಗಿದೆ.

‘ಪಕ್ಷದ ಕಾರ್ಯಕರ್ತರ ಆತ್ಮಸ್ಥೈರ್ಯವನ್ನು ಹೆಚ್ಚಿಸುವಷ್ಟು ಸ್ಥಾನಗಳನ್ನು ಪಡೆಯಲು ನಮ್ಮ ಪ್ರಯತ್ನ ಮುಂದುವರಿಸಲಿದ್ದೇವೆ’ ಎಂದು ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಹೇಳಿದ್ದಾರೆ.

ಸೀಟು ಹಂಚಿಕೆ ವಿಚಾರವಾಗಿ ಡಿಎಂಕೆ ಮತ್ತು ಕಾಂಗ್ರೆಸ್ ಮಧ್ಯೆ ಭಿನ್ನಮತ ಉಂಟಾಗಿದೆ ಎಂದು ಸುದ್ದಿಯಾಗಿತ್ತು. ಇದನ್ನು ತಳ್ಳಿಹಾಕಿದ್ದ ಮೊಯಿಲಿ ಅವರು, ‘ಈ ವಿಚಾರದಲ್ಲಿ ನಮ್ಮ ಪಕ್ಷ ದೃಢ ನಿರ್ಧಾರ ಕೈಗೊಳ್ಳುವುದು. ನಮ್ಮ ಮಾತುಕತೆ ಮುಂದುವರಿಯುತ್ತದೆ. ಭಿನ್ನಾಭಿಪ್ರಾಯಗಳನ್ನು ಮಾತುಕತೆಯ ಮೂಲಕವೇ ಬಗೆಹರಿಸಿಕೊಳ್ಳಲಾಗುವುದು’ ಎಂದಿದ್ದಾರೆ.

‘ತಮಿಳುನಾಡಿನಲ್ಲಿ ಜಾತ್ಯತೀತ ಶಕ್ತಿಗಳೆಲ್ಲವೂ ಒಂದಾಗುವುದು ಮತ್ತು ಬಿಜೆಪಿ ನೇತೃತ್ವದ ‘ಒಡೆಯುವ’ ಶಕ್ತಿಗಳನ್ನು ಸೋಲಿಸುವುದು ಅಗತ್ಯ ಎಂಬುದನ್ನು ಡಿಎಂಕೆ ಅರ್ಥ ಮಾಡಿಕೊಳ್ಳಬೇಕಾಗಿದೆ. ಒಕ್ಕೂಟ ವ್ಯವಸ್ಥೆ ಹಾಗೂ ರಾಷ್ಟ್ರೀಯತೆಯ ಮನೋಭಾವವನ್ನು ಎತ್ತಿ ಹಿಡಿಯಲು ತಮಿಳುನಾಡು ಬಲಿಷ್ಠ ವೇದಿಕೆಯಾಗಿದೆ’ ಎಂದು ಅವರು ಹೇಳಿದ್ದಾರೆ.

ಸೀಟು ಹಂಚಿಕೆ ವಿಚಾರವಾಗಿ ಈ ಹಿಂದೆ ನಡೆದ ಎರಡು ಸಭೆಗಳಲ್ಲಿ ಒಮ್ಮತದ ತೀರ್ಮಾನಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಇದರಿಂದಾಗಿ ಮೈತ್ರಿಯಿಂದ ಕಾಂಗ್ರೆಸ್ ಹೊರಬರುವ ಸಾಧ್ಯತೆ ಇದೆ ಎಂದೂ ಹೇಳಲಾಗಿತ್ತು. ಆದರೆ ಇದನ್ನು ಪಕ್ಷದ ತಮಿಳುನಾಡು ಘಟಕದ ಮುಖ್ಯಸ್ಥ ಕೆ.ಎಸ್. ಅಳಗಿರಿ ತಳ್ಳಿಹಾಕಿದ್ದಾರೆ.

‘ಡಿಎಂಕೆ ಜತೆಗಿನ ಮೈತ್ರಿಯನ್ನು ಕೊನೆಗೊಳಿಸಲಾಗುವುದು ಎಂಬುದು ಮಾಧ್ಯಮ ಸೃಷ್ಟಿ. ತೃತೀಯ ರಂಗದ ಮೇಲೆ ನಮಗೆ ವಿಶ್ವಾಸವಿಲ್ಲ. ಪ್ರಸಕ್ತ ನಮ್ಮ ಪಕ್ಷದ ನಾಯಕರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿದ್ದೇವೆ. ಡಿಎಂಕೆ ಜತೆಗಿನ ಮಾತುಕತೆ ಮುಂದುವರಿಯುವುದು’ ಎಂದು ಅಳಗಿರಿ ಹೇಳಿದ್ದಾರೆ.

## ಕೇರಳ: ಕಾಂಗ್ರೆಸ್‌ಗೆ ಸಂಕಟ

**ತಿರುವನಂತಪುರ:** ಪಕ್ಷದಲ್ಲಿ ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿ ವಯನಾಡ್ ಕ್ಷೇತ್ರದ ಕಾಂಗ್ರೆಸ್‌ನ ನಾಲ್ವರು ಮುಖಂಡರು ಇತ್ತೀಚೆಗೆ ಪಕ್ಷ ತ್ಯಜಿಸಿದ್ದು ಕಾಂಗ್ರೆಸ್‌ಗೆ ತಲೆನೋವಾಗಿತ್ತು. ಈ ಬೆಳವಣಿಗೆಯಿಂದ ಎಚ್ಚೆತ್ತುಕೊಂಡ ಪಕ್ಷದ ನಾಯಕರು ಹಾನಿಯನ್ನು ಸರಿಪಡಿಸುವ ಕಾರ್ಯ ಆರಂಭಿಸಿದ್ದು, ಮುನಿಸಿಕೊಂಡಿದ್ದ ಒಬ್ಬ ಮುಖಂಡರನ್ನು ಮರಳಿ ಪಕ್ಷಕ್ಕೆ ಕರೆತರುವಲ್ಲಿ ಯಶಸ್ವಿಯಾಗಿದ್ದಾರೆ.

ಅಷ್ಟೇ ಅಲ್ಲದೆ ಸಿಪಿಎಂನ ಸ್ಥಳೀಯ ನಾಯಕರೊಬ್ಬರು ಸಹ ಕಾಂಗ್ರೆಸ್‌ಗೆ ಸೇರ್ಪಡೆಯಾಗಿರುವುದು ಪಕ್ಷದ ನಾಯಕರಿಗೆ ಹೆಚ್ಚಿನ ಸಮಾಧಾನವನ್ನು ತಂದಿದೆ.

ಕಾಂಗ್ರೆಸ್‌ನ ಹಿರಿಯ ಮುಖಂಡ ರಾಹುಲ್ ಗಾಂಧಿ ಅವರ ಲೋಕಸಭಾ ಕ್ಷೇತ್ರದಲ್ಲೇ ನಾಯಕರಲ್ಲಿ ಅಸಮಾಧಾನ ಮೂಡಿದ್ದರಿಂದ ಕಾಂಗ್ರೆಸ್‌ಗೆ ಇರಿಸುಮುರುಸಾಗಿತ್ತು. ಪಕ್ಷ ಬಿಟ್ಟು ಹೋಗಿದ್ದ ಹಿರಿಯ ಮುಖಂಡ ಕೆ.ಕೆ. ವಿಶ್ವನಾಥನ್ ಅವರು ಪಕ್ಷಕ್ಕೆ ಮರಳಿದ್ದಾರೆ.

ಕಾಂಗ್ರೆಸ್ ಪಕ್ಷದ ತಮಿಳುನಾಡು ಘಟಕದ ಸಭೆ ಶುಕ್ರವಾರ ಚೆನ್ನೈಯಲ್ಲಿ ನಡೆಯಿತು. ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್. ಅಳಗಿರಿ, ಚುನಾವಣಾ ಪ್ರಚಾರ ವೀಕ್ಷಕರಾಗಿರುವ ದಿನೇಶ್ ಗುಂಡುರಾವ್, ವೀರಪ್ಪ ಮೊಯಿಲಿ ಇದ್ದರು –ಪಿಟಿಐ ಚಿತ್ರ

## ವಿರೋಧ– ಪ್ರತಿಭಟನೆ

**ಮಮತಾ ಅವರು** ಟಿಎಂಸಿ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ ಕೆಲವೇ ಗಂಟೆಗಳಲ್ಲಿ, ರಾಜ್ಯದ ಕೆಲವೆಡೆ ಪರ್ತಿಭಟನೆಗಳು ನಡೆದಿವೆ. ಟಿಕೆಟ್ ವಂಚಿತ ನಾಯಕರು ಪಕ್ಷದ ನಾಯಕಿ ವಿರುದ್ಧ ಆಕ್ರೋಶ, ಬೇಸರ ವ್ಯಕ್ತಪಡಿಸಿದ್ದಾರೆ.

ಹಿಂದೆ ಮಮತಾ ಅವರ ನಿಕಟವರ್ತಿ ಹಾಗೂ ನಾಲ್ಕು ಅವಧಿಗೆ ಶಾಸಕಿಯಾಗಿದ್ದ ಸೊನಾಲಿ ಗುಹಾ ಅವರು ತನಗೆ ಟಿಕೆಟ್ ನೀಡಿಲ್ಲ ಎಂದು ತಿಳಿದ ಕೂಡಲೇ ಕಣ್ಣೀರಿಟ್ಟಿದ್ದಾರೆ. ‘ನಾನು ಆರಂಭದಿಂದಲೇ ಮಮತಾ ದೀದಿಯ ಜತೆಗಿದ್ದೆ. ದೇವರು ಆಕೆಗೆ ಒಳ್ಳೆಯ ಬುದ್ಧಿಯನ್ನು ನೀಡಲಿ’ ಎಂದು ಅವರು ಪ್ರತಿಕ್ರಿಯೆ ನೀಡಿದ್ದಾರೆ.

‘ಪಕ್ಷವನ್ನು ಅತಿಯಾಗಿ ಪ್ರೀತಿಸಿದವರನ್ನು ಕಡೆಗಣಿಸಲಾಗಿದೆ. ಜನರ ಅಭಿಪ್ರಾಯ ಪಡೆದು ಮುಂದಿನ ಹೆಜ್ಜೆಗಳನ್ನಿಡುತ್ತೇನೆ’ ಎಂದು ಮಾಜಿ ಶಾಸಕ ಅರಬುಲ್ ಇಸ್ಲಾಂ ಅವರು ಕಣ್ಣೀರಿಟ್ಟಿದ್ದಾರೆ.

## ಎಐಎಡಿಎಂಕೆ ಮೊದಲ ಪಟ್ಟಿ

**ಚೆನ್ನೈ (ಪಿಟಿಐ):** ತಮಿಳುನಾಡಿನಲ್ಲಿ ಏಪ್ರಿಲ್ 6ರಂದು ನಡೆಯಲಿರುವ ಮೊದಲ ಹಂತದ ಚುನಾವಣೆಗೆ ಆರು ಮಂದಿ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಆಡಳಿತಾರೂಢ ಎಐಎಡಿಎಂಕೆ ಶುಕ್ರವಾರ ಬಿಡುಗಡೆ ಮಾಡಿದೆ.

ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರು ತಮ್ಮ ತವರು ಜಿಲ್ಲೆ ಸೇಲಂನ ಎಡಪ್ಪಾಡಿ ಕ್ಷೇತ್ರದಿಂದ ಹಾಗೂ ಉಪಮುಖ್ಯಮಂತ್ರಿ ಒ. ಪನೀರ್‌ಸೆಲ್ವಂ ಅವರು ಬೋದಿನಾಯಕನೂರು ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

## ಅಸ್ಸಾಂ: ಬಿಜೆಪಿ ಅಭ್ಯರ್ಥಿಗಳ ಘೋಷಣೆ

**ನವದೆಹಲಿ (ಪಿಟಿಐ):** ಅಸ್ಸಾಂ ವಿಧಾನಸಭಾ ಚುನಾವಣೆಗೆ ಬಿಜೆಪಿಯ 70 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಮಿತ್ರಪಕ್ಷಗಳಾದ ಅಸ್ಸಾಂ ಗಣಪರಿಷತ್ ಹಾಗೂ ಯುನೈಟೆಡ್ ಪೀಪಲ್ಸ್ ಪಾರ್ಟಿಗಳು ಕ್ರಮವಾಗಿ 26 ಹಾಗೂ 8 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ ಎಂದು ಬಿಜೆಪಿ ತಿಳಿಸಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಪಟ್ಟಿಯನ್ನು ಬಿಡುಗಡೆ ಮಾಡಿದರು. 11 ಮಂದಿ ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಿರುವ ಬಿಜೆಪಿ, ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಅವಕಾಶ ನೀಡಿದೆ.

ರಾಜ್ಯದಲ್ಲಿ ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು ಮೊದಲ ಹಂತದ ಮತದಾನವು ಮಾರ್ಚ್ 27ರಂದು ನಡೆಯಲಿದೆ.

## ‘ಕ್ವಾಡ್’ ರಾಷ್ಟ್ರಗಳ ಮುಖಂಡರ ವರ್ಚುವಲ್ ಸಭೆ ಶೀಘ್ರ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳ ಮುಖಂಡರು ಶೀಘ್ರದಲ್ಲಿಯೇ ವರ್ಚುವಲ್ ಸ್ವರೂಪದಲ್ಲಿ ಸಭೆ ನಡೆಸಲಿದ್ದು, ಪರಸ್ಪರ ಬಾಂಧವ್ಯ ವೃದ್ಧಿಗೆ ಒತ್ತು ನೀಡಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡೆನ್, ಜಪಾನ್ ಪ್ರಧಾನಿ ಯೋಶಿಯೆದೆ ಸುಗಾ, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಅವರು ಈ ಸಭೆಯಲ್ಲಿ ಪಾಲ್ಗೊಳ್ಳುವರು.

ಸರ್ಕಾರದ ಮುಖ್ಯಸ್ಥರ ಮಾತುಕತೆ ಜತೆಗೆ ಶೃಂಗದ ಸ್ಥಾನ ಉನ್ನತೀಕರಣವಾಗಲಿದೆ. ಏಷ್ಯಾ ಪೆಸಿಫಿಕ್ ವಲಯದಲ್ಲಿ ಚೀನಾವನ್ನು ಎದುರಿಸಲು ನಾಲ್ಕು ರಾಷ್ಟ್ರಗಳು ಒಟ್ಟಾಗಿ ಶೃಂಗವನ್ನು ರಚಿಸಿಕೊಂಡಿವೆ.

ಸಿಡ್ನಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಟ್ರೇಲಿಯ ಪ್ರಧಾನಿ ಈ ಭೇಟಿಯನ್ನು ದೃಢಪಡಿಸಿದ್ದು, ಉದ್ದೇಶಿತ ಸಭೆ ನಿರೀಕ್ಷೆಯಲ್ಲಿದ್ದೇನೆ ಎಂದು ತಿಳಿಸಿದ್ದಾರೆ. ನಾಲ್ಕು ರಾಷ್ಟ್ರಗಳ ಮುಖಂಡರು ನಂತರ ಭೇಟಿಯಾಗಿ ಚರ್ಚಿಸುವರು ಎಂದರು. ನಾಲ್ಕು ರಾಷ್ಟ್ರಗಳ ಮುಖಂಡರು ಸೇರಿ ಚರ್ಚಿಸುವ ಅಗತ್ಯವನ್ನು ಬೈಡೆನ್ ಆಡಳಿತವು ಕಳೆದ ತಿಂಗಳು ಪ್ರಸ್ತಾಪ ಮಾಡಿತ್ತು.

## ಸ್ಫೋಟಕಗಳಿದ್ದ ಕಾರು ಪ್ರಕರಣ ಮಾಲೀಕ ಶಂಕಾಸ್ಪದ ಸಾವು

**ಮುಂಬೈ (ಪಿಟಿಐ):** ಉದ್ಯಮಿ ಮುಖೇಶ್ ಅಂಬಾನಿ ಅವರ ನಿವಾಸದ ಬಳಿ ಕಳೆದ ವಾರ ಪತ್ತೆಯಾಗಿದ್ದ ಸ್ಫೋಟಕಗಳಿದ್ದ ಎಸ್‌ಯುವಿ ವಾಹನದ ಮಾಲೀಕ ಹಿರೇನ್ ಮನ್‌ಸುಖ್ ಶಂಕಾಸ್ಪದವಾಗಿ ಶುಕ್ರವಾರ ಮೃತಪಟ್ಟಿದ್ದು, ಥಾಣೆ ಬಳಿ ಶವ ಪತ್ತೆಯಾಗಿದೆ.

45 ವರ್ಷದ ಅವರು ಗುರುವಾರದಿಂದ ನಾಪತ್ತೆಯಾಗಿದ್ದರು. ಥಾಣೆಯ ಮುಂಬ್ರಾ ರೇಟಿ ಬಂದರು ರಸ್ತೆಯ ಬದಿಯಲ್ಲಿ ಅವರ ಶವ ಪತ್ತೆಯಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಿಲೆಟಿನ್ ಕಡ್ಡಿಗಳಿದ್ದ, ಹಿರೇನ್ ಮಾಲೀಕತ್ವದ ಸ್ಕಾರ್ಪಿಯೊ ವಾಹನ ಅಂಬಾನಿ ಮನೆಯ ಬಳಿ ಫೆ. 25ರಂದು ಪತ್ತೆಯಾಗಿತ್ತು. ಈ ವಾಹನ ಫೆ.18ರಂದು ಐರೋಲಿ–ಮುಲುಂಡ್ ಸೇತುವೆ ಬಳಿಯಿಂದ ಕಳುವಾಗಿತ್ತು ಎಂದು ಪೊಲೀಸರು ತಿಳಿಸಿದ್ದರು.

ಕರಾಳ ದಿನ ಆಚರಣೆಗೆ ಕಿಸಾನ್ ಏಕತಾ ಮೋರ್ಚಾ ಸಿದ್ಧತೆ

# ರೈತರ ಪ್ರತಿಭಟನೆಗೆ 100 ದಿನ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೇಂದ್ರ ಸರ್ಕಾರದ ಮೂರು ನೂತನ ಕೃಷಿ ಕಾಯ್ದೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ ರೈತರು ದೆಹಲಿ ಗಡಿಗಳಲ್ಲಿ ನಡೆಸುತ್ತಿರುವ ಪ್ರತಿಭಟನೆಯು ಶನಿವಾರ 100ನೇ ದಿನಕ್ಕೆ ಕಾಲಿಡಲಿದೆ. ‘ಈ ದಿನವನ್ನು ಪ್ರತಿಭಟನೆನಿರತ ರೈತರು ಕರಾಳ ದಿನವನ್ನಾಗಿ ಆಚರಿಸಲಿದ್ದಾರೆ’ ಎಂದು ಪ್ರತಿಭಟನೆಯ ನೇತೃತ್ವ ವಹಿಸಿರುವ ಕಿಸಾನ್ ಏಕತಾ ಮೋರ್ಚಾ ಹೇಳಿದೆ.

ಪಂಜಾಬ್, ಹರಿಯಾಣದ ರೈತರು 2020ರ ನವೆಂಬರ್ 24ರಂದು ದೆಹಲಿ ಚಲೋ ಆರಂಭಿಸಿದ್ದರು. ಎರಡೂ ರಾಜ್ಯಗಳ ರೈತರು ಪೊಲೀಸರೊಂದಿಗೆ ಭಾರಿ ಸಂಘರ್ಷ ನಡೆಸಿ, ನವೆಂಬರ್ 26ರಂದು ದೆಹಲಿ ಗಡಿ ತಲುಪಿದ್ದರು. ದೆಹಲಿಯ ಸಿಂಘು ಮತ್ತು ಟಿಕ್ರಿ ಗಡಿಯಲ್ಲಿ ರೈತರನ್ನು ದೆಹಲಿ ಪೊಲೀಸರು ತಡೆದು ನಿಲ್ಲಿಸಿದ್ದರು. ಹೀಗಾಗಿ ರೈತರು ಅಲ್ಲಿಯೇ ಪ್ರತಿಭಟನೆ ಆರಂಭಿಸಿದ್ದರು. ಉತ್ತರಪ್ರದೇಶದಿಂದ ಬಂದಿದ್ದ ರೈತರನ್ನು ಗಾಜಿಪುರ ಗಡಿಯಲ್ಲಿ ತಡೆದು ನಿಲ್ಲಿಸಿದ ಕಾರಣ, ಅಲ್ಲಿಯೇ ಶಿಬಿರ ಹೂಡಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಪ್ರತಿಭಟನೆಯು ಈಗ 99 ದಿನಗಳನ್ನು ಪೂರೈಸಿ, ನೂರನೇ ದಿನಕ್ಕೆ ಕಾಲಿರಿಸಿದೆ.

ರೈತರ ಜತೆ ಕೇಂದ್ರ ಸರ್ಕಾರವು ಈವರೆಗೆ 11 ಸುತ್ತಿನ ಮಾತುಕತೆ ನಡೆಸಿದೆ. ಕಾಯ್ದೆಗಳಲ್ಲಿ ಬದಲಾವಣೆಗಳನ್ನು ತರುವುದಾಗಿ ಹೇಳಿದೆ. ಆದರೆ ಕಾಯ್ದೆಗಳನ್ನು ರದ್ದುಪಡಿಸಬೇಕು ಎಂಬ ಪಟ್ಟನ್ನು ರೈತರು ಸಡಿಲಿಸದ ಕಾರಣ, ಪ್ರತಿಭಟನೆ ಮುಂದುವರಿದಿದೆ.

‘ಕಾಯ್ದೆಗಳನ್ನು ರದ್ದುಪಡಿಸುವವರೆಗೆ ಪ್ರತಿಭಟನೆ ಮುಂದುವರಿಸಲು ರೈತರು ಸಿದ್ಧರಿದ್ದಾರೆ. ಬೇಸಿಗೆಯ ಸುಡುಬಿಸಿಲಿನ ದಿನಗಳನ್ನು ಎದುರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಮತ್ತೆ ಮಾತುಕತೆಗೆ ಬರಬೇಕು. ಕಾಯ್ದೆಗಳನ್ನು ರದ್ದುಪಡಿಸಬೇಕು’ ಎಂದು ಕಿಸಾನ್ ಏಕತಾ ಮೋರ್ಚಾ ಹೇಳಿದೆ.

## ಹೆದ್ದಾರಿ ತಡೆ ಮತ್ತು ಕಪ್ಪು ಧ್ವಜ

‘ಪ್ರತಿಭಟನೆಯ ಸ್ಥಳದಲ್ಲಿ ಶನಿವಾರ ಕಪ್ಪುಧ್ವಜವನ್ನು ಹಾರಿಸುವ ಮೂಲಕ ಕರಾಳ ದಿನವನ್ನು ಆಚರಿಸಲು ರೈತ ಸಂಘಟನೆಗಳು ನಿರ್ಧರಿಸಿವೆ. ದೇಶದ ಎಲ್ಲಾ ರಾಜ್ಯಗಳ ಜಿಲ್ಲಾಕೇಂದ್ರಗಳಲ್ಲಿ ರೈತ ಸಂಘಟನೆಗಳು ಪ್ರತಿಭಟನೆ ನಡೆಸಲಿವೆ. ಅಲ್ಲಿಯೂ ಕಪ್ಪುಧ್ವಜವನ್ನು ಹಾರಿಸಿ, ಕರಾಳ ದಿನವನ್ನು ಆಚರಿಸಲಾಗುತ್ತದೆ’ ಎಂದು ಕಿಸಾನ್ ಏಕತಾ ಮೋರ್ಚಾ ಹೇಳಿದೆ.

‘ಪ್ರತಿಭಟನೆಯು ನೂರನೇ ದಿನಕ್ಕೆ ಕಾಲಿರಿಸಿರುವುದರ ಅಂಗವಾಗಿ ದೆಹಲಿಯಲ್ಲಿ ಹೆದ್ದಾರಿ ತಡೆ ನಡೆಸಲು ನಿರ್ಧರಿಸಲಾಗಿದೆ. ಉತ್ತರ ದೆಹಲಿಯಿಂದ ದಕ್ಷಿಣ ದೆಹಲಿಗೆ ಸಂಪರ್ಕ ಕಲ್ಪಿಸುವ ಕೆಎಂಪಿ ಎಕ್ಸ್‌ಪ್ರೆಸ್‌ವೇಯಲ್ಲಿ ಶನಿವಾರ ಬೆಳಿಗ್ಗೆ 11ಗಂಟೆಗೆ ಹೆದ್ದಾರಿ ತಡೆ ನಡೆಸಲಾಗುತ್ತದೆ. ಸಂಜೆ 4ರವರೆಗೂ ಹೆದ್ದಾರಿ ತಡೆ ನಡೆಯಲಿದೆ’ ಎಂದು ಕಿಸಾನ್ ಏಕತಾ ಮೋರ್ಚಾ ಹೇಳಿದೆ.

‘ರೈತರ ಪ್ರತಿಭಟನೆಗೆ ನೆರವು ಮತ್ತು ಬೆಂಬಲ ನೀಡುತ್ತಿರುವವರ ಮೇಲೆ ಕೇಂದ್ರ ಸರ್ಕಾರವು ದಾಳಿ ನಡೆಸುತ್ತಿದೆ. ಬೆಂಬಲ ನೀಡುತ್ತಿರುವವರ ಮೇಲೆ ಆದಾಯ ತೆರಿಗೆ ಇಲಾಖೆಯ ದಾಳಿ ನಡೆಸುತ್ತಿದೆ. ಈ ಮೂಲಕ ರೈತರ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಆದರೆ, ಈ ಕಾಯ್ದೆಗಳನ್ನು ರದ್ದುಪಡಿಸುವವರೆಗೂ ರೈತರು ತಮ್ಮ ಹೋರಾಟದಿಂದ ಹಿಂದೆಸರಿಯುವುದಿಲ್ಲ’ ಎಂದು ಕಿಸಾನ್ ಏಕತಾ ಮೋರ್ಚಾ ಹೇಳಿದೆ.

### ಸಂಕ್ಷಿಪ್ತ ಸುದ್ದಿ

## ಮಹಾರಾಷ್ಟ್ರ: ವಿದ್ಯುತ್ ಮಗ್ಗ ಕಾರ್ಖಾನೆಯಲ್ಲಿ ಬೆಂಕಿ

**ಥಾಣೆ (ಪಿಟಿಐ):** ‘ಮಹಾರಾಷ್ಟ್ರದ ಭಿವಂಡಿ ಪಟ್ಟಣದ ವಿದ್ಯುತ್ ಮಗ್ಗ ಕಾರ್ಖಾನೆಯೊಂದರಲ್ಲಿ ಶುಕ್ರವಾರ ಮುಂಜಾನೆ ಬೆಂಕಿ ಕಾಣಿಸಿಕೊಂಡಿತು’ ಎಂದು ಅಧಿಕಾರಿಗಳು ತಿಳಿಸಿದರು.

‘ನೈಗಾಂವ್ ರಸ್ತೆಯಲ್ಲಿರುವ ವಿದ್ಯುತ್ ಮಗ್ಗ ಕಾರ್ಖಾನೆಯಲ್ಲಿ ಬೆಳಿಗ್ಗೆ 2.20ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದ್ದು ಸಂಪೂರ್ಣ ಸುಟ್ಟು ಕರಕಲಾಗಿದೆ. ಆದರೆ, ಯಾವುದೇ ಸಾವು–ನೋವು ಸಂಭವಿಸಿಲ್ಲ’ ಎಂದು ವಿಪತ್ತು ನಿರ್ವಹಣಾ ಇಲಾಖೆಯ(ಆರ್‌ಡಿಎಂಸಿ) ಪ್ರಾದೇಶಿಕ ಮುಖ್ಯಸ್ಥ ಸಂತೋಷ್ ಖದಂ ಹೇಳಿದರು.

‘ಅಗ್ನಿಶಾಮಕದಳದ ಸಿಬ್ಬಂದಿ ಸತತ ಎರಡು ಗಂಟೆ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಿದರು. ಕಾರ್ಖಾನೆಗೆ ಬೆಂಕಿ ಹೇಗೆ ತಗುಲಿತು ಎಂಬುದರ ಬಗ್ಗೆ ತಿಳಿದುಬಂದಿಲ್ಲ’ ಎಂದು ಅವರು ಹೇಳಿದರು.

## ಇಂಧನ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಆನ್‌ಲೈನ್ ಅಭಿಯಾನ

**ನವದೆಹಲಿ (ಪಿಟಿಐ):** ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ವಿರೋಧಿಸಿ ‘ಸ್ಪೀಕ್ ಅಪ್ ಎಗೇನ್ಸ್ಟ್ ಪ್ರೈಸ್ ರೈಸ್’ ಎಂಬ ಆನ್‌ಲೈನ್ ಅಭಿಯಾನವನ್ನು ಕಾಂಗ್ರೆಸ್ ಪಕ್ಷ ಶುಕ್ರವಾರ ಆರಂಭಿಸಿದ್ದು ಎಲ್ಲರೂ ಇದರಲ್ಲಿ ಭಾಗವಹಿಸುವಂತೆ ಟ್ವಿಟರ್ ಮೂಲಕ ಮನವಿ ಮಾಡಿದೆ.



ರಾಹುಲ್ ಗಾಂಧಿ

‘ಬಿಜೆಪಿ ಎಂದರೆ ‘ಬರ್ಡನ್ ದ ಜನತಾ ಪಾರ್ಟಿ’ ಎಂದು ವ್ಯಂಗ್ಯವಾಡಿರುವ ಕಾಂಗ್ರೆಸ್, ಬಿಜೆಪಿಯ ಲೂಟಿಯ ಬಗ್ಗೆ ಎಷ್ಟು ಬೇಗ ಧ್ವನಿ ಎತ್ತುತ್ತೇವೋ ಅಷ್ಟು ಬೇಗ ರಾಷ್ಟ್ರಕ್ಕೆ ಅಷ್ಟೇ ಒಳ್ಳೆಯದಾಗುತ್ತದೆ. SpeakUpAgainstPriceRise ಅಭಿಯಾನದಲ್ಲಿ ನೀವೂ ಭಾಗಿಯಾಗಿ’ ಎಂದು ಕಾಂಗ್ರೆಸ್ ಪಕ್ಷ ಜನರಿಗೆ ಮನವಿ ಮಾಡಿದೆ.

‘ಬೆಲೆ ಏರಿಕೆ ಒಂದು ಶಾಪವಾಗಿದೆ. ಕೇಂದ್ರ ಸರ್ಕಾರ ತೆರಿಗೆಯನ್ನು ಸಂಗ್ರಹಿಸಲು ಇಂಧನ ದರ ಏರಿಕೆ ಮಾಡಿದೆ. ಈ ಮೂಲಕ ಜನರನ್ನು ಹಳ್ಳಕ್ಕೆ ತಳ್ಳುತ್ತಿದೆ. ದೇಶದ ವಿನಾಶದ ವಿರುದ್ಧ ನಿಮ್ಮ ಧ್ವನಿ ಎತ್ತಿ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ. ಇದರೊಂದಿಗೆ ಇಂಧನ ಬೆಲೆ ಏರಿಕೆಗೆ ಸಂಬಂಧಿಸಿದ ವಿಡಿಯೊವನ್ನು ಕೂಡ ಹಂಚಿಕೊಂಡಿದ್ದಾರೆ.

## ಪಾರಂಪರಿಕ ಕಟ್ಟಡಗಳ ಸೌಂದರ್ಯಕ್ಕೆ ಕುತ್ತುತಂದ ಅತಿಕ್ರಮಣ

**ಜೈಪುರ (ಪಿಟಿಐ):** ಅರಮನೆ ನಗರಿ ಜೈಪುರದಲ್ಲಿ 3,130ಕ್ಕೂ ಹೆಚ್ಚು ಅತಿಕ್ರಮಣಗಳು ಮತ್ತು ಅಕ್ರಮ ನಿರ್ಮಾಣಗಳು ಪಾರಂಪರಿಕ ಕಟ್ಟಡಗಳ ಮುಖಚಹರೆಯನ್ನೇ ಬದಲಾಯಿಸಿವೆ ಎಂದು ರಾಜಸ್ಥಾನ ನಗರಾಭಿವೃದ್ಧಿ ಮತ್ತು ವಸತಿ ಸಚಿವ ಶಾಂತಿ ಧರಿವಾಲ್ ಶುಕ್ರವಾರ ಹೇಳಿದ್ದಾರೆ.

ಬಿಜೆಪಿ ಶಾಸಕ ಜಗ್ಸಿರಾಮ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2019ರಲ್ಲಿ ನಡೆಸಿದ ಸರ್ವೆಯಲ್ಲಿ ಅತಿಕ್ರಮಣ ಮತ್ತು ಅಕ್ರಮ ನಿರ್ಮಾಣಗಳನ್ನು ಗುರುತಿಸಲಾಗಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು.

ಕೋಟೆಯ ನಗರ ಪ್ರದೇಶಗಳಲ್ಲಿ ವಾಸಿಸುವ ಜನರು ಹಲವಾರು ದಶಕಗಳಿಂದ ಅಕ್ರಮ ನಿರ್ಮಾಣ ಮತ್ತು ಅತಿಕ್ರಮಣ ನಡೆಸಿದ್ದಾರೆ. ಅತಿಕ್ರಮಣ ಮಾಡಿ ನಿರ್ಮಿಸಿರುವ ಕಟ್ಟಡಗಳು ಅರಮನೆ ನಗರಿಯ ಬಾಹ್ಯನೋಟವನ್ನೇ ಬದಲಿಸಿಬಿಟ್ಟಿವೆ. 2019ರ ಜನವರಿಯಿಂದ ಈವರೆಗೆ 739 ಒತ್ತುವರಿದಾರರಿಗೆ ಮಹಾನಗರ ಪಾಲಿಕೆ ನೋಟಿಸ್‌ಗಳನ್ನು ನೀಡಿದೆ ಎಂದು ಸಚಿವರು ತಿಳಿಸಿದರು.

## ‘ಮಾ. 16ರವರೆಗೆ ಅರ್ನಬ್ ವಿರುದ್ಧ ಕ್ರಮ ಇಲ್ಲ’

**ಮುಂಬೈ:** ಟೆಲಿವಿಷನ್ ರೇಟಿಂಗ್ ಪಾಯಿಂಟ್ (ಟಿಆರ್‌ಪಿ) ಹಗರಣಕ್ಕೆ ಸಂಬಂಧ, ಪತ್ರಕರ್ತ ಅರ್ನಬ್ ಗೋಸ್ವಾಮಿ ಮತ್ತು ಎಆರ್‌ಜಿ ಔಟ್‌ಲಿಯರ್ ಮೀಡಿಯಾ ಸಂಸ್ಥೆಯ ಇತರ ಉದ್ಯೋಗಿಗಳ ವಿರುದ್ಧ ಮಾರ್ಚ್ 16ರವರೆಗೆ ಯಾವುದೇ ಕ್ರಮ ಜರುಗಿಸುವುದಿಲ್ಲ ಎಂದು ಮುಂಬೈನ ಪೊಲೀಸರು ಬಾಂಬೆ ಹೈಕೋರ್ಟ್‌ಗೆ ಭರವಸೆ ನೀಡಿದ್ದಾರೆ.

ಮುಂಬೈ ಪೊಲೀಸ್ ಪರವಾಗಿ ಹಾಜರಿದ್ದ ವಕೀಲ ಕಪಿಲ್ ಸಿಬಲ್ ಅವರು, ನ್ಯಾಯಮೂರ್ತಿ ಎಸ್.ಎಸ್.ಶಿಂಧೆ ಮತ್ತು ಮನಿಶ್ ಪಿತಾಲೆ ಅವರಿದ್ದ ಪೀಠಕ್ಕೆ ಈ ಭರವಸೆ ನೀಡಿದರು. ಟಿಆರ್‌ಪಿ ಹಗರಣ ಸಂಬಂಧ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಪ್ರಶ್ನಿಸಿ ‘ದ ರಿಪಬ್ಲಿಕ್’ ವಾಹಿನಿ ಮಾಲೀಕತ್ವದ ಎಆರ್‌ಜಿ ಔಟ್‌ಲಿಯರ್ ಮೀಡಿಯಾ ಅರ್ಜಿ ಸಲ್ಲಿಸಿದೆ. ಕಪಿಲ್ ಸಿಬಲ್ ಅವರ ಹೇಳಿಕೆ ಒಪ್ಪಿದ ಕೋರ್ಟ್, ಅಂತಿಮ ವಿಚಾರಣೆಯನ್ನು ಮಾ. 16ಕ್ಕೆ ಮುಂದೂಡಿತು.

# ಸುಶಾಂತ್ ಸಾವು ಪ್ರಕರಣ ಆರೋಪಪಟ್ಟಿ ಸಲ್ಲಿಕೆ

## ರಿಯಾ ಚಕ್ರವರ್ತಿ ಸೇರಿ 33 ಆರೋಪಿಗಳು: ಎನ್‌ಸಿಬಿ

ರಿಯಾ ಚಕ್ರವರ್ತಿ

**ಮುಂಬೈ (ಪಿಟಿಐ):** ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾದಕ ವಸ್ತು ನಿಯಂತ್ರಣ ಬ್ಯೂರೊ (ಎನ್‌ಸಿಬಿ) ಇಲ್ಲಿನ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ಆರೋಪಪಟ್ಟಿಯನ್ನು ಸಲ್ಲಿಸಿದೆ. ಸುಶಾಂತ್ ಅವರ ಮಾಜಿ ಮ್ಯಾನೇಜರ್ ರಿಯಾ ಚಕ್ರವರ್ತಿ ಮತ್ತು ಅವರ ಸೋದರ ಶೋವಿಕ್ ಚಕ್ರವರ್ತಿ ಸೇರಿದಂತೆ 33 ಜನರನ್ನು ಆರೋಪಪಟ್ಟಿಯಲ್ಲಿ ಹೆಸರಿಸಲಾಗಿದೆ. ಸುಶಾಂತ್ ಅವರ ಮನೆಯ ಕೆಲಸದಾಳುಗಳ ಹೆಸರೂ ಆರೋಪಪಟ್ಟಿಯಲ್ಲಿ ಇದೆ.

ಸುಶಾಂತ್ ಸಿಂಗ್ ಅವರ ತಂದೆ ಪಟ್ನಾದಲ್ಲಿ ದಾಖಲಿಸಿದ್ದ ವಂಚನೆ, ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆ ವೇಳೆ ಮಾದಕವಸ್ತು ಪೂರೈಕೆಗೆ ಸಂಬಂಧಿಸಿದ ಕೆಲವು ಸಾಕ್ಷ್ಯಗಳನ್ನು ಜಾರಿ ನಿರ್ದೇಶನಾಲಯವು ಕಲೆ ಹಾಕಿತ್ತು. ಈ ಸಾಕ್ಷ್ಯಗಳನ್ನು ಎನ್‌ಸಿಬಿಗೆ ಹಸ್ತಾಂತರಿಸಿತ್ತು. 2020ರ ಸೆಪ್ಟೆಂಬರ್‌ನಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಎನ್‌ಸಿಬಿ, ಈಗ ಆರೋಪಪಟ್ಟಿ ಸಲ್ಲಿಸಿದೆ.

**ಮುಖ್ಯಾಂಶಗಳು**
- 11,700 ಪುಟಗಳ ಬೃಹತ್ ಆರೋಪಪಟ್ಟಿ. 50,000 ಪುಟಗಳ ಡಿಜಿಟಲ್ ಪ್ರತಿ
- 200 ಜನ ಸಾಕ್ಷ್ಯ, ಸುಶಾಂತ್ ಮನೆಯಾಳುಗಳೂ ಆರೋಪಿಗಳು

ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿಯು 11,700 ಪುಟಗಳನ್ನು ಹೊಂದಿದೆ. ಅಲ್ಲದೆ, ಸುಮಾರು 50,000 ಪುಟಗಳಷ್ಟು ಇರುವ ಆರೋಪಪಟ್ಟಿಯ ಡಿಜಿಟಲ್ ಪ್ರತಿಯನ್ನೂ ನ್ಯಾಯಾಲಯಕ್ಕೆ ಎನ್‌ಸಿಬಿ ಸಲ್ಲಿಸಿದೆ.

‘ತನಿಖೆ ವೇಳೆ ವಶಕ್ಕೆ ಪಡೆಯಲಾದ ಮಾದಕವಸ್ತುಗಳು, ಮಾದಕವಸ್ತುಗಳ ಪರೀಕ್ಷಾ ವರದಿಗಳು, ಹಲವು ಸ್ವರೂಪದ ಸಾಕ್ಷ್ಯಗಳು, ವಾಟ್ಸ್‌ಆ್ಯಪ್ ಚಾಟ್‌ನ ಸ್ಕ್ರೀನ್‌ಶಾಟ್‌ಗಳು, ಮೊಬೈಲ್ ಕರೆ ಮತ್ತು ಎಸ್‌ಎಂಎಸ್ ವಿವರ, ಹಣ ವರ್ಗಾವಣೆ ವಿವರಗಳನ್ನು ಎನ್‌ಸಿಬಿ ಕಲೆಹಾಕಿತ್ತು. ಈ ಸಾಕ್ಷ್ಯಗಳು, 30 ಆರೋಪಿಗಳ ಹೇಳಿಕೆಗಳು ಮತ್ತು 200 ಸಾಕ್ಷಿಗಳ ಹೇಳಿಕೆಯನ್ನು ಎನ್‌ಸಿಬಿ ದಾಖಲಿಸಿಕೊಂಡಿತ್ತು. ಇವುಗಳ ಆಧಾರದ ಮೇಲೆ ಆರೋಪಪಟ್ಟಿಯನ್ನು ಸಿದ್ಧಪಡಿಸಲಾಗಿದೆ’ ಎಂದು ಎನ್‌ಸಿಬಿ ಹೇಳಿವೆ.

‘ತನಿಖೆಯ ವೇಳೆ ಭಾರಿ ಪ್ರಮಾಣದಲ್ಲಿ ಚರಸ್, ಗಾಂಜಾ, ಎಲ್‌ಎಸ್‌ಡಿ ಮತ್ತು ಎಕ್ಸ್‌ಟೆಸಿ ಮಾದಕವಸ್ತುಗಳನ್ನು ವಶಕ್ಕೆ ಪಡೆಯಲಾಗಿತ್ತು. ಅಲ್ಲದೆ, ಮತ್ತು ಬರಿಸುವ ಔಷಧಗಳನ್ನೂ ಭಾರಿ ಪ್ರಮಾಣದಲ್ಲಿ ವಶಕ್ಕೆ ಪಡೆಯಲಾಗಿತ್ತು. ಜತೆಗೆ ಸಂಬಂಧಪಟ್ಟ ಕಾಯ್ದೆಗಳ ಅಡಿ ಕ್ರಮ ತೆಗೆದುಕೊಳ್ಳಲಾಗಿದೆ. ತನಿಖೆ ಇನ್ನೂ ನಡೆಯುತ್ತಿದೆ. ಇನ್ನೂ ಹಲವು ಅನಾಮಧೇಯ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಬೇಕಿದೆ. ಶೀಘ್ರದಲ್ಲೇ ಪೂರಕ ಆರೋಪಪಟ್ಟಿಯನ್ನು ಸಲ್ಲಿಸುತ್ತೇವೆ’ ಎಂದು ಎನ್‌ಸಿಬಿ ತಿಳಿಸಿದೆ.

**8 ಮಂದಿ ಇನ್ನೂ ಕಸ್ಟಡಿಯಲ್ಲಿ:** ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಸಿಬಿ ಈವರೆಗೆ 30 ಜನರನ್ನು ಬಂಧಿಸಿತ್ತು. ವಿಚಾರಣೆಯ ನಂತರ ಹಲವರನ್ನು ಬಿಡುಗಡೆ ಮಾಡಿತ್ತು. ರಿಯಾ ಚಕ್ರವರ್ತಿ ಮತ್ತು ಶೋವಿಕ್ ಚಕ್ರವರ್ತಿ ಅವರು ಈಚೆಗೆ ಜಾಮೀನಿನ ಮೇಲೆ ಹೊರಗೆ ಬಂದಿದ್ದರು. ಆದರೆ, ಇನ್ನೂ ಎಂಟು ಮಂದಿ ಎನ್‌ಸಿಬಿ ಬಂಧನದಲ್ಲಿ ಇದ್ದು, ವಿಚಾರಣೆ ನಡೆಯುತ್ತಿದೆ.

## ಕೋವಿಡ್: ಶಾಲೆ ಸೀಲ್ ಡೌನ್

ಒಂದನೇ ಪುಟದಿಂದ....

ಈ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಡಿ. ಹನುಮಂತರಾಯ ಅವರು ವಿಸ್ತೃತ ವರದಿ ಸಲ್ಲಿಸಿದ್ದಾರೆ.

ಕಲಬುರ್ಗಿ ಜಿಲ್ಲೆಯ ಕಾಳಗಿ ಪ್ರಕರಣದಲ್ಲಿ ಸರ್ಕಾರಿ ಪ್ರೌಢಶಾಲೆಗೆ 15 ದಿನ ರಜೆ ಘೋಷಿಸಲಾಗಿದೆ. ‘ಮಾರ್ಚ್ 1ರಂದು 20 ವಿದ್ಯಾರ್ಥಿಗಳ ಗಂಟಲು ದ್ರವದ ಮಾದರಿ ಪಡೆಯಲಾಗಿತ್ತು. ಎಲ್ಲರಲ್ಲೂ ರೋಗ ಲಕ್ಷಣಗಳಿಲ್ಲ. ಹೆಚ್ಚಿನ ವಿದ್ಯಾರ್ಥಿಗಳು ಕಾಳಗಿ ಸುತ್ತಮುತ್ತಲಿನ ತಾಂಡಾದ ನಿವಾಸಿಗಳು’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ರಾಜಶೇಖರ ಮಾಲಿ ತಿಳಿಸಿದ್ದಾರೆ.

‘ಶುಕ್ರವಾರ ಶಾಲೆಯ 174 ಜನ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಅಡುಗೆ ಸಿಬ್ಬಂದಿಯ ಗಂಟಲು ದ್ರವದ ಮಾದರಿಯನ್ನು ಸಂಗ್ರಹಿಸಲಾಗಿದೆ. ಇದರ ಫಲಿತಾಂಶ ಶನಿವಾರ ಬರುವ ನಿರೀಕ್ಷೆ ಇದೆ’ ಎಂದು ಹೇಳಿದರು.

‘ಸಾಸ್ವೆಹಳ್ಳಿ ಕೆಪಿಎಸ್ ಶಾಲೆ ವಿದ್ಯಾರ್ಥಿಗೆ ಸೋಂಕು ದೃಢಪಟ್ಟ ಕಾರಣ ಸಹ ವಿದ್ಯಾರ್ಥಿಗಳನ್ನೂ ಪರೀಕ್ಷೆಗೆ ಒಳಪಡಿಸಲಾಗಿದೆ. ಅದರ ಫಲಿತಾಂಶ ಬರುವವರೆಗೆ ರಜೆ ನೀಡಲಾಗಿದೆ’ ಎಂದು ಹೊನ್ನಾಳಿ ಕ್ಷೇತ್ರ ಶಿಕ್ಷಣಾಧಿಕಾರಿ ಜೆ.ಇ.ರಾಜೀವ್ ತಿಳಿಸಿದ್ದಾರೆ.

ಬೆಂಗಳೂರಿನ ಪ್ರಕರಣದಲ್ಲಿ ಫೆ.26ರಂದು ಇಬ್ಬರು ಶಿಕ್ಷಕರಲ್ಲಿ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿದ್ದವು. ಪರೀಕ್ಷೆ ಬಳಿಕ ಅವರು ಕೋವಿಡ್ ಪೀಡಿತರಾಗಿರುವುದು ಮಾ.1ರಂದು ದೃಢಪಟ್ಟಿತ್ತು. ಬಳಿಕ ಮುಖ್ಯೋಪಾಧ್ಯಾಯರು 8, 9 ಮತ್ತು 10ನೇ ತರಗತಿಯ ಎಲ್ಲ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಪರೀಕ್ಷೆ ನಡೆಸಲು ಸೂಚಿಸಿದ್ದರು.

‘ಶಾಲೆಯ ಕಟ್ಟಡ ಹಾಗೂ ಆವರಣವನ್ನು ಸೋಂಕು ನಿವಾರಕದಿಂದ ಸ್ವಚ್ಛಪಡಿಸಲಾಗಿದೆ. ವಿದ್ಯಾರ್ಥಿಗಳ ಪೋಷಕರನ್ನು ಶಾಲೆಗೆ ಕರೆಸಿ, ಧೈರ್ಯ ಹೇಳಲಾಗಿದೆ. ಅವರಿಗೂ ಕೋವಿಡ್ ತಪಾಸಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ರೋಗ ಲಕ್ಷಣಗಳು ಇಲ್ಲ’ ಎಂದು ಡಿ. ಹನುಮಂತರಾಯ ತಿಳಿಸಿದ್ದಾರೆ.

## ಇ.ಡಿ ವ್ಯಾಪ್ತಿ ಪ್ರಶ್ನಿಸಿ ಫಾರೂಕ್ ಅಬ್ದುಲ್ಲಾ ನ್ಯಾಯಾಲಯಕ್ಕೆ ಮೊರೆ

**ಶ್ರೀನಗರ:** ಆಸ್ತಿ ಮುಟ್ಟುಗೋಲು ಹಾಕಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ವ್ಯಾಪ್ತಿಯನ್ನು ಪ್ರಶ್ನಿಸಿ ಸಂಸದ ಫಾರೂಕ್ ಅಬ್ದುಲ್ಲಾ ಅವರು ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಕ್ರಿಕೆಟ್ ಅಸೋಸಿಯೆಷನ್‌ನಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಕಳೆದ ವರ್ಷ ಡಿಸೆಂಬರ್ 19ರಂದು ಫಾರೂಕ್ ಅಬ್ದುಲ್ಲಾಗೆ ಸೇರಿದ ಶ್ರೀನಗರ, ಬಾರಾಮುಲ್ಲಾ ಮತ್ತು ಜಮ್ಮುವಿನಲ್ಲಿರುವ ಮೂರು ಮನೆಗಳು ಮತ್ತು ವಾಣಿಜ್ಯ ಕಟ್ಟಡಗಳನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿತ್ತು.

ಜತೆಗೆ, ಜಮ್ಮು ಮತ್ತು ಕಾಶ್ಮೀರದಲ್ಲಿನ ಜಮೀನುಗಳನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು.

ಟರ್ಕಿ ಸೇನೆಯ ಹೆಲಿಕಾಪ್ಟರ್ ಪತನವಾಗಿರುವ ಸ್ಥಳ

## ಟರ್ಕಿ: ಸೇನಾ ಹೆಲಿಕಾಪ್ಟರ್ ಪತನ, ಲೆ.ಜನರಲ್ ಸೇರಿ 11 ಮಂದಿ ಸಾವು

ಅಂಕಾರಾ (ಎಪಿ): ಟರ್ಕಿಯ ಪೂರ್ವ ಭಾಗದಲ್ಲಿ ಸೇನಾ ಹೆಲಿಕಾಪ್ಟರ್ ಪತನವಾಗಿದ್ದು, 11 ಮಂದಿ ಸೇನಾ ಸಿಬ್ಬಂದಿ ಸಾವಿಗೀಡಾಗಿದ್ದಾರೆ ಹಾಗೂ ಇಬ್ಬರು ಗಾಯಗೊಂಡಿರುವುದಾಗಿ ರಕ್ಷಣಾ ಸಚಿವಾಲಯ ತಿಳಿಸಿದೆ.

ಕರಾವಳಿ ಪ್ರದೇಶಗಳಲ್ಲಿ ಬಳಸುವ ಕೂಗರ್ ರೀತಿಯ ಹೆಲಿಕಾಪ್ಟರ್ ತತ್ವಾನ್ ಪಟ್ಟಣದ ಸಮೀಪ ಪತನಗೊಂಡಿದೆ. ಬಿಟ್ಲಿಸ್ ಪ್ರಾಂತ್ಯದಲ್ಲಿ ಈ ದುರ್ಘಟನೆ ಸಂಭವಿಸಿದ್ದು, ಬಿಂಗಾಲ್ ಪ್ರದೇಶದಿಂದ ಹಾರಾಟ ಆರಂಭಿಸಿದ್ದ ಹೆಲಿಕಾಪ್ಟರ್ ಮಧ್ಯಾಹ್ನ 2:25ಕ್ಕೆ ಸಂಪರ್ಕ ಕಡಿದುಕೊಂಡಿತ್ತು ಎಂದು ಸಚಿವಾಲಯ ಮಾಹಿತಿ ನೀಡಿದೆ.

ಸೇನೆಯ ಲೆಫ್ಟಿನೆಂಟ್ ಜನರಲ್ ಉಸ್ಮಾನ್ ಎರ್ಬಾಸ್ ಸಹ ಮೃತಪಟ್ಟಿರುವುದಾಗಿ ವರದಿಯಾಗಿದೆ. ಪತನ ಸ್ಥಳದಲ್ಲಿಯೇ ಒಂಬತ್ತು ಮಂದಿ ಸಾವಿಗೀಡಾಗಿದ್ದು, ತೀವ್ರವಾಗಿ ಗಾಯಗೊಂಡಿದ್ದ ಇಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿರುವುದಾಗಿ ಅಧಿಕಾರಿ ಹೇಳಿದರು.

## ರಕ್ಷಣಾ ಬಜೆಟ್ ಹೆಚ್ಚಿಸಿದ ಚೀನಾ

ಬೀಜಿಂಗ್ (ಪಿಟಿಐ): ಈ ಬಾರಿಯ ಬಜೆಟ್‌ನಲ್ಲಿ ರಕ್ಷಣಾ ಇಲಾಖೆಗೆ ಆದ್ಯತೆ ನೀಡಿರುವ ಚೀನಾ, ಶೇ 6.8ರಷ್ಟು ಮೊತ್ತವನ್ನು ಹೆಚ್ಚಿಸಿದೆ.

2021ರ ಬಜೆಟ್‌ನಲ್ಲಿ 20,900 ಕೋಟಿ ಡಾಲರ್‌ನಷ್ಟು (₹15,23,504.45 ಕೋಟಿ) ಅನುದಾನ ನಿಗದಿಪಡಿಸಿದೆ. ದೇಶದ ಸಂಸತ್‌ನಲ್ಲಿ ಚೀನಾ ಪ್ರಧಾನಿ ಲಿ ಕೆಖಿಯಾಂಗ್ ಮಂಡಿಸಿದ ಬಜೆಟ್‌ನಲ್ಲಿ ಈ ವಿಷಯ ಪ್ರಕಟಿಸಿದರು.

ಕಳೆದ ವರ್ಷ ಚೀನಾ 196.44 ಬಿಲಿಯನ್ ಡಾಲರ್ ಮೊತ್ತವನ್ನು ಬಜೆಟ್‌ನಲ್ಲಿ ನಿಗದಿಪಡಿಸಲಾಗಿತ್ತು.

ರಕ್ಷಣಾ ಇಲಾಖೆಯ ಬಜೆಟ್ ಹೆಚ್ಚಿಸಿರುವುದನ್ನು ಸಮರ್ಥಿಸಿಕೊಂಡಿರುವ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್ (ಎನ್‌ಪಿಸಿ) ವಕ್ತಾರ ಝಾಂಗ್ ಯೆಸುಯಿ, 'ರಾಷ್ಟ್ರದ ರಕ್ಷಣೆಗೆ ಸಂಬಂಧಿಸಿದ ವಿಷಯ ಇದಾಗಿದೆ. ಆದರೆ, ಯಾವುದೇ ದೇಶವನ್ನು ಗುರಿಯಾಗಿರಿಸಿಕೊಂಡು ಅಥವಾ ಬೆದರಿಕೆ ಹಾಕಲು ಅನುದಾನವನ್ನು ಹೆಚ್ಚಿಸಿಲ್ಲ' ಎಂದು ಪ್ರತಿಪಾದಿಸಿದ್ದಾರೆ.

### ಅಮೆರಿಕ ಅಧ್ಯಕ್ಷ ಜೋ ಬೈಡನ್ ಮುಂದೆ ಮನದಾಳದ ಮಾತು ಬಿಚ್ಚಿಟ್ಟ ಬಾಹ್ಯಾಕಾಶ ವಿಜ್ಞಾನಿ ಸ್ವಾತಿ ಮೋಹನ್

# ಸ್ಟಾರ್ ಟ್ರೆಕ್ ಧಾರಾವಾಹಿಯೇ ಸ್ಫೂರ್ತಿ

ವಾಷಿಂಗ್ಟನ್ (ಪಿಟಿಐ): 'ನಾನು ಮಗುವಾಗಿದ್ದಾಗ ಸ್ಟಾರ್ ಟ್ರೆಕ್ ಧಾರಾವಾಹಿ ನೋಡುತ್ತಿದ್ದೆ. ಬಾಹ್ಯಾಕಾಶ ಸಂಶೋಧನೆಯ ಆಕರ್ಷಣೆಗೆ ಒಳಗಾಗಲು ಈ ಧಾರಾವಾಹಿಯೇ ಸ್ಫೂರ್ತಿ' ಎಂದು ಏರೋಸ್ಪೇಸ್ ಎಂಜಿನಿಯರ್ ಸ್ವಾತಿ ಮೋಹನ್ ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಜತೆ ನಡೆದ ವರ್ಚುವಲ್ ಸಮಾಲೋಚನೆ ಸಂದರ್ಭದಲ್ಲಿ ಸ್ವಾತಿ ಮೋಹನ್ ಅವರು ಬಾಹ್ಯಾಕಾಶ ಲೋಕಕ್ಕೆ ಸಂಬಂಧಿಸಿದ ತಮ್ಮ ಅನುಭಗಳನ್ನು ಬಿಚ್ಚಿಟ್ಟಿದ್ದಾರೆ.

ಸ್ವಾತಿ ಮೋಹನ್

'ಬಾಹ್ಯಾಕಾಶದ ದೃಶ್ಯಗಳು ಅದ್ಭುತವಾಗಿದ್ದವು. ಇಂತಹ ದೃಶ್ಯಗಳೇ ಬಾಹ್ಯಾಕಾಶದ ಬಗ್ಗೆ ಕುತೂಹಲ ಮೂಡಿಸಿದ್ದವು. ಅಲ್ಲಿನ ಹೊಸ ವಿಷಯಗಳು ಮತ್ತು ಅಲ್ಲಿರುವ ಅಸ್ತಿತ್ವದ ಬಗ್ಗೆ ಅಧ್ಯಯನ ಮಾಡಬೇಕು ಎನ್ನುವ ಛಲ ಮೂಡತೊಡಗಿತು' ಎಂದು ಸ್ವಾತಿ ಮೋಹನ್ ತಿಳಿಸಿದ್ದಾರೆ.

ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ' ಕಳುಹಿಸಿದ್ದ 'ಪರ್ಸಿವಿಯರೆನ್ಸ್' ರೋವರ್ ನೌಕೆಯು ಯಶಸ್ವಿಯಾಗಿ ಫೆಬ್ರುವರಿ 18ರಂದು ಮಂಗಳನ ಅಂಗಳದಲ್ಲಿ ಇಳಿದಿತ್ತು. ಈ ಯಶಸ್ವಿ ಕಾರ್ಯಾಚರಣೆಗೆ ಶ್ರಮಿಸಿದ 'ನಾಸಾ' ತಂಡದಲ್ಲಿ ಸ್ವಾತಿ ಮೋಹನ್ ಸಹ ಇದ್ದರು. ಪರ್ಸಿವಿಯರೆನ್ಸ್ ನೌಕೆಯ ನೆಲಸ್ಪರ್ಶ ಕಾರ್ಯಾಚರಣೆಯ ನಿರ್ದೇಶನ, ಪಥನಿರ್ದೇಶನ ಮತ್ತು ನಿಯಂತ್ರಣ ಕಾರ್ಯಾಚರಣೆ ತಂಡದ ಮುಖ್ಯಸ್ಥರಾಗಿದ್ದಾರೆ. ಪರ್ಸಿವಿಯರೆನ್ಸ್ ರೋವರ್ ನೌಕೆ ಮಂಗಳನ ನೆಲವನ್ನು ಸ್ಪರ್ಶಿಸಿದೆ ಎಂದು ಸ್ವಾತಿ ಮೋಹನ್ ಅವರೇ ಮೊದಲು ದೃಢಪಡಿಸಿದ್ದರು.

'ಪರ್ಸಿವಿಯರೆನ್ಸ್ ನಾನು ಕೈಗೊಂಡ ಮೊದಲ ಕಾರ್ಯಾಚರಣೆಯಾಗಿತ್ತು. ಕಾರ್ಯಾಚರಣೆ ಕೈಗೊಳ್ಳುವ ಕೊನೆಯ ದಿನಗಳು ಸುಗಮವಾಗಿದ್ದವು. ಆದರೂ, ಒಂದು ರೀತಿಯ ಆತಂಕ ಮೂಡಿತ್ತು. ಕೊನೆಯ ಏಳು ನಿಮಿಷಗಳಂತೂ ರೋಚಕತೆ ಮತ್ತು ಕುತೂಹಲದಿಂದ ಕೂಡಿದ್ದವು' ಎಂದು ಸ್ವಾತಿ ಮೋಹನ್ ವಿವರಿಸಿದ್ದಾರೆ.

'ನಾಸಾ' ತಂಡದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದ ಜೋ ಬೈಡನ್, 'ಕೊರೊನಾ ವೈರಸ್ ಸಾಂಕ್ರಾಮಿಕ ಕಾಯಿಲೆಯಿಂದಾಗಿ ವೈಜ್ಞಾನಿಕ ಕ್ಷೇತ್ರದಲ್ಲಿನ ನಾಯಕತ್ವಕ್ಕೆ ಧಕ್ಕೆ ಬಂದ ಸಂದರ್ಭದಲ್ಲಿ ಈ ಸಾಧನೆ ಆತ್ಮವಿಶ್ವಾಸ ಮೂಡಿಸಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ನೀವು ಲಕ್ಷಾಂತರ ಯುವಕರು ಮತ್ತು ಮಕ್ಕಳಿಗೆ ಹೊಸ ಕನಸುಗಳನ್ನು ಕಾಣುವಂತೆ ಮಾಡಿದ್ದೀರಿ. ಅಮೆರಿಕದ ಜನರಲ್ಲಿ ಹೊಸ ಉತ್ಸಾಹ ಮೂಡಿಸಿರುವುದಕ್ಕೆ ನಿಮಗೆ ಅಭಿನಂದನೆಗಳು' ಎಂದು ಬೈಡನ್ ಹೇಳಿದರು.


**ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ**

ಸಂ: ಕಮಪಾ/ಕಾಅ/ಡಿಬಿ/15ನೇ ಹ.ಕಾ/05/2020–21 ದಿನಾಂಕ: 04–03–2021

**:: ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ**

**ಸಂಖ್ಯೆ : 05/2020–21, ದಿನಾಂಕಃ 05–03–2021**

1) ಕಾಮಗಾರಿಯ ವಿವರ ಃ ಕಲಬುರಗಿ ಮಹಾನಗರ ಪಾಲಿಕೆಯಿಂದ 2020–21 ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನದಡಿಯಲ್ಲಿ ಅನುಮೋದನೆಗೊಂಡ 5 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ, 1999 ಮತ್ತು ನಿಯಮಗಳು, 2000 ರನ್ವಯ ಕೆ.ಡಬ್ಲ್ಯೂ– 1, 3 & 4 ರ ಮೂಲಕ ಟೆಂಡರ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.eproc.karnataka.gov.in. ಮುಖಾಂತರ ದಿನಾಂಕಃ 05–03–2021 ನಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಮೊತ್ತ ಃ ಕನಿಷ್ಠ ರೂ. 15.00 ಮತ್ತು ಗರಿಷ್ಠ ರೂ. 183.62 ಲಕ್ಷಗಳು. 3) ಗುತ್ತಿಗೆದಾರರ ಅರ್ಹತೆ ವಿವರಃ ಒಂದನೇ ಮತ್ತು ಎರಡನೇ ದರ್ಜೆ ಮೇಲ್ಪಟ್ಟ. 4) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕಃ 12–03–2021 ರಂದು ಸಾಯಂಕಾಲ 4–30 ಗಂಟೆಯವರೆಗೆ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕಃ 15–03–2021 ರಂದು ಸಾಯಂಕಾಲ 4–35 ಗಂಟೆಯವರೆಗೆ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕಃ 18–03–2021 ರಂದು ಬೆಳಗ್ಗೆ 11:30 ಗಂಟೆಗೆ. 7) ಹೆಚ್ಚಿನ ವಿವರಗಳಿಗೆ ಃ ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 8) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

ಸಹಿ/– ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1036/ಎಂ.ಸಿ.&ಎ/2020–21



**ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ,**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಳಗಾವಿ**

ನಂ/ ಕಾ.ನಿ.ಅ/ಗ್ರಾ.ಕು.ನೀ & ನೈ/ಬೆಳಗಾವಿ/ಪಿಬಿ–2ಕು.ನೀ.ಸ.ಯೋ/ಕೆಡಬ್ಲ್ಯು–4/ಟೆಂಡರ್–96/2020–21/4488 ದಿನಾಂಕ: 04–03–2021

**ಪ್ರೊಕ್ಯೂರ್‌ಮೆಂಟ್ ರೀತ್ಯಾ ದ್ವಿ–ಲಕೋಟೆ ಮಾದರಿಯ ಮರು ಟೆಂಡರ್ ಪ್ರಕಟಣೆ ಸಂಖ್ಯೆ : 96/2020–21**

**ಉಲ್ಲೇಖ:** 1) ನಂ.ಕಾ.ನಿ.ಅ/ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ–2/ಕು.ನೀ.ಸ.ಯೋ/ಕೆಡಬ್ಲ್ಯು–4/ಟೆಂಡರ್–87/2020–21/4224 ದಿನಾಂಕ: 15–02–2020.
2) ಕಾ.ನಿ.ಗ್ರಾ.ಕು.ನೀ & ನೈ/ಬೆಳಗಾವಿ/ಪಿಬಿ–2.3/ಕು.ನೀ.ಸ.ಯೋ/ಕೆಡಬ್ಲ್ಯು–3/ಟೆಂಡರ್–43/2020–21/2723 ದಿನಾಂಕ: 30–11–2020

ಮೇಲಿನ ಉಲ್ಲೇಖ 1 & 2 ರಡಿ ಈ ಕಚೇರಿಯ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾದ ಈ ಕೆಳಗಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ, ಬೆಳಗಾವಿ ಇವರ ಕಚೇರಿಯಲ್ಲಿ **ದಿನಾಂಕ: 08–03–2021 ಬೆಳಿಗ್ಗೆ 11:30 ಗಂಟೆಯವರೆಗೆ.** 2) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ **ದಿನಾಂಕ ಮತ್ತು ಸಮಯ : 12–03–2021 ಸಾಯಂಕಾಲ 17:30 ಗಂಟೆಯವರೆಗೆ.** 3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ : 15–03–2021 ಸಾಯಂಕಾಲ 11:00 ಗಂಟೆಯ ನಂತರ.** 4) ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದಿಸಿದ ನಂತರ.

1) ಇಂಡೆಂಟ್ ನಂ. 31615/Call-3, ಟೆಂಡರಗಿಟ್ಟ ಮೊತ್ತ ರೂ: 139 ಲಕ್ಷ, ಇ.ಎಂ.ಡಿ. ಹಣ ರೂ: 2.09 ಲಕ್ಷ, ಅವಧಿ: 120 ದಿನಗಳು, ಗುತ್ತಿಗೆದಾರರ ಕನಿಷ್ಠ ದರ್ಜೆ: 3ನೇ ದರ್ಜೆ ಮತ್ತು ಮೇಲ್ಪಟ್ಟು. 2) ಇಂಡೆಂಟ್ ನಂ. 31609/Call-3, ಟೆಂಡರಗಿಟ್ಟ ಮೊತ್ತ ರೂ: 216.8 ಲಕ್ಷ, ಇ.ಎಂ.ಡಿ. ಹಣ ರೂ: 3.25 ಲಕ್ಷ, ಅವಧಿ: 120 ದಿನಗಳು, ಗುತ್ತಿಗೆದಾರರ ಕನಿಷ್ಠ ದರ್ಜೆ: 2ನೇ ದರ್ಜೆ ಮತ್ತು ಮೇಲ್ಪಟ್ಟು. 3) ಇಂಡೆಂಟ್ ನಂ. 27697/Call-4, ಟೆಂಡರಗಿಟ್ಟ ಮೊತ್ತ ರೂ: 118.82 ಲಕ್ಷ, ಇ.ಎಂ.ಡಿ. ಹಣ ರೂ: 2.00 ಲಕ್ಷ, ಅವಧಿ: 120 ದಿನಗಳು, ಗುತ್ತಿಗೆದಾರರ ಕನಿಷ್ಠ ದರ್ಜೆ: 3ನೇ ದರ್ಜೆ ಮತ್ತು ಮೇಲ್ಪಟ್ಟು. 4) ಇಂಡೆಂಟ್ ನಂ. 27801/Call-2, ಟೆಂಡರಗಿಟ್ಟ ಮೊತ್ತ ರೂ: 110.09ಲಕ್ಷ, ಇ.ಎಂ.ಡಿ. ಹಣ ರೂ: 2.00 ಲಕ್ಷ, ಅವಧಿ: 120 ದಿನಗಳು, ಗುತ್ತಿಗೆದಾರರ ಕನಿಷ್ಠ ದರ್ಜೆ: 3ನೇ ದರ್ಜೆ ಮತ್ತು ಮೇಲ್ಪಟ್ಟು.

**ಸೂಚನೆ :** ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-procrement portal www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ. & ನೈ, ವಿಭಾಗ, ಬೆಳಗಾವಿ


ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರ ಸಚಿವಾಲಯ, ವಿಕಾಸ ಸೌಧ, ಬೆಂಗಳೂರು**

ಸಂ: ಸಿಐ 100 ಎಸ್.ಪಿ.ಕ್ಯೂ(ಇ) 2019 ದಿನಾಂಕ: 02–02–2021

**1966 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 28(4)ರ ಅಧಿಸೂಚನೆ**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 (ಕರ್ನಾಟಕ ಕಾಯ್ದೆ 1966) (ಈ ಮುಂದೆ ಪ್ರಸ್ತುತ ಕಾಯ್ದೆ ಎಂದು ಹೇಳಲಾಗಿದೆ) ಕಲಂ 28(1)ರನ್ವಯ ವಿಹಿತವಾಗಿರುವ ಅಧಿಕಾರದಡಿ ಅಧಿಸೂಚನೆ ಸಂಖ್ಯೆ: ಸಿಐ 13 ಎಸ್‌ಪಿಕ್ಯೂ 2001 ದಿನಾಂಕ: 18.01.2001 (ಈ ಮುಂದೆ ಅಧಿಸೂಚನೆ ಎಂದು ಹೇಳಲಾಗಿದೆ) ರಂದು ಹೊರಡಿಸಿ ದಿನಾಂಕ: 18.01.2001 ರಂದು ಪ್ರಕಟವಾದ ರಾಜ್ಯ ಪತ್ರದ (ಭಾಗ–3)ರ ಪುಟ 5 ರಿಂದ 16 ರವರೆಗೆ ಕರ್ನಾಟಕ ಸರ್ಕಾರವು ಪ್ರಸ್ತುತ ಅಧಿಸೂಚನೆಯಲ್ಲಿ ಕಾಣಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ತನ್ನ ಉದ್ದೇಶವನ್ನು ಪ್ರಕಟಿಸಿತ್ತು.

ಅದರಂತೆ ಪ್ರಸ್ತುತ ಕಾಯ್ದೆಯನ್ವಯ 28ರ ಉಪ ಕಲಂ (3)ರನ್ವಯ ಆದೇಶವನ್ನು ಹೊರಡಿಸಲಾಗಿದೆ ಮತ್ತು ಈ ಕೆಳಗೆ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳು ಪ್ರಸ್ತುತ ಅಧಿಸೂಚನೆಯಲ್ಲಿಯೂ ಕಾಣಿಸಲ್ಪಟ್ಟಿವೆ ಹಾಗೂ ಪ್ರಸ್ತುತ ಅಧಿಸೂಚನೆಯಲ್ಲಿ ಕಾಣಿಸಿರುವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಬೇಕೆಂದು ಕರ್ನಾಟಕ ಸರ್ಕಾರಕ್ಕೆ ಮನವರಿಕೆಯಾಗಿದೆ.

ಆದುದರಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 (ಕರ್ನಾಟಕ ಕಾಯ್ದೆ 18:1966)ರ ಕಲಂ 28ರ ಉಪ ಕಲಂ (4) ರನ್ವಯ ವಿಹಿತವಾಗಿರುವ ಅಧಿಕಾರದ ಮೇರೆಗೆ ಅಧಿಸೂಚನೆಯಲ್ಲಿ ಕಾಣಿಸಿರುವ ಉದ್ದೇಶಕ್ಕಾಗಿ ಈ ಕೆಳಗೆ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಎಂದು ಈ ಮೂಲಕ ಕರ್ನಾಟಕ ಸರ್ಕಾರವು ಘೋಷಿಸಿದೆ.

| ಕ್ರ. ಸಂ. | ಸರ್ವೆ ನಂ. | ಖಾತೆದಾರರು/ಅನುಭವದಾರರ ಹೆಸರು | ವಿಸ್ತೀರ್ಣ ಎ–ಗು ಐನ್ | ಖರಾಬು | ಬಾಕಿ | ತರಹೆ | ಆಕಾರ | ಚಕ್ಕುಬಂದಿ ಪೂರ್ವ ಸರ್ವೆ ನಂ. | ಪಶ್ಚಿಮ ಸರ್ವೆ ನಂ. | ಉತ್ತರ ಸರ್ವೆ ನಂ. | ದಕ್ಷಿಣ ಸರ್ವೆ ನಂ. |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | ಗ್ರಾಮ: ಕುದುರಗುಂಡಿ ಹೋಬಳಿ: ಕಸಬಾ ತಾಲ್ಲೂಕು: ಮದ್ದೂರು ಜಿಲ್ಲೆ: ಮಂಡ್ಯ | | | | | | | | | |
| 1 | 245 | ಸರ್ಕಾರ (245) | 12–11 | 12–11 | – | – | – | 281, 283, 287, 298 ಮತ್ತು ನಾಲಾ | 248, 249, 173 | 277, ನಾಲಾ ಮತ್ತು ಗಡಿ | ರಸ್ತೆ 28 ಮತ್ತು 245 ರ ಉಳಿಕೆ ಜಮೀನು |
| | | ಸರ್ಕಾರ (245/85) | 0–30 | 0–30 | – | | | | | | |
| | | ಸರ್ಕಾರ (245/86ಪಿ1) | 0–15 | 0–15 | – | | | | | | |
| | | ಸರ್ಕಾರ (245/86ಪಿ2) | 0–15 | 0–15 | – | | | | | | |
| | | ಲಕ್ಷ್ಮಮ್ಮ ಕೋಂ ಬಸವಯ್ಯ (245/106) | 0–08 | – | 0–08 | | | | | | |
| | | ಸಿ.ಮರಿಯಪ್ಪ ಬಿನ್ ಮರೀಗೌಡ (245/68) | 0–30 | – | 0–30 | | | | | | |
| | | ಬಸವರಾಜಪ್ಪ ಬಾಳಪ್ಪ ಹೂಗಾರ್ (ಜಿ.ಪಿ.ಎ.) ಜಿ.ವಿ. ರವಿಶಂಕರ್ ಬಿನ್ ವೆಂಕಟೇಶಮೂರ್ತಿ (245/98) | 0–30 | – | 0–30 | | | | | | |
| | | ಬಸವರಾಜ್ ಬಾಳಪ್ಪ ಹೂಗಾರ್ (245/97) | 0–30 | – | 0–30 | | | | | | |
| | | ಜಿ.ಬಿ. ಶಂಕರ್ ಬಿನ್ ಲೇಟ್ ಬಿಳಿ ಹೋಟ್ಟಯ್ಯ (245/94) | 0–30 | – | 0–30 | | | | | | |
| | | ಬಸವರಾಜ್ ಬಾಳಪ್ಪ ಹೂಗಾರ್ ಬಿನ್ ಬಾಳಪ್ಪ ಹೂಗಾರ್ (245/95) | 0–30 | – | 0–30 | | | | | | |
| | | ಸಿ.ಮರಿಯಪ್ಪ ಬಿನ್ ಮರೀಗೌಡ (245/93) | 0–30 | – | 0–30 | | | | | | |
| | | ಸರ್ಕಾರ (245/90) | 0–30 | 0–30 | – | | | | | | |
| | | ಕರಿಯ್ಯಯ ಬಿನ್ ಮಾದಯ್ಯ (245/10) | 0–30 | – | 0–30 | | | | | | |
| | | ಮಾದಮ್ಮ ಕೋಂ ಲೇಟ್ ಶಿವಣ್ಣ (245/ಪೈಕಿ ಪಿ2) | 1–00 | – | 1–00 | | | | | | |
| | | ಟಿ.ಪುಟ್ಟಸ್ವಾಮಿ ಬಿನ್ ತಮ್ಮಯ್ಯ (245/112) | 1–00 | – | 1–00 | | | | | | |
| | | ಸಿ.ಬೆಟ್ಟಯ್ಯ ಬಿನ್ ಚಿಕ್ಕದಾಸಯ್ಯ, ಸಿ. ಚಲುವರಾಜು ಬಿನ್ ಚಿಕ್ಕದಾಸಯ್ಯ (ಜಂಟಿ) (245/81ಎ) | 0–15 | – | 0–15 | | | | | | |
| | | ಸಿ.ಬೆಟ್ಟಯ್ಯ ಬಿನ್ ಚಿಕ್ಕದಾಸಯ್ಯ, ಸಿ. ಚಲುವರಾಜು ಬಿನ್ ಚಿಕ್ಕದಾಸಯ್ಯ (ಜಂಟಿ) (245/81ಬಿ) | 0–15 | – | 0–15 | | | | | | |
| | | ಯಾಲಕ್ಕಯ್ಯ ಬಿನ್ ಬುಂಡಯ್ಯ (245/92ಎ) | 0–15 | – | 0–15 | | | | | | |
| | | ಯಾಲಕ್ಕಯ್ಯ ಬಿನ್ ಬುಂಡಯ್ಯ (245/92ಬಿ) | 0–15 | – | 0–15 | | | | | | |
| | | ಭಾಗ್ಯಮ್ಮ ಕೋಂ ಲೇಟ್ ರಾಮಲಿಂಗಯ್ಯ (245/87ಎ) | 0–10 | – | 0–10 | | | | | | |
| | | ಭಾಗ್ಯಮ್ಮ ಕೋಂ ಲೇಟ್ ರಾಮಲಿಂಗಯ್ಯ (245/87ಬಿ) | 0–20 | – | 0–20 | | | | | | |
| | | ಜಿ.ಬಿ. ವಿಶಾಲಾಕ್ಷಿ ಕೋಂ ಜಿ.ಬಿ. ಜಯರಾಮು | 1–01 | – | 0–20½ | | | | | | |
| | | ಜಿ.ಬಿ. ಮಲ್ಲೇಶ್ ಬಿನ್ ಬೋರೇಗೌಡ (245/75ಬಿ) | | | 0–20½ | | | | | | |
| | | ಪುಟ್ಟತಾಯಮ್ಮ ಕೋಂ ಲೇಟ್ ಸಿದ್ದೇಗೌಡ (245/60) | 1–00 | – | 1–00 | | | | | | |
| | | ಸುನಂದಮ್ಮ ಕೋಂ ಸಿದ್ದರಾಮು, | 2–01 | – | 0–27 | | | | | | |
| | | ಸಿದ್ದಯ್ಯ ಬಿನ್ ಕೆರಗೋಡು ಬೋರಯ್ಯ, | | | 0–27 | | | | | | |
| | | ಸಣ್ಣತಾಯಮ್ಮ ಕೋಂ ಸಿದ್ದರಾಜು (245/47) | | | 0–27 | | | | | | |
| | | ಸರ್ಕಾರ (245/63ಎ) | 2–01 | 2–01 | – | | | | | | |
| | | ಚಿಕ್ಕಬೋರಯ್ಯ ಬಿನ್ ಯ.ಬೋರೇಗೌಡ (245/70) | 2–01 | – | 2–01 | | | | | | |
| | | ಸಿದ್ದಯ್ಯ ಬಿನ್ ಮರಿಯಯ್ಯ (245/61ಪೈಕಿ) | 1–00 | – | 1–00 | | | | | | |
| | | ಕೆ.ಎಸ್. ರಾಮಲಿಂಗಯ್ಯ ಬಿನ್ ಲೇಟ್ ಶಿವಲಿಂಗಯ್ಯ (245/61) | 1–01 | – | 1–01 | | | | | | |
| | | ರಾಮಯ್ಯ ಬಿನ್ ಸಿದ್ದಯ್ಯ (245/ಪಿ6) | 2–01 | – | 2–01 | | | | | | |
| | | ಚಿಕ್ಕೋಳಮ್ಮ ಕೋಂ ಲೇಟ್ ಬೆಟ್ಟಯ್ಯ, ವೈರಮುಡಿ ಬಿನ್ ಚಿಕ್ಕಹೈದಯ್ಯ, ಚಲುವಯ್ಯ ಬಿನ್ ಚಿಕ್ಕಹೈದಯ್ಯ (245/ಪಿ9) | 1–00 | – | 1–00 | | | | | | |
| | | ಸರ್ಕಾರ (245/63ಬಿ) | 1–00 | 1–00 | – | | | | | | |
| | | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ (245/64) | 2–01 | – | 2–01 | | | | | | |
| | | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ (245/52) | 1–01 | – | 1–01 | | | | | | |
| | | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ (245/53) | 1–00 | – | 1–00 | | | | | | |
| | | ಮರಿಯಯ್ಯ ಬಿನ್ ಚಿಕ್ಕಮರಿಯಯ್ಯ (245/54) | 1–01 | – | 1–01 | | | | | | |
| | | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ (245/51) | 1–00 | – | 1–00 | | | | | | |
| | | ದೇವಮ್ಮ ಕೋಂ ಲೇಟ್ ಹೆಚ್. ಗೋವಿಂದರಾಜು, ಶ್ರೀನಿವಾಸ ಬಿನ್ ಲೇಟ್ ಯಾಲಕ್ಕಯ್ಯ, ರಮೇಶ್ ಬಿನ್ ಲೇಟ್ ಯಾಲಕ್ಕಯ್ಯ, ಸಂಜೀವಮ್ಮ ಕೋಂ ಲೇಟ್ ಕೆಂಗಲ್ ರಾಜು (ಜಂಟಿ) (245/62ಎ) | 1–21 | – | 1–21 | | | | | | |
| | | ಬಸವರಾಜ್ ಬಾಳಪ್ಪ ಹೂಗಾರ್ (ಜಿ.ಪಿ.ಎ.), ಜಿ.ವಿ. ರವಿಶಂಕರ್ ಬಿನ್ ವೆಂಕಟೇಶಮೂರ್ತಿ (245/62ಬಿ) | 0–20 | – | 0–20 | | | | | | |
| | | ಸರ್ಕಾರ (245/ಪಿ17) | 0–10 | 0–10 | – | | | | | | |
| | | ಸರ್ಕಾರ (245/ಪಿ18) | 0–10 | 0–10 | – | | | | | | |
| | | ಸರ್ಕಾರ (245/48) | 1–00 | 1–00 | – | | | | | | |
| | | ಸರ್ಕಾರ (245/49) | 1–01 | 1–01 | – | | | | | | |
| 2 | 276 | ಸಿದ್ದಯ್ಯ ಬಿನ್ ಸಿದ್ದಯ್ಯ | 2–25 | 0–11 | 2–14 | ಖುಷ್ಕಿ | 3–57 | 299 | 246 | 276 ಉಳಿಕೆ ಜಮೀನು | 245 |
| | | ಶಿವಬೋರಯ್ಯ ಬಿನ್ ಸಿದ್ದಯ್ಯ | | | | | | | | | |
| 3 | 279 | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ (279/1) | 4–26 | 0–12 | 1–14 | ಖುಷ್ಕಿ | 7–15 | ನಾಲಾ | 280 | ಗಡಿ | 282 |
| | | ಸಿದ್ದೇಗೌಡ ಬಿನ್ ಲೇಟ್ ಬೋರೇಗೌಡ (279/2) | | | 1–00 | | | | | | |
| | | ಲಿಂಗಮ್ಮ ಕೋಂ ಚನ್ನೇಗೌಡ (279/3) | | | 1–00 | | | | | | |
| | | ನಿಂಗಮ್ಮ ಕೋಂ ಜಿ. ಬೋರಯ್ಯ (279/4) | | | 0–13 | | | | | | |
| | | ಸಿ. ಮರಿಯಪ್ಪ ಬಿನ್ ಲೇಟ್ ಮರೀಗೌಡ (279/5) | | | 0–13 | | | | | | |
| | | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ (279/6) | | | 0–07 | | | | | | |
| | | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ (279/7) | | | 0–07 | | | | | | |
| 4 | 280 | ಸರ್ಕಾರ | 4–00 | 0–10 | 3–30 | ಖುಷ್ಕಿ | 6–19 | 279 | 281 | ಗಡಿ | 282 |
| | | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ | | | | | | | | | |
| | | ಸರ್ಕಾರ | | | | | | | | | |
| 5 | 281 | ಬೋರೇಗೌಡ ಬಿನ್ ಲೇಟ್ ಮೊಳ್ಳೇಗೌಡ | 6–32 | 0–10 | 0–28½ | ಖುಷ್ಕಿ | 10–81 | 280 | 245 | ನಾಲಾ | 283 |
| | | ಬಸವರಾಜು ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | 0–29 | | | | | | |
| | | ಪುಟ್ಟಸ್ವಾಮಿ ಬಿನ್ ಲೇಟ್ ಮಳ್ಳೇಗೌಡ | | | 0–28½ | | | | | | |
| | | ಬಸವರಾಜು ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | 0–29 | | | | | | |
| | | ಬಸವರಾಜು ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | 1–00 | | | | | | |
| | | ಸರ್ಕಾರ | | | 0–39 | | | | | | |
| | | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ | | | 0–29 | | | | | | |
| | | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ | | | 0–29 | | | | | | |
| | | ಲಖ್ ವೀರ್ ಸಿಂಗ್ ಬಿನ್ ಎಸ್. ಬಚ್ಚನ್ ಸಿಂಗ್ | | | 0–10 | | | | | | |
| 6 | 282 | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | 4–06 | – | 4–06 | ಖುಷ್ಕಿ | 7–39 | ನಾಲಾ | ನಾಲಾ 281 | 279 | 283 |
| | | ಬಸವರಾಜ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | | | | | | | |
| | | ಪಾರ್ವತಮ್ಮ ಬಿನ್ ಸಿದ್ದೇಗೌಡ ಉ: ಕುಳ್ಳೇಗೌಡ | | | | | | | | | |
| | | ಸರ್ಕಾರ | | | | | | | | | |
| | | ಬಸವರಾಜ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | | | | | | | |
| 7 | 283 | ಸರ್ಕಾರ (283/1) | 6–06 | 0–07 | 1–00 | ಖುಷ್ಕಿ | 10–65 | ನಾಲಾ | 245 | 281, 282 | 284 |
| | | ಪುಟ್ಟಲಿಂಗಮ್ಮ ಕೋಂ ಲೇಟ್ ಬೋರೇಗೌಡ (283/2) | | | 1–00 | | | | | | |
| | | ಪುಟ್ಟಲಿಂಗಮ್ಮ ಕೋಂ ಲೇಟ್ ಬೋರೇಗೌಡ (283/3) | | | 1–21 | | | | | | |
| | | ಸಿ.ಮರಿಯಪ್ಪ ಬಿನ್ ಲೇಟ್ ಮರೀಗೌಡ (283/4) | | | 0–20 | | | | | | |
| | | ಸಿ.ಮರಿಯಪ್ಪ ಬಿನ್ ಲೇಟ್ ಮರೀಗೌಡ (283/5) | | | 0–10 | | | | | | |
| | | ಬಸವರಾಜ ಬಾಳಪ್ಪ ಹುಗಾರ್ (283/6) | | | 0–10 | | | | | | |
| | | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ (283/7) | | | 0–39 | | | | | | |
| | | ಆರ್.ಗೀತಾ ಕೋಂ ಜಿ.ಎಸ್. ಜವರೇಗೌಡ (283/8) | | | 0–19 | | | | | | |
| 8 | 284 | ಬಸವರಾಜ್ ಬಾಳಪ್ಪ ಹುಗಾರ್ (284/1) | 6–20 | 0–02 | 3–08 | ಖುಷ್ಕಿ | 11–50 | ನಾಲಾ | 287 | 283 | ನಾಲಾ 285 |
| | | ಬಸವರಾಜ್ ಬಾಳಪ್ಪ ಹುಗಾರ್ | | | 1–15 | | | | | | |
| | | ಬಸವರಾಜ್ ಬಾಳಪ್ಪ ಹುಗಾರ್ | | | 1–15 | | | | | | |
| | | ಸಿ.ಮರಿಯಪ್ಪ ಬಿನ್ ಲೇಟ್ ಮರೀಗೌಡ (284/2) | | | 0–20 | | | | | | |
| 9 | 285 | ಬಸವರಾಜ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | 6–05 | – | 6–05 | ಖುಷ್ಕಿ | 10–91 | ನಾಲಾ | 287 | 284 | 286 |
| | | ಲಖ್‌ವೀರ್‌ಸಿಂಗ್ ಬಿನ್ ಎಸ್.ಬಚ್ಚನ್‌ಸಿಂಗ್ | | | | | | | | | |
| 10 | 286 | ಬೋಮ್ಮೇಗೌಡ ಬಿನ್ ಬೋಮ್ಮೇಗೌಡ | 6–03 | 0–01 | 0–23 | ನಾಲಾ | 10–77 | ನಾಲಾ | 245, 298 | 285 | ಹಳ್ಳ ಮತ್ತು ನಾಲಾ |
| | | ಬೋಮ್ಮೇಗೌಡ ಬಿನ್ ಬೋಮ್ಮೇಗೌಡ | | | 0–23 | | | | | | |
| | | ಬೋಮ್ಮೇಗೌಡ ಬಿನ್ ಬೋಮ್ಮೇಗೌಡ | | | 1–07 | | | | | | |
| | | ಬೋಮ್ಮೇಗೌಡ ಬಿನ್ ಬೋಮ್ಮೇಗೌಡ | | | 0–23 | | | | | | |
| | | ಬೋಮ್ಮೇಗೌಡ ಬಿನ್ ಬೋಮ್ಮೇಗೌಡ | | | 0–23 | | | | | | |
| | | ಬಸವರಾಜ್ ಬಾಳಪ್ಪ ಹುಗಾರ್ | | | 1–06 | | | | | | |
| | | ಲಕ್ಷ್ಮೀ ಕೋಂ ಲೇಟ್ ಚಂದ್ರಶೇಖರ ಜಿ.ಬಿ. | | | 1–17 | | | | | | |
| 11 | 287 | ನಿಂಗಯ್ಯ ಬಿನ್ ಕಜ್ಜಿಕಾಳ್ನ ನಿಂಗೇಗೌಡ | 4–14 | 0–04 | 4–10 | ನಾಲಾ | 7–02 | 284, 285 | 245, 298 | 245 | 298 |
| | | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | | | | | | | |
| | | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | | | | | | | |
| | | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | | | | | | | |
| 12 | 288 | ಲಿಂಗಮ್ಮ ಕೋಂ ಲೇಟ್ ಬಿ. ತಮ್ಮಯ್ಯ | 5–07 | – | 2–24 | ನಾಲಾ | 8–55 | 245, 305 | 249 | 245 | 145, 173 |
| | | ಸಿದ್ದಯ್ಯ ಬಿನ್ ಬೋರೇಗೌಡ | | – | 2–23 | | | | | | |
| 13 | 298 | ನಿಂಗಯ್ಯ ಬಿನ್ ಕಜ್ಜಿಕಾಳ್ನ ನಿಂಗೇಗೌಡ | 2–20 | – | 2–20 | ನಾಲಾ | 5–70 | 286 | 245 | 287 | 245 |
| | | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | | | | | | | |
| | | ಬಸವರಾಜ್ ಬಾಳಪ್ಪ ಹುಗಾರ್ ಬಿನ್ ಬಾಳಪ್ಪ ಹುಗಾರ್ | | | | | | | | | |
| 14 | 299 | ಸಿದ್ದಯ್ಯ ಬಿನ್ ಜೋಗಯ್ಯ | 0–20 | – | 0–20 | ನಾಲಾ | 1–14 | ನಾಲಾ | 276 | ಗಡಿ | 245 |
| 15 | 305 | ಸುಧಾ ಕೋಂ ಲೇಟ್ ಜಿ.ಬಿ. ಮಲ್ಲೇಶ | 0–20 | – | 0–20 | ನಾಲಾ | 0–89 | 245 | 288 | 245 | 245 |
| | | **ಒಟ್ಟು** | **109–04** | **21–20** | **87–24** | | | | | | |

**ಘೋಷ್ವಾರೆ**

| ಕ್ರ.ಸಂ. | ಗ್ರಾಮ | ವಿಸ್ತೀರ್ಣ (ಎ–ಗು) ಐನ್ | ಖರಾಬು | ಬಾಕಿ |
|---|---|---|---|---|
| 1 | ಕುದುರಗುಂಡಿ | 109–04 | 21–20 | 87–24 |
| ಒಟ್ಟು | | 109–04 | 21–20 | 87–24 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
(ಎನ್.ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.

DIPR/MYD/Shirdi Sai/732/2020-21

## ಸುಭಾಷಿತ

ವಿದ್ಯೆ ಕಲಿತಾಗ ಆದರ್ಶವಾದ ಗುಣಗಳು ನಿಮ್ಮ ಜೊತೆಗೂಡದಿದ್ದರೆ ನೀವು ಕಲಿತದ್ದು ವ್ಯರ್ಥ.

-ಪ್ರೇಮ್‌ಚಂದ್

# ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ ಅಗ್ರಸ್ಥಾನಕ್ಕೆ ತಕ್ಕ ಸೌಕರ್ಯವೂ ಸಿಗಲಿ

**ಕೇಂದ್ರ** ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಗುರುವಾರ ಬಿಡುಗಡೆ ಮಾಡಿರುವ ‘ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ- 2020’ರಲ್ಲಿ ದೇಶದಲ್ಲೇ ಮೊದಲ ಸ್ಥಾನ ಪಡೆದಿರುವ ಬೆಂಗಳೂರು ಹೆಮ್ಮೆಯಿಂದ ಬೀಗುತ್ತಿದೆ. ಕಳೆದ ಸಾಲಿನ ಸೂಚ್ಯಂಕ ಪಟ್ಟಿಯಲ್ಲಿ 58ನೇ ಸ್ಥಾನದಲ್ಲಿದ್ದ ನಗರವು ಮರುವರ್ಷವೇ ಅಗ್ರಸ್ಥಾನಕ್ಕೇರಿರುವುದು ಗಮನಾರ್ಹ ಸಾಧನೆಯೇ ಸರಿ. ನಗರಾಭಿವೃದ್ಧಿಗಾಗಿ ಜಾರಿಗೊಳಿಸಲಾದ ವಿವಿಧ ಕಾರ್ಯಕ್ರಮಗಳಿಂದ ಜನರ ಜೀವನದ ಗುಣಮಟ್ಟ ಎಷ್ಟು ಸುಧಾರಣೆ ಆಗಿದೆ ಎಂಬ ಕುರಿತು ಸಮೀಕ್ಷೆ ನಡೆಸಿ, ನಗರದ ವ್ಯವಸ್ಥೆಗಳ ಕುರಿತು ಜನಾಭಿಪ್ರಾಯವನ್ನೂ ಸಂಗ್ರಹಿಸಿ ಈ ಸೂಚ್ಯಂಕವನ್ನು ಪ್ರತಿವರ್ಷ ಬಿಡುಗಡೆ ಮಾಡಲಾಗುತ್ತದೆ. ನಗರದ ಆರ್ಥಿಕ ಸಾಮರ್ಥ್ಯ, ಜನರ ಜೀವನ ಗುಣಮಟ್ಟ ಹಾಗೂ ಸುಸ್ಥಿರ ಪರಿಸರ ನಿರ್ವಹಣೆಗೆ ಸಂಬಂಧಿಸಿದ ಅಂಶಗಳು ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕವನ್ನು ನಿರ್ಧರಿಸುವ ಪ್ರಮುಖ ಅಂಶಗಳು. ಸೂಚ್ಯಂಕ ನಿರ್ಧರಿಸಲು ಸಮೀಕ್ಷೆ ನಡೆಸಲಾಗಿರುವ ನಗರಗಳಲ್ಲಿ ಆರ್ಥಿಕ ಸಾಮರ್ಥ್ಯದ ಮಾನದಂಡದಲ್ಲಿ ಬೆಂಗಳೂರು ಮುಂಚೂಣಿಯಲ್ಲಿದೆ. ಸೂಚ್ಯಂಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಲು ಸಹಜವಾಗಿಯೇ ಈ ಅಂಶ ನೆರವಾಗಿದೆ. ಜೀವನ ಗುಣಮಟ್ಟದಲ್ಲಿ ಈ ನಗರ 12ನೇ ಸ್ಥಾನ ಹಾಗೂ ಪರಿಸರಕ್ಕೆ ಸಂಬಂಧಿಸಿದ ಅಂಶಗಳಲ್ಲಿ ಸುಸ್ಥಿರತೆ ಕಾಪಾಡುವುದರಲ್ಲಿ 13ನೇ ಸ್ಥಾನ ಪಡೆದಿದೆ. ಒಟ್ಟಾರೆ ಅಂಕ ಗಳಿಕೆಯಲ್ಲಿ ಮೊದಲ ಸ್ಥಾನದಲ್ಲಿದ್ದರೂ ಜನರ ಜೀವನ ಗುಣಮಟ್ಟ ಹಾಗೂ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಅಂಶಗಳಲ್ಲಿ ಸುಧಾರಿಸಬೇಕಾದುದು ಬಹಳಷ್ಟಿದೆ ಎಂಬುದನ್ನು ಬೆಂಗಳೂರಿನ ಆಡಳಿತವನ್ನು ನಿರ್ವಹಿಸುವವರು ಗಮನದಲ್ಲಿಟ್ಟುಕೊಳ್ಳಬೇಕು.

**ರಾಷ್ಟ್ರಮಟ್ಟದಲ್ಲಿ ಬೆಂಗಳೂರಿಗೆ ಸಿಕ್ಕಿರುವ ಮನ್ನಣೆಯನ್ನು ಉಳಿಸಿಕೊಳ್ಳಲು ಮತ್ತು ನಗರವಾಸಿಗಳು ನಿತ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಸ್ಥರು ಇನ್ನಷ್ಟು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕು**

ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕದ ಜೊತೆಯಲ್ಲೇ ನಗರಾಡಳಿತ ನಿರ್ವಹಣೆ ಸೂಚ್ಯಂಕವನ್ನೂ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿದೆ. ಇದರಲ್ಲಿ ಬೆಂಗಳೂರು 31ನೇ ಸ್ಥಾನ ಪಡೆದಿದೆ. ಸೇವೆಗಳು, ಹಣಕಾಸು ನಿರ್ವಹಣೆ, ತಂತ್ರಜ್ಞಾನ ಅಳವಡಿಕೆ, ಯೋಜನೆ, ಆಡಳಿತಕ್ಕೆ ಸಂಬಂಧಿಸಿದ ಅಂಶಗಳನ್ನು ಆಧರಿಸಿ ನಗರಾಡಳಿತ ನಿರ್ವಹಣೆ ಸೂಚ್ಯಂಕವನ್ನು ನೀಡಲಾಗುತ್ತದೆ. ಈ ಸೂಚ್ಯಂಕವನ್ನು ನಿರ್ಧರಿಸುವ ಪ್ರಮುಖ ಐದು ವಿಭಾಗಗಳಲ್ಲಿ ಬಿಬಿಎಂಪಿಗೆ ನಿರೀಕ್ಷಿತ ಪ್ರಮಾಣದಲ್ಲಿ ಅಂಕಗಳು ಬಂದಿಲ್ಲ. ನಗರಾಡಳಿತವು ಸೇವಾ ಕ್ಷೇತ್ರದಲ್ಲಿ 25ನೇ ಸ್ಥಾನ, ಹಣಕಾಸು ನಿರ್ವಹಣೆಯಲ್ಲಿ 40ನೇ ಸ್ಥಾನ, ತಂತ್ರಜ್ಞಾನ ಅಳವಡಿಕೆಯಲ್ಲಿ 25ನೇ ಸ್ಥಾನ, ಯೋಜನೆ ರೂಪಿಸುವಿಕೆಯಲ್ಲಿ 36ನೇ ಸ್ಥಾನ ಮತ್ತು ಆಡಳಿತ ನಿರ್ವಹಣೆಯಲ್ಲಿ 18ನೇ ಸ್ಥಾನದಲ್ಲಿದೆ. ದೇಶದ ಇತರ ನಗರಗಳಿಗೆ ಹೋಲಿಸಿದರೆ ಬೆಂಗಳೂರು ರಸ್ತೆ ಮೂಲಸೌಕರ್ಯ, ಉದ್ಯಾನಗಳ ನಿರ್ವಹಣೆ, ಶಿಕ್ಷಣ ಮುಂತಾದ ವಿಚಾರಗಳಲ್ಲಿ ತೀರಾ ಹಿಂದೆ ಉಳಿದಿಲ್ಲ ಎಂಬುದು ಒಪ್ಪತಕ್ಕದ್ದೇ. ಆದರೆ, ಆಡಳಿತದ ನಿರ್ವಹಣೆ ಹಾಗೂ ಅಭಿವೃದ್ಧಿ ವಿಚಾರದಲ್ಲಿ ಇಷ್ಟೊಂದು ಕೆಳಹಂತದಲ್ಲಿದ್ದರೂ ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕದಲ್ಲಿ ಈ ನಗರ ಅಗ್ರಸ್ಥಾನಕ್ಕೆ ಏರಿರುವುದು ತಬ್ಬಿಬ್ಬುಗೊಳಿಸುತ್ತದೆ. ಯಾವುದೇ ನಗರದ ಜೀವನ ಸಹನೀಯವಾಗುವುದು ಅಲ್ಲಿ ದೊರೆಯುವ ಸೌಲಭ್ಯ ಮತ್ತು ಸೇವೆಗಳಿಂದ. ಈ ಎರಡೂ ವಿಷಯಗಳಲ್ಲಿ ಬೆಂಗಳೂರು ಹಿಂದೆ ಬಿದ್ದಿದ್ದರೂ ಇಲ್ಲಿ ಸುಲಲಿತವಾಗಿ ಜೀವನ ನಿರ್ವಹಣೆ ಮಾಡಬಹುದು ಎನ್ನುತ್ತದೆ ಸಮೀಕ್ಷೆ! ಅಗ್ರಸ್ಥಾನ ಪಡೆದ ನಗರದ ಕಥೆಯೇ ಹೀಗಿರುವಾಗ ಉಳಿದ ನಗರಗಳ ಸ್ಥಿತಿ ಹೇಗಿರಬೇಡ? ಇರಲಿ, ಎಲ್ಲೆಲ್ಲಿ ಲೋಪಗಳು ಇವೆಯೆಂದು ಸಮೀಕ್ಷಾ ವರದಿ ಪಟ್ಟಿ ಮಾಡಿದೆಯೋ ಅಲ್ಲೆಲ್ಲ ಸುಧಾರಣೆ ಮಾಡಿಕೊಳ್ಳುವತ್ತ ಬಿಬಿಎಂಪಿ ಆಡಳಿತ ಗಮನಹರಿಸಬೇಕು. ಸಾರಿಗೆ ವ್ಯವಸ್ಥೆ, ಸಂಚಾರ ದಟ್ಟಣೆ, ವಾಹನ ನಿಲುಗಡೆಗೆ ಸಂಬಂಧಿಸಿದ ಗೊಂದಲ, ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ, ವಸತಿ ಸಮಸ್ಯೆ... ಹೀಗೆ ಪಟ್ಟಿ ಮಾಡುತ್ತಾ ಹೋದರೆ ಜನರ ನೆಮ್ಮದಿಯನ್ನು ಕಿತ್ತುಕೊಳ್ಳುತ್ತಿರುವ ಅಂಶಗಳು ಹತ್ತುಹಲವು ಸಿಕ್ಕುತ್ತವೆ. ಕೆರೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಯಲ್ಲಂತೂ ನಮ್ಮ ಆಡಳಿತವು ಸಂಪೂರ್ಣ ಸೋತಿದೆ ಎಂದೇ ಹೇಳಬೇಕು. ತಲೆಗೊಂದು ಅಗ್ರಸ್ಥಾನದ ತುರಾಯಿ ಸಿಕ್ಕಿಸಿಕೊಂಡು ಕುಳಿತರೆ ಸಾಲದು, ಜನ ನಿತ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಬದ್ಧತೆಯನ್ನೂ ಪ್ರದರ್ಶಿಸಬೇಕು. ‘ಬೆಂಗಳೂರು ನಿಜಕ್ಕೂ ಈ ಮನ್ನಣೆಗೆ ಅರ್ಹವಾಗಿದೆ’ ಎಂದು ಜನರಿಂದಲೂ ಮೆಚ್ಚುಗೆ ಗಿಟ್ಟಿಸಿಕೊಳ್ಳುವ ರೀತಿಯಲ್ಲಿ ಆಡಳಿತದ ಹೊಣೆ ಹೊತ್ತವರು ನಗರವನ್ನು ಕಟ್ಟಬೇಕು.

ಈ ವಿಷಯದಲ್ಲಿ ಸರ್ಕಾರದ ಪಾತ್ರಕ್ಕಿಂತ ಜನರ ಮನಸ್ಸು ಬದಲಾಗಬೇಕಾಗಿದೆ

# ಪ್ರಾಣಿ ಮೇಲಿನ ಕ್ರೌರ್ಯ: ತಡೆ ಹೇಗೆ?

ವಿಶ್ಲೇಷಣೆ

ಟಿ.ಆರ್.ಅನಂತರಾಮು

**ಲೋಕಸಭೆಯಲ್ಲಿ** ಪಶುಸಂಗೋಪನಾ ಸಚಿವರು ಕಳೆದ ತಿಂಗಳಷ್ಟೇ ಒಂದು ಗಂಭೀರ ಪ್ರಶ್ನೆಗೆ ಸರ್ಕಾರದ ನಿಲುವೇನೆಂಬುದಕ್ಕೆ ಉತ್ತರಿಸಬೇಕಾಯಿತು. ಅದು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕುರಿತ ಪ್ರಶ್ನೆ. ಕಳೆದ ವರ್ಷ ಕೇರಳದಲ್ಲಿ ಆನೆಯೊಂದು ಅನಾನಸ್ ಗದ್ದೆಯನ್ನು ಹಾಳುಗೆಡವಿತ್ತು ಎಂದು ಕುಪಿತರಾದವರು ಅದನ್ನು ಪತ್ತೆಹಚ್ಚಿ, ಬಾಯಿಗೆ ಪಟಾಕಿ ಇಟ್ಟು ಸ್ಫೋಟಿಸಿದ್ದರು. ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗೆ 1960ರಲ್ಲೇ ಕಾನೂನು ರೂಪಿಸಿರುವಾಗ ಏಕೆ ಅದರ ಅನುಷ್ಠಾನದ ಬಗ್ಗೆ ಸರ್ಕಾರ ಕ್ರಿಯಾಹೀನವಾಗಿದೆ ಎಂಬುದು ಆ ಪ್ರಶ್ನೆ. ಸರ್ಕಾರ ಒಡನೆಯೇ ಈ ಕುರಿತು ನಿರ್ಧಾರ ತೆಗೆದುಕೊಳ್ಳಲೇಬೇಕಾಗಿತ್ತು.

ಮೊದಲ ಹೆಜ್ಜೆ ಎಂದರೆ, 60 ವರ್ಷದ ಹಳೆಯ ಕಾನೂನಿಗೆ ತಿದ್ದುಪಡಿ ತರುವುದು. ಮನುಷ್ಯನನ್ನು ಹೊರತುಪಡಿಸಿ ಉಳಿದೆಲ್ಲ ಜೀವಿಗಳೂ ಈ ಕಾನೂನಿನಡಿ ಬರುತ್ತವೆ. ಪ್ರಾಣಿಗಳಿಗೆ ಮಾಡುವ ಗಾಯ, ಆ ಮೂಲಕ ಅವುಗಳಿಗೆ ಶಾಶ್ವತವಾಗಿ ಅಂಗ ಊನ ಮಾಡುವುದು, ಅವು ಹೊರಲಾರದಷ್ಟು ಹೊರೆ ಹೊರಿಸುವುದು, ಸಾಕುವಾಗ ಅವುಗಳ ಆರೋಗ್ಯದ ಬಗ್ಗೆ ಮತ್ತು ಆಹಾರ ನೀಡಿಕೆಯಲ್ಲಿ ನಿರ್ಲಕ್ಷ್ಯ ಇವೆಲ್ಲವೂ ಅಪರಾಧಗಳ ಸ್ವರೂಪವೇ. ಹಳೆಯ ಕಾನೂನಿನಲ್ಲಿ ಇಂಥ ಅಪರಾಧಿಗಳಿಗೆ ವಿಧಿಸುತ್ತಿದ್ದ ದಂಡ ಕೇವಲ ₹ 50. ಈಗ ಸರ್ಕಾರ ತಿದ್ದುಪಡಿಯನ್ನು ತರಲು ಹೊರಟಿದೆ. ಕರಡನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಬಿಡುಗಡೆ ಮಾಡಿದೆ. ಪ್ರಮುಖ ಬದಲಾವಣೆ ಎಂದರೆ, ದಂಡದ ಮೊತ್ತವನ್ನು ಕನಿಷ್ಠ ₹ 750ರಿಂದ ₹ 75,000ದವರೆಗೆ ಏರಿಸಿದೆ. ಜೊತೆಗೆ ಅಪರಾಧಿಗಳಿಗೆ ಗರಿಷ್ಠ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಕೂಡ.

ಇದು ಹಲವು ಪ್ರಶ್ನೆಗಳನ್ನು ಸಾರ್ವಜನಿಕರಲ್ಲಿ ಎಬ್ಬಿಸಿದೆ. ಪ್ರಾಣಿಗಳ ಮೇಲಿನ ಕ್ರೌರ್ಯವು ಕಾನೂನಿನಿಂದ ಕಡಿಮೆಯಾಗಿದೆಯೇ? ಈ ಪ್ರಶ್ನೆಯಲ್ಲೇ ಉತ್ತರವೂ ಇದೆ; ದೌರ್ಜನ್ಯಕ್ಕೆ ತಡೆಯನ್ನೇ ಹಾಕಿಲ್ಲ. ವನ್ಯಜೀವಿ ಸಂರಕ್ಷಣೆ ನಿಯಮದ ಪ್ರಕಾರ, ಯಾವ ವನ್ಯಜೀವಿಯನ್ನೂ ಕೊಲ್ಲುವ ಹಾಗಿಲ್ಲ. ಅದು ಭಾರಿ ಶಿಕ್ಷಾರ್ಹ ಅಪರಾಧ; ಸಾರ್ವಜನಿಕರಿಗೂ ಗೊತ್ತು. ಇದೇ ಫೆಬ್ರುವರಿಯಲ್ಲಿ ಹಾಸನದ ಅರಸೀಕೆರೆ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಚಿರತೆಯು ಐದು ಜನರ ಮೇಲೆ ದಾಳಿ ಮಾಡಿತ್ತೆಂದು ಕುಪಿತರಾದ ಜನ, ರಕ್ಷಣೆ ಮಾಡುವವರು ಬರುವ ಮುನ್ನವೇ ದೊಣ್ಣೆಯಿಂದ ಹೊಡೆದು ಸಾಯಿಸಿದ್ದರು. ಕೊಡಗಿನಲ್ಲಿ ಈಗ ಕಾಫಿ ತೋಟಕ್ಕೆ ಹುಲಿಗಳೂ ನುಗ್ಗುತ್ತಿವೆ. ಇದು ಅವುಗಳ ಹೊಸ ಆವಾಸವೆಂದು ವನ್ಯಜೀವಿ ತಜ್ಞರೇ ಹೇಳಿದ್ದಾರೆ.

ಕೇಂದ್ರ ಅರಣ್ಯ ಇಲಾಖೆಯ 2020ರ ಸಮೀಕ್ಷೆಯಂತೆ, ಕರ್ನಾಟಕದಲ್ಲಿ 1,783 ಚಿರತೆಗಳಿವೆ. ಹೆಮ್ಮೆಪಡಬೇಕಾದ್ದೇ. ಇದೇ ಗಳಿಗೆಯಲ್ಲಿ ಮಾನವ- ವನ್ಯಜೀವಿ ಸಂಘರ್ಷವೂ ಹೆಚ್ಚುತ್ತಿದೆ. ಮೂಲ ಆವಾಸ ನಾಶ, ಆಹಾರ ಬೇಟೆಗೆ ಸಂರಕ್ಷಣಾ ವಲಯದಿಂದ ಹೊರಬರುವ ಪರಿಸ್ಥಿತಿ ಜೊತೆಗೆ ಸಂಖ್ಯೆಯಲ್ಲಿ ಹೆಚ್ಚಳ- ಇವೇ ಮುಂತಾದ ಕಾರಣಗಳನ್ನು ಗುರುತಿಸಬಹುದು. ಇಲ್ಲಿ ಗಮನಿಸಬೇಕಾದದ್ದು ಮನುಷ್ಯಕೇಂದ್ರಿತ ತೀರ್ಪು. ಪ್ರಾಣಿಗಳ ಆ ವರ್ತನೆಗೆ ಹಿಂಸೆಯಿಂದಲೇ ಉತ್ತರ ಕೊಡುವ ಅತಾರ್ಕಿಕ ಮತ್ತು ಅಮಾನವೀಯ ನಿರ್ಧಾರ- ಶಿಕ್ಷೆಯಾಗುತ್ತದೆಂದು ತಿಳಿದಿದ್ದರೂ.

ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ- 1960ರ ಕಾಯ್ದೆಗೆ ಸರ್ಕಾರ ತಿದ್ದುಪಡಿ ತರಲು ಹೊರಟಿರುವುದು ಸಾಕುಪ್ರಾಣಿಗಳಿಗೆ ಸಂಬಂಧಿಸಿದ್ದು. ಏಕೆಂದರೆ ವನ್ಯಜೀವಿ ಸಂರಕ್ಷಣೆಗೆ ಬೇರೆ ಕಾನೂನು ಕಟ್ಟಳೆಗಳೇ ಇವೆ. ಹಳೆಯ ಕಾನೂನಿನಲ್ಲಿ ಶಿಕ್ಷೆಯ ಬಗ್ಗೆ ಸ್ಪಷ್ಟ ಸೂಚನೆಗಳಿದ್ದರೂ ಅವು ಅನುಷ್ಠಾನಗೊಂಡಿಲ್ಲ ಎನ್ನುವುದು ವನ್ಯಜೀವಿಗಳ ಆಕ್ರಮಣಕ್ಕೆ ತುತ್ತಾದ ಜನರ ಆಕ್ರೋಶ. ದೇಶದ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಪ್ರಾಣಿಗಳ ಮೇಲಿನ ಕ್ರೌರ್ಯಕ್ಕೆ ಸಂಬಂಧಿಸಿದಂತೆ ಒಟ್ಟು 316 ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿವೆ. ಇಂಥ ಮೊಕದ್ದಮೆಗಳನ್ನು ನ್ಯಾಯಾಲಯಗಳು ಶೀಘ್ರವಾಗಿ ಏಕೆ ಕೈಗೆತ್ತಿಕೊಳ್ಳುತ್ತಿಲ್ಲ? ಏಕೆಂದರೆ ಇದು ಆದ್ಯತೆಯಲ್ಲ!

ಸಾಹಿತಿ ಯು.ಆರ್.ಅನಂತಮೂರ್ತಿ ಅವರು ಸಂದರ್ಶನವೊಂದರಲ್ಲಿ ಹೇಳಿದ ಮಾತುಗಳು ವಸ್ತುಸ್ಥಿತಿಗೆ ಕನ್ನಡಿ ಹಿಡಿಯುತ್ತವೆ: ‘ಚಿಕನ್ ತಿನ್ನುವುದರ ವಿರುದ್ಧ ನನ್ನದೇನೂ ತಕರಾರಿಲ್ಲ. ಆದರೆ ಕೋಳಿಗಳನ್ನು ಸೈಕಲ್ಲಿನಲ್ಲಿ ಗೊಂಚಲಿನಂತೆ ಕಟ್ಟಿ, ತಲೆಕೆಳಗು ಮಾಡಿ, ಅವುಗಳ ಉಸಿರಾಟವನ್ನೂ ಲೆಕ್ಕಿಸದೆ ಒಯ್ಯುವ ರೀತಿ. ಹಾಗೆಯೇ ಕೋಳಿಗೂಡಿನಲ್ಲಿ ಅವುಗಳು ಮಿಸುಕಲೂ ಆಗದಂತೆ ಮಾಡಿರುವ ಇಕ್ಕಟ್ಟು ಮನಸ್ಸಿಗೆ ಬೇಸರ ತರುತ್ತದೆ’ ಎಂದಿದ್ದರು.

ಹಬ್ಬ ಹರಿದಿನಗಳಲ್ಲಿ ದೇವರ ಹೆಸರಿನಲ್ಲಿ ಪ್ರಾಣಿಗಳ ಬಲಿ ಕೊಡುವುದನ್ನು ಸರ್ಕಾರವು ಕಾನೂನಾತ್ಮಕವಾಗಿ 1959ರಲ್ಲೇ ನಿಷೇಧಿಸಿದೆ. ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕೆಂಬ ಸಂವಿಧಾನದ ಆಶಯವನ್ನು ಮತ್ತೆ ಮತ್ತೆ ನೆನಪಿಸುತ್ತಿದೆ ಕೂಡ. ಆದರೂ ಕದ್ದುಮುಚ್ಚಿ ಸಣ್ಣ ಪ್ರಮಾಣದಲ್ಲಾದರೂ ಪ್ರಾಣಿಬಲಿ ನಡೆದೇ ಇದೆ. ಈಗ ಹಿಂಸೆ ಎನ್ನುವುದಕ್ಕೆ ಮರುವ್ಯಾಖ್ಯಾನದ ಅವಶ್ಯಕತೆ ಇದೆ.

ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದು ಹಿಂಸೆಯಲ್ಲವೇ ಎಂಬುದು ಪ್ರಾಣಿ ದಯಾ ಸಂಘಗಳ ವಾದ. ಈ ವಿಚಾರ ಎಲ್ಲ ಸಂದರ್ಭಗಳಲ್ಲೂ ವಿವಾದಕ್ಕೆಡೆ ಮಾಡುತ್ತದೆ. ಏಕೆಂದರೆ ಸಮಾಜವನ್ನು ಸಸ್ಯಾಹಾರಿಯನ್ನಾಗಿ ಮಾಡಿ ಎನ್ನುವುದು ಸಮಾಜದ ಆಹಾರ ಪದ್ಧತಿಯನ್ನೇ ಪ್ರಶ್ನಿಸಿದಂತಲ್ಲವೇ ಎಂಬುದು ಸಮಾಜದ ನಿಲುವು. ‘ಆಹಾರ ನಮ್ಮ ಆಯ್ಕೆ, ನಮ್ಮ ಹಕ್ಕು’ ಎನ್ನುವುದು ಪ್ರತಿಪಾದನೆಯ ಒಂದು ಮಗ್ಗುಲಾದರೆ, ಇನ್ನೊಂದು ಅಸಹಾಯಕತೆಯ ಪ್ರಶ್ನೆ-ಕೃಷಿಗೆ ಬಳಸಿದ ಮೇಲೆ ಮುದಿ ರಾಸುಗಳನ್ನು ಎಲ್ಲಿ ಇಟ್ಟುಕೊಳ್ಳುವುದು? ಅವನ್ನು ನಿಭಾಯಿಸುವುದು ಹೇಗೆ ಎನ್ನುವುದು ರೈತಾಪಿ ವರ್ಗದ ಪ್ರಶ್ನೆ. ಮಾಂಸ ಮಾರಾಟವೇ ವೃತ್ತಿಯಾದವರಿಗೆ ತಮ್ಮ ಗತಿ ಏನು ಎಂಬ ಆತಂಕ. ಇವೆರಡೂ ಸುದೀರ್ಘ ಚರ್ಚೆಗೆ ಹಿಂದೆಯೂ ಗ್ರಾಸವಾಗಿವೆ, ಈಗಲೂ ಕೂಡ. ಇದು ಆದಿ-ಅಂತ್ಯವಿಲ್ಲದ ಉತ್ತರ ಕಾಣದ ಪ್ರಶ್ನೆಯಾಗಿಯೇ ಉಳಿದಿದೆ.

ಈ ವರ್ಷದ ಆರಂಭದಲ್ಲೇ ಕರ್ನಾಟಕ ಸರ್ಕಾರವು ಗೋಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತಂದಿತು. ಈ ಕಾಯ್ದೆಯ ಪ್ರಕಾರ, ಗೋಹತ್ಯೆ ಕರ್ನಾಟಕದಲ್ಲಿ ಸಂಪೂರ್ಣ ನಿಷೇಧವಾಗಿದೆ. ಉಲ್ಲಂಘಿಸಿದವರಿಗೆ ಐದು ಲಕ್ಷ ರೂಪಾಯಿ ದಂಡ, ಏಳು ವರ್ಷಗಳವರೆಗೆ ಜೈಲುವಾಸ. ಇಲ್ಲೊಂದು ವಿರೋಧಾಭಾಸ ಎದ್ದುಕಾಣುತ್ತದೆ. ಹದಿಮೂರು ವರ್ಷಕ್ಕಿಂತ ಹೆಚ್ಚಿನ ಪ್ರಾಯದ ಎಮ್ಮೆ, ಕೋಣಗಳನ್ನು ಮಾಂಸಕ್ಕಾಗಿ ಕತ್ತರಿಸಲು ಅವಕಾಶವಿದೆ. ಹಿಂಸೆ ಎಂದರೆ ಬೇರೆ ಬೇರೆ ಪ್ರಾಣಿಗಳಿಗೆ ಬೇರೆ ಬೇರೆ ವಿಧದಲ್ಲಿರುತ್ತದೆಯೇ ಎಂಬುದು ಜನಸಾಮಾನ್ಯರು ಕೂಡಾ ಕೇಳಬಹುದಾದ ಪ್ರಶ್ನೆ. ಪ್ರಾಣಿಗಳ ಹಕ್ಕಿಗಾಗಿ ಹೋರಾಡುತ್ತಿರುವ ‘ಪೆಟಾ’ದ (ಪೀಪಲ್ ಫಾರ್ ಎಥಿಕಲ್ ಟ್ರೀಟ್‌ಮೆಂಟ್ ಫಾರ್ ಅನಿಮಲ್ಸ್) ಭಾರತದ ಮುಖ್ಯ ಕಚೇರಿ ಮುಂಬೈನಲ್ಲಿದೆ. ಅದು ಪ್ರದರ್ಶಿಸಿರುವ ಘೋಷವಾಕ್ಯ: ‘ಪ್ರಾಣಿ ನಮ್ಮವಲ್ಲ, ಅವುಗಳ ಮೇಲೆ ನಮ್ಮ ಹಕ್ಕಿಲ್ಲ’.

ತಮಿಳುನಾಡಿನ ಮದುರೆಯಲ್ಲಿ ‘ಜಲ್ಲಿಕಟ್ಟು’ ಹೆಸರಿನಲ್ಲಿ ಹೋರಿಗಳಿಗೆ ಮಾಡುವ ಹಿಂಸೆ, ಕರಾವಳಿ ಕರ್ನಾಟಕದಲ್ಲಿ ‘ಕಂಬಳ’ದ ಹೆಸರಿನಲ್ಲಿ ಕೋಣಗಳಿಗೆ ಬೀಳುವ ಪೆಟ್ಟು ಕೂಡ ಹಿಂಸೆಯ ಪ್ರತಿರೂಪ ಎನ್ನುವುದು ಪ್ರಾಣಿ ದಯಾ ಸಂಘದ ವಾದ. ಆದರೆ ಇದನ್ನು ಬಲವಾಗಿ ವಿರೋಧಿಸುವವರು ತಳೆದಿರುವ ನಿಲುವೇ ಬೇರೆ. ಇವು ನಮ್ಮ ಜನಪದ ನಂಬಿಕೆಗಳು, ಲಾಗಾಯ್ತಿನಿಂದ ರೂಢಿಯಲ್ಲಿವೆ, ಸಾಂಸ್ಕೃತಿಕವಾಗಿ ಒಪ್ಪಿರುವಂತಹವು. ಇದಕ್ಕೆ ಅಡ್ಡಬರಲು ಯಾರಿಗೂ ಹಕ್ಕಿಲ್ಲ. ಇದು ಅವರ ದನಿ.

ಜಲ್ಲಿಕಟ್ಟು ಪ್ರಕರಣವು ಸುಪ್ರೀಂ ಕೋರ್ಟಿನ ಕಟಕಟೆಯನ್ನೂ ಏರಿತು. ಅಂತಿಮವಾಗಿ ನ್ಯಾಯಾಲಯವು ಜಲ್ಲಿಕಟ್ಟಿನ ಪರವಾಗಿ ನಿಂತಿತು. ಇಲ್ಲಿ ಸ್ಪಷ್ಟ ಸಂದೇಶವೊಂದು ಕಾಣುತ್ತದೆ. ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗೆ ಸರ್ಕಾರದ ಪಾಲಿಗಿಂತ ಜನಮನ ಬದಲಾಗಬೇಕು. ‘ದಯವೇ ಬೇಕು ಸಕಲ ಪ್ರಾಣಿಗಳಲ್ಲಿಯೂ’ ಎನ್ನುವ ಬಸವ ತತ್ವ, ಕಾನೂನಿಗಿಂತ ಹೆಚ್ಚು ಪರಿಣಾಮಕಾರಿ- ನಮ್ಮ ಹೃದಯಕ್ಕೆ ಇಳಿಯಬೇಕು ಅಷ್ಟೇ.

## ಚುರುಮುರಿ

### ಮಾರ್ಷಲ್ ಮದುವೆ!

● ಬಿ.ಎನ್.ಮಲ್ಲೇಶ್

**‘ಒಂದ್** ಮಜಾ ಗೊತ್ತಾ? ನಿನ್ನೆ ಒಂದ್ ಮದುವೆಗೆ ಹೋಗಿದ್ದೆ’ ಅಂದ ತೆಪರೇಸಿ.

‘ಮದುವೆ ಸರಿ, ಅದ್ರಲ್ಲೇನು ಮಜಾ?’ ಗುಡ್ಡೆ ಕೊಕ್ಕೆ ಹಾಕಿದ.

‘ಮದುವೆ ಛತ್ರಕ್ಕೆ ಹೋಗ್ತಿದ್ದಂಗೆ ಅದ್ಯಾರೋ ಮಾರ್ಷಲ್ ಅಂತಪ, ಬಾಗಿಲಲ್ಲೇ ನಿಲ್ಲಿಸಿದ. ನಾವು ಗಂಡ-ಹೆಂಡ್ತಿ ಅಂದ್ರೂ ಕೇಳದೆ ದೂರ ದೂರ ನಿಂತ್ಕಳಿ, ಸ್ಯಾನಿಟೈಸರ್ ಹಾಕ್ಕಳಿ, ಮಾಸ್ಕ್ ಎಲ್ಲಿ ಅಂತ ಶುರು ಹಚ್ಕಂಡ. ಅದ್ಯಾವುದೋ ಸಿನಿಮಾದಾಗೆ ‘ಪೌಡ್ರು ಹಾಕ್ಕಳಿ, ತಲೆ ಬಾಚ್ಕಳಿ’ ಅಂತಿದ್ರಲ್ಲ ಆ ತರ...’

‘ಹೌದಾ? ಆಮೇಲೆ?’

‘ವಾಲಗ ಊದೋರಿಗೆ, ಪುರೋಹಿತರಿಗೆಲ್ಲ ಯಾಕ್ರೀ ಮಾಸ್ಕ್ ಹಾಕಿಲ್ಲ ಅಂತ ಆವಾಜ್ ಹಾಕ್ತಿದ್ದ. ನಾನು ‘ಅಲ್ಲ ಸ್ವಾಮಿ, ಮಾಸ್ಕ್ ಹಾಕ್ಕಂಡ್ರೆ ಅವರು ವಾಲಗ ಊದೋದ್ಹೆಂಗೆ, ಮಂತ್ರ ಹೇಳೋದ್ಹೆಂಗೆ’ ಅಂತ ಕೇಳಿದ್ರೆ ‘ಅದೆಲ್ಲ ನಂಗೊತ್ತಿಲ್ಲ, ಇದು ಗೌರ್ಮೆಂಟ್ ಆರ್ಡರು. ಇಲ್ಲಾಂದ್ರೆ ದಂಡ ಕಟ್ಟಿ’ ಅಂತ ರೋಫ್ ಹೊಡೀತಾನೆ’.

‘ಒಳ್ಳೆ ಗಿರಾಕಿ, ಆಮೇಲೆ?’

‘ಛತ್ರದ ಬಾಗಿಲಾಗೆ ನಿಂತ್ಕಂಡು, ಐನೂರು ಜನ ಒಳಗೆ ಬಂದಾತು ಮತ್ಯಾರೂ ಬರಂಗಿಲ್ಲ ಅಂತ ಕದ ಹಾಕಿಸಿದ. ತಾಳಿ ಕಟ್ಟೋ ಸಮಯಕ್ಕೆ ಬಂದು, ಗಂಡು- ಹೆಣ್ಣು ಸೇರಿದಂಗೆ ಅಲ್ಲಿದ್ದ ಎಲ್ಲರಿಗೂ ಮಾಸ್ಕ್ ಹಾಕಿಸಿದ. ಅಲ್ಲಿ ಸ್ವಲ್ಪದರಲ್ಲಿ ಒಂದು ಎಡವಟ್ಟಾಗೋದು ತಪ್ಪೋತು ಸದ್ಯ...’

ಹೌದಾ? ಏನು ಎಡವಟ್ಟು?’

‘ಎಲ್ರೂ ಮಾಸ್ಕ್ ಹಾಕಿದ್ರಿಂದ ಹೆಣ್ಣು ಯಾರು ಅಂತ ಗೊತ್ತಾಗದೆ, ಹೆಣ್ಣಿನ ಬದ್ಲು ಪಕ್ಕದಲ್ಲಿದ್ದ ಇನ್ಯಾವ್ದೋ ಹುಡ್ಗಿಗೆ ಗಂಡು ತಾಳಿ ಕಟ್ಟೋಕೆ ಹೋಗಿಬಿಟ್ಟಿದ್ದ!’

‘ಹೊಗ್ಗಾ ನಿನ್ನ, ಹೌದಾ? ಆಮೇಲೆ ಡೈನಿಂಗ್ ಹಾಲ್‌ಗೆ ಹೋಗಿ, ಊಟಕ್ಕೆ ಕೂತಿರೋ ಎಲ್ರೂ ಮಾಸ್ಕ್ ಹಾಕ್ಕಳಿ ಅಂದ್ನಾ?’

‘ಮಾಸ್ಕ್ ಹಾಕ್ಕಂಡ್ರೆ ಊಟ ಮಾಡೋದ್ಹೆಂಗೆ? ಸದ್ಯ ಅದೊಂದ್ ಹೇಳಲಿಲ್ಲಪ್ಪ’ ತೆಪರೇಸಿ ನಕ್ಕ.

## ದಿನದ ಟ್ವೀಟ್

### ಅನುಕೂಲಸಿಂಧು ನೀತಿಯೇ?

**‘ಮೆಟ್ರೊ ಮ್ಯಾನ್’ ಎಂದೇ ಹೆಸರಾಗಿರುವ 89 ವರ್ಷ ವಯಸ್ಸಿನ ಶ್ರೀಧರನ್ ಅವರನ್ನು ಬಿಜೆಪಿಯು ಕೇರಳದ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಹಾಗಾದರೆ, 75 ವರ್ಷಕ್ಕಿಂತ ಹೆಚ್ಚು ವಯಸ್ಸಾದವರಿಗೆ ವನವಾಸಕ್ಕೆ ಹೋಲಿಸಬಹುದಾದ ಮಾರ್ಗದರ್ಶಕ ಮಂಡಳಿಯಲ್ಲಿ ಸ್ಥಾನ ಕಲ್ಪಿಸುವುದು ಕೇವಲ ಅನುಕೂಲಸಿಂಧು ನೀತಿಯೇ? ಹೀಗಾಗಿ, ಅಡ್ವಾಣಿ, ಮುರಳಿ ಮನೋಹರ ಜೋಷಿ ಮತ್ತು ಶಾಂತಕುಮಾರ್ ಅವರು 2024ರ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂಬುದು ನನ್ನ ಸಲಹೆಯಾಗಿದೆ.**

**ಸುಬ್ರಮಣಿಯನ್ ಸ್ವಾಮಿ,** ರಾಜ್ಯಸಭಾ ಸದಸ್ಯ, ಬಿಜೆಪಿ ಮುಖಂಡ

## 25 ವರ್ಷಗಳ ಹಿಂದೆ

ಬುಧವಾರ, 6-3-1996

● **ವಿಧಾನ ಪರಿಷತ್ತಿನಲ್ಲಿ ಮಸೂದೆಗೆ ಸೋಲು- ಸರ್ಕಾರಕ್ಕೆ ಆಘಾತ**

**ಬೆಂಗಳೂರು, ಮಾರ್ಚ್ 5**- ಪ್ರತಿಪಕ್ಷಗಳ ಸಂಘಟಿತ ವಿರೋಧದಿಂದಾಗಿ ಭೂ ಸುಧಾರಣಾ ತಿದ್ದುಪಡಿ ವಿಧೇಯಕ ವಿಧಾನ ಪರಿಷತ್ತಿನಲ್ಲಿಂದು ಬಿದ್ದು ಹೋಯಿತು.

ಮಸೂದೆಯನ್ನು ಮತಕ್ಕೆ ಹಾಕುವ ಮುನ್ನ, ತಿದ್ದುಪಡಿ ಮಸೂದೆಯ ಸಾಧಕ ಬಾಧಕಗಳನ್ನು ಪರಿಶೀಲಿಸಲು ಸದನ ಸಮಿತಿ ರಚಿಸಬೇಕು ಎಂದು ವಿರೋಧ ಪಕ್ಷದ ನಾಯಕ ಕಾಂಗ್ರೆಸ್‌ನ ಎಚ್.ಕೆ. ಪಾಟೀಲ್ ಅವರು ಮಂಡಿಸಿದ ಗೊತ್ತುವಳಿಯನ್ನು ತಾಂತ್ರಿಕ ಲೋಪಗಳ ಆಧಾರದ ಮೇಲೆ ಸಭಾಪತಿ ಡಿ.ಬಿ.ಕಲ್ಮಣಕರ್ ಅವರು ತಿರಸ್ಕರಿಸಿದರು.

ಆದರೆ ಭೂ ಸುಧಾರಣಾ ಕಾಯ್ದೆಯನ್ನು ಉಲ್ಲಂಘಿಸಿ ಬೆಂಗಳೂರು ನಗರದ ಸುತ್ತಮುತ್ತ ಸಾವಿರಾರು ಎಕರೆ ಭೂಮಿಯನ್ನು ಕಬಳಿಸಿರುವ ಪ್ರಕರಣಗಳ ಬಗ್ಗೆ ವಿಭಾಗಾಧಿಕಾರಿಗಳು ತನಿಖೆ ನಡೆಸಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳನ್ನು ಸದನದ ಮುಂದಿಡಬೇಕು ಎಂಬ ಎಚ್.ಕೆ.ಪಾಟೀಲ್ ಅವರ ಒತ್ತಾಯವನ್ನು ಸಭಾಪತಿಗಳು ಎತ್ತಿ ಹಿಡಿದರು.

● **ಮೈಸೂರಿಗೆ ಬಂದ ‘ರಮಣ’**

**ಮೈಸೂರು, ಮಾರ್ಚ್ 5**- ಮೈಸೂರು ಮೃಗಾಲಯದಲ್ಲಿ ಬಿಳಿ ಹುಲಿಗಳ ಸಂತಾನವನ್ನು ಹೆಚ್ಚಿಸುವುದಕ್ಕಾಗಿ ಹೈದರಾಬಾದಿನ ‘ರಮಣ’ ಮಂಗಳವಾರ ಮೃಗಾಲಯಕ್ಕೆ ಬಂದಿಳಿದ.

ಹೈದರಾಬಾದಿನ ನೆಹರೂ ಮೃಗಾಲಯದಿಂದ ಬಂದಿರುವ ಈ ‘ರಮಣ’ ವಾಸ್ತವವಾಗಿ ಬಿಳಿ ಹುಲಿ ಅಲ್ಲ. ಆದರೆ ಆತನಲ್ಲಿರುವ ಜೀನ್‌ಗಳು ಮಾತ್ರ ಬಿಳಿ ಹುಲಿಯ ಹುಟ್ಟಿಗೆ ಕಾರಣವಾಗಬಲ್ಲವು. ಒಂದು ಜೊತೆ ಕಪ್ಪು ಹಂಸವನ್ನು ಕೊಟ್ಟು ಅದಕ್ಕೆ ಪ್ರತಿಯಾಗಿ ರಮಣನನ್ನು ಪಡೆಯಲಾಗಿದೆ.

## 50 ವರ್ಷಗಳ ಹಿಂದೆ

ಶನಿವಾರ, 6-3-1971

● **114 ಕ್ಷೇತ್ರಗಳಲ್ಲಿ ಶೇ 50ರಷ್ಟು ಮತದಾನ**

**ನವದೆಹಲಿ, ಮಾರ್ಚ್ 5**- ಎಂಟು ರಾಜ್ಯಗಳಲ್ಲಿ ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ 114 ಕ್ಷೇತ್ರಗಳಲ್ಲಿ ಐದನೇ ದಿನವಾದ ಇಂದು ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಒಟ್ಟು ಆರೂವರೆ ಕೋಟಿ ಮತದಾರರಲ್ಲಿ ಶೇ 50ರಷ್ಟು ಮಂದಿ ಮತದಾನ ಮಾಡಿದರು.

ಆಂಧ್ರಪ್ರದೇಶ ಮತ್ತು ಬಿಹಾರದ ಎರಡು ಕಡೆ ಸಣ್ಣಪುಟ್ಟ ಘಟನೆಗಳ ವಿನಾ ಉಳಿದೆಡೆ ಮತದಾನ ಶಾಂತಿಯುತವಾಗಿ ನಡೆಯಿತು.

● **ರಾಜ್ಯದ ಹಿಂದುಳಿದ ವರ್ಗಗಳ ಸ್ಥಿತಿಗತಿ ಪರಿಶೀಲಿಸಲು ಆಯೋಗ ರಚನೆಗೆ ಕರೆ**

**ಬೆಂಗಳೂರು, ಮಾರ್ಚ್ 5**- ರಾಜ್ಯಾಂಗದತ್ತ ರಕ್ಷಣೆ ಹೊಂದಿರುವ ನಿಮ್ನ ವರ್ಗ ಮತ್ತು ಗುಡ್ಡಗಾಡಿನ ಜನರನ್ನು ಬಿಟ್ಟು ಮೈಸೂರು ರಾಜ್ಯದಲ್ಲಿ ಇತರ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಪರಿಶೀಲಿಸಿ ವರದಿ ಮಾಡಲು ಆಂಧ್ರಪ್ರದೇಶದಂತೆ ಆಯೋಗವೊಂದನ್ನು ರಚಿಸಬೇಕೆಂದು ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಸಂಘ ರಾಜ್ಯ ಸರ್ಕಾರವನ್ನು ಕೇಳಿದೆ.

## ಸಂಗತ

# ಪರೀಕ್ಷಾ ಅಕ್ರಮ: ಶೈಕ್ಷಣಿಕ ಅನೈತಿಕತೆ

ಮಕ್ಕಳು ಗಳಿಸುವ ಅಂಕಗಳಿಗಿಂತ ನೈಜ ಕಲಿಕೆಯ ಬಲವೇ ಪರಿಣಾಮಕಾರಿ ಎಂಬುದನ್ನು ಮನಗಂಡರೆ, ಪರೀಕ್ಷಾ ಅಕ್ರಮಗಳಿಗೆ ಕಡಿವಾಣ ಬೀಳುತ್ತದೆ

● ಡಾ. ಎಚ್.ಬಿ.ಚಂದ್ರಶೇಖರ್

**ಯೋಧರ** ನೇಮಕಾತಿಗಾಗಿ ನಡೆಯಬೇಕಾಗಿದ್ದ ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆಯ ಕಾರಣದಿಂದ ಸೇನಾಪಡೆಯು ರದ್ದುಗೊಳಿಸಿದ ವರದಿಯು (ಪ್ರ.ವಾ., ಮಾರ್ಚ್ 1) ಪರೀಕ್ಷಾ ಅಕ್ರಮಗಳ ಸಾಲಿಗೆ ಆದ ಇತ್ತೀಚಿನ ಹೊಸ ಸೇರ್ಪಡೆ ಎನ್ನಬಹುದು. ರಾಜ್ಯದಲ್ಲಿ ಕರ್ನಾಟಕ ಲೋಕಸೇವಾ ಆಯೋಗ ನಡೆಸಬೇಕಿದ್ದ ಪ್ರಥಮ ದರ್ಜೆ ಸಹಾಯಕರ (ಎಫ್‌ಡಿಎ) ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಕೆಲವು ದಿನಗಳ ಹಿಂದೆ ಸೋರಿಕೆಯಾಗಿತ್ತು. 10 ಮತ್ತು 12ನೇ ತರಗತಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ದೇಶದ ವಿವಿಧ ಬೋರ್ಡ್ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಹಾಗೂ ಹಲವಾರು ನೇಮಕಾತಿಗಳಿಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳು ಸೋರಿಕೆಯಾದ ಬಗ್ಗೆ ಆಗಾಗ್ಗೆ ಮಾಧ್ಯಮಗಳಲ್ಲಿ ವರದಿಗಳು ಬರುತ್ತಲೇ ಇರುತ್ತವೆ.

ಒಂದೆಡೆ ಪರೀಕ್ಷೆಗಳನ್ನು ಬಿಗಿಯಾಗಿ ನಡೆಸಲು ಕಠಿಣ ನಿಯಮ ಹಾಗೂ ವಿಧಾನಗಳನ್ನು ಜಾರಿಗೆ ತರಲಾಗುತ್ತಿದ್ದರೆ, ಇನ್ನೊಂದೆಡೆ, ಅವುಗಳನ್ನು ಭೇದಿಸಿ ಅಕ್ರಮಗಳನ್ನು ನಡೆಸಲು ವಂಚಕರ ತಂಡ ಕಾರ್ಯತತ್ಪರವಾಗುತ್ತದೆ. ಪ್ರಶ್ನೆಪತ್ರಿಕೆಗಳ ತಯಾರಿ, ಮುದ್ರಣ, ಸಾಗಣೆಯ ಹಂತ, ಪರೀಕ್ಷೆಗಳನ್ನು ನಡೆಸುವಾಗ ನಕಲು ಮಾಡುವುದು, ನಕಲು ಮಾಡಲು ಸಹಕರಿಸುವುದು, ಉತ್ತರಪತ್ರಿಕೆಗಳ ಮೌಲ್ಯಮಾಪನ, ಅಂಕಗಳನ್ನು ಗಣಕೀಕರಣ ಮಾಡುವ ಹಂತದಲ್ಲಿ ಪರೀಕ್ಷಾ ಅಕ್ರಮಗಳು ನಡೆಯುವ ಸಾಧ್ಯತೆಗಳಿರುತ್ತವೆ.

ಪರೀಕ್ಷಾ ಅಕ್ರಮವು ಜಾಗತಿಕ ಪಿಡುಗಾಗಿದೆ. ಶಿಸ್ತು, ಪ್ರಾಮಾಣಿಕತೆ, ಸಚ್ಚಾರಿತ್ರ್ಯದ ಮೌಲ್ಯಗಳನ್ನು ಬೆಳೆಸಲು ಬದ್ಧವಾದ ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ಪರೀಕ್ಷಾ ಅಕ್ರಮವನ್ನು ಶೈಕ್ಷಣಿಕ ಅನೈತಿಕತೆ ಎನ್ನಬಹುದು. ದೇಶದ ಕೆಲವು ರಾಜ್ಯಗಳಲ್ಲಿ ಪರೀಕ್ಷಾ ಅಕ್ರಮಗಳು ಉದ್ಯಮದ ಸ್ವರೂಪ ತಳೆದ ವರದಿಗಳಿವೆ. ಕೋಚಿಂಗ್ ಕೇಂದ್ರಗಳು, ಶೈಕ್ಷಣಿಕ ಸಂಸ್ಥೆಗಳು, ಪರೀಕ್ಷೆ ನಡೆಸುವ ಸಂಸ್ಥೆ ಹಾಗೂ ಕೆಲವು ವ್ಯಕ್ತಿಗಳ ದುಷ್ಟಕೂಟದ ಕಾರಣ ಪರೀಕ್ಷಾ ಅಕ್ರಮಗಳು ನಡೆಯುತ್ತವೆ. ಶೇ 1ಕ್ಕಿಂತ ಕಡಿಮೆ ಪ್ರಮಾಣದ ಜನರಿಂದ ನಡೆಯುವ ಇಂತಹ ಪರೀಕ್ಷಾ ಅಕ್ರಮಗಳಿಂದ ಶೇ 99ರಷ್ಟು ಜನರಿಗೆ ತೊಂದರೆಯಾಗುತ್ತದೆ.

ರಾಜ್ಯದಲ್ಲಿ ಕೆಲವು ವರ್ಷಗಳ ಕೆಳಗೆ ದ್ವಿತೀಯ ಪಿಯು ಪ್ರಶ್ನೆಪತ್ರಿಕೆಗಳ ಸೋರಿಕೆ ಸವಾಲಾಗಿ ಪರಿಣಮಿಸಿತ್ತು. ಆ ಸಂದರ್ಭದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ತಡೆಗಟ್ಟಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಪ್ರಶ್ನೆಪತ್ರಿಕೆಗಳ ಸಾಗಣೆಯ ವಾಹನವನ್ನು ತಂತ್ರಜ್ಞಾನದ ಮೂಲಕ ಟ್ರ್ಯಾಕಿಂಗ್ ಮಾಡಲಾಯಿತು. ಜಿಲ್ಲಾ ಹಂತದ ಖಜಾನೆಯಲ್ಲಿ ಪ್ರಶ್ನೆಪತ್ರಿಕೆಗಳನ್ನು ದಾಸ್ತಾನು ಮಾಡುವುದು, ಪ್ರಶ್ನೆಪತ್ರಿಕೆ ದಾಸ್ತಾನು ಮಾಡಲಾದ ಖಜಾನೆಯ ಕೊಠಡಿಗೆ ಸಿ.ಸಿ. ಟಿ.ವಿ. ಕ್ಯಾಮೆರಾ ಮೂಲಕ ಸದಾಕಾಲ ಕಣ್ಗಾವಲು ಹಾಕುವುದು, ಎಲ್ಲ ಖಜಾನೆಗಳ ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಗಳನ್ನು ಕೇಂದ್ರ ಕಚೇರಿಯಲ್ಲಿ ಗಮನಿಸಿ ಹದ್ದಿನ ಕಣ್ಣಿಡುವುದು ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಅಂದಿನಿಂದ ಜಾರಿಯಲ್ಲಿರುವ ಬಿಗಿ ಕ್ರಮಗಳು ಪರೀಕ್ಷಾ ಅಕ್ರಮಗಳಿಗೆ ತಡೆಯೊಡ್ಡಿವೆ ಎಂದೇ ಹೇಳಬಹುದು.

ಪರೀಕ್ಷಾ ಅಕ್ರಮಗಳನ್ನು ಬಿಗಿಯಾಗಿ ನಿಯಂತ್ರಿಸಿದ ಸಂದರ್ಭಗಳಲ್ಲಿ ಪರೀಕ್ಷಾ ಫಲಿತಾಂಶದಲ್ಲಿ ಕುಸಿತವಾಗುವುದನ್ನು ಗಮನಿಸಬಹುದಾಗಿದೆ. ಕೆಲವೊಮ್ಮೆ ಕೆಲವು ಜಿಲ್ಲೆಗಳ ಜಿಲ್ಲಾಧಿಕಾರಿಗಳು ಪರೀಕ್ಷೆಗಳಲ್ಲಿ ನಕಲನ್ನು ತಡೆಗಟ್ಟಲು ತೆಗೆದುಕೊಳ್ಳುವ ಕಠಿಣ ಕ್ರಮಗಳ ಕಾರಣ, ಆ ಜಿಲ್ಲೆಗಳ ಪರೀಕ್ಷಾ ಫಲಿತಾಂಶವು ಇತರ ಜಿಲ್ಲೆಗಳಿಗೆ ಹೋಲಿಸಿದರೆ ಕಡಿಮೆಯಾದ ಉದಾಹರಣೆಗಳಿವೆ. ಕೆಲವೊಮ್ಮೆ ಪರೀಕ್ಷಾ ಅಕ್ರಮಗಳನ್ನು ನಿಯಂತ್ರಿಸಲು ಕಠಿಣ ಕ್ರಮಗಳನ್ನು ಕೈಗೊಂಡ ರಾಜ್ಯ ಸರ್ಕಾರಗಳ ನೇತೃತ್ವ ವಹಿಸಿದ್ದ ಪಕ್ಷಗಳು, ನಂತರ ಬಂದ ಚುನಾವಣೆಯಲ್ಲಿ ಸೋತ ಉದಾಹರಣೆಗಳೂ ಇವೆ. ಈ ಕಾರಣಗಳಿಂದ ಪರೀಕ್ಷಾ ಅಕ್ರಮಗಳ ಕುರಿತ ಮಾಹಿತಿ ಇದ್ದಾಗ್ಯೂ ಕೆಲವು ರಾಜ್ಯಗಳಲ್ಲಿ ಅದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಮನಸ್ಸು ಮಾಡುವುದಿಲ್ಲ.



ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅನ್ಯಾಯ, ಅಕ್ರಮ, ವಂಚನೆಗಳು ನಡೆಯುವ ರೀತಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿಯೂ ಪರೀಕ್ಷಾ ಅಕ್ರಮಗಳು ನಡೆಯುತ್ತವೆ. ಈ ಪರೀಕ್ಷಾ ಅಕ್ರಮಗಳು ಸಮಾಜದ ಸ್ವಾಸ್ಥ್ಯದ ಪ್ರತಿಬಿಂಬ ಎನ್ನಬಹುದು. ಪರೀಕ್ಷಾ ಅಕ್ರಮಗಳಿಂದ ಶಿಕ್ಷಣ ಕ್ಷೇತ್ರದ ಗುಣಮಟ್ಟವು ತೀವ್ರ ಕುಸಿತಕ್ಕೊಳಗಾಗುವುದರ ಜೊತೆಗೆ ಇಡೀ ಸಾಮಾಜಿಕ ವ್ಯವಸ್ಥೆಯ ಅಧಃಪತನಕ್ಕೆ ಕಾರಣವಾಗುತ್ತವೆ. ಬಳಸುಹಾದಿಯಲ್ಲಿ ಪರೀಕ್ಷೆಗಳನ್ನು ಬರೆದು, ಉತ್ತೀರ್ಣರಾಗಿ ಕೆಲಸಕ್ಕೆ ಸೇರಿದ ಅನೇಕರು ಪರೀಕ್ಷಾ ಅಕ್ರಮಗಳನ್ನು ಎಸಗುವ ದಾರಿ ಹಿಡಿಯುತ್ತಾರೆ. ಇನ್ನು ಕೆಲವರು ಹಣದ ಆಸೆ ಅಥವಾ ಬಾಹ್ಯ ಒತ್ತಡಗಳಿಗೆ ಬಲಿಯಾಗಿ ಪರೀಕ್ಷಾ ಅಕ್ರಮಗಳನ್ನು ನಡೆಸುತ್ತಾರೆ.

ಫಲಿತಾಂಶದ ಪ್ರಮಾಣ ಹೆಚ್ಚಿಸುವ ದಿಸೆಯಲ್ಲಿ ಹಾಕುವ ಒತ್ತಡಗಳು ಪರೀಕ್ಷಾ ಅಕ್ರಮಗಳಿಗೆ ಕಾರಣವಾಗುತ್ತವೆ. ಪರೀಕ್ಷಾ ಅಕ್ರಮಗಳಿಂದ ಉಬ್ಬಿದ ಹುಸಿ ಫಲಿತಾಂಶಕ್ಕಿಂತ, ಕುಸಿತವಾದರೂ ನೈಜ ಫಲಿತಾಂಶವೇ ಶ್ರೇಷ್ಠ ಎಂಬುದು ಮುಖ್ಯವಾಗಬೇಕು.

ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಕಲಿಕೆಯ ವಾಸ್ತವಿಕ ಸ್ಥಿತಿಗತಿಯನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡು, ಅವುಗಳನ್ನು ಉತ್ತಮಪಡಿಸುವ ದಿಸೆಯಲ್ಲಿ ಬೋಧನಾ ವಿಧಾನಗಳಲ್ಲಿ ಬದಲಾವಣೆ ಮಾಡಿಕೊಳ್ಳುವ ಇಚ್ಛಾಶಕ್ತಿ ತೋರಬೇಕು. ಇದಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವುದು ಪ್ರಮುಖವಾದುದು. ಪೋಷಕರು ಸಹ ತಮ್ಮ ಮಕ್ಕಳು ಗಳಿಸುವ ಅಂಕಗಳಿಗಿಂತ ನೈಜ ಕಲಿಕೆಯ ಬಲವೇ ಪರಿಣಾಮಕಾರಿ ಎಂಬುದನ್ನು ಮನಗಾಣುವಂತೆ ಆಗಬೇಕು.

## ವಾಚಕರ ವಾಣಿ

### ಸಂಪರ್ಕ ರಸ್ತೆಯಿಲ್ಲದವರ ಕಷ್ಟ ನೀಗಲಿ

‘ರೋಗಿಗೆ ಕುರ್ಚಿಯೇ ಆಂಬುಲೆನ್ಸ್’ ಎಂಬ ಸುದ್ದಿ (ಪ್ರ.ವಾ., ಮಾರ್ಚ್ 5) ಓದಿ ದುಃಖವಾಯಿತು. 21ನೇ ಶತಮಾನದಲ್ಲಿದ್ದೇವೆ ಎಂದು ನಾವೆಲ್ಲರೂ ಬೀಗುತ್ತಿರುವಾಗ, ಅಂಕೋಲ ತಾಲ್ಲೂಕಿನ ವರೀಲಬೇಣ ಎಂಬ ಗ್ರಾಮದಲ್ಲಿ ಸಂಪರ್ಕ ರಸ್ತೆಯಿಲ್ಲದೆ ಊರವರು ಪಡುತ್ತಿರುವ ಕಷ್ಟ ನೋಡಲಾಗದು. ಇತ್ತೀಚೆಗೆ ರೋಗಿಯೊಬ್ಬರನ್ನು ಬೆತ್ತದ ಕುರ್ಚಿಯಲ್ಲಿ ಕುಳ್ಳಿರಿಸಿ, ಆ ಕುರ್ಚಿಗೆ ಕೋಲು ಕಟ್ಟಿ, ಕೋಲನ್ನು ಕೆಲವರು ಹೆಗಲ ಮೇಲೆ ಹೊತ್ತುಕೊಂಡು ಹೋಗಿ ರೋಗಿಯನ್ನು ಆಸ್ಪತ್ರೆಗೆ ಸಾಗಿಸುವ ವ್ಯವಸ್ಥೆ ಮಾಡಬೇಕಾಗಿ ಬಂದದ್ದು ದುರದೃಷ್ಟಕರ. ಇಂತಹ ಸ್ಥಿತಿಯಲ್ಲಿ ಕರೆದೊಯ್ಯುವ ರೋಗಿಗಳು ತೀವ್ರವಾಗಿ ಅಸ್ವಸ್ಥರಾಗಿದ್ದರೆ ಪಟ್ಟಣಕ್ಕೆ ಬರುವಷ್ಟರಲ್ಲಿ ಅವರು ಅರೆಜೀವವಾಗಿರುತ್ತಾರೆ. ಏಕೆಂದರೆ ಅಷ್ಟು ದೂರದ ಒಳಹಾದಿ ಅದು. ಕಷ್ಟದಲ್ಲಿ ಸಾಗಬೇಕಾದ ಕಾಡಿನ ರಸ್ತೆ. ಇಂತಹ ಸಂಕಷ್ಟದಲ್ಲಿರುವ ಆ ಹಳ್ಳಿಗರ ಪಾಡೇನು? ಇದನ್ನು ಯಾವ ರಾಜಕೀಯ ವ್ಯಕ್ತಿಯೂ ಪರಾಂಬರಿಸುವುದಿಲ್ಲವೇ?

**ಬಾಲಕೃಷ್ಣ ಎಂ.ಆರ್.,** ಬೆಂಗಳೂರು

### ಔಚಿತ್ಯಪ್ರಜ್ಞೆ ಬೇಡವೇ?

ರಮೇಶ್ ಜಾರಕಿಹೊಳಿ ಅವರ ಪ್ರಕರಣದಲ್ಲಿ ದೃಶ್ಯ ಮಾಧ್ಯಮಗಳು ವಿಡಿಯೊ ಪ್ರಸಾರ ಮಾಡಿದ ಔಚಿತ್ಯವನ್ನು ಮುಂದಿಟ್ಟು, ‘ಇಂತಹ ಅಪಸವ್ಯಕ್ಕೆ ಕೊನೆಯಿಲ್ಲವೇ?’ ಎಂದು ಆರ್.ವೆಂಕಟರಾಜು ಅವರು ಪ್ರಶ್ನಿಸಿರುವುದು (ವಾ.ವಾ., ಮಾರ್ಚ್ 5) ಸರಿಯಾಗಿಯೇ ಇದೆ. ಸ್ತ್ರೀ– ಪುರುಷರ ಸಮ್ಮಿಲನವು ತೀರಾ ವೈಯಕ್ತಿಕ ವಿಷಯ. ಇದನ್ನು ಚಿತ್ರೀಕರಿಸಿ ಮಾಧ್ಯಮಗಳ ಮುಖೇನ ಪ್ರಚಾರ ಮಾಡಿ ಪ್ರಸಿದ್ಧಿ ಅಥವಾ ಕುಪ್ರಸಿದ್ಧಿ ಪಡೆಯುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ರಮೇಶ್ ಅವರ ಪ್ರಕರಣದಲ್ಲಿ ಕೆಲವು ದೃಶ್ಯ ಮಾಧ್ಯಮಗಳು ಔಚಿತ್ಯದ ಎಲ್ಲೆ ದಾಟಿವೆ. ತಾವೇ ಕೋರ್ಟ್, ಪೊಲೀಸ್ ಎಂಬಂತೆ ವರ್ತಿಸಿ ಹಲವು ಊಹಾಪೋಹಗಳಿಗೆ ಎಡೆ ಮಾಡಿಕೊಟ್ಟಿವೆ. ಪುರುಷ ಮತ್ತು ಸ್ತ್ರೀ ಸಮ್ಮಿಲನವನ್ನು ಗುಟ್ಟಾಗಿ ಚಿತ್ರೀಕರಿಸಿ ಮಾಧ್ಯಮಗಳಿಗೆ ಬಿಡುಗಡೆ ಮಾಡುವಂತಹ ಪಿತೂರಿಗಳಿಗೆ ಕಡಿವಾಣ ಹಾಕಲು ಕಾಯ್ದೆ–ಕಟ್ಟಲೆಗಳಲ್ಲಿ ಅವಕಾಶ ಇಲ್ಲವೇ?

**ಬಿ.ರಮೇಶ್,** ಬೆಂಗಳೂರು

### ಏಕಕಾಲಕ್ಕೆ ಚುನಾವಣೆ: ಚರ್ಚೆ ಆಗಲಿ

ಒಂದು ದೇಶ, ಒಂದು ಚುನಾವಣೆ ಕುರಿತು ಚರ್ಚೆ ಆಗಬೇಕಿದೆ. ಒಂದು ದೇಶದಲ್ಲಿ ಏಕಕಾಲಕ್ಕೆ ಚುನಾವಣೆಗಳು ನಡೆಯುವುದರಿಂದ ಚುನಾವಣೆಗೆ ಆಗುವ ವೆಚ್ಚವನ್ನು ತಗ್ಗಿಸಬಹುದು. ಅಲ್ಲದೆ ಸಮಯದ ಸದುಪಯೋಗ ಮಾಡಿಕೊಳ್ಳಬಹುದು. ಇಲ್ಲವಾದರೆ ಸಾಮಾನ್ಯ ಜನರ ತೆರಿಗೆ ಹಣ ಚುನಾವಣೆಗಳಿಗೆ ಅನಗತ್ಯವಾಗಿ ವ್ಯಯವಾಗುತ್ತದೆ. ಇದನ್ನು ತಪ್ಪಿಸುವುದು ಅಗತ್ಯ. ಪರ್ಯಾಯ ಮಾರ್ಗೋಪಾಯಗಳ ಬಗ್ಗೆ ಚರ್ಚೆ ನಡೆಸುವುದರಲ್ಲಿ ತಪ್ಪಿಲ್ಲ.

**ವೈಸಿರಿ ಗೌಡ,** ಮೂಡಿಗೆರೆ

### ಕನ್ನಡದಲ್ಲಿ ಪದಗಳ ಕೊರತೆಯೇ?

ಗ್ರಾಮ್ ಸಡಕ್ (ಗ್ರಾಮ ರಸ್ತೆ), ರೋಜಗಾರ್ (ಉದ್ಯೋಗ), ಲೋಕ ಅದಾಲತ್, ಪಿಂಚಣಿ ಅದಾಲತ್, ವಿದ್ಯುತ್ ಅದಾಲತ್, ಕರ್ (ಟ್ಯಾಕ್ಸ್) ಅದಾಲತ್, ಸಮ್ಮಾನ್... ಇವು ಇತ್ತೀಚೆಗೆ ಕೇಂದ್ರ ಸರ್ಕಾರದ ಒತ್ತಾಸೆಯಿಂದಲೋ ಅಥವಾ ರಾಜ್ಯ ಸರ್ಕಾರದಲ್ಲಿ ಇರುವ ಕನ್ನಡೇತರ ಹಿರಿಯ ಅಧಿಕಾರಿಗಳ ಕೃಪೆಯಿಂದಲೋ ಕರ್ನಾಟಕದ ಆಡಳಿತದಲ್ಲಿ ನುಸುಳಿರುವ ಹಿಂದಿ ಮತ್ತು ಇಂಗ್ಲಿಷ್ ಪದಗಳು. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕನ್ನಡವನ್ನು ಪೂರ್ಣವಾಗಿ ನಿರ್ಲಕ್ಷಿಸಿದಂತೆ ಕಾಣುತ್ತದೆ. ಕನ್ನಡವನ್ನು ನೇಪಥ್ಯಕ್ಕೆ ಸೇರಿಸುವುದರಲ್ಲಿ ಯಾರದೇ ಕೈವಾಡ ಇರಲಿ, ಇದು ನಮ್ಮ ಜನಪ್ರತಿನಿಧಿಗಳ, ಕನ್ನಡವನ್ನು ಉಳಿಸಿ ಬೆಳೆಸಲು ದೃಢ ನಿಶ್ಚಯ ಮಾಡಿರುವ ಸರ್ಕಾರದ, ಜನಸಾಮಾನ್ಯರ ಮತ್ತು ಕನ್ನಡಪರ ಸಂಘಟನೆಗಳ ಗಮನಕ್ಕೆ ಬಾರದಿರುವುದು ತೀರಾ ಆಶ್ಚರ್ಯಕರ.

**ರಮಾನಂದ ಶರ್ಮಾ,** ಬೆಂಗಳೂರು

### ಜಾತಿಗಣತಿ ವರದಿ: ಸಮಸ್ಯೆಗೆ ಮದ್ದು

ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ, ಶೈಕ್ಷಣಿಕ ವರದಿಯನ್ನು ಸರ್ಕಾರ ಸ್ವೀಕರಿಸಿ ಅಲ್ಲಿನ ಅಂಶಗಳನ್ನು ಬಹಿರಂಗಗೊಳಿಸಿದರೆ, ಈಗ ಮೀಸಲಾತಿ ಹೆಚ್ಚಳ ಮತ್ತು ಪ್ರವರ್ಗಗಳ ಬದಲಾವಣೆಗಾಗಿ ನಡೆಯುತ್ತಿರುವ ಹೋರಾಟಕ್ಕೆ ಸೂಕ್ತ ಉತ್ತರ ಕಂಡುಕೊಳ್ಳಲು ಸಹಾಯಕವಾಗುತ್ತದೆ ಎಂದು ವಿಧಾನಪರಿಷತ್ತಿನಲ್ಲಿ ಇತ್ತೀಚೆಗೆ ಪಕ್ಷಭೇದವಿಲ್ಲದೆ ಹಲವು ಸದಸ್ಯರು ಒಕ್ಕೊರಲಿನಿಂದ ಹೇಳಿರುವುದು ಸಮಯೋಚಿತವಾಗಿದೆ.

ಯಾವ ಯಾವ ಸಮುದಾಯಗಳು ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ರಂಗಗಳಲ್ಲಿ ಹಿಂದುಳಿದಿವೆ ಮತ್ತು ಮುಂದುವರಿದಿವೆ ಎಂಬ ನಿಜಾಂಶ ಈ ವರದಿಯಿಂದ ಹೊರಬೀಳುತ್ತದೆ. ಆಗ ನಿಜಕ್ಕೂ ಹಿಂದುಳಿದ ಸಮುದಾಯಗಳಿಗೆ ವೈಜ್ಞಾನಿಕವಾಗಿ ಮೀಸಲಾತಿಯನ್ನು ಪುನರ್ ನಿಗದಿಗೊಳಿಸಲು ಮತ್ತು ಪ್ರವರ್ಗಗಳನ್ನು ಹೊಸದಾಗಿ ಕಲ್ಪಿಸಲು ಅನುಕೂಲವಾಗುತ್ತದೆ. ಆ ಮೂಲಕ, ಈಗ ಎದ್ದಿರುವ ಮೀಸಲಾತಿ ಬೇಡಿಕೆಯ ಹೋರಾಟಕ್ಕೆ ಸೂಕ್ತ ಉತ್ತರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿ ಜಾತಿ ಜನಗಣತಿ ವರದಿಯನ್ನು ಸರ್ಕಾರ ಶೀಘ್ರವೇ ಬಹಿರಂಗಪಡಿಸಿ, ಈಗ ಸೃಷ್ಟಿಯಾಗಿರುವ ಮೀಸಲಾತಿಯ ಗೊಂದಲಕ್ಕೆ ತೆರೆ ಎಳೆಯುವುದು ಸಮಂಜಸ.

**ಸಿ.ಪಿ.ಸಿದ್ಧಾಶ್ರಮ,** ಮೈಸೂರು

### ಆಗ– ಈಗ

ಚುನಾವಣೆಗೂ ಮುನ್ನ ಅವರೆಂದರು
ಗೆಲ್ಲಿಸಿದರೆ ನನ್ನನ್ನು
ನಿಮ್ಮೂರಿಗೆ ಬರುವುವು
ಟಾಯ್ಲೆಟ್ಟು, ನೀರು, ರಸ್ತೆಗೆ ಟಾರು.
ಗೆದ್ದು ಗದ್ದುಗೆಯೇರಿ ತಿರುಗಿಯೂ
ನೋಡದವರ ಕೇಳಿದರೆ ಅನ್ನುವರು
ಹದಗೆಟ್ಟ ನಿಮ್ಮೂರ ರಸ್ತೆಯಲಿ
ಬರಲಾಗದು ನನ್ನ ಕಾರು.

**ರಾಘವೇಂದ್ರ ಈ. ಹೊರಬೈಲು**
ಬಟ್ಲಹಳ್ಳಿ, ಚಿಂತಾಮಣಿ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಹಿಂದುಳಿದವರ ಪಟ್ಟಿಗೆ ಸೇರಲು ನೂಕುನುಗ್ಗಲು

• ಪ್ರೊ. ರವಿವರ್ಮ ಕುಮಾರ್

ಸಾಮಾಜಿಕ ನ್ಯಾಯದ ಇತಿಹಾಸದಲ್ಲಿ ಇಡೀ ಪ್ರಪಂಚಕ್ಕೆ ಮೊದಲಿಗರಾಗಿದ್ದು ಮೈಸೂರು ಸಂಸ್ಥಾನದ ದೊರೆಗಳು. 1874ರಲ್ಲೇ ಮೀಸಲಾತಿಯನ್ನು ಜಾರಿಗೆ ತಂದು ಸರ್ಕಾರಿ ಸೇವೆಯಲ್ಲಿ ಬ್ರಾಹ್ಮಣರ ಪ್ರಾಬಲ್ಯವನ್ನು ಕಡಿಮೆ ಮಾಡುವ ಒಂದು ಪ್ರಯತ್ನವಾಗಿ ಕಳೆದ 150 ವರ್ಷಗಳ ಇತಿಹಾಸವನ್ನು ಪ್ರಪಂಚಕ್ಕೆ ಕೊಟ್ಟಿದೆ. 1918ನೇ ಇಸವಿಯಲ್ಲಿ ಮುಖ್ಯ ನ್ಯಾಯಮೂರ್ತಿ ಮಿಲ್ಲರ್ ಸಮಿತಿಯ ವರದಿಯ ಆಧಾರದ ಮೇಲೆ ಒಂದು ವೈಜ್ಞಾನಿಕ ಸ್ವರೂಪವನ್ನು ಕೊಟ್ಟಿದ್ದು ಮೈಸೂರು ಸಂಸ್ಥಾನ.

**ಭಾರತದ ಸಂವಿಧಾನ ಮತ್ತು ಹಿಂದುಳಿದ ವರ್ಗಗಳು:** 1950ರ ಜನವರಿ 26ರಂದು ಜಾರಿಗೊಂಡ ಭಾರತದ ಸಂವಿಧಾನದ ಅಡಿಯಲ್ಲಿ 16ನೇ ಪರಿಚ್ಛೇದದಲ್ಲಿ ಸರ್ಕಾರಿ ಸೇವೆಯಲ್ಲಿ ಸೂಕ್ತ ಪ್ರಾತಿನಿಧ್ಯ ಪಡೆಯದ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡಲಾಗಿದೆ. 340ನೇ ಪರಿಚ್ಛೇದದಲ್ಲಿ ಹಿಂದುಳಿದ ವರ್ಗಗಳ ಬಗ್ಗೆ ಅಧ್ಯಯನ ಮಾಡಿ ಸೂಕ್ತ ಸಲಹೆಗಳನ್ನು ನೀಡಲು ಒಂದು ಆಯೋಗ ರಚನೆಯ ಬಗ್ಗೆಯೂ ಹೇಳಲಾಗಿದೆ. ಈ ಪರಿಚ್ಛೇದದಲ್ಲಿ ಹಿಂದುಳಿದಿರುವಿಕೆಯ ಮಾನದಂಡವಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಮಾತ್ರ ಪ್ರಸ್ತಾಪ ಮಾಡಲಾಗಿದೆಯೇ ಹೊರತು ಆರ್ಥಿಕ ಹಿಂದುಳಿದಿರುವಿಕೆಯನ್ನು ಹೇಳಿಲ್ಲ. ತದನಂತರ 1951ರಲ್ಲಿ ಶಿಕ್ಷಣ ಸಂಸ್ಥೆ ಮತ್ತಿತರ ಕ್ಷೇತ್ರಗಳಲ್ಲಿ ಮೀಸಲಾತಿ ನೀಡುವ ವಿಚಾರದಲ್ಲಿ ಮತ್ತೆ ಕೇವಲ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದ ವರ್ಗಗಳ ಬಗ್ಗೆ ಹೇಳಲಾಗಿದೆಯೇ ಹೊರತು ಆರ್ಥಿಕ ಹಿಂದುಳಿದಿರುವಿಕೆಯ ಬಗ್ಗೆ ಹೇಳಿಲ್ಲ. ಪರಿಶಿಷ್ಟ ಜಾತಿಗಳಿಗೆ ಪರಿಚ್ಛೇದ 341 ಮತ್ತು ಪರಿಶಿಷ್ಟ ಪಂಗಡಗಳಿಗೆ ಪರಿಚ್ಛೇದ 342ರಲ್ಲಿ ವರ್ಗೀಕರಣದ ಬಗ್ಗೆ ಸ್ಪಷ್ಟವಾಗಿ ಆದೇಶ ನೀಡಲಾಗಿದೆ. ಹಾಗಾಗಿ 2019ನೇ ಇಸವಿಯ ಸಂವಿಧಾನದ 103ನೇ ತಿದ್ದುಪಡಿ ತನಕ ಯಾವುದೇ ಮೀಸಲಾತಿಯನ್ನು ಆರ್ಥಿಕ ಮಾನದಂಡದ ಮೇಲೆ ಕೊಡಲು ಬರುವುದಿಲ್ಲ ಮತ್ತು ಮೀಸಲಾತಿಯ ಮಾನದಂಡವು ವೈಯಕ್ತಿಕ ಅಥವಾ ಕೌಟುಂಬಿಕ ಆಧಾರದ ಮೇಲೆ ಕೊಡುವುದಕ್ಕೆ ಬದಲಾಗಿ ಒಂದು ವರ್ಗ, ಸಮೂಹ, ಜಾತಿ ಅಥವಾ ಬುಡಕಟ್ಟುಗಳಿಗೆ ಮಾತ್ರ ನೀಡಬಹುದಾಗಿದೆ.

**ಕಾಲೇಲ್‌ಕರ್ ಆಯೋಗ:** ಈ ಹಿನ್ನೆಲೆಯಲ್ಲಿ ರಾಷ್ಟ್ರದ ಪ್ರಪ್ರಥಮ ಹಿಂದುಳಿದ ವರ್ಗಗಳ ಆಯೋಗ ಆಚಾರ್ಯ ಕಾಕಾ ಕಾಲೇಲ್‌ಕರ್ ಅವರ ಅಧ್ಯಕ್ಷತೆಯಲ್ಲಿ 1955ನೇ ಇಸವಿಯಲ್ಲೇ ವರದಿ ನೀಡಿ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಜಾತಿಗಳ ಪಟ್ಟಿಯನ್ನು ವರ್ಗೀಕರಿಸಿ ಶೇ 70ರಷ್ಟು ಮೀಸಲಾತಿಯನ್ನು ಶಿಫಾರಸು ಮಾಡಿತ್ತು. ಆದರೆ, ಕೇಂದ್ರ ಸರ್ಕಾರ ಅದನ್ನು ಜಾರಿಗೊಳಿಸಲಿಲ್ಲ.

**ನಾಗನಗೌಡ ವರದಿ:** ಕರ್ನಾಟಕ ಏಕೀಕರಣದ ನಂತರ ವಿಶಾಲ ಮೈಸೂರು ರಾಜ್ಯಕ್ಕೆ 5 ವಿವಿಧ ರಾಜ್ಯಗಳಿದ್ದ ಪ್ರದೇಶಗಳು ಸೇರ್ಪಡೆಯಾದ ಪ್ರಯುಕ್ತ ಇಡೀ ರಾಜ್ಯಕ್ಕೆ ಒಂದು ಹಿಂದುಳಿದ ವರ್ಗಗಳ ಪಟ್ಟಿಯನ್ನು ಮಾಡಿ ವರ್ಗೀಕರಣಗೊಳಿಸಲು ಡಾ. ಆರ್. ನಾಗನಗೌಡ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರ ರಚನೆ ಮಾಡಿತು. 1960ರ ಫೆಬ್ರುವರಿ 19ರಂದು ಈ ಸಮಿತಿ ಒಂದು ಮಧ್ಯಂತರ ವರದಿ ಸಲ್ಲಿಸಿತು. ಈ ವರದಿಯಲ್ಲಿ ಲಿಂಗಾಯತ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಲಿಲ್ಲ. ಈ ವರದಿ 1960ರ ಮಾರ್ಚ್ 1ರಂದು ಜಾರಿಗೊಂಡು ಬ್ರಾಹ್ಮಣರು ಮತ್ತು ಲಿಂಗಾಯತರನ್ನು ಬಿಟ್ಟು ಉಳಿದ ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ನೀಡಲಾಯಿತು.

ತದನಂತರ ನಾಗನಗೌಡ ಸಮಿತಿಯು ಅಂತಿಮ ವರದಿ ನೀಡಿ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಶೇ 50 ಮೀಸಲಾತಿಯನ್ನು ಶಿಫಾರಸು ಮಾಡಿತು. ಈ ವರದಿಯಲ್ಲೂ ಲಿಂಗಾಯತರನ್ನು ಮುಂದುವರಿದವರೆಂದು ಪರಿಗಣಿಸಿ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಲಿಲ್ಲ. ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಗುರುತಿಸುವಲ್ಲಿ ಹೈಸ್ಕೂಲಿನ ಮೂರು ತರಗತಿಗಳಲ್ಲಿ ಓದುತ್ತಿರುವ ಆ ಜಾತಿಯ ವಿದ್ಯಾರ್ಥಿಗಳ ಜನಸಂಖ್ಯೆ ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ಗುರುತಿಸಲಾಗಿತ್ತು. ರಾಜ್ಯದ ಸರಾಸರಿ ಒಂದು ಸಾವಿರ ಜನಸಂಖ್ಯೆಗೆ 6.9 ಇರುವುದನ್ನು ಗಮನಿಸಿ ಆ ವಿದ್ಯಾಮಟ್ಟಕ್ಕಿಂತ ಜಾಸ್ತಿ ವಿದ್ಯಾಮಟ್ಟದಿಂದ ಸತಾನಿ, ನಾಯರ್ ಮತ್ತು ಪಾರ್ಸಿ ಜಾತಿಗಳನ್ನು ಹಾಗೂ 7.1 ಸರಾಸರಿಯಿಂದ ಲಿಂಗಾಯತ ಸಮುದಾಯವನ್ನು ಮುಂದುವರಿದವರೆಂದು ವರ್ಗೀಕರಿಸಿತು.

ಈ ವರದಿಯು ಜಾರಿಗೊಳ್ಳುವ ಮೊದಲೇ ಎಸ್.ನಿಜಲಿಂಗಪ್ಪನವರ ಸರ್ಕಾರ 1962ರ ಜೂನ್ 21ರಂದು ಅಧಿಕಾರಕ್ಕೆ ಬಂತು. ವರದಿಯನ್ನು ಜಾರಿಗೊಳಿಸುವ ಸಮಯದಲ್ಲಿ ಒಂದು ಕೈಚಳಕದ ಮೂಲಕ ಈ ವರ್ಗೀಕರಣವನ್ನು ಮಾರ್ಪಡಿಸಿತು. ರಾಜ್ಯದ ಸರಾಸರಿ 6.9 ಇದ್ದುದನ್ನು ಹತ್ತಿರದ ಪೂರ್ಣ ಅಂಕೆ 7ಕ್ಕೆ ತಂದು ನಿಲ್ಲಿಸಿತು. ಅದೇ ರೀತಿ 7.1 ಸರಾಸರಿ ವಿದ್ಯಾಮಟ್ಟವಿದ್ದ ಲಿಂಗಾಯತ ಸಮುದಾಯದ ವಿದ್ಯಾಮಟ್ಟವನ್ನು ಸಹ ಹಿಂದಕ್ಕೆ ಎಳೆದು 7ರ ಪೂರ್ಣಾಂಕಕ್ಕೆ ನಿಗದಿ ಮಾಡಿ ಲಿಂಗಾಯತರನ್ನೂ ಹಿಂದುಳಿದವರೆಂದು ಘೋಷಿಸಲಾಯಿತು.

**ಬಾಲಾಜಿ ಮೊಕದ್ದಮೆ:** 1962ರ ಜುಲೈ 31ರಂದು ಹೊರಡಿಸಿದ ಈ ಸರ್ಕಾರಿ ಆದೇಶವನ್ನು ಎರಡೇ ತಿಂಗಳೊಳಗಾಗಿ (28.09.1962) ಅನೂರ್ಜಿತಗೊಳಿಸಿ ಈ ಕ್ರಮವನ್ನು ಫ್ರಾಡ್ ಆನ್ ಕಾನ್‌ಸ್ಟಿಟ್ಯೂಷನಲ್ ಪವರ್ ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನದ ಪೀಠ ತೀರ್ಪಿತ್ತಿತ್ತು. ಇದೇ ಅವಕಾಶಕ್ಕೆ ಕಾಯುತ್ತಿತ್ತೇನೋ ಎನ್ನುವಂತೆ ನಿಜಲಿಂಗಪ್ಪನವರ ಸರ್ಕಾರ ಎಲ್ಲಾ ಹಿಂದುಳಿದ ಜಾತಿಗಳಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಬಿಟ್ಟು) ಮೀಸಲಾತಿಯನ್ನು ರದ್ದು ಮಾಡಿತು. ಬದಲಾಗಿ 1963ರಲ್ಲಿ ತಾತ್ಕಾಲಿಕ ಎಂದು ಬಣ್ಣಿಸಿ ಹೊಸ ವರ್ಗೀಕರಣ ಮಾಡಿ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಬಿಟ್ಟು ಕೇವಲ ಆರ್ಥಿಕ ಹಿಂದುಳಿದಿರುವಿಕೆಯ ಆಧಾರದ ಮೇಲೆ ಮೀಸಲಾತಿಯನ್ನು ಕೊಡಲಾಯಿತು. ಇದು ತಾತ್ಕಾಲಿಕ ಎಂದು ಬಣ್ಣಿಸಿದರೂ ಸರ್ಕಾರ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸದೆ ಎಲ್ಲಾ ಹಿಂದುಳಿದ ಜಾತಿಗಳಿಗೂ ಸಾಮಾಜಿಕ ನ್ಯಾಯದ ವಂಚನೆಯನ್ನು ಮಾಡಿ ದೇವರಾಜ ಅರಸು ಅಧಿಕಾರಕ್ಕೆ ಬರುವ ತನಕ ಸುಮಾರು 15 ವರ್ಷಗಳ ವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಬಿಟ್ಟು ಇತರ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ಕೊಡಲಿಲ್ಲ.

ಈ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚಿಸಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಕೊಡುವ ಆಶ್ವಾಸನೆಯ ಮೇಲೆ 1972ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ದೇವರಾಜ ಅರಸು ಸರ್ಕಾರವು ಕರ್ನಾಟಕದ ಪ್ರಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿ, ಆಯೋಗದ ಶಿಫಾರಸಿನಂತೆ ಹಿಂದುಳಿದ ವರ್ಗಗಳನ್ನು ಮೂರು ವರ್ಗಗಳನ್ನಾಗಿ ವಿಂಗಡಿಸಿ, ಹಿಂದುಳಿದ ಸಮುದಾಯಗಳು (ಶೇ 20), ಹಿಂದುಳಿದ ಜಾತಿಗಳು(ಶೇ 10) ಮತ್ತು ಹಿಂದುಳಿದ ಬುಡಕಟ್ಟುಗಳಿಗೆ (ಶೇ 4) ಮೀಸಲಾತಿ ಕೊಟ್ಟು ಸಾಮಾಜಿಕ ಹಿಂದುಳಿದ ವರ್ಗಗಳಿಗೆ ನ್ಯಾಯವನ್ನು ಪುನರ್ ಸ್ಥಾಪಿಸಿತು.

**ಹಾವನೂರು ಆಯೋಗ:** ಹಾವನೂರು ಆಯೋಗದ ಈ ವರದಿಯನ್ನು ವಸಂತಕುಮಾರ್ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ್ ಎತ್ತಿ ಹಿಡಿಯುವುದಷ್ಟೇ ಅಲ್ಲದೇ, ಹಾವನೂರು ಆಯೋಗದ ವೈಜ್ಞಾನಿಕ ಮಾನದಂಡಗಳನ್ನು ಮತ್ತು ಆ ಮಾನದಂಡಗಳ ಗುರುತಿಸುವಿಕೆಯಲ್ಲಿ ಅನುಸರಿಸಿರುವ ವಿಧಾನವನ್ನು ಮುಕ್ತಕಂಠದಿಂದ ಶ್ಲಾಘಿಸಿತು.

**ವೆಂಕಟಸ್ವಾಮಿ ಆಯೋಗ:** ರಾಮಕೃಷ್ಣ ಹೆಗಡೆ ಸರ್ಕಾರ ಅಸ್ತಿತ್ವಕ್ಕೆ ಬಂದ ಕೂಡಲೇ ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿ ಹೊಸ ಹಿಂದುಳಿದ ವರ್ಗಗಳ ಪಟ್ಟಿಯನ್ನು ಪಡೆಯಲಾಯಿತು. ಆದರೆ, ವರದಿಯನ್ನು ತಿರಸ್ಕರಿಸಿ ರಾಮಕೃಷ್ಣ ಹೆಗಡೆ ಅವರ ಸರ್ಕಾರ 1986ರ ಅಕ್ಟೋಬರ್ 13ರಂದು ಹೊಸ ಹಿಂದುಳಿದ ವರ್ಗಗಳ ಆಯೋಗ ರಚಿಸುವ ಆಶ್ವಾಸನೆಯನ್ನು ನೀಡಿ ಮತ್ತೊಂದು ಕೈಚಳಕದ ಮೂಲಕ ಲಿಂಗಾಯತ, ಮರಾಠ, ಕ್ಷತ್ರಿಯ ಮುಂತಾದ 15 ಜಾತಿಗಳಿಗೆ ಮೀಸಲಾತಿಯನ್ನು ಘೋಷಿಸಿತು. 1986ರ ಅಕ್ಟೋಬರ್ 13ರ ಈ ಆದೇಶದಲ್ಲಿ ಕೆಳಗಿನಂತೆ ಹೇಳಲಾಗಿದೆ: 'The State Government has also taken into consideration the grievances of various sections of society, particularly those of the members of 15 communities including Lingayat, Maratha, Kshatriya, etc.,... the State Governmet as found it necessary and desirable that, pending finalization of the report of the new Commission, 12 communities should also be treated as part of the backward community for purposes of Article 15(4) and 15 communities for purposes of Article 16(4) of the Constitution of India'.

ಈ ರೀತಿಯ ಯಾವುದೇ ಆಯೋಗ ಹಿಂದುಳಿದವರೆಂದು ಗುರುತಿಸದೆಯೂ, ಅದಕ್ಕೆ ತದ್ವಿರುದ್ಧವಾಗಿ ಹಿಂದಿನ ಎಲ್ಲಾ ಆಯೋಗಗಳು ಮುಂದುವರಿದವರೆಂದು ಗುರುತಿಸಿದ್ದರೂ ಲಿಂಗಾಯತ ಸಮುದಾಯ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆಗೊಳ್ಳಲು 1986ರ ಅಕ್ಟೋಬರ್ 13ರಿಂದ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿಯನ್ನು ಪಡೆಯುತ್ತಾ ಬಂದಿದೆ. ತದ ನಂತರ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಹಿಂದುಳಿದ ವರ್ಗಗಳ ಆಯೋಗವು ಲಿಂಗಾಯತ ಸಮುದಾಯವನ್ನು ಮುಂದುವರಿದವರು ಎಂದು ಘೋಷಿಸಿದರೂ ಇಂದಿಗೂ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದು ಮೀಸಲಾತಿಯನ್ನು ಪಡೆಯುತ್ತಾ ಬಂದಿದೆ.

(ಲೇಖಕ: ಹೈಕೋರ್ಟ್‌ನ ಹಿರಿಯ ವಕೀಲ)

**ನಿರೂಪಣೆ: ವಿಜಯಕುಮಾರ್ ಎಸ್.ಕೆ.**

ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2ಎ ಅಡಿಯಲ್ಲಿ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಸಮುದಾಯದವರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

## ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

### ಏರಿಳಿತಗಳೇ ಸೃಷ್ಟಿಯ ಚೈತನ್ಯ

ವಿಶ್ವಸೃಷ್ಟಿ ಕುರಿತು ಹಿಂದೂ ಶಾಸ್ತ್ರಗ್ರಂಥಗಳು ವೈಜ್ಞಾನಿಕವಾಗೇ ವಿವರಿಸಿವೆ. ಅವು ಮಾನವನ ಮನೋಚಾಂಚಲ್ಯಕ್ಕೂ ಭಾಷ್ಯ. ವ್ಯಾಸರು ಬರೆದ 18 ಮಹಾಪುರಾಣಗಳಲ್ಲಿ ಅತ್ಯಂತ ಶ್ರೇಷ್ಠವಾದ ಶಿವಮಹಾಪುರಾಣದ ಮೊದಲನೆ ಸಂಹಿತೆ 'ವಿದ್ಯೇಶ್ವರ'ದ ಮೂರನೇ ಅಧ್ಯಾಯದಲ್ಲಿ 'ಪರಬ್ರಹ್ಮ' ವಸ್ತುವಿನ ಬಗ್ಗೆ ವಿಶ್ಲೇಷಣೆ ಇದೆ. ನಿರ್ಗುಣವಾದ 'ಪರಬ್ರಹ್ಮ'ಸ್ವರೂಪವನ್ನು ಪ್ರಯಾಗ(ಮೂರು ನದಿಗಳ ಸಂಗಮ)ದ ಷಟ್ಕುಲೀನ (ತ್ರಿವೇಣಿ ಸಂಗಮದ ಆರು ದಡಗಳು) ಋಷಿಗಳಿಗೆ ಬ್ರಹ್ಮದೇವ ವಿವರಿಸುತ್ತಾನೆ. ಪರಬ್ರಹ್ಮನಲ್ಲಿ ಸತ್ವ-ರಜಸ್ಸು-ತಮೋ-ಗುಣಗಳು ಸಮಾವಸ್ಥೆಯಲ್ಲಿದ್ದಾಗ ಸೃಷ್ಟಿ ಜಡವಾಗಿತ್ತು. ಯಾವಾಗ ನಿರ್ಗುಣಾತ್ಮಕವಾಗಿದ್ದ ಬ್ರಹ್ಮವಸ್ತುವಿನೊಳಗಿನ ಸತ್ವ-ರಜಸ್-ತಮ ಎಂಬ ಮೂರು ಗುಣಗಳು ಚಂಚಲವಾದವೋ, ಆಗ ವಿಶ್ವ ಸೃಷ್ಟಿಯಾಯಿತು ಎಂದು ತಿಳಿಸುತ್ತಾನೆ.

ಬ್ರಹ್ಮದೇವನ ಪ್ರಕಾರ ಪ್ರತಿಯೊಂದು ವಸ್ತುವಿನಲ್ಲಿಯೂ ಸತ್ವ-ರಜಸ್--ತಮ'ಎಂಬಗಳು ಇದ್ದೇ ಇರುತ್ತವೆ. ಇವು ಚಲನಶೀಲವಾದಾಗ ಜೀವಸೃಷ್ಟಿಯಾಗುತ್ತದೆ. ಇದನ್ನು ವಿಜ್ಞಾನ ಹೇಳುವ ಪ್ರೋಟಾನ್-ಎಲೆಕ್ಟ್ರಾನ್-ನ್ಯೂಟ್ರಾನ್ ಚಲನಶೀಲತೆಗೂ ಹೋಲಿಸಬಹುದು. ಹಾಗೇ ಒಳ್ಳೆಯದು-ಕೆಟ್ಟದ್ದು ಅನ್ನೋ ಮನುಷ್ಯನೊಳಗಿನ ಗುಣಾವಗುಣಗಳಿಗೂ ಉದಾಹರಿಸಬಹುದು. ಯಾವ ಮನುಷ್ಯನಲ್ಲೂ ಒಳ್ಳೆಯ ಮತ್ತು ಕೆಟ್ಟ ಗುಣಗಳು ಒಂದೇ ಸಮನಾಗಿರುವುದಿಲ್ಲ. ವಿಷಯ-ವೈರುಧ್ಯಗಳು ಏರಿಳಿತವಾಗಿ ಮನುಷ್ಯರೊಳಗೆ ಘರ್ಷಣೆ ಆಗುತ್ತಿರುತ್ತದೆ. ಇದರಿಂದ ಕಾಲಕಾಲಕ್ಕೆ ರಾಮ-ರಾವಣರ ಉದಯ ಆಗುತ್ತಲೇ ಇರುತ್ತದೆ. ರಾಮಾಯಣ-ಮಹಾಭಾರತಗಳು ಪ್ರತಿ ಮನೆಯಲ್ಲು ನಡೆಯುತ್ತಲೇ ಇರುತ್ತವೆ.

ಸತ್ವ-ರಜಸ್-ತಮಗಳ ಸಂಚಲನದಿಂದ ಸೃಷ್ಟಿಯಾದ ವಿಶ್ವಕ್ಕೆ, ಭಗವಂತ ಕೊಟ್ಟ ನಿಯಮವಾದ ಸೃಷ್ಟಿ-ಸ್ಥಿತಿ-ಲಯಗಳು ಸಹ ಸಮನಾಗಿರುವುದಿಲ್ಲ. ವೈದ್ಯರ ಇಸಿಜಿ ಸೂಚಕಗೆರೆಗಳಲ್ಲೂ ಏರುಪೇರಿದ್ದರೆ ಜೀವ, ಸಮಗೆರೆ ಬಂದರೆ ನಿರ್ಜೀವ. ಅಂದರೆ, ಕ್ಷಣಕ್ಷಣಕ್ಕೂ ಬದಲಾಗುವ ಏರಿಳಿತವೇ ಸೃಷ್ಟಿಯ ಚೈತನ್ಯ. ಆ ಬದಲಾವಣೆಯ ಗುಣ ಕಳೆದುಕೊಂಡಾಗ ಸೃಷ್ಟಿ ನಿಸ್ತೇಜವಾಗುತ್ತೆ. ಅದಕ್ಕಾಗಿ ಭೂಮಿ ಸೂರ್ಯನ ಸುತ್ತುತ್ತ ಜೀವೋತ್ಸಾಹ ಪಡೆಯುತ್ತೆ. ಯಂತ್ರದ ಚಕ್ರ ತಿರುಗಿ ಶಕ್ತಿ ಉತ್ಪಾದಿಸುತ್ತೆ, ನಮ್ಮ ಜೀವನಚಕ್ರ ತಿರುಗುತ್ತಾ ಬದುಕಿಗೆ ಶಕ್ತಿ ತುಂಬಿಕೊಡುತ್ತೆ.

ಸದಾ ಬದಲಾಗುವ ಗುಣವೇ ಸೃಷ್ಟಿಯ ಚೈತನ್ಯ ಅಂದ ಮೇಲೆ ಮನುಷ್ಯರ ಕಷ್ಟ-ಸುಖದ ಏರಿಳಿತಗಳು ಸಹ ಜೀವನಚೈತನ್ಯದ ಲಕ್ಷಣ. ಕಷ್ಟಕ್ಕೆ ಅಂಜಿ ಕೇವಲ ಸುಖ ಬಯಸಿದರೆ ಜೀವನದಲ್ಲಿ ಏನೂ ಸಾಧಿಸಲು ಸಾಧ್ಯವಿಲ್ಲ. ಸಾಧಿಸಬೇಕೆಂದು ಮುನ್ನುಗುವ ಛಲವೇ ಜೀವನದ ಬಲ. ಮನುಷ್ಯರ ವಿಭಿನ್ನ ಗುಣಗಳ ತಾಕಲಾಟ, ಥರಥರದ ಅವಾಂತರಗಳು, ತಹತಹದ ತುಡಿತಗಳು ಇದ್ದಾಗಲೇ ಅದೊಂದು ಬದುಕು ಅನ್ನಿಸಿಕೊಳ್ಳುವುದು. ಸಿಹಿ-ಕಹಿ, ಕಷ್ಟ-ಸುಖ ಎರಡೂ ಇದ್ದರೆ ಜೀವನ ರಸಮಯ. ಬರೀ ಸುಖ, ಬರೀ ದುಃಖ ಇದ್ದರೆ ಸ್ವಾರಸ್ಯ ಇರುವುದಿಲ್ಲ.

ನಮ್ಮ ಒಳಗೂ ಹೊರಗೂ ದಿಗಂತದಾಚೆಗೂ ಏರಿಳಿತಗಳೇ ಶಕ್ತಿಯ ಮೂಲ. ಕಷ್ಟ-ಸುಖಗಳೇ ನಮ್ಮ ಶಕ್ತಿ. ಅದು ಛಲದ ರೂಪದಲ್ಲಿರುತ್ತೆ. ಆ ಛಲವೇ ನಮ್ಮ ಬದುಕಿನ ಬಲ. ಕಷ್ಟ ಬಂದಷ್ಟು ಮನುಷ್ಯ ಗಟ್ಟಿಯಾಗುತ್ತಾನೆ. ಸುಮ್ಮನೆ ಕೂರುವುದು ಸುಖ, ನಡೆಯುವುದು ಕಷ್ಟ. ಆದರೆ, ಸುಮ್ಮನೆ ಕೂತರೆ ರೋಗ, ನಡೆದಾಡಿದರೆ ನಿರೋಗ. ಹೀಗಾಗಿ ಜೀವ-ಜೀವನದ ಏರಿಳಿತ ಎದುರಿಸಲು ನಮಗೆ ದೈವಿಕ ಶಕ್ತಿ ಬೇಕು. ಅದಕ್ಕಾಗಿ ನಿತ್ಯ ಧ್ಯಾನ-ಯೋಗಗಳನ್ನು ಮಾಡಬೇಕು.

ಜ್ಞಾನಿಯಾದವರು ಕಷ್ಟ ಬಂದಾಗ ಭಗವಂತನ ದೂರದೇ, ಸುಖ ಬಂದಾಗ ಮರೆಯದೇ, ಸಮಚಿತ್ತದಿಂದ ಭಗವಂತನನ್ನು ಆರಾಧಿಸಬೇಕು. ಗುರುಸಾನ್ನಿಧ್ಯದಲ್ಲಿ ಈಶ್ವರನ ಸ್ವರೂಪ ತಿಳಿದು, ಭಕ್ತಿಯಿಂದ ಕೀರ್ತನ ಮತ್ತು ಮನನ ಮಾಡಬೇಕು. ಆಗ 'ಸಚ್ಚಿದಾನಂದ'ಸ್ವರೂಪನಾದ ಶಿವನ ದರ್ಶನವಾಗಿ ಶಿವಸಾಯುಜ್ಯ ಹೊಂದಬಹುದು ಎಂದು ವೇದವ್ಯಾಸರು ಶಿವಮಹಾಪುರಾಣದಲ್ಲಿ ಹೇಳಿದ್ದಾರೆ. 'ಸಚ್ಚಿದಾನಂದ'ರೂಪಾತ್ಮಕವಾಗಿರುವ ಅಸದೃಶವಾದ ಪರಬ್ರಹ್ಮವಸ್ತು ಪರಮೇಶ್ವರನನ್ನು ಕಾಣಲು ಭಕ್ತಿಯನ್ನು ಮುಕ್ತಿಗೆ ಸಾಧನವಾಗಿ ಬಳಸಬೇಕು.

# ವೇಗ ಪಡೆಯದ ಲಸಿಕೆ ನೀಡಿಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೋವಿಡ್–19 ತಡೆ ಲಸಿಕೆ ಕಾರ್ಯಕ್ರಮವು ಯೋಜಿಸಿದಷ್ಟು ವೇಗವಾಗಿ ಜಾರಿ ಆಗುತ್ತಿಲ್ಲ. ಈವರೆಗೆ ಖರೀದಿಸಲಾದ ಲಸಿಕೆಗಳಲ್ಲಿ ಅರ್ಧಕ್ಕಿಂತ ಕಡಿಮೆ ಲಸಿಕೆಗಳು ಮಾತ್ರ ಬಳಕೆ ಆಗಿವೆ. ಹಾಗಾಗಿ, ಲಸಿಕೆ ಕಾರ್ಯಕ್ರಮಕ್ಕೆ ವೇಗ ತುಂಬುವ ಅಗತ್ಯ ಇದೆ.

ಸತತ ಎರಡು ದಿನ ಹತ್ತು ಲಕ್ಷಕ್ಕೂ ಹೆಚ್ಚು ಜನರಿಗೆ ಲಸಿಕೆ ನೀಡಲಾಗಿದೆ ಎಂಬುದು ನಿಜ. ಆದರೆ, ಖರೀದಿಸಲಾದ ಲಸಿಕೆಗಳ ಒಟ್ಟು ಸಂಖ್ಯೆ 4.1 ಕೋಟಿ. ಇದರಲ್ಲಿ 2 ಕೋಟಿ ಲಸಿಕೆಗಳನ್ನು ಮಾತ್ರ ಜನರಿಗೆ ನೀಡಲಾಗಿದೆ.

ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ 4.1 ಕೋಟಿ ಡೋಸ್ ಲಸಿಕೆಗಳನ್ನು ಖರೀದಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಕಳೆದ ತಿಂಗಳು ಹೇಳಿತ್ತು. ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ನೀಡುವ ಉದ್ದೇಶದಿಂದ ಈ ಲಸಿಕೆಗಳನ್ನು ಖರೀದಿಸಲಾಗುವುದು ಎಂದು ಹೇಳಲಾಗಿತ್ತು.

ಆದರೆ, ಲಸಿಕೆ ಹಾಕಿಸಿಕೊಳ್ಳುವ ವಿಚಾರದಲ್ಲಿ ಈ ಎರಡೂ ವರ್ಗಗಳಲ್ಲಿ ಹಿಂಜರಿಕೆ ಕಂಡು ಬಂದಿತ್ತು. ಹಾಗಾಗಿ, ಶೇ 50ರಷ್ಟು ಲಸಿಕೆಗಳು ಮಾತ್ರ ಬಳಕೆ ಆಗಿದ್ದವು. ಉಳಿದ ಲಸಿಕೆಗಳನ್ನು ಎರಡನೇ ಹಂತದ ಲಸಿಕೆ ಕಾರ್ಯಕ್ರಮದಲ್ಲಿ ಬಳಸಿಕೊಳ್ಳಲಾಗುತ್ತಿದೆ. 60 ವರ್ಷ ದಾಟಿದವರು ಮತ್ತು 45–59ರ ವಯೋಮಾನದ ಬೇರೆ ಕಾಯಿಲೆಗಳಿರುವ 27 ಕೋಟಿ ಜನರಿಗೆ ಎರಡನೇ ಹಂತದಲ್ಲಿ ಲಸಿಕೆ ನೀಡಲಾಗುತ್ತಿದೆ.

4.1 ಕೋಟಿ ಡೋಸ್ ಲಸಿಕೆಗಳ ಪೈಕಿ ಒಂದು ಕೋಟಿ ಡೋಸ್ ಲಸಿಕೆಗಳು ಅಂತರರಾಷ್ಟ್ರೀಯ ಲಸಿಕೆ ಮೈತ್ರಿಕೂಟ 'ಗವಿ'ಯ ಭಾಗವಾಗಿ ಸಿಕ್ಕಿದೆ.

ಆಗಸ್ಟ್ ಹೊತ್ತಿಗೆ 30 ಕೋಟಿ ಜನರಿಗೆ ಲಸಿಕೆ ಹಾಕಬೇಕು ಎಂಬ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ. ಈ ಗುರಿ ಸಾಧನೆ ಆಗಬೇಕಿದ್ದರೆ ಲಸಿಕೆ ನೀಡಿಕೆ ಕಾರ್ಯಕ್ರಮವು ವೇಗ ಪಡೆದುಕೊಳ್ಳಬೇಕು ಎಂಬ ವಿಚಾರದಲ್ಲಿ ಪರಿಣತರಲ್ಲಿ ಸಹಮತ ಇದೆ.

'30 ಕೋಟಿ ಜನರಿಗೆ ಆಗಸ್ಟ್ ಹೊತ್ತಿಗೆ ಲಸಿಕೆ ಹಾಕಬೇಕಿದ್ದರೆ ಪ್ರತಿ ದಿನ 40ರಿಂದ 50 ಲಕ್ಷ ಜನರಿಗೆ ಲಸಿಕೆ ಹಾಕಬೇಕು. ಆದರೆ, ಈಗಿನ ಸರಾಸರಿ ದಿನಕ್ಕೆ 4 ಲಕ್ಷ ಮಾತ್ರ ಇದೆ. ಒಂದು ತಿಂಗಳಿನಿಂದ ಪರಿಸ್ಥಿತಿ ಹೀಗೆಯೇ ಇದೆ. ಲಸಿಕೆ ನೀಡಿಕೆಯು ಈಗ ಇರುವುದಕ್ಕಿಂತ 10 ಪಟ್ಟು ಹೆಚ್ಚಬೇಕಿದೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಾಜಿ ಸಲಹೆಗಾರ ಹಾಗೂ ಸಾರ್ವಜನಿಕ ಆರೋಗ್ಯ ತಜ್ಞ ರಿಜೊ ಜಾನ್ ಹೇಳುತ್ತಾರೆ.

'ಲಸಿಕೆ ನೀಡುವವರ ಆತ್ಮಸ್ಥೈರ್ಯವನ್ನು ಮುಂದಿನ ಕೆಲವು ತಿಂಗಳವರೆಗೆ ಉಳಿಸಿಕೊಳ್ಳುವುದು ಮತ್ತು ಸದ್ಯದಲ್ಲೇ ಕಾಲಿಡಲಿರುವ ಬೇಸಿಗೆಯನ್ನು ಎದುರಿಸುವುದು ಲಸಿಕೆ ಕಾರ್ಯಕ್ರಮದ ಮುಂದೆ ಇರುವ ದೊಡ್ಡ ಸವಾಲು. ಆಗಸ್ಟ್ ಹೊತ್ತಿಗೆ 30 ಕೋಟಿ ಜನರಿಗೆ ಲಸಿಕೆ ಹಾಕಿಸುವುದು ಅಸಾಧ್ಯವಾದ ಗುರಿಯೇನೂ ಅಲ್ಲ. ಆದರೆ, ಲಸಿಕೆ ನೀಡಿಕೆಗೆ ವೇಗ ತುಂಬುವುದು ಅಗತ್ಯ' ಎಂದು ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಗೌತಮ್ ಮೆನನ್ ಹೇಳುತ್ತಾರೆ.

### 1.8 ಕೋಟಿ ಜನರಿಗೆ ಲಸಿಕೆ

ಶುಕ್ರವಾರ ಬೆಳಗ್ಗಿನ ವರೆಗಿನ ಅಂಕಿ ಅಂಶದ ಪ್ರಕಾರ, 1.8 ಕೋಟಿ ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ. ಇದರಲ್ಲಿ 60ಕ್ಕಿಂತ ಹೆಚ್ಚು ವಯಸ್ಸಾದ 16 ಲಕ್ಷ ಜನರು ಮತ್ತು 45–59ರ ವಯೋಮಾನದ 2.36 ಲಕ್ಷ ಜನರು ಸೇರಿದ್ದಾರೆ. 68 ಲಕ್ಷ ಆರೋಗ್ಯ ಕಾರ್ಯಕರ್ತರು ಮತ್ತು 60 ಲಕ್ಷ ಕೋವಿಡ್ ಮುಂಚೂಣಿ ಕಾರ್ಯಕರ್ತರು ಈವರೆಗೆ ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದಾರೆ. 30 ಲಕ್ಷ ಆರೋಗ್ಯ ಕಾರ್ಯಕರ್ತರು ಮತ್ತು 67 ಸಾವಿರ ಕೋವಿಡ್ ಮುಂಚೂಣಿ ಕಾರ್ಯಕರ್ತರು ಈವರೆಗೆ ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಬೆಂಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಲಸಿಕೆ ಹಾಕಿಸಿಕೊಂಡ ಬಳಿಕ ಅವಲೋಕನಾ ಕೊಠಡಿಯಲ್ಲಿ ಸಮಯ ಕಳೆಯುತ್ತಿರುವ ಹಿರಿಯ ನಾಗರಿಕರು ಎಎಫ್‌ಪಿ ಚಿತ್ರ

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

✗ **ಪೆಟ್ರೋಲ್ ಬೆಲೆ** ₹ 100ರ ಗಡಿ ದಾಟಿದೆ. ಡೀಸೆಲ್ ಬೆಲೆಯೂ ₹ 100ರತ್ತ ಹೋಗುತ್ತಿದೆ. ಹೀಗಾಗಿ ರೈತರು ಹಾಲನ್ನು ₹ 100ಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡಬಾರದು. ಸರ್ಕಾರವು ಒಂದು ಲೀಟರ್ ಹಾಲಿಗೆ ಕನಿಷ್ಠ ₹ 100 ನೀಡಬೇಕು. ಈ ಬೇಡಿಕೆಯನ್ನು ಈಡೇರಿಸುವವರೆಗೆ ರೈತರು ಹಾಲನ್ನು ಮಾರಾಟ ಮಾಡಬಾರದು ಎಂದು ಕಿಸಾನ್ ಏಕತಾ ಮೋರ್ಚಾ ಕರೆ ನೀಡಿದೆ. ಕಷ್ಟಪಟ್ಟು ಉತ್ಪಾದಿಸಿದ ಹಾಲನ್ನು ಮಾರಾಟ ಮಾಡದೇ ಇರಲು ಹೇಗೆ ಸಾಧ್ಯ? ಹೀಗೆ ಮಾಡಿದರೆ ರೈತರಿಗೆ ನಷ್ಟವಾಗುತ್ತದೆ ಎಂಬ ವಿವರ ಇರುವ ಪೋಸ್ಟ್‌ಗಳು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ವೈರಲ್ ಆಗಿವೆ.

✓ **ಹಾಲು ಮಾರಾಟ** ಮಾಡದೇ ಇರುವಂತೆ ರೈತರಿಗೆ ನಾವು ಕರೆ ನೀಡಿಲ್ಲ ಎಂದು ಕಿಸಾನ್ ಸಂಯುಕ್ತ ಮೋರ್ಚಾ ಹೇಳಿದೆ. ನಮ್ಮ ಒಕ್ಕೂಟದ ಹೆಸರಿನಲ್ಲಿ ರೈತರ ಹಾದಿತಪ್ಪಿಸುವ ಕೆಲಸ ಮಾಡಲಾಗುತ್ತಿದೆ. ರೈತರು ಇಂತಹ ಕರೆಗಳನ್ನು ಕಡೆಗಣಿಸಬೇಕು ಎಂದು ಹೇಳಿಕೆ ಬಿಡುಗಡೆ ಮಾಡಿದೆ. ಪ್ರತಿ ಲೀಟರ್ ಹಾಲಿಗೆ ₹ 100 ನೀಡಬೇಕು ಎಂದು ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶದ ಕೆಲವು ರೈತರು ಫೆಬ್ರುವರಿ ಕೊನೆಯ ವಾರದಲ್ಲಿ ಪ್ರತಿಭಟನೆ ನಡೆಸಿದ್ದರು. ಈ ಪ್ರತಿಭಟನೆಯ ಚಿತ್ರವನ್ನು ನಮ್ಮ ಸಂಘಟನೆ ಹೆಸರಿನ ನಕಲಿ ಟ್ವಿಟರ್ ಖಾತೆಯಿಂದ ಟ್ವೀಟ್ ಮಾಡಲಾಗಿದೆ. ಇದು ಸುಳ್ಳು ಸುದ್ದಿ ಎಂದು ಕಿಸಾನ್ ಏಕತಾ ಮೋರ್ಚಾ ಹೇಳಿದೆ.

## ಗುಂಡಣ್ಣ




## ದಿನ ಭವಿಷ್ಯ

ಶನಿವಾರ 6 ಮಾರ್ಚ್ 2021

**ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ಅಷ್ಟಮಿ ಗಂ.36-57 (ರಾ. 9-26) ಶನಿವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ.45-13 (ರಾ. 12-44) ವಜ್ರ ನಾಮ ಯೋಗ ಗಂ. 36-33 ಬಾಲವ ಕರಣ ಗಂ. 9-43 ವಿಷ. ಗಂ. 2-5 ಅಮೃತ ಗಂ. 24-41:** ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-36 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 5, 7

**ಮೇಷ:** ಗೃಹ ನವೀಕರಣದಂತಹ ಕೆಲಸಗಳು ಪ್ರಾರಂಭವಾಗುವವು. ಮಠಾಧೀಶರ ದರ್ಶನ ಮಾಡುವ ಸಾಧ್ಯತೆ. ಅನಾಥಾಲಯ ಅಥವಾ ಅನಾಥರಿಗೆ ದಾನ ಮಾಡುವುದರಿಂದ ಮಾನಸಿಕ ನೆಮ್ಮದಿ. ಆರೋಗ್ಯದಲ್ಲಿ ಸುಧಾರಣೆ.

**ವೃಷಭ:** ವೈಯಕ್ತಿಕ ವಿಚಾರಗಳತ್ತ ಲಕ್ಷ್ಯ ಕೊಡಬೇಕಾಗುವುದು. ಹೊಸ ಕೆಲಸ ಅಥವಾ ಉದ್ಯಮ ಪ್ರಾರಂಭಿಸುವ ಬಗ್ಗೆ ಮಾತುಕತೆ ನಡೆಸುವಿರಿ. ಮಾತಿನಲ್ಲಿನ ಹಿಡಿತದಿಂದಾಗಿ ಉತ್ತಮ ಫಲ. ಆರೋಗ್ಯದೊಂದಿಗೆ ನೆಮ್ಮದಿ ನೆಲೆಸಲಿದೆ.

**ಮಿಥುನ:** ಅಲಂಕಾರಿಕ ಅಥವಾ ಸೌಂದರ್ಯವರ್ಧಕ ವಸ್ತುಗಳ ವ್ಯವಹಾರವನ್ನು ಸ್ಥಾಪಿಸುವ ಬಗ್ಗೆ ಆಲೋಚಿಸುವುದು ಉತ್ತಮ. ನೆರೆಹೊರೆಯವರೊಂದಿಗಿನ ಬಾಂಧವ್ಯ ವೃದ್ಧಿಯಾಗಲಿದೆ. ಹಣಕಾಸಿನ ವಿಷಯದಲ್ಲಿ ಉತ್ತಮ ಅನುಕೂಲ.

**ಕರ್ಕಾಟಕ:** ವಿಷಯಾಧಾರಿತ ಚರ್ಚೆಗಳಲ್ಲಿ ಭಾಗವಹಿಸಿ ಅಭಿಪ್ರಾಯ ಮಂಡಿಸುವ ಸಾಧ್ಯತೆಗಳು ಕಂಡುಬರುವುದು. ಅಪರೂಪದ ವಸ್ತುಗಳು ಕೈ ಸೇರುವ ಸಂಭವ. ಸಂಸಾರ ಸಮೇತ ದೂರದ ಪ್ರಯಾಣದಿಂದಾಗಿ ನೆಮ್ಮದಿ.

**ಸಿಂಹ:** ವಕೀಲ ವೃತ್ತಿಯಲ್ಲಿರುವವರಿಗೆ ಸರ್ಕಾರಿ ಹುದ್ದೆ ಅಲಂಕರಿಸುವ ಅವಕಾಶ. ಹಿರಿಯರ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಆಕಸ್ಮಿಕ ಧನ ಲಾಭ. ವಿವಾಹ ಸಂಬಂಧದ ಮಾತುಕತೆಗಳು ಮುಂದುವರಿದು ಯಶ ಕಾಣಲಿದೆ.

**ಕನ್ಯಾ:** ಎಂಜಿನಿಯರ್‌ಗಳು, ತಂತ್ರಜ್ಞರು ಮತ್ತು ಗುಪ್ತಚರ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ತುರ್ತು ಕೆಲಸಗಳು. ಹಣಕಾಸಿನ ವ್ಯವಹಾರಗಳಲ್ಲಿ ಬಂಧುಗಳಿಗೆ ಸಹಾಯ ಮಾಡಬೇಕಾದೀತು. ಲಕ್ಷ್ಮೀನರಸಿಂಹ ಸ್ತೋತ್ರ ಪಠಿಸಿ.

**ತುಲಾ:** ವ್ಯವಹಾರಗಳು ಸುಗಮವಾಗಿ ನೆರವೇರುವವು. ಬರಬೇಕಾಗಿರುವ ಹಣ ನಿಮ್ಮ ಕೈ ಸೇರುವುದರಲ್ಲಿ ಅನುಮಾನವಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗದ ವಿಷಯದಲ್ಲಿ ಹಸಿರು ನಿಶಾನೆ ದೊರಕಲಿದೆ.

**ವೃಶ್ಚಿಕ:** ನ್ಯಾಯಾಲಯದಲ್ಲಿನ ತಗಾದೆಗಳು ನಿಮ್ಮ ಪರವಾಗಿ ಇತ್ಯರ್ಥವಾಗುವುದರಿಂದ ಮಾನಸಿಕ ನೆಮ್ಮದಿ. ದುಂದು ವೆಚ್ಚದಿಂದಾಗಿ ಮಾನಸಿಕ ಕಿರಿಕಿರಿ. ಆರ್ಥಿಕ ವ್ಯವಹಾರದಲ್ಲಿನ ಉನ್ನತಿಗಾಗಿ ಗಣೇಶ ಪ್ರಾರ್ಥನೆ ಮಾಡಿ.

**ಧನು:** ಬಂಧುಮಿತ್ರರೊಂದಿಗೆ ದೇವತಾ ಕಾರ್ಯದಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಮನೆಯವರ ಬೇಡಿಕೆ ಈಡೇರಿಕೆಗಾಗಿ ಹೆಚ್ಚಿನ ಖರ್ಚು. ವ್ಯವಹಾರ ನಿಮಿತ್ತ ದೂರದ ಪ್ರಯಾಣ ಸಾಧ್ಯತೆ. ಬಂಧುಗಳಿಂದ ಸಹಕಾರ.

**ಮಕರ:** ರಾಜಕಾರಣಿಯೊಬ್ಬರ ಪ್ರಭಾವದಿಂದಾಗಿ ಅನುಚಿತ ಕಾರ್ಯ ಕೈಗೊಳ್ಳುವ ಸಾಧ್ಯತೆ. ಆಡಳಿತಾಧಿಕಾರಿಗಳಾಗಿ ನೇಮಕ ಹೊಂದಿದವರಿಗೆ ವರ್ಗಾವಣೆ ಸಾಧ್ಯತೆ. ಹಣದ ವಾಪಾಸಾತಿಗಾಗಿ ಕಷ್ಟಪಡಬೇಕಾದೀತು.

**ಕುಂಭ:** ವಾಹನ ದುರಸ್ತಿಗಾಗಿ ಹಣ ವಿನಿಯೋಗಿಸಬೇಕಾದೀತು. ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳಲ್ಲಿ ದುಡಿಯುವವರಿಗೆ ಪದೋನ್ನತಿ. ಗೆಳೆಯರೊಂದಿಗೆ ವಿನೋದದ ಹವ್ಯಾಸದಲ್ಲಿ ತೊಡಗುವಿರಿ.

**ಮೀನ:** ಒಡಹುಟ್ಟಿದವರಿಗೆ ಹಣಕಾಸಿನ ಸಹಾಯ ಮಾಡಬೇಕಾದೀತು. ನೌಕರಸ್ಥರು ಸಹೋದ್ಯೋಗಿಗಳೊಡನೆ ನೇರವಾಗಿ ವ್ಯವಹರಿಸುವುದು ಉತ್ತಮ. ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಬಿಡುವಿಲ್ಲದ ಕೆಲಸ.

**ನಿಮ್ಮ ಜನ್ಮದಿನ 6-ಮಾರ್ಚ್** ಈ ದಿನ ಅತ್ಯಂತ ಶುಭಕರ. ನಿಮ್ಮ ಬಂಧು ಬಾಂಧವರಿಗೆ ಪೋಷಕರಿಗೆ ಹರ್ಷದಾಯಕ ದಿನ. ಮನೆಯ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದರಿಂದ ಚಿಂತೆಯಿಂದ ಮುಕ್ತರಾಗುವಿರಿ. ಕಾರ್ಯಕ್ಷೇತ್ರದಲ್ಲಿನ ನಿಮ್ಮ ಬೇಡಿಕೆಗಳಿಗೆ ಮನ್ನಣೆ ದೊರೆಯಲಿದೆ. ಮನೆಮಂದಿಯಿಂದ ನಿಮ್ಮ ಕೆಲಸ–ಕಾರ್ಯಗಳಿಗೆ ಉತ್ತಮ ಪ್ರೋತ್ಸಾಹ.

## ಪದಬಂಧ 4528

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ತೆನಾಲಿರಾಮನಿಗಿದ್ದ ಬಿರುದು (5)
4.ಈತ ಸಂಪ್ರದಾಯ ವಿರೋಧಿ (3)
5.ಕೆಡುಕಿನಲ್ಲಿ ಕೊನೆಗೊಳ್ಳುವಂತದ್ದು (3)
6.ಕೆಸರಿನಲ್ಲಿ ಅರಳಿದ ನೈದಿಲೆ (3)
8.ಮಾವನ ತೋರಿಸಿರುವ ಅರಣ್ಯ (2)
9.ಜಾಗರೂಕತೆಯಿಂದ ವೀಕ್ಷಿಸಿದ ಸ್ಥಳ (2)
10.ಓಬವ್ವನ ಆಯುಧ (3)
14.ಈತ ದುರಾಚಾರಿ! (3)
15.ಉಸಿರಾಡಲು ಕಷ್ಟವಾದ ಸ್ಥಿತಿ (3)
16.ಕಳಿಸಿದರೂ ಹೀಗೆ ಮರಳಿ ಸಂಭವಿಸು! (5)

**ಮೇಲಿಂದ ಕೆಳಕ್ಕೆ**
1.ಗುಣದೋಷಗಳ ಪರಿಶೀಲನೆ (3)
2.ತಟಕ್ಕನೆ ಮಾಡುವ ಮೋಸಗಾರಿಕೆ! (4)
3.ಪಾಂಡು ರಾಜನ ತಮ್ಮ (3)
4.ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
7.ಸವತಿಯ ಸುತನಿವನು (4)
8.ವನದಲ್ಲಿರುವ ತೀರ್ಥಂಕರ (4)
9.ಇದು ಜಗತ್ತಿಗೆ ಸಂಬಂಧಿಸಿದ್ದು (4)
11.ಕೆಲವರು ಮಾಡುವ ಕಾರ್ಯ (3)
12.ಮಗನಿಗೆ ತಿಳಿದಿರುವ ವೇದ! (3)
13.ಯತಿಗೆ ಬಂದಿರುವ ಕೋಪ! (3)



### 4527ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಜಾಯಮಾನ 3.ಕಲಗಚ್ಚು 5.ಸುಗುಣ 6.ದ್ರವ 8.ಕಲಹ 10.ಸಂತ್ರಸ್ತ 11.ಅಮಲು 12.ರಮಿಸು 15.ರಸ 17.ಪರೋಕ್ಷ

**ಮೇಲಿಂದ ಕೆಳಕ್ಕೆ:** 1.ಜಾಲಂಧ್ರ 2.ನಸುಕು 3.ಕಣಕ 7.ವರ್ಣಸಂಕರ 9.ಹಲಾಲುಕೋರ 13.ಸುಪಥ 14.ಅಕ್ಷರ 16.ಸದನ

## ಸುಡೊಕು 4914

| | | | | | | | | |
|---|---|---|---|---|---|---|---|---|
| | | 5 | 6 | | 2 | | | |
| | 3 | | | | 4 | | 8 | |
| 6 | | | | 1 | | | 5 | |
| | 8 | 3 | | 6 | | | | 4 |
| 1 | | | | 4 | | | | 8 |
| 2 | | | 8 | | 1 | 5 | 6 | |
| | | | | | 3 | | | |
| 4 | | 2 | | 9 | | | 3 | 1 |
| | 1 | | 4 | | 6 | | | 5 |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4913 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 6 | 1 | 4 | 9 | 3 | 2 | 5 |
| 1 | 3 | 4 | 5 | 2 | 7 | 8 | 6 | 9 |
| 5 | 9 | 2 | 6 | 3 | 8 | 7 | 4 | 1 |
| 2 | 1 | 5 | 9 | 7 | 3 | 6 | 8 | 4 |
| 6 | 4 | 7 | 8 | 1 | 2 | 9 | 5 | 3 |
| 3 | 8 | 9 | 4 | 5 | 6 | 1 | 7 | 2 |
| 9 | 2 | 8 | 3 | 6 | 5 | 4 | 1 | 7 |
| 7 | 6 | 1 | 2 | 9 | 4 | 5 | 3 | 8 |
| 4 | 5 | 3 | 7 | 8 | 1 | 2 | 9 | 6 |

## ‘ಫ್ಲಾಟ್‌ಫಾರ್ಮ್ ಟಿಕೆಟ್ ದರ ಏರಿಕೆ ತಾತ್ಕಾಲಿಕ’

ನವದೆಹಲಿ (ಪಿಟಿಐ): ‘ರೈಲ್ವೆ ಫ್ಲಾಟ್‌ಫಾರ್ಮ್ ಟಿಕೆಟ್ ದರ ಏರಿಕೆಯು ‘ತಾತ್ಕಾಲಿಕ’. ನಿಲ್ದಾಣಗಳಲ್ಲಿ ಜನದಟ್ಟಣೆ ತಪ್ಪಿಸುವುದಷ್ಟೇ ಇದರ ಉದ್ದೇಶ’ ಎಂದು ರೈಲ್ವೆ ಇಲಾಖೆಯು ಶುಕ್ರವಾರ ಸ್ಪಷ್ಟನೆ ನೀಡಿದೆ.

### ವಿಶಾಖಪಟ್ಟಣ ಉಕ್ಕಿನ ಕಾರ್ಖಾನೆ ಖಾಸಗೀಕರಣಕ್ಕೆ ವಿರೋಧ

# ಆಂಧ್ರ ಬಂದ್ ಶಾಂತಿಯುತ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ವಿಶಾಖಪಟ್ಟಣದಲ್ಲಿನ ಉಕ್ಕಿನ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿರುವುದನ್ನು ವಿರೋಧಿಸಿ ಶುಕ್ರವಾರ ಕರೆ ನೀಡಿದ್ದ ಆಂಧ್ರಪ್ರದೇಶ ಬಂದ್ ಶಾಂತಿಯುತವಾಗಿ ನಡೆಯಿತು.

ಬಂದ್ ಅಂಗವಾಗಿ ‘ವಿಶಾಖಾ ಉಕ್ಕು ಪರಿರಕ್ಷಣಾ ಪೋರಾಟ ಸಮಿತಿ’ ಆಯೋಜಿಸಿರುವ ಬೃಹತ್ ಪ್ರತಿಭಟನೆಯಲ್ಲಿ ಬಿಜೆಪಿ ಹೊರತುಪಡಿಸಿ ಎಲ್ಲ ರಾಜಕೀಯ ಪಕ್ಷಗಳು, ವಿವಿಧ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಪಾಲ್ಗೊಂಡಿದ್ದವು.

ಪ್ರತಿಭಟನಕಾರರು ಹಲವು ಸ್ಥಳಗಳಲ್ಲಿ ರಸ್ತೆ ತಡೆ ನಡೆಸಿದರು. ಅಂಗಡಿ–ಮುಂಗಟ್ಟುಗಳು, ಶಾಲಾ–ಕಾಲೇಜುಗಳು ಮುಚ್ಚಿದ್ದವು.

ವಿಶಾಖಪಟ್ಟಣದಲ್ಲೂ ಬೃಹತ್ ಮಾನವ ಸರಪಳಿ ರಚಿಸಿ ಪ್ರತಿಭಟನೆ ವ್ಯಕ್ತಪಡಿಸಿದರು.

ಬಂದ್‌ಗೆ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸರ್ಕಾರ ಸಹ ಬೆಂಬಲ ಸೂಚಿಸಿತ್ತು. ಶುಕ್ರವಾರ ಬೆಳಿಗ್ಗೆಯಿಂದಲೇ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತವಾಗಿತ್ತು. ತುರ್ತು ಸೇವೆಗಳು ಮಾತ್ರ ಎಂದಿನಂತೆ ಕಾರ್ಯನಿರ್ವಹಿಸಿದವು.

‘ವಿಶಾಖಪಟ್ಟಣ ಉಕ್ಕಿನ ಕಾರ್ಖಾನೆ ಖಾಸಗೀಕರಣಕ್ಕೆ ರಾಜ್ಯ ಸರ್ಕಾರ ವಿರೋಧ ವ್ಯಕ್ತಪಡಿಸಿದೆ. ಈ ಬಗ್ಗೆ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ’ ಎಂದು ವಾರ್ತಾ ಸಚಿವ ಪೆರ್ನಿ ವೆಂಕಟರಾಮಯ್ಯ ಗುರುವಾರ ಹೇಳಿದ್ದರು.


ಪ್ರಥಮ ಪುಣ್ಯಸ್ಮರಣೆ

ದಿನಾಂಕ : 07-03-2021 ಭಾನುವಾರ ಸಮಯ : 11.00ಕ್ಕೆ



ಶ್ರೀ ಲೋಕೇಶ್

Gazetted Officer ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆ

ಜನನ : 08-06-1961 ಮರಣ : 13-03-2020

ಶ್ರೀಯುತ ಲೋಕೇಶ್ ಹಲವಾರು ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು ಮತ್ತು ಬಂಧು ಬಳಗ ಮತ್ತು ಆತ್ಮೀಯ ಮಿತ್ರವೃಂದವನ್ನು ಹೊಂದಿದ್ದರು.

ತಾವುಗಳು ಕುಟುಂಬ ಸಮೇತರಾಗಿ ಆಗಮಿಸಬೇಕೆಂದು ತಮ್ಮಲ್ಲಿ ಮನವಿ.

ಸ್ಥಳ : ಸುಶೀಲ ನಾಯ್ಡು ಮಿನಿ ಹಾಲ್, 138, ಜೇನುಕಲ್ಲು ಸಿದ್ದೇಶ್ವರನಗರ, ಗೆಲೆಯರ ಬಳಗ, ಎರಡನೇ ಹಂತ, ನಂದಿನಿ ಲೇಔಟ್, ಬೆಂಗಳೂರು- 96

ಸ್ಮರಣೆಯಲ್ಲಿರುವ

ಮೊ : 99451 45006, 99004 57418

ಹುಟ್ಟುಹಬ್ಬದ ನೆನಪು

ಶ್ರೀ ಎ.ಜಿ. ದುರ್ಗಪ್ಪ, ಬನ್ನಿಕೋಡು
ಜನನ : 06.03.1925
ಮರಣ : 20.11.2016

ಶ್ರೀ ಮತಿ ಡಿ.ಎಲ್. ಗಂಗಮ್ಮ ದುರ್ಗಪ್ಪ
ಜನನ : 31.03.1932
ಮರಣ : 03.05.1985

ನಿಮ್ಮ ಆಶೀರ್ವಾದದಲ್ಲಿ, ಡಾ.ರವಿಪ್ರಕಾಶ್ ಡಿ.


## ಮಹಾರಾಷ್ಟ್ರದಲ್ಲಿ 10,000 ಕ್ಕೂ ಹೆಚ್ಚು ಕೋವಿಡ್ ಪ್ರಕರಣ

ಮುಂಬೈ: ಮಹಾರಾಷ್ಟ್ರದಲ್ಲಿ ಶುಕ್ರವಾರ 10,216 ಕೋವಿಡ್ ಪ್ರಕರಣಗಳು ದಾಖಲಾಗಿವೆ. ಕಳೆದ, ಅಕ್ಟೋಬರ್‌ನಿಂದೀಚೆಗೆ ಇದೇ ಮೊದಲ ಬಾರಿಗೆ ಪ್ರಕರಣಗಳ ಸಂಖ್ಯೆ 10 ಸಾವಿರ ದಾಟಿದೆ. ಇಣದ/ಎ ದುಬ ಶುಕ್ರವಾರ 53 ಮಂದಿ ಮೃತಪಟ್ಟಿದ್ದಾರೆ.


ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Rajajinagar

COMMERCIALLY CONVERTIBLE Land for sale on Dr.Rajkumar Road, Near Rajajinagar 6th Block 3700 Sqft at 6.50 Cr. Negotiable Contact - 9742937714.

ಉದ್ಯೋಗಾವಕಾಶ

Accounts & Finance

ಎಂಎನ್‌ಸಿಗೆ ಅಕೌಂಟೆಂಟ್ಸ್, ರಿಸೆಪ್ಷನಿಸ್ಟ್, ಆಫೀಸ್/ಅಕೌಂಟ್ಸ್ ಅಸಿಸ್ಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಕ್ಲಾರ್ಕ್ಸ್, ಟೆಲಿಕಾಲರ್ಸ್, ಪರ್ಛೇಸ್/ ಸ್ಟೋರ್ ಕೀಪರ್ಸ್ “ಮೋನಿಕಾ”: 9845379900/ 8050107107

General

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

✓ WORK FROM HOME: ಮನೆಯಿಂದಲೇ ಕುಳಿತು ಬುಕ್ ಬರೆಯುವ, ಫಾರಂ ತುಂಬುವ ಕೆಲಸ,ಗಳಿಸಿ 15000-22000/- ಕೊರಿಯರ್ ಸೌಲಭ್ಯವಿದೆ.8749014431, 9844978728

Wanted

200 EXCAVATOR operators, tower crane operators, mobile ready mix plant operators. for Haliyal & Salapur projects. Pvr PROJECTS Ltd, #453, 4th Main Road, 7th cross, Dollars colony, Bangalore-94, 080-23418080, 9008826378 E-Mail I'd: pvrplblr@gmail.com

ಬೆಂಗಳೂರಿನಲ್ಲಿರುವ ಟೈರ್ ಅಂಗಡಿಗೆ ಸಹಾಯಕರು ಬೇಕಾಗಿದ್ದಾರೆ. ಸಂಬಳ 12,000/- ಜೊತೆಗೆ ಊಟ ಮತ್ತು ವಸತಿ ಕೊಡಲಾಗುವುದು. ಕೂಡಲೇ ಸಂಪರ್ಕಿಸಿ: 9900902109

✓ ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080 -25300714

ವ್ಯಾಪಾರ

Business to Business

Business

ಜೋವರ್ ರೊಟ್ಟಿ, ರಾಗಿ ರೊಟ್ಟಿ, ಚಪಾತಿ, ಪುರಿ ಇತ್ಯಾದಿಗಳನ್ನು ತಯಾರಿಸಲು ಬೇಕಾದ ಯಂತ್ರಗಳಿಗೆ ಕರೆ ಮಾಡಿ. B K Engineers, Marathahalli, Bangalore, Ph:7676212917

ಸಾರ್ವಜನಿಕ ಪ್ರಕಟಣೆ

PUBLIC NOTICE

My client by name **D. Krishnappa** intends to get registered sale deed from the original vendor Sri.Krishnaraju S/o J. Muniraju in respect of property bearing Sy.No. 177/4 Measuring to an extent of 1 acre situated at Vishwanathpura Village, Kundana Hobli, Devanahalli Taluk, Bangalore Rural District which is morefully described in the Schedule and here in after called the Schedule Property anybody having right, title claim demand whatsoever rights in accordance with the law in respect of the Schedule Property are hereby called upon to submit their objections in writing together with documentary proof to establish their claim, this should reach to undersigned within 7 days from the date of this notice, if any objections claims are not received in this stipulated time, it shall be presumed that no one has got any right, title claim upon the Schedule Property and my client will proceed to compete the sale transaction.

SCHEDULE

All that part and parcel of an agricultural land bearing Sy.No. 177/4 Measuring to an extent of 1 acre situated at Vishwanathpura Village, Kundana Hobli, Devanahalli Taluk, Bangalore Rural District and bounded on:-
East by : Land of Channarayappa & B. Anjinappa; West by : Land of Narayanaswamy & Govt. Land;
North by: Canal; South by: Land of B. Anjinappa & Chowdappa

**Sri. R. T. Nanjegowda,** Advocate, Office at No.3, Near New Bus Stand, Devanahalli Town, Bangalore Rural District
Mobile: 9845624750
Mahesh D. K : 9686600346

ಮಾನ್ಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ & ಜೆಎಂಎಫ್‌ಸಿ, ಜಗಳೂರು.

ಅಸಲು ದಾವಾ ಸಂಖ್ಯೆ: 25/2008
ವಾದಿಗಳು: ಶ್ರೀ ಸಿದ್ದಪ್ಪ ಮತ್ತು ಇತರರು. –ವಿರುದ್ಧ– ಪ್ರತಿ ಪ್ರತಿವಾದಿಗಳು: ಶ್ರೀಮತಿ ಕೆಂಚಮ್ಮ ಮತ್ತು ಇತರರು. 1) ಶ್ರೀಮತಿ ಕೆಂಚಮ್ಮ ಕೋಂ ಸುರೇಂದ್ರಬಾಬು, ವಯಸ್ಸು 66 ವರ್ಷ, ವಾಸ: #334/3, ‘ಜಯಲಕ್ಷ್ಮೀ ನಿಲಯ’, ದೊಡ್ಡಬಾಣಸವಾಡಿ, ಬೆಂಗಳೂರು–43.

ಆದೇಶ 5 ನಿಯಮ 20ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ 1ನೇ ಪ್ರತಿವಾದಿಗೆ ನೋಟಿಸ್

ಈ ಮೇಲ್ಕಂಡ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಯ ಸಂಬಂಧ ವಾದಿಗಳು ಮಾಲೀಕರು ಮತ್ತು ಸ್ವಾಧೀನಾನುಭವದಾರರು ಎಂದು ಘೋಷಿಸಬೇಕೆಂದು ಕೋರಿ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯವು ದಿ: 08.04.2021ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ದಾವೆಯನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು. ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯಂದಿಗೆ ದಿ: 03.03.2021ರಂದು ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ ಸಹಿ/– ಶಿರಸ್ತೇದಾರರು, ಮಾನ್ಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಜಗಳೂರು.
ವಾದಿಗಳ ಪರ ವಕೀಲರು: ಎ.ಎಂ. ಹೆಗಡೆ
ಸ್ಥಳ: ಜಗಳೂರು, ದಿ:01.03.2021

ಭವಿಷ್ಯ

Astrology

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರಿಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಪ್ರಖ್ಯಾತ ಪಂಡಿತರು, ವಶೀಕರಣ ಸ್ಪೆಷಲಿಸ್ಟ್. ಯಾವುದೇ ಗುಪ್ತ ಸಮಸ್ಯೆಗಳಿಗೆ ಕೇರಳೀಯ, ಬಂಗಾಳಿ ಪದ್ಧತಿಯಿಂದ ಖಚಿತ ಪರಿಹಾರ. A.R. ಗಣಾಚಾರಿ 9902157331

★100%ವಶೀಕರಣ ಸ್ಪೆಷಲಿಸ್ಟ್★ ಗಂಡಹೆಂಡತಿ ಸಮಸ್ಯೆ,ಮದುವೆ, ಹಣಕಾಸು, ಇನ್ನೂ ಅನೇಕ ಸಮಸ್ಯೆಗಳಿಗೆ ತುಳಸಿದಾಸಭಟ್ ಅವರಿಂದ ಶೀಘ್ರದಲ್ಲಿ ಶಾಶ್ವತ ಪರಿಹಾರ. 9916733308

ನಿಮ್ಮ ಯಾವುದೇ ರೀತಿಯ ವಶೀಕರಣ ಹಾಗೂ ನಿಮ್ಮ ಸಮಸ್ಯೆಗಳಾದ ಸಂತಾನ, ಸತಿ-ಪತಿ ಕಲಹ, ಸಾಲಬಾಧೆ, ಪ್ರೇಮವಿಚಾರ, ಶತ್ರುನಾಶ, ಇನ್ನೂ ಅನೇಕ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ವಿಶಿಷ್ಠ ಶಾಸ್ತ್ರೋಕ್ತ ಪರಿಹಾರ ಶತಸಿದ್ಧ.9980714116

ಉಚಿತ ಜ್ಯೋತಿಷ್ಯಫಲ ಶ್ರೀ ದುರ್ಗಾಂಬಿಕಾ ಜ್ಯೋತಿಷ್ಯಾಲಯ ಶ್ರೀ ರಘುನಂದನ್. ವ್ಯಾಪಾರ, ಹಣಕಾಸು, ಪ್ರೇಮ ವಿಚಾರ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ 7483199807.

★ಚೌಡೇಶ್ವರಿದೇವಿ★ ಆರಾಧಕರು ಪ್ರಧಾನ ತಾಂತ್ರಿಕ್ ಮಂಜುನಾಥ್. ಪ್ರೀತಿಪ್ರೇಮ, ದಾಂಪತ್ಯ ಸಮಸ್ಯೆ, ವಶೀಕರಣ ಫೋನಿನ ಮೂಖಾಂತರ ಕೆಲವೇ ನಿಮಿಷಗಳಲ್ಲಿ ಪರಿಹಾರ. 8050498041

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ನಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ಪ್ರವಾಸ

Travel

ಸಸ್ಯಾಹಾರಿ ಊಟ, ವಸತಿಯೊಂದಿಗೆ 22.04.2021,25/35 ದಿನಗಳ ಕಾಶಿ,ಗಯಾ, ನೇಪಾಳ,ಬದರಿನಾಥ್, ಕೇದಾರನಾಥ್, ಗಂಗೋತ್ರಿ, ವೈಷ್ಣೋದೇವಿ.18.05.2021 ರಿಂದ 18 ದಿನಗಳ ಚಾರ್‌ಧಾಮ್ ಯಾತ್ರೆ 20.06.2021 ರಿಂದ 18 ದಿನಗಳ ಅಮರನಾಥ ಯಾತ್ರೆಗಳಿಗೆ ಏಷ್ಯನ್ ಟ್ರಾವಲ್ ಏಜೆನ್ಸಿ 080-26574131, 26573421, 9448522551

28.3.21 ದೆಹಲಿ, ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಕಾಶಿ, ಗಯಾ, ಅಲಹಾಬಾದ್. 24.4.21 ಮಧ್ಯಪ್ರದೇಶ, ಗುಜರಾತ್/ ರಾಜಸ್ಥಾನ್/ ನೇಪಾಳ.12.5.21 ಗಂಗೋತ್ರಿ, ಯಮುನೋತ್ರಿ, ಕೇದಾರನಾಥ, ಬದರಿನಾಥ. 27.6.21 ಅಮರನಾಥ. ಕರ್ನಾಟಕ ಹೆರಿಟೇಜ್ ಟೂರ್ಸ (ಹನುಮಂತನಗರ) ಸಂ: 9845035349, 9482435755

ಕಾಶಿ, ಮುಕ್ತಿನಾಥ್-ಯಾತ್ರ, 25-04-2021, 15 ದಿನಗಳು. ಹಾಗು ಪ್ರತಿದಿನ ತಿರುಪತಿ ಪ್ಯಾಕೇಜ್ ಪ್ರಾರಂಬಿಸಿದ್ದು ಬುಕಿಂಗ್-ಗಳಿಗಾಗಿ ವಿಜಯ ಟ್ರಾವಲ್ಸ್ ಮಲ್ಲೇಶ್ವರಂ,ಬೆಂಗಳೂರು-03. 9448294477

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

| PUBLICATION | TEXT AD RATE PER INS FOR 15 WORDS | CLASSIFIEDS DISPLAY RATE PER SQCM |
|---|---|---|
| DH ALL KARNATAKA+ PV BENGALURU | 1020/- | 480/- |
| PV ALL KARNATAKA | 900/- | 430/- |

*GST applicable

SPECIAL SCHEMES ALL CATEGORY

| | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

For More Details

Contact: 9880856233 | 9731810277 | 9901641752 | 9845114560 | 9886213331


# ಡಿಜಿಟಲ್ ವೇದಿಕೆಗಳ ವಿರುದ್ಧ ಕ್ರಮಕ್ಕೆ ಅವಕಾಶ ಇಲ್ಲ: ಸುಪ್ರೀಂ

ಪ್ರಜಾವಾಣಿ ವಾರ್ತೆ

ನವದೆಹಲಿ: ಡಿಜಿಟಲ್ ವೇದಿಕೆಗಳ ವಿರುದ್ಧ ಕ್ರಮ ಕೈಗೊಳ್ಳಲು ಕೇಂದ್ರದ ಯಾವುದೇ ನಿಯಮಾವಳಿಗಳಲ್ಲಿ ಅವಕಾಶ ಇಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಸಾಮಾಜಿಕ ಮಾಧ್ಯಮಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸಿರುವ ನಿಯಮಾವಳಿಗಳು ಕೇವಲ ಮಾರ್ಗದರ್ಶಿ ಸೂತ್ರಗಳಾಗಿವೆ ಮತ್ತು ಡಿಜಿಟಲ್ ವೇದಿಕೆಗಳ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶ ಕಲ್ಪಿಸಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಮತ್ತು ಆರ್.ಎಸ್. ರೆಡ್ಡಿ ಅವರನ್ನೊಳಗೊಂಡ ಪೀಠವು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

ವೆಬ್ ಸರಣಿ ‘ತಾಂಡವ್’ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಅಮೆಜಾನ್ ಪ್ರೈಮ್ ವಿಡಿಯೊದ ಭಾರತದ ಮುಖ್ಯಸ್ಥೆ ಅಪರ್ಣಾ ಪುರೋಹಿತ್ ಅವರನ್ನು ಬಂಧಿಸದಂತೆ ನ್ಯಾಯಾಲಯ ರಕ್ಷಣೆಯನ್ನು ಸಹ ಇದೇ ಸಂದರ್ಭದಲ್ಲಿ ನೀಡಿದೆ.

ಜತೆಗೆ, ಪುರೋಹಿತ್ ಅವರು ಸಲ್ಲಿಸಿರುವ ನಿರೀಕ್ಷಣಾ ಜಾಮೀನಿಗೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದ್ದಾರೆ.

### ಪಾಕ್ ಜೈಲಿನಲ್ಲಿರುವ ಮಗನಿಗಾಗಿ ತಾಯಿ ಮೊರೆ

ನವದೆಹಲಿ (ಪಿಟಿಐ): ಪಾಕಿಸ್ತಾನದ ಜೈಲಿನಲ್ಲಿ 23 ವರ್ಷಗಳಿಂದ ಇರುವ ತನ್ನ ಪುತ್ರ, ಸೇನೆ ಅಧಿಕಾರಿಯ ವಾಪಸಾತಿಗೆ ರಾಜತಾಂತ್ರಿಕ ಹಂತದಲ್ಲಿ ಕ್ರಮವಹಿಸಲು ಕೇಂದ್ರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸೇನಾ ಅಧಿಕಾರಿಯ ತಾಯಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬಡೆ ನೇತೃತ್ವದ ಪೀಠವು ಈ ಕುರಿತು ವಿವರಣೆ ಸಲ್ಲಿಸಲು ಸೂಚಿಸಿ ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿತು.

ಪಾಕ್ ಜೈಲಿನಲ್ಲಿ ಇರುವ ಕ್ಯಾಪ್ಟನ್ ಸಂಜಿತ್ ಭಟ್ಟಾಚಾರ್ಜಿ ಅವರ ತಾಯಿ, 81 ವರ್ಷದ ಕಮಲಾ ಅವರು ಅರ್ಜಿ ಸಲ್ಲಿಸಿದ್ದರು. ಮಾನವೀಯ ಆಧಾರದಲ್ಲಿ ಈ ಬಗ್ಗೆ ತುರ್ತಾಗಿ ಗಮನಹರಿಸಬೇಕು ಎಂದೂ ಕೋರಿದ್ದರು.

ಸರ್ಕಾರವು ಈ ವಿಷಯದ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದೆ. ಯಾವುದೇ ಶಾಸನ ರಚಿಸುವ ಕುರಿತು ನ್ಯಾಯಾಲಯದ ಗಮನಕ್ಕೆ ತರಲಾಗುವುದು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದರು.

# ಒಬಿಸಿ ಮೀಸಲು: ಮೇಲ್ಮನವಿ ಆಯ್ಕೆ ಮುಕ್ತವಾಗಿದೆ –ಮಹಾರಾಷ್ಟ್ರ ಸರ್ಕಾರ

ಅಜಿತ್ ಪವಾರ್

ಮುಂಬೈ (ಪಿಟಿಐ): ಸ್ಥಳೀಯ ಸಂಸ್ಥೆಗಳಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ನೀಡುವ ಮೀಸಲಾತಿ ಒಳಗೊಂಡು ಮೀಸಲು ಪ್ರಮಾಣ ಶೇ 50 ಮೀರಬಾರದು ಎಂಬ ಸುಪ್ರೀಂ ಕೋರ್ಟ್‌ನ ಆದೇಶ ಕುರಿತು ಮೇಲ್ಮನವಿ ಸಲ್ಲಿಸುವ ಆಯ್ಕೆಯನ್ನು ಸರ್ಕಾರ ಹೊಂದಿದೆ ಎಂದು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಶುಕ್ರವಾರ ವಿಧಾನಸಭೆಯಲ್ಲಿ ತಿಳಿಸಿದರು.

ಸುಪ್ರಿಂ ಕೋರ್ಟ್ ಗುರುವಾರ ಈ ಕುರಿತು ಆದೇಶ ನೀಡಿದ ಸಂದರ್ಭದಲ್ಲಿ ಮಹಾರಾಷ್ಟ್ರದ ಕಾಯ್ದೆಯನ್ನೂ ಉಲ್ಲೇಖಿಸಿತ್ತು.

ಶುಕ್ರವಾರ ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ವಿರೋಧಪಕ್ಷದ ನಾಯಕ ದೇವೇಂದ್ರ ಫಡಣವಿಸ್, ‘ಸುಪ್ರೀಂ ಕೋರ್ಟ್ ಆದೇಶ ಒಬಿಸಿ ವರ್ಗದ ಮೇಲೆ ಪರಿಣಾಮ ಬೀರಲಿದೆ’ ಎಂದು ಗಮನಸೆಳೆದರು.

ಸರ್ಕಾರ ಒಬಿಸಿ ಕೋಟಾ ವಿಷಯ ಕಡೆಗಣಿಸುತ್ತಿದೆ. ನ್ಯಾಯಾಂಗ ಆಯೋಗವನ್ನು ರಚಿಸಿಲ್ಲ. ಕೊರೊನಾ ಸೋಂಕು ಪರಿಸ್ಥಿತಿ ಉಲ್ಲೇಖಿಸಿ ಮೇಲ್ಮನವಿ ಸಲ್ಲಿಸಬೇಕು. ಸದ್ಯ, ಈ ಆದೇಶಕ್ಕೆ ತಡೆಯಾಜ್ಞೆ ತರಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಜಿತ್ ಪವಾರ್, ‘ಸುಪ್ರೀಂ ಕೋರ್ಟ್ ಆದೇಶವು ಕೇವಲ ಧುಲೆ, ನಂದುರ್‌ಬರ್, ನಾಗಪುರ, ಅಕೋಲಾ, ವಾಶಿಂ, ಭಂಡಾರ, ಗೊಂಡಿಯಾ ಜಿಲ್ಲೆಗಳಿಗಷ್ಟೇ ಅನ್ವಯವಾಗಲಿದೆ’ ಎಂದರು.

ಮುಖ್ಯಮಂತ್ರಿ ಸಂಪುಟ ಸಚಿವರ ಜೊತೆಗೆ ಈ ವಿಷಯ ಕುರಿತು ಗುರುವಾರ ಸಂಜೆಯೇ ಚರ್ಚಿಸಿದ್ದಾರೆ. ಒಬಿಸಿ ಮೀಸಲು ಕುರಿತಂತೆ ಮಹಾರಾಷ್ಟ್ರ ಸರ್ಕಾರ ತನ್ನ ನಿಲುವಿಗೆ ಬದ್ಧವಾಗಿದೆ ಎಂದು ಭರವಸೆ ನೀಡಿದರು.

# ಕ್ಯುಎಸ್ ರ‍್ಯಾಂಕಿಂಗ್‌ನಲ್ಲಿ ವಿಐಟಿಗೆ ಸ್ಥಾನ

ವೆಲ್ಲೂರು: ಕ್ಯುಎಸ್ ವರ್ಲ್ಡ್ ವಿಶ್ವವಿದ್ಯಾಲಯವು ಬಿಡುಗಡೆ ಮಾಡಿರುವ 2021ರ ವಿಷಯವಾರು ರ‍್ಯಾಂಕಿಂಗ್‌ನ ವಿಶ್ವದ 450 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಸ್ಥಾನ ಪಡೆದಿದೆ. ವಿಐಟಿಯು ಭಾರತದ 12 ಉತ್ತಮ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಒಂದಾಗಿದೆ.

ಕ್ಯುಎಸ್ ರ‍್ಯಾಂಕಿಂಗ್ ಈ ವರ್ಷ ಪ್ರಕಟಿಸಿರುವ ಪಟ್ಟಿಯಲ್ಲಿ ವಿಐಟಿಯ ಏಳು ವಿಷಯಗಳು ಸೇರಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಕಂಪ್ಯೂಟರ್ ಸೈನ್ಸ್ ಅಂಡ್ ಇನ್‌ಫಾರ್ಮೇಷನ್ ಸಿಸ್ಟಮ್ಸ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (ಇಇಇ), ಮೆಕ್ಯಾನಿಕಲ್ ಎಂಜಿನಿಯರಿಂಗ್ ಅಂಡ್ ಕೆಮಿಸ್ಟ್ರಿ ವಿಷಯಗಳು ಈ ಬಾರಿ 50 ಸ್ಥಾನಗಳನ್ನು ಹೆಚ್ಚಿಸಿಕೊಂಡಿವೆ.

ಇವುಗಳಲ್ಲಿ ಕಂಪ್ಯೂಟರ್ ಸೈನ್ಸ್ ಅಂಡ್ ಇನ್‌ಫಾರ್ಮೇಷನ್ ಸಿಸ್ಟಮ್ಸ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (ಇಇಇ) ವಿಷಯಗಳು ಭಾರತದ ಮೊದಲ 10ನೇ ರ‍್ಯಾಂಕಿಂಗ್‌ನ ಶ್ರೇಣಿಯೊಳಗಿವೆ. ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಷಯವು ಮೊದಲ 300 ಶ್ರೇಣಿಯೊಳಗಿದೆ. ಅಂತೆಯೇ ಕಂಪ್ಯೂಟರ್ ಸೈನ್ಸ್ ಅಂಡ್ ಇನ್‌ಫಾರ್ಮೇಷನ್ ಸಿಸ್ಟಮ್ಸ್ ಮತ್ತು ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಷಯಗಳು ವಿಶ್ವದ ಮೊದಲ 400 ರ‍್ಯಾಂಕಿಂಗ್‌ನ ಶ್ರೇಣಿಯೊಳಗೆ ಸ್ಥಾನ ಪಡೆದಿವೆ.

ವಿಐಟಿಯ ಮ್ಯಾಥಮೆಟಿಕ್ಸ್ ಮತ್ತು ಬಯಾಲಾಜಿಕಲ್ ಸೈನ್ಸಸ್ ವಿಷಯಗಳು ಕ್ಯುಎಸ್ ವಿಷಯವಾರು ರ‍್ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಬಾರಿಗೆ ಪ್ರವೇಶ ಪಡೆದಿದ್ದು, ಅವು ಕ್ರಮವಾಗಿ ವಿಶ್ವದ 500 ಮತ್ತು 600ನೇ ರ‍್ಯಾಂಕಿಂಗ್ ಪಟ್ಟಿಯಲ್ಲಿವೆ.

ಕ್ಯುಎಸ್ ವರ್ಲ್ಡ್ ವಿಶ್ವವಿದ್ಯಾಲಯವು ಒಟ್ಟು 51 ವಿಷಯಗಳಿಗೆ ಅನುಸಾರವಾಗಿ 2021ರ ವಿಷಯವಾರು ರ‍್ಯಾಂಕಿಂಗ್ ಶ್ರೇಣಿಯನ್ನು ರೂಪಿಸಿದೆ.

ಈ ವಿಶ್ವವಿದ್ಯಾಲಯವು ಪ್ರತಿವರ್ಷ ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯನ್ನು ಪರಿಷ್ಕರಣೆ ಮಾಡುತ್ತದೆ. ಈ ಪಟ್ಟಿಯಲ್ಲಿ ಸ್ಥಾನ ಪಡೆದ ವಿಶ್ವವಿದ್ಯಾಲಯ, ಶಿಕ್ಷಣ ಸಂಸ್ಥೆಗಳು ಶೈಕ್ಷಣಿಕ ಗುಣಮಟ್ಟದ ಕಾಯ್ದುಕೊಳ್ಳುವಿಕೆ ಹಾಗೂ ಜಾಗತಿಕ ಮಟ್ಟದಲ್ಲಿ ಬೇಡಿಕೆ ಇರುವ ವಿಷಯಗಳನ್ನು ಒಳಗೊಂಡಿರುತ್ತವೆ.

ಈ ಪಟ್ಟಿಯು ನಿರ್ದಿಷ್ಟ ಕ್ಷೇತ್ರಗಳಲ್ಲಿ ಉದ್ಯೋಗ ಅರಸುವ ಮತ್ತು ಸಂಶೋಧನೆ ಕೈಗೊಳ್ಳುವ ವಿದ್ಯಾರ್ಥಿಗಳಿಗೆ ವಿಶ್ವದ ಉತ್ತಮ ವಿಶ್ವವಿದ್ಯಾಲಯಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.

## ‘ಹೊಸ ರೂಪಾಂತರ ವೈರಸ್‌ಗೆ ಲಸಿಕೆ ಕಡಿಮೆ ಪರಿಣಾಮಕಾರಿ’

ವಾಷಿಂಗ್ಟನ್ (ಪಿಟಿಐ): ಕೊರೊನಾ ವೈರಸ್‌ನ ಹೊಸ ರೂಪಾಂತರಗಳು ವ್ಯಾಪಕವಾಗಿ ಹಬ್ಬುತ್ತಿರುವುದರಿಂದ ರೋಗ ನಿರೋಧಕ ಆಧಾರಿತ ಔಷಧಗಳು ಮತ್ತು ಲಸಿಕೆಗಳು ಕಡಿಮೆ ಪರಿಣಾಮಕಾರಿಯಾಗಿವೆ ಎಂದು ಹೊಸ ಅಧ್ಯಯನ ವರದಿ ತಿಳಿಸಿದೆ.

ದಕ್ಷಿಣ ಆಫ್ರಿಕಾ, ಬ್ರಿಟನ್ ಮತ್ತು ಬ್ರೆಜಿಲ್‌ನಲ್ಲಿ ಪತ್ತೆಯಾದ ಕೊರೊನಾ ವೈರಸ್‌ನ ಹೊಸ ರೂಪಾಂತರಗಳು ವೇಗವಾಗಿ ಹಬ್ಬುತ್ತಿವೆ.

ಈ ಹೊಸ ರೂಪಾಂತರಗಳೇ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಕುಂದಿಸುತ್ತಿವೆ ಎಂದು ವರದಿ ವಿವರಿಸಿದೆ. ಈ ಬಗ್ಗೆ ‘ನೇಚರ್ ಮೆಡಿಸಿನ್’ ನಿಯತಕಾಲಿಕೆಯಲ್ಲಿ ಸಂಶೋಧನಾ ಲೇಖನ ಪ್ರಕಟಿಸಲಾಗಿದೆ.

‘ಕೋವಿಡ್–19 ವಿರುದ್ಧ ಲಸಿಕೆ ಹಾಕಿಸಿಕೊಂಡಿದ್ದರೂ ಹೊಸ ರೂಪಾಂತರಗಳಿಂದ ರಕ್ಷಣೆ ದೊರೆಯುವ ಸಾಧ್ಯತೆಗಳು ಕಡಿಮೆಯಾಗಿವೆ’ ಎಂದು ಅಧ್ಯಯನ ತಂಡದಲ್ಲಿದ್ದ ವಾಷಿಂಗ್ಟನ್ ಯೂನಿವರ್ಸಿಟಿಯ ಸ್ಕೂಲ್ ಆಫ್ ಮೆಡಿಸಿನ್‌ನ ಮೈಕಲ್ ಎಸ್. ಡೈಮಂಡ್ ವಿವರಿಸಿದ್ದಾರೆ.

‘ಲಸಿಕೆಯಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿಯ ಪ್ರಮಾಣವು ವಯಸ್ಸಿಗೆ ತಕ್ಕಂತೆ ವ್ಯತ್ಯಾಸಗಳಾಗುತ್ತವೆ. ಜತೆಗೆ, ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ, ಬೇರೆ ಕಾರಣಗಳು ಸಹ ಇರುತ್ತವೆ. ವಿಶೇಷವಾಗಿ ವಯಸ್ಸಾದವರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತದೆ’ ಎಂದು ಅವರು ವಿವರಿಸಿದ್ದಾರೆ.

‘ಈ ಹೊಸ ರೂಪಾಂತರಗಳು ಯಾವ ರೀತಿಯಲ್ಲಿ ಪರಿಣಾಮ ಬೀರುತ್ತಿವೆ ಎನ್ನುವುದು ಇನ್ನೂ ಖಚಿತವಾಗಿ ಗೊತ್ತಾಗಿಲ್ಲ. ಈ ಬಗ್ಗೆ ವಿಶ್ಲೇಷಣೆಯ ಅಧ್ಯಯನ ಅಗತ್ಯವಿದೆ’ ಎಂದೂ ಅವರು ಹೇಳಿದ್ದಾರೆ.




## ಯುದ್ಧವಿಮಾನದ ಪರೀಕ್ಷಾರ್ಥ ಹಾರಾಟ

ಬಾಲಾಸೋರ್, ಒಡಿಶಾ (ಪಿಟಿಐ): ಎಸ್‌ಎಫ್‌ಡಿಆರ್ (ಸಾಲಿಡ್ ಫ್ಯುಯಲ್ ಡಕ್ಟೆಡ್ ರಾಮ್‌ಜೆಟ್) ತಂತ್ರಜ್ಞಾನ ಆಧರಿತ ಯುದ್ಧವಿಮಾನದ ಪರೀಕ್ಷಾರ್ಥ ಹಾರಾಟವನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಶುಕ್ರವಾರ ಒಡಿಶಾದಲ್ಲಿ ಯಶಸ್ವಿಯಾಗಿ ನಡೆಸಿತು.

ಚಾಂದಿಪುರ್ ಉಡಾವಣಾ ಕೇಂದ್ರದಲ್ಲಿ ಬೆಳಿಗ್ಗೆ 10.30 ಸುಮಾರಿಗೆ ಈ ಪ್ರಯೋಗ ನಡೆಯಿತು.

## ತಬ್ಲೀಗ್ ಚಟುವಟಿಕೆ : ಪೂರ್ವಾನುಮತಿ ಕಡ್ಡಾಯ

ನವದೆಹಲಿ (ಪಿಟಿಐ): ಸಾಗರೋತ್ತರ ಭಾರತೀಯ (ಒಸಿಐ) ಕಾರ್ಡ್ ಹೊಂದಿರುವವರು ಇನ್ನು ಮುಂದೆ ದೇಶದಲ್ಲಿ ತಬ್ಲೀಗ್‌ನ ಚಟುವಟಿಕೆ ಅಥವಾ ಮಾಧ್ಯಮ ಚಟುವಟಿಕೆ ಕೈಗೊಳ್ಳಲು ಕಡ್ಡಾಯವಾಗಿ ಕೇಂದ್ರದ ಅನುಮತಿ ಪಡೆಯಬೇಕು.

ಆದರೆ, ದೇಶೀ ವಿಮಾನ ಪ್ರಯಾಣ ದರ, ಪ್ರವೇಶ ಶುಲ್ಕ, ಭಾರತದಲ್ಲಿನ ರಾಷ್ಟ್ರೀಯ ಉದ್ಯಾನಗಳು, ಸ್ಮಾರಕಗಳು ಮತ್ತು ಸಂಗ್ರಹಾಲಯಗಳಿಗೆ ಭೇಟಿ ನೀಡುವ ಕುರಿತಂತೆ ಕೇಂದ್ರ ಗೃಹ ಸಚಿವಾಲಯವು ವಿನಾಯಿತಿ ನೀಡಿದೆ.

ಗುರುವಾರ ರಾತ್ರಿ ಹೊರಡಿಸಲಾದ ಅಧಿಸೂಚನೆಯಲ್ಲಿ ಸಚಿವಾಲಯವು, ಒಸಿಐ ಕಾರ್ಡ್‌ದಾರರು ಬಹುಪ್ರವೇಶಾವಕಾಶ ಇರುವ, ದೀರ್ಘಾವಧಿಯ ವೀಸಾ ಪಡೆಯಲು ಅರ್ಹರಿದ್ದಾರೆ ಎಂದು ಹೇಳಲಾಗಿದೆ. ಆದರೆ, ಧಾರ್ಮಿಕ ಚಟುವಟಿಕೆ, ತಬ್ಲೀಗ್ ಅಥವಾ ಮಾಧ್ಯಮ ಚಟುವಟಿಕೆ ಕೈಗೊಳ್ಳುವುದಿದ್ದರೆ ವಿದೇಶಿಗರ ಪ್ರಾದೇಶಿಕ ನೋಂದಣಿ ಅಧಿಕಾರಿಗಳಿಂದ ಅನುಮತಿ ಕಡ್ಡಾಯ ಎಂದು ತಿಳಿಸಿದೆ.

ಕಳೆದ ಮಾರ್ಚ್‌ನಲ್ಲಿ ದೇಶದಲ್ಲಿ ಕೊರೊನಾ ಸೋಂಕು ಆರಂಭದ ದಿನಗಳಲ್ಲಿ ದೆಹಲಿಯಲ್ಲಿ ನಡೆದಿದ್ದ ತಬ್ಲೀಗ್ ಸಭೆಯಲ್ಲಿ 2,500ಕ್ಕೂ ಅಧಿಕ ವಿದೇಶಿ ಸದಸ್ಯರು ಭಾಗವಹಿಸಿದ್ದರು ಎಂಬುದು ತೀವ್ರ ಚರ್ಚೆಗೆ ಆಸ್ಪದವಾಗಿತ್ತು. ವೀಸಾ ನಿಯಮಗಳನ್ನು ಉಲ್ಲಂಘಿಸಿದ ಆರೋಪದಡಿ ಸುಮಾರು 233 ವಿದೇಶಿ ತಬ್ಲೀಗ್ ಸದಸ್ಯರನ್ನು ಬಂಧಿಸಲಾಗಿತ್ತು.

### ನ್ಯೂಜಿಲೆಂಡ್‌ನಲ್ಲಿ ಭೂಕಂಪನ; ಒಪ್ಪೊಟಿಕಿ ಉತ್ತರ ದ್ವೀಪದಿಂದ ಜನರನ್ನು ಸ್ಥಳಾಂತರಿಸಲಾಗಿತ್ತು

# ತಗ್ಗಿದ ಸುನಾಮಿ ಆತಂಕ, ನಿರಾಳ

ಪೋರ್ಟ್‌ವಿಲಾ, ವನೌತು (ಎಎಫ್‌ಪಿ): ಭಾರಿ ಭೂಕಂಪನದ ಹಿನ್ನೆಲೆಯಲ್ಲಿ ಸುನಾಮಿ ಕುರಿತ ಎಚ್ಚರಿಕೆಯನ್ನು ನ್ಯೂಜಿಲೆಂಡ್ ಸರ್ಕಾರ ಹಿಂತೆಗೆದುಕೊಂಡಿದ್ದು ಸುರಕ್ಷಿತ ಸ್ಥಳಕ್ಕೆ ತೆರಳಿದ್ದ ಸಾವಿರಾರು ನಿವಾಸಿಗಳು ತಮ್ಮ ಮನೆಗೆ ಮರಳಿದ್ದಾರೆ.

ಭೂಕಂಪನದ ಸರಣಿ ಅನುಭವದ ಹಿಂದೆಯೇ ಸರ್ಕಾರ ಸುನಾಮಿ ಎಚ್ಚರಿಕೆ ನೀಡಿತ್ತು.

ರಿಕ್ಟರ್ ಮಾಪಕದಲ್ಲಿ 7.3, 7.4 ಮತ್ತು 8.1 ತೀವ್ರತೆ ದಾಖಲಾಗಿದ್ದ ಭೂಕಂಪನ ಸಂಭವಿಸಿತ್ತು. ಈ ಹಿನ್ನೆಲೆಯಲ್ಲಿ ಸುನಾಮಿ ಎಚ್ಚರಿಕೆಯನ್ನು ಸರ್ಕಾರ ನೀಡಿತ್ತು.

ನ್ಯೂಜಿಲೆಂಡ್‌ನಲ್ಲಿ ಭೂಕಂಪನದ ಅನುಭವದ ಹಿಂದೆಯೇ ಶುಕ್ರವಾರ ಸುನಾಮಿ ಎಚ್ಚರಿಕೆಯನ್ನು ನೀಡಲಾಗಿದ್ದು, ನೆರೆಯ ಸಿಡ್ನಿಯ ಮರೌಬಾ ತೀರದಲ್ಲಿ ಸಮುದ್ರದಲ್ಲಿ ದೊಡ್ಡ ಪ್ರಮಾಣದ ಅಲೆಗಳು ಕಾಣಿಸಿಕೊಂಡಿದ್ದವು

ಭೂಕಂಪನದ ಹಿಂದೆಯೇ ಸಮುದ್ರದಲ್ಲಿ ಸುಮಾರು 11 ಅಡಿ ಎತ್ತರಕ್ಕೆ ಅಲೆಗಳು ಎದ್ದಿದ್ದು, ನ್ಯೂ ಕ್ಯಾಲೆಡೊನಿಯಾ ಮತ್ತು ವನೌತುವಿನಲ್ಲಿ ತೀರ ಭಾಗದ ಜನರಲ್ಲಿ ಆತಂಕ ಮೂಡಿತ್ತು. ನ್ಯೂಜಿಲೆಂಡ್‌ನಿಂದ ಪೆರುವರೆಗೂ ಎಚ್ಚರಿಕೆ ನೀಡಲಾಗಿತ್ತು.

ನ್ಯೂಜಿಲೆಂಡ್‌ನಲ್ಲಿ ಒಪ್ಪೊಟಿಕಿ ಉತ್ತರ ದ್ವೀಪ ಭಾಗದಿಂದ ಸುಮಾರು 4 ಸಾವಿರ ಜನರನ್ನು ಸ್ಥಳಾಂತರಿಸಲಾಗಿತ್ತು.

ಸುನಾಮಿ ಆತಂಕ ಕಡಿಮೆ ಆದಂತೆ ರಾಷ್ಟ್ರೀಯ ತುರ್ತು ಪರಿಸ್ಥಿತಿ ನಿರ್ವಹಣಾ ಸಂಸ್ಥೆಯು ಜನರು ಮನೆಗೆ ಮರಳಬಹುದು. ಆದರೆ, ಕಡಲ ತೀರಕ್ಕೆ ಹೋಗಬಾರದು ಎಂದು ಸಲಹೆ ಮಾಡಿತು.

2011ರಲ್ಲಿ ಕ್ರೈಸ್ಟ್‌ಚರ್ಚ್ ಬಳಿ ಸಂಭವಿಸಿದ 6.3 ತೀವ್ರತೆಯ ಭೂಕಂಪನದಲ್ಲಿ 185 ಮಂದಿ ಮೃತಪಟ್ಟಿದ್ದರು. ಅಲ್ಲದೆ ಅಪಾರ ಹಾನಿ ಸಂಭವಿಸಿತ್ತು.

## ಷೇರುಪೇಟೆ ವಹಿವಾಟು




## ಎನ್ಎಸ್ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 15,080 |
| ಇಂದಿನ ಅಂತ್ಯ | 14,938 |
| ▼ | 142 |
| ದಿನದ ಗರಿಷ್ಠ | 15,092 |

## ವಿನಿಮಯ ದರ

| | |
|---|---|
| $ ಡಾಲರ್ | 73.02 |
| £ ಪೌಂಡ್ | 101.01 |
| € ಯುರೊ | 87.01 |
| ¥ ಯೆನ್ (100ಕ್ಕೆ) | 67.69 |

## ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

| | |
|---|---|
| 100 ಮೊಟ್ಟೆಗೆ | ₹415 |
| 12 ಮೊಟ್ಟೆಗೆ | ₹55 |

ಮೈಸೂರು

| | |
|---|---|
| 100 ಮೊಟ್ಟೆಗೆ | ₹418 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1490 (1520) |
| ಸೋಯಾ (ರಿಫೈನ್ಡ್) | ₹1185(1182) |
| ಸೂರ್ಯಕಾಂತಿ (ರಿಫೈನ್ಡ್) | ₹1620 (1610) |
| ಪಾಮೋಲಿನ್ | ₹1178 (1175) |

# ತೈಲ ಉತ್ಪಾದನೆ: ಭಾರತದ ಮನವಿ ಕಡೆಗಣಿಸಿದ ಒಪೆಕ್

ನವದೆಹಲಿ (ಪಿಟಿಐ): ಕಚ್ಚಾ ತೈಲ ಉತ್ಪಾದನೆ ಮೇಲೆ ಹೇರಿರುವ ನಿಯಂತ್ರಣಗಳನ್ನು ಸಡಿಲಿಸಬೇಕು ಎಂದು ಭಾರತ ಮಾಡಿದ್ದ ಮನವಿಯನ್ನು ತೈಲ ರಫ್ತು ರಾಷ್ಟ್ರಗಳ ಒಕ್ಕೂಟವು (ಒಪೆಕ್) ಗಂಭೀರವಾಗಿ ಪರಿಗಣಿಸಿಲ್ಲ. ಅಲ್ಲದೆ, ಸೌದಿ ಅರೇಬಿಯಾ ದೇಶವು ಭಾರತಕ್ಕೆ, 'ಕಳೆದ ವರ್ಷ ಅತ್ಯಂತ ಕಡಿಮೆ ಬೆಲೆಗೆ ಖರೀದಿಸಿದ್ದ ತೈಲವನ್ನೇ ಬಳಸಿಕೊಳ್ಳಿ' ಎಂದು ಸಲಹೆ ಮಾಡಿದೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶುಕ್ರವಾರ ಪ್ರತಿ ಬ್ಯಾರೆಲ್‌ಗೆ ಶೇಕಡ 1ರಷ್ಟು ಹೆಚ್ಚಳವಾಗಿ, 67.44 ಅಮೆರಿಕನ್ ಡಾಲರ್‌ಗೆ ತಲುಪಿದೆ. ತೈಲೋತ್ಪನ್ನಗಳ ಬೇಡಿಕೆಯಲ್ಲಿ ಇನ್ನಷ್ಟು ಗಟ್ಟಿಯಾದ ಸುಧಾರಣೆ ಕಂಡುಬರುವವರೆಗೂ ಉತ್ಪಾದನೆಯನ್ನು ಹೆಚ್ಚಿಸುವುದು ಬೇಡ ಎಂದು ಒಪೆಕ್ + (ಒಪೆಕ್ ರಾಷ್ಟ್ರಗಳು ಹಾಗೂ ಆ ರಾಷ್ಟ್ರಗಳ ಮಿತ್ರ ರಾಷ್ಟ್ರಗಳ ಒಕ್ಕೂಟ) ಸಂಘಟನೆ ತೀರ್ಮಾನಿಸಿದ ನಂತರ ಈ ಹೆಚ್ಚಳ ಆಗಿದೆ.

ಗುರುವಾರ ನಡೆದ ಒಪೆಕ್ ಸಭೆಗೂ ಮೊದಲು ಕೇಂದ್ರ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಅವರು, 'ತೈಲ ಬೆಲೆ ಸ್ಥಿರವಾಗಿರುವಂತೆ ನೋಡಿಕೊಳ್ಳಲಾಗುತ್ತದೆ ಎಂಬ ಮಾತಿಗೆ ಬದ್ಧರಾಗಿ ನಡೆದುಕೊಳ್ಳಬೇಕು, ಉತ್ಪಾದನೆಯ ಮೇಲೆ ವಿಧಿಸಿರುವ ನಿರ್ಬಂಧಗಳನ್ನು ಸಡಿಲಿಸಬೇಕು' ಎಂದು ಆ ಒಕ್ಕೂಟದ ರಾಷ್ಟ್ರಗಳನ್ನು ಆಗ್ರಹಿಸಿದ್ದರು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹೆಚ್ಚಳ ಆಗುತ್ತಿರುವುದು ಆರ್ಥಿಕ ಪುನಶ್ಚೇತನಕ್ಕೆ ಅಡ್ಡಿಯಾಗಿದೆ ಎಂದು ಪ್ರಧಾನ್ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಭಾರತ ಮಾಡಿಕೊಂಡಿರುವ ಮನವಿಯ ಕುರಿತು ಸೌದಿ ಅರೇಬಿಯಾದ ಇಂಧನ ಸಚಿವ ರಾಜಕುಮಾರ ಅಬ್ದುಲ್‌ಅಜೀಜ್ ಬಿನ್ ಸಲ್ಮಾನ್ ಅವರಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಲಾಯಿತು. ಆಗ ಅವರು, 'ಹಿಂದಿನ ವರ್ಷ ಅತ್ಯಂತ ಕಡಿಮೆ ಬೆಲೆಗೆ ಖರೀದಿಸಿದ್ದ ತೈಲವನ್ನು ಭಾರತವು ತನ್ನ ಸಂಗ್ರಹಾಗಾರದಿಂದ ಹೊರಗೆ ತೆಗೆಯಬೇಕು' ಎಂದು ಉತ್ತರಿಸಿದ್ದಾರೆ.

2020ರ ಏಪ್ರಿಲ್–ಮೇ ಅವಧಿಯಲ್ಲಿ ಭಾರತವು 1.67 ಕೋಟಿ ಬ್ಯಾರೆಲ್ ಕಚ್ಚಾ ತೈಲವನ್ನು ಬ್ಯಾರೆಲ್‌ಗೆ ಸರಾಸರಿ 19 ಅಮೆರಿಕನ್ ಡಾಲರ್ ಪಾವತಿಸಿ ಖರೀದಿಸಿತ್ತು. ಈ ತೈಲ ಬಳಸಿ ವಿಶಾಖಪಟ್ಟಣ ಮತ್ತು ಮಂಗಳೂರಿನಲ್ಲಿರುವ ತೈಲ ಸಂಗ್ರಹಾಗಾರಗಳನ್ನು ಭರ್ತಿ ಮಾಡಲಾಗಿತ್ತು. ಈ ಸಂಗತಿಯನ್ನು ಪ್ರಧಾನ್ ಅವರು 2020ರ ಸೆಪ್ಟೆಂಬರ್‌ನಲ್ಲಿ ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದರು.

# 'ತೈಲ ಬೆಲೆ ಗ್ರಾಹಕರಿಗೆ ಹೊರೆ'

ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ತಗ್ಗಿಸಬೇಕು ಎಂದು ಗ್ರಾಹಕರು ಹೇಳುತ್ತಿರುವುದರಲ್ಲಿ ಅರ್ಥವಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಒಪ್ಪಿಕೊಂಡರು. ಇಂಧನದ ಬೆಲೆ ಇಳಿಯಬೇಕು ಎಂದಾದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟಾಗಿ ಸುಂಕ ಮತ್ತು ತೆರಿಗೆಯನ್ನು ಕಡಿಮೆ ಮಾಡಬೇಕು ಎಂದು ಅವರು ಹೇಳಿದರು.

ಮುಕ್ತ ಮಾರುಕಟ್ಟೆಯಲ್ಲಿ ಮಾರಾಟವಾಗುವ ಪೆಟ್ರೋಲ್ ಬೆಲೆಯಲ್ಲಿ ಶೇಕಡ 60ರಷ್ಟು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಂಕ, ತೆರಿಗೆ ರೂಪದಲ್ಲಿ ಸಂದಾಯವಾಗುತ್ತದೆ. ಡೀಸೆಲ್ ಬೆಲೆಯ ಶೇ 56ರಷ್ಟು ಈ ರೀತಿ ಸಂದಾಯವಾಗುತ್ತದೆ.

ಸುಂಕ ಇಳಿಕೆ ಮಾಡುವಲ್ಲಿ ಮೊದಲ ಹೆಜ್ಜೆಯನ್ನು ಕೇಂದ್ರವೇ ಇರಿಸಲಿದೆಯೇ ಎಂಬ ವಿಚಾರವಾಗಿ ನಿರ್ಮಲಾ ಅವರು ಯಾವುದೇ ಭರವಸೆ ನೀಡಲಿಲ್ಲ. 'ಗ್ರಾಹಕರ ಪಾಲಿಗೆ ಈ ಬೆಲೆಯು ಒಂದು ಹೊರೆ' ಎಂದು ನಿರ್ಮಲಾ ಹೇಳಿದರು.

'ನಾನು ಈ ವಿಚಾರವಾಗಿ ಧರ್ಮಸಂಕಟ ಎಂಬ ಪದ ಬಳಸುತ್ತೇನೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಸುಂಕ ವಿಧಿಸುತ್ತಿರುವುದು ಕೇಂದ್ರ ಮಾತ್ರವೇ ಅಲ್ಲ, ರಾಜ್ಯಗಳೂ ತೆರಿಗೆ ವಿಧಿಸುತ್ತಿವೆ' ಎಂದು ಅವರು ಹೇಳಿದರು. ಕೇಂದ್ರಕ್ಕೆ ಸುಂಕದ ರೂಪದಲ್ಲಿ ಬರುವ ಹಣದಲ್ಲಿ ಶೇ 41ರಷ್ಟು ಮತ್ತೆ ರಾಜ್ಯಗಳಿಗೇ ಹೋಗುತ್ತದೆ ಎಂದರು.

ಪೆಟ್ರೋಲ್ ಮತ್ತು ಡೀಸೆಲ್‌ಅನ್ನು ಜಿಎಸ್‌ಟಿ ವ್ಯವಸ್ಥೆಯಡಿ ತರುವ ವಿಚಾರದಲ್ಲಿ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯೇ ಕೈಗೊಳ್ಳಬೇಕು ಎಂದು ಹೇಳಿದರು.

# 'ಪಿಎಲ್‌ಐನಿಂದ ಉತ್ಪಾದನೆ ಏರಿಕೆ'

ನವದೆಹಲಿ (ಪಿಟಿಐ): 'ಉತ್ಪಾದನೆ ಮತ್ತು ರಫ್ತು ವಹಿವಾಟು ಹೆಚ್ಚಿಸುವ ಉದ್ದೇಶದ ಉತ್ಪಾದನೆ ಆಧಾರಿತ ಪ್ರೋತ್ಸಾಹ (ಪಿಎಲ್‌ಐ) ಯೋಜನೆಯಿಂದಾಗಿ ಮುಂದಿನ ಐದು ವರ್ಷಗಳಲ್ಲಿ ದೇಶೀಯವಾಗಿ ಉತ್ಪಾದನೆ ಪ್ರಮಾಣವು ₹ 38 ಲಕ್ಷ ಕೋಟಿಯಷ್ಟು ಹೆಚ್ಚುವ ನಿರೀಕ್ಷೆಯಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನೀತಿ ಆಯೋಗ ಮತ್ತು ಕೈಗಾರಿಕಾ ಇಲಾಖೆ ಶುಕ್ರವಾರ ಪಿಎಲ್‌ಐ ಯೋಜನೆ ಕುರಿತು ಏರ್ಪಡಿಸಿದ್ದ ವೆಬಿನಾರ್ ಉದ್ದೇಶಿಸಿ ಮಾತನಾಡಿದ ಅವರು, 'ಬಜೆಟ್‌ನಲ್ಲಿ ಪಿಎಲ್‌ಐ ಯೋಜನೆಗಾಗಿ ₹ 2 ಲಕ್ಷ ಕೋಟಿಯನ್ನು ಮುಂದಿನ ಐದು ವರ್ಷಗಳ ಅವಧಿಗೆ ಸರ್ಕಾರ ನಿಗದಿಪಡಿಸಿದೆ. ಯೋಜನೆಯಿಂದಾಗಿ ಉತ್ಪಾದನೆ ಜೊತೆಗೆ ಯೋಜನೆಯ ಲಾಭ ಪಡೆಯುವ ಕೆಲಸಗಾರರ ಸಂಖ್ಯೆಯೂ ದುಪ್ಪಟ್ಟಾಗಲಿದ್ದು, ಉದ್ಯೋಗಾವಕಾಶಗಳು ಹೆಚ್ಚಲಿವೆ ಎಂಬ ನಿರೀಕ್ಷೆ ಇದೆ' ಎಂದು ಹೇಳಿದರು.

# ಚಿನ್ನ: ಆಗಸ್ಟ್‌ಗೆ ಹೋಲಿಸಿದರೆ ₹ 10 ಸಾವಿರ ಇಳಿಕೆ

ಬೆಂಗಳೂರು: ಹಿಂದಿನ ವರ್ಷದ ಆಗಸ್ಟ್ ಮೊದಲ ವಾರದಲ್ಲಿ ಬೆಂಗಳೂರಿನಲ್ಲಿ ಇದ್ದ ಶುದ್ಧ ಚಿನ್ನದ ಬೆಲೆಗೆ ಹೋಲಿಸಿದರೆ, ಈಗ ಶುದ್ಧ ಚಿನ್ನದ ಬೆಲೆಯಲ್ಲಿ ₹ 10,451ರಷ್ಟು ಇಳಿಕೆ ಆಗಿದೆ.

2020ರ ಆಗಸ್ಟ್ 7ರಂದು ಬೆಂಗಳೂರಿನಲ್ಲಿ ಹತ್ತು ಗ್ರಾಂ ಶುದ್ಧ ಚಿನ್ನದ ಬೆಲೆಯು ₹ 56,401 ಆಗಿತ್ತು. ಈಗ 10 ಗ್ರಾಂ ಚಿನ್ನದ ಬೆಲೆಯು ₹ 45,950ಕ್ಕೆ ಕುಸಿದಿದೆ. 'ಚಿನ್ನದ ಮೇಲೆ ಹಣ ಹೂಡಿಕೆ ಮಾಡುವವರು ಈಗ ನಮ್ಮಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಅವರು ಚಿನ್ನದ ಗಟ್ಟಿಗಳನ್ನು ಖರೀದಿಸುತ್ತಿದ್ದಾರೆ' ಎಂದು ಬೆಂಗಳೂರು ಜ್ಯುವೆಲ್ಲರ್ಸ್ ಸಂಘದ ಮಾಜಿ ಅಧ್ಯಕ್ಷ ವೆಂಕಟೇಶ್ ಬಾಬು ತಿಳಿಸಿದರು.

ಲಾಕ್‌ಡೌನ್‌ನನಂತರ ಚಿನ್ನವು ಗರಿಷ್ಠ ಮಟ್ಟ ತಲುಪಿದ್ದ ಸಂದರ್ಭಕ್ಕೆ ಹೋಲಿಸಿದರೆ, ಈಗ ಆಭರಣಗಳ ಖರೀದಿಯಲ್ಲಿ ಕೂಡ ಹೆಚ್ಚಳ ಕಂಡುಬರುತ್ತಿದೆ ಎಂದು ಅವರು ತಿಳಿಸಿದರು. 'ಚಿನ್ನದ ಮೇಲೆ ಹಣ ಹೂಡಿಕೆ ಮಾಡಲು ಇದು ಪ್ರಶಸ್ತ ಕಾಲ ಎಂದು ಅನಿಸುತ್ತಿದೆ. ಬೆಲೆ ಕಡಿಮೆ ಆಗಿರುವುದರಿಂದ ಆಭರಣ ಖರೀದಿ ಬಗ್ಗೆಯೂ ಆಲೋಚಿಸಬಹುದು' ಎಂದು ಅವರು ಹೇಳಿದರು.

'ಚಿನ್ನದ ಬೆಲೆಯಲ್ಲಿ ಏರಿಳಿತ ಸಹಜ. ಚಿನ್ನದ ಆಭರಣ ಖರೀದಿಸುವ ಉದ್ದೇಶವೇ ಬೇರೆ, ಹೂಡಿಕೆಯ ದೃಷ್ಟಿಯಿಂದ ಚಿನ್ನದ ಗಟ್ಟಿ ಖರೀದಿಯೇ ಬೇರೆ. ಚಿನ್ನದಲ್ಲಿ ಹೂಡಿಕೆ ಮಾಡುವವರು ತಮ್ಮ ಒಟ್ಟು ಹೂಡಿಕೆಗಳ ಶೇಕಡ 10ರಿಂದ ಶೇ 15ರಷ್ಟನ್ನು ಮಾತ್ರ ಚಿನ್ನದ ಮೇಲೆ ತೊಡಗಿಸಿದರೆ ಸಾಕು' ಎಂದು ವೈಯಕ್ತಿಕ ಹಣಕಾಸು ಸಲಹೆಗಾರರು ಹೇಳುತ್ತಾರೆ.

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಪ್ರತಿ ಹತ್ತು ಗ್ರಾಂಗೆ ₹ 522ರಷ್ಟು ಇಳಿಕೆಯಾಗಿದ್ದು, ₹ 43,887ಕ್ಕೆ ಮಾರಾಟವಾಗಿದೆ. ಬೆಳ್ಳಿಯ ಬೆಲೆಯಲ್ಲಿ ಕೆ.ಜಿ.ಗೆ ₹ 1,822ರಂತೆ ಇಳಿಕೆ ಆಗಿದೆ. ಕೆ.ಜಿ. ಬೆಳ್ಳಿಯು ₹ 64,805ಕ್ಕೆ ಮಾರಾಟವಾಗಿದೆ.

## ಮುಂಬೈ ಧಾರಣೆ

### ಶೇಂಗಾ

5-3-2021

| | |
|---|---|
| ಜಾವಾ 70/80(ಹೊಸ) | 10350-10400 |
| ಜಾವಾ 80/90(ಹೊಸ) | 9950-10000 |
| ದಪ್ಪ ಮಧ್ಯಪ್ರದೇಶ(ಹೊಸ) | 8800-8900 |
| ದಪ್ಪ ಗುಜರಾತ್(ಹೊಸ) | 9700-9800 |

### ಶೇಂಗಾ ಎಣ್ಣೆ (10 ಕೆಜಿಗೆ)

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1500 (1530) |
| ಒಂದು ವಾರದ ಡೆಲಿವರಿ | 1495 (1525) |
| ಸೋಯಾ ಕಚ್ಚಾ | 1150 (1140) |
| ಪಾಮ್ ವಾರದ ಡೆಲಿವರಿ | 1176 (1173) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1580 (1570) |

### ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
44,350 (44,600)
ಬೆಳ್ಳಿ ಕೆ.ಜಿ
65,150 (66,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಟಿವಿಎಸ್ ಮೋಟರ್ ಕಂಪನಿಯು 'ಟಿವಿಎಸ್ ಸ್ಟಾರ್ ಸಿಟಿ+ 2021'ರ ಆವೃತ್ತಿಯನ್ನು ರೊಟೊ ಪೆಟಲ್ ಡಿಸ್ಕ್ ಬ್ರೇಕ್ ಸೌಲಭ್ಯದೊಂದಿಗೆ ಬಿಡುಗಡೆ ಮಾಡಿದೆ. ಡಿಸ್ಕ್ ಮಾದರಿಯು ಸದ್ಯಕ್ಕೆ ಬ್ಲಾಕ್‌ರೆಡ್ ಡ್ಯುಯೆಲ್ ಟೋನ್ ಕಲರ್ ಥೀಮ್‌ನಲ್ಲಿ ಲಭ್ಯವಿದ್ದು, ರಾಜ್ಯದಲ್ಲಿ ಎಕ್ಸ್‌ಷೋರೂಂ ದರ ₹ 67,965 ಇದೆ. ಈ ಆವೃತ್ತಿಯು ಇಟಿಎಫ್‌ಐ ಟೆಕ್ನಾಲಜಿಯನ್ನು ಹೊಂದಿದ್ದು, ಶೇ 15ರಷ್ಟು ಅಧಿಕ ಮೈಲೇಜ್ ನೀಡಲಿದೆ ಎಂದು ಕಂಪನಿ ತಿಳಿಸಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 950-1000 |
| ನಡುಗೋಲು | 1000-1100 |
| ರಾಶಿ | 1200-1300 |
| ರಾಶಿ ಉತ್ತಮ | 1300-1400 |
| ಜರಡಿ | 1500-1600 |
| ಹೆರಕಿದ್ದು | 2000-2100 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1700-1750 |
| ಹಸಿರು ಅತಿ ಉತ್ತಮ | 1900-2000 |
| ಕಾಳು ಮೆಣಸು | 345 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-40500 |
| ಹಳತು | 42500-50500 |
| **ಕಾರ್ಕಳ** | |
| ಹೊಸತು | 35000-40000 |
| ಹಳತು | 45000-50500 |
| **ಕುಮಟಾ** | |
| ಚಿಪ್ಪು | 26869-28869 |
| ಕೋಕ | 16569-28019 |
| ಫ್ಯಾಕ್ಟರಿ | 14019-17829 |
| ಹಳೆಚಾಲಿ | 39099-41599 |
| ಹೊಸಚಾಲಿ | 34129-38119 |
| **ಸಿದ್ದಾಪುರ** | |
| ಬಿಳಿಗೋಟು | 22389-30649 |
| ಚಾಲಿ | 34239-37299 |
| ಕೋಕ | 20999-30099 |
| ಕೆಂಪುಗೋಟು | 21599-30699 |
| ರಾಶಿ | 39609-41699 |
| ತಟ್ಟಿಬೆಟ್ಟೆ | 30019-40699 |
| **ಯಲ್ಲಾಪುರ** | |
| ಬಿಳಿಗೋಟು | 24612-30705 |
| ಕೋಕ | 20899-29299 |
| ಚಾಲಿ | 31091-40269 |
| ಕೆಂಪುಗೋಟು | 26189-32799 |
| ರಾಶಿ | 39989-46000 |
| ತಟ್ಟಿಬೆಟ್ಟೆ | 30999-39869 |
| **ಶಿವಮೊಗ್ಗ ಎಪಿಎಂಸಿ** | |
| ಬೆಟ್ಟೆ | 42199-42699 |
| ಗೊರಬಲು | 18166-31850 |
| ರಾಶಿ ಇಡಿ | 36199-41899 |
| ಸರಕು | 46709-64240 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ (ಸಿ.ಬಿ) | 271-373 |
| ದ್ವಿತಳಿ (ಬಿ.ವಿ) | 318-461 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 10050 | 9900 | 9950 | 132.15ಸೆಂಟ್ಸ್ |
| ಎಸಿ | 4030 | 3900 | 3900 | |
| ಆರ್‌ಪಿ | 5250 | 5250 | 5250 | ಲಂಡನ್ |
| ಆರ್‌ಸಿ | 3000 | 3100 | 2960 | 1406ಡಾಲರ್ಸ್ |

# ತಲೆಯೊಳಗೆ ಇಳಿಬಿಟ್ಟ ಹುಳಗಳು!

**ನಾವು ನೋಡಿದ ಸಿನಿಮಾ**

**ಚಿತ್ರ: ಹೀರೋ**
- ನಿರ್ಮಾಣ: ರಿಷಬ್ ಶೆಟ್ಟಿ
- ನಿರ್ದೇಶನ: ಎಂ. ಭರತ್ ರಾಜ್
- ತಾರಾಗಣ: ರಿಷಬ್ ಶೆಟ್ಟಿ, ಗಾನವಿ ಲಕ್ಷ್ಮಣ್, ಪ್ರಮೋದ್ ಶೆಟ್ಟಿ, ಉಗ್ರಂ ಮಂಜು.

ಗಾನವಿ, ರಿಷಬ್ ಶೆಟ್ಟಿ

**ರಾಮಾಯಣದ** ಮರುಕಟ್ಟುವಿಕೆ ನಡೆಯುತ್ತಲೇ ಇರುತ್ತದೆ. ರಾಮ, ಸೀತೆ, ರಾವಣ ಈ ಮೂರೂ ಪಾತ್ರಗಳು ಸ್ಥಿರವಾಗಿದ್ದರೂ ಚರವೂ ಆಗಬಲ್ಲ ಸಂಕೇತಗಳು. ನಿರ್ದೇಶಕ ಭರತ್ ರಾಜ್ ಅವರಿಗೆ ಒಬ್ಬ ರಾವಣ ಬೇಕಿದೆ. ಅವನಿಗೆ ಬಿಲ್ಡಪ್ ಕೊಡಲು ಸಂಸ್ಕೃತದ ಸಾಲುಗಳ ಪಠಿಸುವ ಇನ್ನೊಬ್ಬ ಕಾರ್ಟೂನಿನಂಥ ಭಂಟನ ಅಗತ್ಯವೂ ಉಂಟು. ರಾಮ ಸದ್ಗುಣ ಸಂಪನ್ನನೇನೂ ಆಗಬೇಕಿಲ್ಲ. ಸೀತೆ ಸ್ವಯಂ ಹತ್ಯೆಗೈಯಬಲ್ಲ ಹೊಸಕಾಲದವಳಾದರೂ ನಡೆಯುತ್ತದೆ. ವಾನರ ಸೇನೆ ಯಾವುದು? ಅದು ಇರದಿದ್ದರೂ ಖಳನ ಭಂಟರಿಂದಲೇ ಒಂಚೂರು ಕಪಿಚೇಷ್ಟೆ ಮಾಡಿಸಿದರಾಯಿತು.

ಹೀಗೆ ಹಳೆಕಾಲದ ಸಂಕೇತಗಳನ್ನು ಕಾರ್ಟೂನು ಕ್ಯಾರಿಕೇಚರ್‌ಗಳಂತೆ ಮಾರ್ಪಡಿಸಿ, ರಾಮಾಯಣವಲ್ಲದ ರಾಮಾಯಣವನ್ನು ಭರತ್ ರಾಜ್ ಕಟ್ಟಿಕೊಟ್ಟಿದ್ದಾರೆ. ಸಿನಿಮಾ ಆಗೀಗ ಫಕ್ಕನೆ ಕಚಗುಳಿ ಇಡುತ್ತದೆ. ಶಿರಾಡಿ ಘಾಟಿಯಂಥ ತಿರುವುಗಳು ಅತಿಯಾದೆಡೆಯಲ್ಲಿ ತುಸು ವಾಂತಿ ಬಂದಂತೆ ಆದೀತು. ನಾಯಕ–ನಾಯಕಿಯತ್ತ ಗುರಿ ಮಾಡಿದ ಬಂದೂಕಿನ ನಳಿಕೆಗಳು. ಅವುಗಳಿಂದ ಹೊಮ್ಮಿದ ಎಲ್ಲಾ ಗುಂಡುಗಳೂ ಮರಕ್ಕೇ ಏಕೆ ತಾಕಬೇಕು ಎಂದು ತರ್ಕಕ್ಕಿಳಿಯಕೂಡದು. ಸುಮ್ಮನೆ ಮಬ್ಬುಬೆಳಕಲ್ಲಿನ ಕಲರ್ ಗ್ರೇಡಿಂಗ್, ಹಿನ್ನೆಲೆ ಸಂಗೀತದ 'ಎಂಪವರಿಂಗ್' ನೋಡಬೇಕು–ಕೇಳಬೇಕು.

ತಲೆಬುಡವಿಲ್ಲದಂತೆ ಚಿತ್ರಕಥೆ ಹೆಣೆದು, ರೋಲರ್ ಕೋಸ್ಟರ್ ರೈಡನ್ನಾಗಿಸುವ ನಿರೂಪಣಾ ತಂತ್ರ ಚಲನಚಿತ್ರರಂಗಕ್ಕೆ ಹೊಸತೇನೂ ಅಲ್ಲ. ಘನರೌಡಿಗಳನ್ನು ಕ್ಯಾರಿಕೇಚರ್‌ಗಳಂತೆ ತೋರಿಸಿಯೇ 'ವೆಲ್‌ಕಮ್' ತರಹದ ಹಿಂದಿ ಚಿತ್ರ ಗೆದ್ದಿದ್ದು. ಇಲ್ಲಿಯೂ ನಿರ್ದೇಶಕರು ಅಂಥದ್ದೇ ಮನರಂಜನೆಯ ಹಾದಿ ಆರಿಸಿಕೊಂಡಿದ್ದಾರೆ.

ಅಮರಪ್ರೇಮಿಯಂಥವನೂ, ದೇವದಾಸನೂ, ಮದ್ಯ ಕಂಡೊಡನೆ ಜೊಲ್ಲೇಶ್ವರನೂ ಆಗುವ ನಾಯಕನ ಪಾತ್ರದ ರೂಹು ಏನು ಎಂದು ನಾವೆಲ್ಲ ಪದೇ ಪದೇ ತಲೆಕೆರೆದುಕೊಳ್ಳಬೇಕು. ಅವನ ಪ್ರೀತಿಯಿದ್ದೂ ರಾವಣನ ಅಡ್ಡಕ್ಕೆ ನಾಯಕಿ ಹೇಗೆ ಸೇರಿಕೊಂಡಳೋ ಎನ್ನುವುದೂ ರಟ್ಟೇ ಆಗದ ಗುಟ್ಟು. ರಾವಣನ ಮನೆಯ ರೆಡ್‌ಆಕ್ಸೈಡ್ ನೆಲದ ಮೇಲೆ ತೆವಳುವ ಮೊಸಳೆ. ಅದಕ್ಕೆ ಚುಚ್ಚುಮದ್ದು ಕೊಡಲು ಬರುವ ಡಾಕ್ಟರು. ಮನೆಯಲ್ಲಿನ ಹಳವಂಡಗಳನ್ನೆಲ್ಲ ಕಂಡೂ ತನ್ನಪಾಡಿಗೆ ತಾನು ಪಾಕ ಸಿದ್ಧಪಡಿಸುವ ವಾಚಾಳಿ ಅಡುಗೆ ಭಟ್ಟ. ಸಾಕಿಕೊಂಡ ರೌಡಿಗೆ ಒಂದು ಹೆಚ್ಚುವರಿ ಮೊಟ್ಟೆ ಬೇಕೆಂದರೂ ಮನೆಯೊಡನಿಂದ ಸಹಿ ಹಾಕಿಸಿಕೊಂಡು ಬರಬೇಕೆಂದು ತಿಳಿಸುವ ಲೆಕ್ಕದವನು... ಇವರೆಲ್ಲರ ಪಾತ್ರಗಳು ಅರುಹುವುದಾದರೂ ಏನನ್ನು ಎಂದು ಮತ್ತೊಮ್ಮೆ ತಲೆಕೆರೆದುಕೊಳ್ಳಬೇಕು.

ಕಾರ್ಟೂನುಗಳನ್ನು ನೋಡುವಾಗ ಮೆದುಳಿನೊಳಗೆ ಸಂಭವಿಸುವ ರಾಸಾಯನಿಕ ಕ್ರಿಯೆ ಆ ಕ್ಷಣಕ್ಕೆ ಮಜಾ–ಮುದ ಕೊಡುತ್ತದೆ. ಹಾಗೆಯೇ ಈ ಸಿನಿಮಾದಲ್ಲೂ ಅನೇಕ ಸನ್ನಿವೇಶಗಳಲ್ಲಿ ಆಗುತ್ತದೆ. ಅಂದಮಾತ್ರಕ್ಕೆ ಈ ಚಿತ್ರದ ಶಿಲ್ಪ ಗಟ್ಟಿ ಎಂದರ್ಥವಲ್ಲ.

ಅಭಿನಯದಲ್ಲಿ ರಿಷಬ್ ಶೆಟ್ಟಿ ಟೈಮಿಂಗ್ ಮಜಾ ಕೊಡುತ್ತದೆ. ನಾಯಕಿ ಗಾನವಿಯ ಅಳುವಿನಲ್ಲೂ ಮೂಗುತಿ ಮಿಂಚಿನ ಸೌಂದರ್ಯ ಕಂಡರೆ ಪ್ರೇಕ್ಷಕರ ತಪ್ಪಲ್ಲ. ಪ್ರಮೋದ್ ಶೆಟ್ಟಿ ಹೆಣವಾಗಿಯೂ ಚೆನ್ನಾಗಿ ನಟಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತದ ಹಾಡುಗಳು ಅರ್ಥಪೂರ್ಣವೂ ಕಾಡುವಂತೆಯೂ ಇವೆ. ಹಿನ್ನೆಲೆ ಸಂಗೀತದ ಅವರ ಕಾಣ್ಕೆಯೂ ದೊಡ್ಡದು. ಅರವಿಂದ್ ಕಶ್ಯಪ್ ಸಿನಿಮಾಟೊಗ್ರಫಿ ದೃಶ್ಯತೀವ್ರತೆಯನ್ನು ಹೆಚ್ಚುಮಾಡಿದೆ.

ಇಡೀ ಸಿನಿಮಾ ನೋಡಿದ ಮೇಲೆ ಇದು ಯಾವ ಜಾನರ್ ಎಂಬ ಹುಳ ಕೊರೆಯತೊಡಗುತ್ತದಲ್ಲ; ಅದನ್ನು 'ಫ್ಯಾಂಟಸಿ'ಯೆಂದೋ, ಜಾನಪದವೆಂದೋ ನಮಗೆ ನಾವೇ ಸಮಾಧಾನಿಸಿಕೊಳ್ಳಬೇಕಷ್ಟೆ.

**ವಿಶಾಖ ಎನ್.**

# ಫೈನಲ್‌ಗೆ ಪ್ರತಿಮಾ, ವೀರಸಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಅಗ್ರಶ್ರೇಯಾಂಕದ ಆಟಗಾರ್ತಿ ಕರ್ನಾಟಕದ ಪ್ರತಿಮಾ ರಾವ್ ಹಾಗೂ ಎರಡನೇ ಶ್ರೇಯಾಂಕಿತ ವೀರಸಾಮಿ ಶೇಖರ್ ಅವರು ಕೆಎಸ್‌ಎಲ್‌ಟಿಎ–ಎಐಟಿಎ ವ್ಹೀಲ್‌ಚೇರ್ ಟೆನಿಸ್ ಟೂರ್ನಿಯ ಫೈನಲ್‌ಗೆ ಕಾಲಿಟ್ಟರು.

ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿ) ಅಂಗಳದಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಪ್ರತಿಮಾ ಅವರು 6–4, 6–1ರಿಂದ ಕರ್ನಾಟಕದ ನಳಿನಾ ಕುಮಾರಿ ಅವರನ್ನು ಸೋಲಿಸಿದರು. ನಾಲ್ಕರ ಘಟ್ಟದ ಮತ್ತೊಂದು ಹಣಾಹಣಿಯಲ್ಲಿ ರಾಜ್ಯದ ಕೆ.ಪಿ.ಶಿಲ್ಪಾ 6-0, 6-0ಯಿಂದ ಎ.ಸುಧಾ ಎದುರು ಗೆದ್ದು ಪ್ರಶಸ್ತಿ ಸುತ್ತು ತಲುಪಿದರು.

ಪುರುಷ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ವೀರಸಾಮಿ 6-3, 6-0ರಿಂದ ಮೂರನೇ ಶ್ರೇಯಾಂಕದ ತಮಿಳುನಾಡು ಆಟಗಾರ ಕರುಣಾಕರನ್ ಕಾರ್ತಿಕ್ ಸವಾಲು ಮೀರಿದರು. ಪ್ರಶಸ್ತಿಗಾಗಿ ಅವರು ನಾಲ್ಕನೇ ಶ್ರೇಯಾಂಕದ, ತಮಿಳುನಾಡಿನ ಸುಬ್ರಮಣ್ಯನ್ ಬಾಲಚಂದ್ರ ಅವರೊಂದಿಗೆ ಸೆಣಸಲಿದ್ದಾರೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಸುಬ್ರಮಣ್ಯನ್ 6-1, 6-2ರಿಂದ ತಮ್ಮದೇ ರಾಜ್ಯದ ದುರೈ ಮರಿಯಪ್ಪನ್ ಅವರನ್ನು ಮಣಿಸಿದರು.

# ಈಜು: ಅನೀಶ್, ಸುವನಾ ದಾಖಲೆ

ಪ್ರಜಾವಾಣಿ ವಾರ್ತೆ

ಅನೀಶ್ ಗೌಡ

ಬೆಂಗಳೂರು: ಪೂಜಾ ಈಜುಕೇಂದ್ರದ ಅನೀಶ್ ಎಸ್.ಗೌಡ ಮತ್ತು ಡಾಲ್ಫಿನ್ ಈಜುಕೇಂದ್ರದ ಸುವನಾ ಭಾಸ್ಕರ್ ಅವರು ರಾಜ್ಯ ಈಜು ಸಂಸ್ಥೆಯು ಡಾಲ್ಫಿನ್ ಅಕ್ವಾಟಿಕ್ಸ್, ಪಡುಕೋಣೆ–ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ಆಯೋಜಿಸಿರುವ ಈಜುಕೂಟದ ಮೊದಲ ದಿನ ದಾಖಲೆ ಬರೆದರು.

ಬಾಲಕರ ಗುಂಪು 1ರಲ್ಲಿ ಸ್ಪರ್ಧಿಸಿದ ಅನೀಶ್ 400 ಮೀಟರ್ಸ್ ಮತ್ತು 800 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ದಾಖಲೆ ಮಾಡಿದರೆ ಸುವನಾ ಭಾಸ್ಕರ್ ಬಾಲಕಿಯರ ಗುಂಪು ಒಂದರ 100 ಮೀಟರ್ಸ್ ಮತ್ತು 200 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ತಮ್ಮದೇ ದಾಖಲೆ ಉತ್ತಮಪಡಿಸಿಕೊಂಡರು.

ವಿಜಯನಗರ ಈಜು ಕೇಂದ್ರದ ಲಿಖಿತ್ ಎಸ್.ಪಿ ಮತ್ತು ಬಸವನಗುಡಿ ಈಜುಕೇಂದ್ರದ ಸಲೋನಿ ದಲಾಲ್ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 100 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದರು.

ಮೊದಲ ದಿನದ ಫಲಿತಾಂಶಗಳು: ಪುರುಷರ 1500 ಮೀಟರ್ಸ್ ಫ್ರೀಸ್ಟೈಲ್: ಕೌಸ್ತುಭ್ ಅಗರವಾಲ್ (ಬಸವನಗುಡಿ ಈಜುಕೇಂದ್ರ–ಬಿಎಸಿ)–1.ಕಾಲ:17:28.65, ಶ್ರಮಿತ್ ಶ್ರೀನಿವಾಸ್ (ಬಿಎಸಿ)–2, ಶಶಿಕಿರಣ್ (ಬಿಎಸ್‌ಆರ್‌ಸಿ)–3. ಬಾಲಕರ ಗುಂಪು1, 1500 ಮೀಟರ್ಸ್ ಫ್ರೀಸ್ಟೈಲ್: ಅನೀಶ್ ಎಸ್.ಗೌಡ (ಪೂಜಾ ಈಜುಕೇಂದ್ರ)–1. ಕಾಲ: 16:47.56, ಧ್ಯಾನ್ ಬಾಲಕೃಷ್ಣ (ಜಿಎಫ್‌ಆರ್‌ಎವೈ)–2, ಶಿವಾಂಕ್ (ಜಿಎಎಫ್‌ಆರ್‌ಎವೈ)–3. ಬಾಲಕರ ಗುಂಪು2, 1500 ಮೀಟರ್ಸ್ ಫ್ರೀಸ್ಟೈಲ್: ಅಮೋಘ್ (ಬಿಎಸಿ)–1. ಕಾಲ: 17:18.26, ಪವನ್ ಡಿ (ಪೂಜಾ ಅಕ್ವಾಟಿಕ್ ಸೆಂಟರ್)–2, ಧೋನೀಶ್ ಎನ್ (ವಿಜಯನಗರ ಈಜುಕೇಂದ್ರ)–3. ಸೀನಿಯರ್ ಪುರುಷರ 400 ಮೀಟರ್ಸ್ ಫ್ರೀಸ್ಟೈಲ್: ಕೌಸ್ತುಭ್ ಅಗರವಾಲ್ (ಬಿಎಸಿ)–1.ಕಾಲ:4:25.34. ಶ್ರಮಿತ್ ಶ್ರೀನಿವಾಸ್ (ಬಿಎಸಿ)–2, ಶಶಿಕಿರಣ್ (ಬಿಎಸ್‌ಆರ್‌ಸಿ)–3. ಬಾಲಕರ 400 ಮೀಟರ್ಸ್ ಗುಂಪು 1 ಫ್ರೀಸ್ಟೈಲ್: ಅನೀಶ್ ಗೌಡ (ಪೂಜಾ ಈಜುಕೇಂದ್ರ)–1. ಕಾಲ: 4:08.92 (ಹೊಸ ಕೂಟ ದಾಖಲೆ. ಹಳೆಯದು ಸೌರವ್ ಸಾಂಗ್ವೇಕರ್, 4:10.85). ಶಾನ್ ಗಂಗೂಲಿ (ಬಿಎಸಿ)–2, ಶಿವಾಂಕ್ (ಜಿಎಎಫ್‌ಆರ್‌ಎವೈ)–3. ಬಾಲಕರ 100 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಶಂಕರ್ (ಡಾಲ್ಫಿನ್)–1. ಕಾಲ: 1:07.41 (ಕೂಟ ದಾಖಲೆ), ಇಂದ್ರಪ್ರಕಾಶ್ (ಪೂಜಾ)–2, ಸಾಹಿಲ್ ದಲಾಲ್ (ಬಿಎಸಿ)–3. ಪುರುಷರ 100 ಮೀ ಬ್ಯಾಕ್‌ಸ್ಟ್ರೋಕ್:ಶ್ರೀಹರಿ ನಟರಾಜ್ (ಡಾಲ್ಫಿನ್)–1. ಕಾಲ: 55.37 (ಕೂಟ ದಾಖಲೆ), ಶಿವ (ಬಿಎಸಿ)–2.

ಬಾಲಕಿಯರ ಗುಂಪು1ರ 200 ಮೀ ಬ್ಯಾಕ್‌ಸ್ಟ್ರೋಕ್: ಸುವನಾ ಭಾಸ್ಕರ್ (ಡಾಲ್ಫಿನ್)–1. ಕಾಲ: 2:25.58 (ಕೂಟ ದಾಖಲೆ), ರಿತು ಭರಮರಡ್ಡಿ (ಬಿಎಸಿ)–2, ಭೂಮಿಕಾ (ಡಿಕೆವಿ)–3. ಮಹಿಳೆಯರ 100 ಮೀ ಬ್ಯಾಕ್‌ಸ್ಟ್ರೋಕ್: ಸುವನಾ ಭಾಸ್ಕರ್ (ಡಾಲ್ಫಿನ್)–1. ಕಾಲ: 1:06.09 (ಕೂಟ ದಾಖಲೆ), ನೀನಾ ವೆಂಕಟೇಶ್ (ಡಾಲ್ಫಿನ್)–2, ರಿತು ಭರಮರಡ್ಡಿ (ಬಿಎಸಿ)–3.

## ಬೆಂಗಳೂರು ರೇಸ್

# 'ಬೆಲ್ಲಾಟಾರ್' ಗೆಲ್ಲುವ ನಿರೀಕ್ಷೆ

'ಡಾಕ್ಟರ್ ಸಿ ವಿಠ್ಠಲ್ ಮೆಮೋರಿಯಲ್ ಟ್ರೋಫಿ' ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು 'ಬೆಲ್ಲಾಟಾರ್' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಪ್ರೈಡ್‌ವಿಶ್ 6, ಗ್ಲೋರಿಯಸ್ ಡೇಸ್ 3, ನವಾ 1
2ನೇ ರೇಸ್: ಒಬ್ಸಿಡಿಯನ್ 5, ಪರ್ಫೆಕ್ಟ್ ಎಂಪ್ರೆಸ್ 10, ಇಟರ್ನಲ್ ಬ್ಲೇಜ್ 9
3ನೇ ರೇಸ್: ಇನ್ ಎ ಬ್ರೀಝ್ 2, ಗೋಲ್ಡನ್ ಮೆಮರಿ 1, ದಿ ಸಾವರಿನ್ ಆರ್ಬ್ 5
4ನೇ ರೇಸ್: ಪ್ಯಾಶ್ಚಿಷ್ 8, ಸನ್ ಸ್ವಾಶ್ 1, ಫಾರ್ಚುನೀರ್ 12
5ನೇ ರೇಸ್: ಪಾಪಾರಾಜಿ 1, ಸ್ಮಿತ್‌ಸೋನಿಯನ್ 2, ರೋಸಿ ರಾಪುನ್ಜೆಲ್ 3
6ನೇ ರೇಸ್: ಏಸೆರಾಸ್ 4, ಸ್ಕಾಫೆನ್‌ಬರ್ಗ್ 1, ಪೋರ್ಟ್ ಆಫ್ ಬ್ಯೂಟಿ 9
7ನೇ ರೇಸ್: ಬೆಲ್ಲಾಟಾರ್ 2, ಜನರಲ್ ಪ್ಯಾಟನ್ 7, ಅನ್ಸಾಲ್ಡೊ 10
8ನೇ ರೇಸ್: ಪರ್ಫೆಕ್ಟ್ ರೆಂಡಿಷನ್ 7, ಮಿಸ್ಟೀರಿಯನ್ 2, ಸೀ ಆಫ್ ಕಾರ್ಟೆಜ್ 4
9ನೇ ರೇಸ್: ಟೈಗರ್ ರಿಟರ್ನ್ಸ್ 5, ಅನಾಕಿನಿ 1, ಹಬನೆರೋ 8

**ಉತ್ತಮ ಬೆಟ್: ಇನ್ ಎ ಬ್ರೀಜ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ | 3ನೇ ಟ್ರಿಬಲ್ |
|---|---|---|---|
| 5,6,7,8,9 | 1,2,3 | 4,5,6 | 7,8,9 |

# ಬ್ಯಾಡ್ಮಿಂಟನ್: ಸಿಂಧುಗೆ ಜಯ

ಬಾಸೆಲ್ (ಪಿಟಿಐ): ಭಾರತದ ಪಿ.ವಿ. ಸಿಂಧು ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ತಲುಪಿದರು. ಶುಕ್ರವಾರ ಎಂಟರಘಟ್ಟದಲ್ಲಿ ಅವರು 21-16 23-21ರಿಂದ ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗಪನ್ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಬಿ.ಸಾಯಿ ಪ್ರಣೀತ್ ಅವರು 14-21 17-21ರಿಂದ ಮಲೇಷ್ಯಾದ ಲೀ ಜಿ ಜಿಯಾ ಎದುರು ಸೋತರು.

ಮಿಶ್ರ ಡಬಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಅಶ್ವಿನಿ ಪೊನ್ನಪ್ಪ ಜೋಡಿಯು 17-21 21-16 8-21ರಿಂದ ಮಲೇಷ್ಯಾದ ತಾನ್ ಕಿಯಾನ್ ಮೆಂಗ್–ಲಾಯ್ ಪೆ ಜಿಂಗ್ ಎದುರು ಸೋತಿತು.



## ಮೊಟೇರಾ ಟೆಸ್ಟ್: ವಾಷಿಂಗ್ಟನ್ ಸುಂದರ್ ಅರ್ಧಶತಕದ ಸೊಬಗು; ಭಾರತಕ್ಕೆ 89 ರನ್‌ಗಳ ಮುನ್ನಡೆ

# ರಿಷಭ್ ಶತಕದ ಭರಾಟೆಗೆ ಇಂಗ್ಲೆಂಡ್ ಸುಸ್ತು

ಪ್ರಜಾವಾಣಿ ವಾರ್ತೆ

**ಅಹಮದಾಬಾದ್:** ರಿಷಭ್ ಪಂತ್ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ ಎರಡೂವರೆ ವರ್ಷಗಳ ನಂತರ ಸ್ವದೇಶದ ಅಂಗಳದಲ್ಲಿ ಶತಕ ದಾಖಲಿಸಿದರು. ಜೊತೆಗೆ ಭಾರತ ತಂಡವನ್ನೂ ಸಂಕಷ್ಟದಿಂದ ಪಾರು ಮಾಡಿದರು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ಎರಡನೇ ದಿನ ಆತಿಥೇಯರು ಅಲ್ಪಮೊತ್ತಕ್ಕೆ ಕುಸಿಯುವ ಹಂತದಲ್ಲಿದ್ದಾಗ ರಿಷಭ್ (101; 118ಎಸೆತ) ಅಪದ್ಬಾಂದವರಾದರು. ವಾಷಿಂಗ್ಟನ್ ಸುಂದರ್ (ಬ್ಯಾಟಿಂಗ್ 60; 117ಎಸೆತ) ಅವರೊಂದಿಗೆ ಏಳನೇ ವಿಕೆಟ್ ಜೊತೆಯಾಟದಲ್ಲಿ 113 ರನ್ ಗಳಿಸಿದ್ದು ಭಾರತದ ಹೋರಾಟಕ್ಕೆ ಮರುಜೀವ ತುಂಬಿತು. ಮೊದಲ ಇನಿಂಗ್ಸ್‌ನಲ್ಲಿ 89 ರನ್‌ಗಳ ಮುನ್ನಡೆ ಸಾಧಿಸಿದೆ.

ಗುರುವಾರ ಟಾಸ್ ಗೆದ್ದ ಇಂಗ್ಲೆಂಡ್ ತಂಡವು 205 ರನ್ ಗಳಿಸಿ ಆಲೌಟ್ ಆಗಿತ್ತು. ಅದಕ್ಕುತ್ತರವಾಗಿ ಆತಿಥೇಯ ಬಳಗವು 94 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 294 ರನ್ ಗಳಿಸಿದೆ. ಅಲ್‌ರೌಂಡರ್ ವಾಷಿಂಗ್ಟನ್ ಮತ್ತು ಅಕ್ಷರ್ ಪಟೇಲ್ (ಬ್ಯಾಟಿಂಗ್ 11) ಕ್ರೀಸ್‌ನಲ್ಲಿದ್ದಾರೆ.

ರಿಷಭ್ ಪಂತ್ ಕ್ರೀಸ್‌ಗೆ ಬರುವ ಮುನ್ನ ಭಾರತ ತಂಡವು 80 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆರಂಭಿಕ ಬ್ಯಾಟ್ಸ್‌ಮನ್ ರೋಹಿತ ಶರ್ಮಾ ಅವರೊಂದಿಗೆ ಸೇರಿದ ಪಂತ್ ಆತ್ಮವಿಶ್ವಾಸದ ಸಂಚಲನ ಮೂಡಿಸಿದರು. ಚೇತೇಶ್ವರ್ ಪೂಜಾರ ವಿಕೆಟ್ ಕಬಳಿಸಿದ್ದ ಸ್ಪಿನ್ನರ್ ಜ್ಯಾಕ್ ಲೀಚ್, ವಿರಾಟ್ ಕೊಹ್ಲಿ ಸೊನ್ನೆ ಸುತ್ತಲು ಕಾರಣರಾದ ಬೆನ್ ಸ್ಟೋಕ್ಸ್ ಮತ್ತು ಅಜಿಂಕ್ಯ ರಹಾನೆ (27 ರನ್) ವಿಕೆಟ್ ಗಳಿಸಿದ ಜೇಮ್ಸ್ ಆ್ಯಂಡರ್ಸನ್ ಅವರಿಗೆ ರಿಷಭ್ ಬಿಸಿ ಮುಟ್ಟಿಸಿದರು.

ರೋಹಿತ್ ಜೊತೆಗೆ 41 ರನ್‌ಗಳ ಜೊತೆಯಾಟವಾಡಿದರು. ತಮ್ಮ ಅರ್ಧಶತಕಕ್ಕೆ ಒಂದು ರನ್ ಅಗತ್ಯವಿದ್ದ ಸಂದರ್ಭದಲ್ಲಿ ರೋಹಿತ್ ಅವರು ಸ್ಟೋಕ್ಸ್ ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಬಿದ್ದರು. ಈ ಹಂತದಲ್ಲಿ ಜೊತೆಗೂಡಿದ ರಿಷಭ್ ಮತ್ತು ಚೆನ್ನೈನ ವಾಷಿಂಗ್ಟನ್ ಬೌಲರ್‌ಗಳಿಗೆ ಕಬ್ಬಿಣದ ಕಡಲೆಯಾದರು. 26 ಓವರ್‌ಗಳನ್ನು ಆಡಿದ ಈ ಎಡಗೈ ಬ್ಯಾಟಿಂಗ್ ಜೋಡಿಯ ಆಟಕ್ಕೆ ಪ್ರವಾಸಿ ಬಳಗವು ಸುಸ್ತಾಯಿತು.

ಶತಕ ಬಾರಿಸಿದ ಸಂಭ್ರಮದಲ್ಲಿ ರಿಷಭ್ ಪಂತ್–ಪಿಟಿಐ ಚಿತ್ರ

**ಮುಖ್ಯಾಂಶಗಳು**

- ಟೆಸ್ಟ್ ಕ್ರಿಕೆಟ್‌ನಲ್ಲಿ ರಿಷಭ್‌ಗೆ ಇದು ಮೂರನೇ ಶತಕ
- ಜೇಮ್ಸ್ ಆ್ಯಂಡರ್ಸನ್‌ಗೆ ಮೂರು ವಿಕೆಟ್

ಅದರಲ್ಲೂ ರಿಷಭ್ ಆಟ ವಿಭಿನ್ನ ರೂಪದಲ್ಲಿ ಹೊರಹೊಮ್ಮಿತು. ತಾಳ್ಮೆ ಮತ್ತು ಚುರುಕುತನಗಳ ಸಮಪ್ರಮಾಣದ ಮಿಶ್ರಣ ಇದ್ದದ್ದು ವಿಶೇಷ. ಎಲ್ಲಕ್ಕಿಂತ ಮಿಗಿಲಾಗಿ ಅವರ ಈ ಹಿಂದಿನ ಇನಿಂಗ್ಸ್‌ಗಳಲ್ಲಿ ಕಂಡಿದ್ದ ಏಕಾಗ್ರತೆ ಕೊರತೆ ಇಲ್ಲಿ ಇರಲಿಲ್ಲ. 82 ಎಸೆತಗಳಲ್ಲಿ ಅರ್ಧಶತಕದ ಗಡಿಮುಟ್ಟಿದರು. ಆದರೆ, ಶತಕದ ಗಡಿ ಮುಟ್ಟಲು ಇನ್ನುಳಿದ 50 ರನ್ ಗಳಿಸಿದ್ದು ಕೇವಲ 33 ಎಸೆತಗಳಲ್ಲಿ. ಅವರು ಸಿಕ್ಸರ್ ಮೂಲಕವೇ ನೂರರ ಗಡಿ ತಲುಪಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಇದು ಅವರ ಮೂರನೇ ಶತಕ. ಈ ಹಿಂದೆ ಅವರು ಸಿಡ್ನಿ ಮತ್ತು ಇಂಗ್ಲೆಂಡ್‌ನ ದ ಓವಲ್‌ನಲ್ಲಿ ಶತಕ ಹೊಡೆದಿದ್ದರು.

ಇಂಗ್ಲೆಂಡ್‌ನ ಇಬ್ಬರು ಸ್ಪಿನ್ನರ್‌ಗಳ ಪೈಕಿ ಜ್ಯಾಕ್ ಲೀಚ್ ಮಾತ್ರ ಯಶಸ್ವಿಯಾದರು. ಡಾಮ್ ಬೆಸ್ ಅವರನ್ನು ರಿಷಭ್ ದಂಡಿಸಿದ ರೀತಿಯು ವೀರೇಂದ್ರ ಸೆಹ್ವಾಗ್ ಶೈಲಿಯನ್ನು ನೆನಪಿಗೆ ತಂದಿತ್ತು. ಅನುಭವಿ ವೇಗಿ ಜೇಮ್ಸ್ ಆ್ಯಂಡರ್ಸನ್ ಅವರ ನಿಖರ ಎಸೆತವನ್ನು ರಿಷಭ್ ರಿವರ್ಸ್ ಸ್ವೀಪ್ ಮಾಡಿ ಬೌಂಡರಿಗೆ ಕಳಿಸಿದ್ದು ಚಿತ್ತಾಪಹಾರಿಯಾಗಿತ್ತು. ಅವರು ಒಟ್ಟು 13 ಬೌಂಡರಿ ಮತ್ತು ಎರಡು ಸಿಕ್ಸರ್ ಗಳಿಸಿದರು. 85ನೇ ಓವರ್‌ನಲ್ಲಿ ಆ್ಯಂಡರ್ಸನ್ ಬೌಲಿಂಗ್‌ನಲ್ಲಿಯೆ ಜೋ ರೂಟ್‌ಗೆ ಕ್ಯಾಚಿತ್ತ ರಿಷಭ್ ಇನಿಂಗ್ಸ್‌ಗೆ ತೆರೆ ಬಿತ್ತು.

### ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಸಾವಿರ ರನ್

**ಅಹಮದಾಬಾದ್:** ರೋಹಿತ್ ಶರ್ಮಾ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಒಂದು ಸಾವಿರ ರನ್ ಪೂರೈಸಿದ ದಾಖಲೆ ಮಾಡಿದರು.

ಶುಕ್ರವಾರದ ಇನಿಂಗ್ಸ್‌ನಲ್ಲಿ ಅವರು 19 ರನ್ ಗಳಿಸಿದಾಗ ಈ ಮೈಲುಗಲ್ಲು ತಲುಪಿದರು. 17 ಪಂದ್ಯಗಳಲ್ಲಿ ಈ ಸಾಧನೆ ಮಾಡಿದರು. ಇದರೊಂದಿಗೆ ಮಯಂಕ್ ಅಗರವಾಲ್ 19 ಪಂದ್ಯಗಳಲ್ಲಿ ಮಾಡಿದ್ದ ದಾಖಲೆಯನ್ನು ಹಿಂದಿಕ್ಕಿದರು.

ಈ ಇನಿಂಗ್ಸ್‌ನಲ್ಲಿ ರೋಹಿತ್ 49 ರನ್‌ಗಳನ್ನು ಗಳಿಸಿದಾಗ ಮತ್ತೊಂದು ದಾಖಲೆ ಅವರ ಪಾಲಾಯಿತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಸಾವಿರ ರನ್ ಪೂರೈಸಿದ ಭಾರತದ ಎರಡನೇ ಬ್ಯಾಟ್ಸ್‌ಮನ್ ಆದರು. ಅಜಿಂಕ್ಯ ರಹಾನೆ ಮೊದಲಿಗರಾಗಿದ್ದಾರೆ.

**ವಿರಾಟ್ ಶೂನ್ಯ ದಾಖಲೆ:** ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಟೆಸ್ಟ್ ಸರಣಿಯಲ್ಲಿ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಎರಡನೇ ಬಾರಿ ಖಾತೆ ತೆರೆಯದೇ ಔಟಾದರು.

### ಸ್ಕೋರ್‌ಕಾರ್ಡ್

**ಇಂಗ್ಲೆಂಡ್** (ಮೊದಲ ಇನಿಂಗ್ಸ್) 205 (75.5 ಓವರ್‌ಗಳಲ್ಲಿ)
**ಭಾರತ** (ಮೊದಲ ಇನಿಂಗ್ಸ್) 7ಕ್ಕೆ 294 (94 ಓವರ್‌ಗಳಲ್ಲಿ)
(ಗುರುವಾರ 12 ಓವರ್‌ಗಳಲ್ಲಿ 1 ವಿಕೆಟ್‌ಗೆ 24)

| | |
|---|---|
| ರೋಹಿತ್ ಶರ್ಮಾ ಎಲ್‌ಬಿಡಬ್ಲ್ಯು ಬೆನ್ ಸ್ಟೋಕ್ಸ್ | 49 |
| ಚೇತೇಶ್ವರ್ ಪೂಜಾರ ಎಲ್‌ಬಿಡಬ್ಲ್ಯು ಜ್ಯಾಕ್ ಲೀಚ್ | 17 |
| ವಿರಾಟ್ ಕೊಹ್ಲಿ ಸಿ ಬೆನ್ ಫೋಕ್ಸ್ ಬಿ ಬೆನ್ ಸ್ಟೋಕ್ಸ್ | 0 |
| ಅಜಿಂಕ್ಯ ರಹಾನೆ ಸಿ ಬೆನ್ ಸ್ಟೋಕ್ಸ್ ಬಿ ಜೇಮ್ಸ್ ಆ್ಯಂಡರ್ಸನ್ | 27 |
| ರಿಷಭ್ ಪಂತ್ ಸಿ ಜೋ ರೂಟ್ ಬಿ ಜೇಮ್ಸ್ ಆ್ಯಂಡರ್ಸನ್ | 101 |
| ಆರ್. ಅಶ್ವಿನ್ ಸಿ ಒಲಿ ಪೋಪ್ ಬಿ ಜ್ಯಾಕ್ ಲೀಚ್ | 13 |
| ವಾಷಿಂಗ್ಟನ್ ಸುಂದರ್ ಔಟಾಗದೆ | 60 |
| ಅಕ್ಷರ್ ಪಟೇಲ್ ಔಟಾಗದೆ | 11 |
| ಇತರೆ (ಬೈ 8, ಲೆಗ್‌ಬೈ 5, ನೋಬಾಲ್ 3) | 16 |

**ವಿಕೆಟ್ ಪತನ:** 2-40 (ಚೇತೇಶ್ವರ್ ಪೂಜಾರ, 23.6), 3-41 (ವಿರಾಟ್ ಕೊಹ್ಲಿ, 26.4), 4-80 (ಅಜಿಂಕ್ಯ ರಹಾನೆ, 37.5), 5-121 (ರೋಹಿತ್ ಶರ್ಮಾ, 49.6), 6-146 (ಆರ್.ಅಶ್ವಿನ್, 58.1), 7-259 (ರಿಷಭ್ ಪಂತ್, 84.1)

**ಬೌಲಿಂಗ್:** ಜೇಮ್ಸ್ ಆ್ಯಂಡರ್ಸನ್ 20–11–40–3, ಬೆನ್ ಸ್ಟೋಕ್ಸ್ 22–6–73–2, ಜ್ಯಾಕ್ ಲೀಚ್ 23–5–66–2, ಡಾಮ್ ಬೆಸ್ 15–1–56–0, ಜೋ ರೂಟ್ 14–1–46–0

## ಐಎಸ್‌ಎಲ್: ಮುಂಬೈ–ಗೋವಾ ಸಮಬಲದ ಪೈಪೋಟಿ

**ಫತೋರ್ಡ, ಗೋವಾ:** ಜಿದ್ದಾಜಿದ್ದಿಯ ಸೆಣಸಾಟಕ್ಕೆ ಸಾಕ್ಷಿಯಾದ ಪಂದ್ಯದಲ್ಲಿ ತಲಾ ಎರಡು ಗೋಲು ಗಳಿಸಿದ ಮುಂಬೈ ಸಿಟಿ ಎಫ್‌ಸಿ ಮತ್ತು ಎಫ್‌ಸಿ ಗೋವಾ ತಂಡಗಳು ಸಮಬಲ ಸಾಧಿಸಿದವು. ಫತೋರ್ಡ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಮೊದಲ ಸೆಮಿಫೈನಲ್‌ನ ಮೊದಲ ಲೆಗ್ ಪಂದ್ಯ 2-2ರಲ್ಲಿ ಡ್ರಾ ಆಯಿತು.

ಗೋವಾ ಆರಂಭದಲ್ಲೇ ಆಕ್ರಮಣಕಾರಿ ಆಟಕ್ಕೆ ಮುಂದಾಯಿತು. ಎರಡನೇ ನಿಮಿಷದಲ್ಲಿ ಮಂದಾರ್ ರಾವ್ ದೇಸಾಯಿ ಅವರಿಂದ ಚೆಂಡು ಕಸಿದುಕೊಂಡ ಪ್ರಿನ್ಸ್‌ಟನ್ ರೆಬೆಲ್ಲೊ ನಿಯಂತ್ರಣ ಸಾಧಿಸಿ ಎಡಭಾಗದಲ್ಲಿದ್ದ ಸೇವಿಯರ್ ಗಾಮಾ ಅವರತ್ತ ತಳ್ಳಿದರು. ಅವರು ಗೋಲುಪೆಟ್ಟಿಗೆಯತ್ತ ಚೆಂಡನ್ನು ವಾಯುವೇಗದಲ್ಲಿ ಒದ್ದರು. ಆದರೆ ಮುಂಬೈ ಡಿಫೆಂಡರ್‌ಗಳು ಆ ಪ್ರಯತ್ನವನ್ನು ವಿಫಲಗೊಳಿಸಿದರು. ಐದನೇ ನಿಮಿಷದಲ್ಲೂ ಸೇವಿಯರ್ ಗಾಮಾ ಮತ್ತು ಜಾರ್ಜ್ ಒರ್ಟಿಸ್ ಪ್ರಬಲ ದಾಳಿಗೆ ಮುಂದಾದರು. ಆದರೆ ಫಲ ಸಿಗಲಿಲ್ಲ.

10ನೇ ನಿಮಿಷದಲ್ಲಿ ಮುಂಬೈಗೆ ಫ್ರೀ ಕಿಕ್ ಅವಕಾಶ ಲಭಿಸಿತು. ಅಹಮ್ಮದ್ ಜೊಹೊ ಒದ್ದ ಚೆಂಡು ಗುರಿಯತ್ತ ಸಾಗದಂತೆ ತಡೆಯುವಲ್ಲಿ ಗೋವಾ ಡಿಫೆಂಡರ್‌ಗಳು ಯಶಸ್ವಿಯಾದರು. 19ನೇ ನಿಮಿಷದಲ್ಲಿ ಅಲೆಕ್ಸಾಂಡರ್ ಜೇಸುರಾಜ್ ಎಸಗಿದ ಪ್ರಮಾದ ಮುಂಬೈಗೆ ಮಾರಕವಾಯಿತು. ಗೋವಾದ ಮನವಿಗೆ ಸ್ಪಂದಿಸಿದ ರೆಫರಿ ಪೆನಾಲ್ಟಿ ಅವಕಾಶ ನೀಡಿದರು. 20ನೇ ನಿಮಿಷದಲ್ಲಿ ಇಗರ್ ಅಂಗುಲೊ ಚೆಂಡನ್ನು ಗುರಿಮುಟ್ಟಿಸಿ ಮುನ್ನಡೆ ತಂದುಕೊಟ್ಟರು.

**ತಿರುಗೇಟು ನೀಡಿದ ಮುಂಬೈ:** 38ನೇ ನಿಮಿಷದಲ್ಲಿ ಹ್ಯೂಗೊ ಬೌಮೋಸ್ ಮೂಲಕ ಮುಂಬೈ ಸಿಟಿ ಎಫ್‌ಸಿ ತಿರುಗೇಟು ನೀಡಿತು. ದ್ವಿತೀಯಾರ್ಧದಲ್ಲಿ ಹೋರಾಟ ಇನ್ನಷ್ಟು ಕಳೆಕಟ್ಟಿತು. 50ನೇ ನಿಮಿಷದಲ್ಲಿ ಬಾರ್ತೊಲೊಮೆ ಒಗ್ಬೆಚೆ ಸುವರ್ಣಾವಕಾಶವನ್ನು ಕೈಚೆಲ್ಲಿದರು. 59ನೇ ನಿಮಿಷದಲ್ಲಿ ಸೇವಿಯರ್ ಗಾಮಾ ಗಳಿಸಿದ ಗೋಲಿನೊಂದಿಗೆ ಗೋವಾ ಮತ್ತೊಮ್ಮೆ ಮುನ್ನಡೆ ಗಳಿಸಿತು. ಆದರೆ ಮೂರೇ ನಿಮಿಷಗಳಲ್ಲಿ ಮುಂಬೈ ತಿರುಗೇಟು ನೀಡಿತು. ಮೊರ್ತಜಾ ಫಾಲ್ ಗಳಿಸಿದ ಗೋಲಿನೊಂದಿಗೆ ತಂಡ ಸಮಬಲ ಸಾಧಿಸಿತು.

**ನಾರ್ತ್ ಈಸ್ಟ್–ಎಟಿಕೆಎಂಬಿ ಸೆಣಸು:** ನಾರ್ತ್ ಈಸ್ಟ್ ಯುನೈಟೆಡ್ ತಂಡವು ಶನಿವಾರ ನಡೆಯಲಿರುವ ಎರಡನೇ ಸೆಮಿಫೈನಲ್‌ನ ಮೊದಲ ಲೆಗ್‌ನಲ್ಲಿ ಬಲಿಷ್ಠ ಎಟಿಕೆ ಮೋಹನ್ ಬಾಗನ್ ವಿರುದ್ಧ ಸೆಣಸಲಿದೆ.

**ಇಂದಿನ ಪಂದ್ಯ**
ಎಟಿಕೆ ಮೋಹನ್ ಬಾಗನ್– ನಾರ್ತ್ ಈಸ್ಟ್ ಯುನೈಟೆಡ್
ಆರಂಭ: ಸಂಜೆ 7.30
ಸ್ಥಳ: ಜಿಎಂಸಿ ಕ್ರೀಡಾಂಗಣ, ಬ್ಯಾಂಬೊಲಿಮ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

# ಗಾವಸ್ಕರ್ ಟೆಸ್ಟ್ ಪದಾರ್ಪಣೆಗೆ 50

## ಮುಂಬೈ ನಗರದಲ್ಲಿ ಜನಿಸಿ ವಿಶ್ವಮಟ್ಟಕ್ಕೆ ಬೆಳೆದ ಕ್ರಿಕೆಟಿಗ; ಬಹುಮುಖ ಪ್ರತಿಭೆ

**ನವದೆಹಲಿ (ಪಿಟಿಐ):** 'ಜಂಜೀರ್' ಮತ್ತು 'ದೀವಾರ್' ಮೂಲಕ ಬೆಳ್ಳಿತೆರೆಯಲ್ಲಿ ಅಮಿತಾಬ್ ಬಚ್ಚನ್ ಮಿಂಚುತ್ತಿದ್ದರೆ ಮನಮಿಡಿಯುವ ಹಾಡುಗಳ ಮೂಲಕ ಕಿಶೋರ್ ಕುಮಾರ್ ಗಾನಪ್ರಿಯರ ಹೃದಯ ಕದ್ದಿದ್ದ ಕಾಲವದು. ಅದೇ ಸಂದರ್ಭದಲ್ಲಿ ಯುವ ಕ್ರಿಕೆಟಿಗನೊಬ್ಬ ಬ್ಯಾಟ್ ಮೂಲಕ ದೇಶದ ನಿರೀಕ್ಷೆಗಳನ್ನು ಮುಗಿಲೆತ್ತರಕ್ಕೇರಿಸಲು ಪ್ರಯತ್ನಿಸಿದ್ದರು...

ಇದು, 70ರ ದಶಕದ ಕಥೆ. ಆ ಬಾಲಿವುಡ್ ತಾರೆಯರು ಬೆಳೆದ ಮುಂಬೈ ನಗರದಲ್ಲೇ ಬೆಳೆದ ಆ ಆಟಗಾರ ಬೇರೆ ಯಾರೂ ಅಲ್ಲ; ಕ್ರೀಸ್‌ನಲ್ಲಿ ಲಂಗರು ಹಾಕಿ ಎದುರಾಳಿ ಬೌಲರ್‌ಗಳನ್ನು ಕಂಗೆಡಿಸುತ್ತಿದ್ದ ಸುನಿಲ್ ಗಾವಸ್ಕರ್. ಅವರು ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ ಮಾರ್ಚ್ ಆರಕ್ಕೆ 50 ವರ್ಷ.

ಈ ವಿಶೇಷ ಸಂದರ್ಭದ ಮುನ್ನಾ ದಿನವಾದ ಶುಕ್ರವಾರ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ 'ಅಮಿತಾಬ್ ಬಚ್ಚನ್ ಮತ್ತು ಕಿಶೋರ್ ಕುಮಾರ್ ಅವರ ಸಾಲಿನಲ್ಲಿ ನನಗೂ ಸ್ಥಾನ ನೀಡಿದರೆ ಅದಕ್ಕಿಂತ ದೊಡ್ಡ ಗೌರವ ಬೇರೊಂದಿಲ್ಲ' ಎಂದು ಅಭಿಪ್ರಾಯಪಟ್ಟರು.

'ಬಚ್ಚನ್ ಅವರು ಈಗಲೂ ಭಾರತದ ಅಭಿಮಾನ ಪುರುಷ. ಮಧುರ ಕಂಠದ ಕಿಶೋರ್ ಕುಮಾರ್ ಅವರನ್ನು ಜನಮಾನಸದಿಂದ ತೆಗೆದು ಹಾಕಲು ಯಾರಿಗಾದರೂ ಸಾಧ್ಯವಿದೆಯೇ' ಎಂದು ಪ್ರಶ್ನಿಸಿದ ಗಾವಸ್ಕರ್ 1971ರ ಮಾರ್ಚ್ ಆರರಂದು ಪೋರ್ಟ್ ಆಫ್ ಸ್ಪೇನ್‌ನಲ್ಲಿ ನಡೆದ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಯ ಎರಡನೇ ಪಂದ್ಯದಲ್ಲಿ ಪದಾರ್ಪಣೆ ಮಾಡಿದ ನೆನಪಿನಂಗಳಕ್ಕೆ ಜಾರಿದರು.

'ಕೊನೆಗೂ ದೇಶದ 'ಕ್ಯಾಪ್' ಧರಿಸಿ ಕಣಕ್ಕೆ ಇಳಿಯಲು ಸಾಧ್ಯವಾದ ಸಾರ್ಥಕತೆ ಮನಸ್ಸಿಗೆ ಮುದ ನೀಡಿತ್ತು. ಅದೇ ಸಂದರ್ಭದಲ್ಲಿ ಆತಂಕವೂ ಕಾಡುತ್ತಿತ್ತು. ಯಾಕೆಂದರೆ ಆಗ ನಾವು ಎದುರಿಸಿದ್ದು ಖ್ಯಾತ ಕ್ರಿಕೆಟಿಗ ಗ್ಯಾರಿ ಸೋಬರ್ಸ್ ನಾಯಕತ್ವದ ತಂಡವನ್ನು' ಎಂದು ಗಾವಸ್ಕರ್ ಹೇಳಿದರು.

ಪದಾರ್ಪಣೆ ಸರಣಿಯ ನಾಲ್ಕು ಪಂದ್ಯಗಳಲ್ಲಿ ಗಾವಸ್ಕರ್ ಒಟ್ಟು 774 ರನ್ ಕಲೆ ಹಾಕಿದ್ದರು. ಅದರ ಬಗ್ಗೆ ಅವರಿಗೆ ಅಭಿಮಾನವಿದೆ. 'ಆ ಸರಣಿಯಲ್ಲಿ 400 ರನ್ ಗಳಿಸಿದ್ದರೂ ನನ್ನ ಪಾಲಿಗೆ ಅದು ಶ್ರೇಷ್ಠ ಸಾಧನೆಯೇ ಆಗುತ್ತಿತ್ತು' ಎಂದರು.

17 ವರ್ಷ ಕ್ರಿಕೆಟ್ ಆಡಿದ ಗಾವಸ್ಕರ್ ಅಪಾಯಕಾರಿ ವೇಗಿಗಳು ಇರುವ ತಂಡಗಳ ಎದುರಿನ ಪಂದ್ಯಗಳು ಸೇರಿದಂತೆ ಯಾವ ತಂಡಗಳ ಎದುರು ಕೂಡ ಹೆಲ್ಮೆಟ್ ಧರಿಸುತ್ತಿರಲಿಲ್ಲ. ಪಿಚ್‌ಗೆ ಕುಕ್ಕಿ ಪುಟಿಯುವ ಬೌನ್ಸರ್‌ಗಳನ್ನು ರನ್ ಗಳಿಸುವುದಕ್ಕೆ ಇರುವ ಅವಕಾಶವೆಂದೇ ತಿಳಿಯುತ್ತಿದ್ದರು. ಹೆಲ್ಮೆಟ್ ಧರಿಸದೇ ಆಡುವ ಅಭ್ಯಾಸವನ್ನು ಕ್ಲಬ್ ಮಟ್ಟದಲ್ಲೇ ಬೆಳೆಸಿಕೊಂಡಿದ್ದೆ ಎಂಬುದು ಅವರ ವಿವರಣೆ.

ಗಾವಸ್ಕರ್‌ಗೆ ಈಗ 71 ವರ್ಷ. ಅವರೀಗ ವೀಕ್ಷಕ ವಿವರಣೆಗಾರ, ಲೇಖಕ ಮುಂತಾದ ಬಹುಮುಖ ಪ್ರತಿಭೆಯ ವ್ಯಕ್ತಿ.

ಸುನಿಲ್ ಗಾವಸ್ಕರ್ –ಟ್ವಿಟರ್ ಚಿತ್ರ

**ಮುಖ್ಯಾಂಶಗಳು**

- ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಯ ಎರಡನೇ ಪಂದ್ಯದಲ್ಲಿ ಪದಾರ್ಪಣೆ
- ಪದಾರ್ಪಣೆ ಸರಣಿಯಲ್ಲಿ ಗಾವಸ್ಕರ್ ಒಟ್ಟು 774 ರನ್ ಗಳಿಸಿದ್ದರು.

## ಮಾತು ಕೊಟ್ಟು ಸೋಬರ್ಸ್ ವಿಕೆಟ್ ಗಳಿಸಿದ್ದ ದುರಾನಿ!

**ನವದೆಹಲಿ (ಪಿಟಿಐ) :** ಭಾರತ ಕ್ರಿಕೆಟ್ ಪ್ರೇಮಿಗಳಿಗೆ 1971ನೇ ಇಸ್ವಿಯು ಯಾವಾಗಲೂ ವಿಶೇಷವಾದದ್ದು. ದಿಗ್ಗಜ ಸುನಿಲ್ ಗಾವಸ್ಕರ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟ ಅದೇ ವರ್ಷದಲ್ಲಿ ಭಾರತ ತಂಡವು ಇಂಗ್ಲೆಂಡ್ ಹಾಗೂ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗಳಲ್ಲಿ ಜಯಭೇರಿ ಮೊಳಗಿಸಿತ್ತು.

ಆ ಗೆಲುವುಗಳ 50ನೇ ವರ್ಷದ ನೆನಪಿಗಾಗಿ '1971: ದಿ ಬಿಗಿನಿಂಗ್ ಆಫ್ ಇಂಡಿಯಾಸ್ ಕ್ರಿಕೆಟಿಂಗ್ ಗ್ರೇಟ್‌ನೆಸ್' ಎಂಬ ಕೃತಿಯೊಂದು ಹೊರಬಂದಿದೆ. ಕ್ರಿಕೆಟ್ ಇತಿಹಾಸಕಾರ ಬೊರಿಯಾ ಮಜುಂದಾರ್ ಹಾಗೂ ಹಿರಿಯ ಪತ್ರಕರ್ತ ಗೌತಮ್ ಭಟ್ಟಾಚಾರ್ಯ ಸಹಲೇಖಕರಾಗಿರುವ ಈ ಕೃತಿಯನ್ನು ಹಾರ್ಪರ್ ಕಾಲಿನ್ಸ್ ಪ್ರಕಟಿಸಿದೆ. ದಿವಂಗತ ಅಜಿತ್ ವಾಡೇಕರ್ ನೇತೃತ್ವದ ತಂಡದ 'ಸಾಹಸ'ಗಳು ಈ ಕೃತಿಯಲ್ಲಿ ದಾಖಲಾಗಿವೆ.

ಪೋರ್ಟ್ ಆಫ್ ಸ್ಪೇನ್‌ನಲ್ಲಿ ನಡೆದಿದ್ದ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಭಾರತದ ಸಲೀಮ್ ದುರಾನಿ ಅವರು ಕ್ಲೈವ್ ಲಾಯ್ಡ್ ಹಾಗೂ ಸರ್ ಗ್ಯಾರಿ ಸೋಬರ್ಸ್ ಅವರ ವಿಕೆಟ್ ಕಬಳಿಸಿ ತಂಡದ ಜಯಕ್ಕೆ ಅಡಿಪಾಯ ಹಾಕಿಕೊಟ್ಟಿದ್ದರು. ಅಂದು 21 ವರ್ಷದ ಆಟಗಾರನಾಗಿದ್ದ ಕರ್ನಾಟಕದ ಗುಂಡಪ್ಪ ವಿಶ್ವನಾಥ್ ಅವರು ಆ ಸವಿನೆನಪುಗಳನ್ನು ಪುಸ್ತಕದಲ್ಲಿ ಹಂಚಿಕೊಂಡಿದ್ದಾರೆ.

'ಪಂದ್ಯದ ಮೂರನೇ ದಿನದಾಟದ ಕೊನೆ ಯಲ್ಲಿ ಅಜಿತ್ ಕೋಣೆಯಲ್ಲಿ ನಾವು ಪಾನಗೋಷ್ಠಿಗೆ ಸೇರಿದ್ದೆವು. ಈ ವೇಳೆ ಅಲ್ಲಿಗೆ ಬಂದ ಸಲೀಮ್, ತಾನೂ ಸೇವಿಸಬಹುದೆ ಎಂದು ಅಜಿತ್ ಅವರನ್ನು ಕೇಳಿದರು. ಮಾನಸಿಕ ಒತ್ತಡ ಕಡಿಮೆ ಮಾಡಲು ವೆಸ್ಟ್ ಇಂಡೀಸ್‌ನಲ್ಲಿ ಇದು ನಮಗೆ ಸಾಮಾನ್ಯವಾಗಿತ್ತು' ಎಂದು ವಿಶ್ವನಾಥ್ ನೆನಪಿಸಿಕೊಂಡಿದ್ದಾರೆ.

'ಮಾತು ಮುಂದುವರಿಸಿದ ಸಲೀಮ್ ಅವರು ನಾನು ನಾಳೆ ಲಾಯ್ಡ್ ಹಾಗೂ ಸೋಬರ್ಸ್ ವಿಕೆಟ್ ಗಳಿಸುತ್ತೇನೆ ಎಂದರು. ನಾವು ಅಚ್ಚರಿಯಿಂದ ಅವರತ್ತ ನೋಡಿದೆವು' ಎಂದು ವಿಶ್ವನಾಥ್ ಉಲ್ಲೇಖಿಸಿದ್ದಾರೆ. ಸಲೀಮ್ ತಾವು ಹೇಳಿದಂತೆ ಲಾಯ್ಡ್ ಮತ್ತು ಸೋಬರ್ಸ್ ಅವರನ್ನು ಔಟ್ ಮಾಡಿ, ಭಾರತ ಏಳು ವಿಕೆಟ್‌ಗಳಿಂದ ಜಯಿಸಲು ನೆರವಾಗಿದ್ದರು.

## ಬಿಷನ್ ಬೇಡಿ ಆರೋಗ್ಯ ಚೇತರಿಕೆ

**ನವದೆಹಲಿ (ಪಿಟಿಐ):** ಮಿದುಳು ಶಸ್ತ್ರಚಿಕಿತ್ಸೆ ಪಡೆದಿರುವ ಮಾಜಿ ಕ್ರಿಕೆಟಿಗ ಬಿಷನ್ ಸಿಂಗ್ ಬೇಡಿ ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಅವರನ್ನು ಅವರನ್ನು ತೀವ್ರ ನಿಗಾ ಘಟಕ (ಐಸಿಯು) ದಿಂದ ಖಾಸಗಿ ಕೋಣೆಗೆ ಸ್ಥಳಾಂತರಿಸಲಾಗಿದೆ.

ಕೆಲವು ದಿನಗಳ ಅವರ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿತ್ತು. ಅವರಿಗೆ ಮಾಡಿರುವ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿದೆ. ದಿನದಿಂದ ದಿನಕ್ಕೆ ಆರೋಗ್ಯ ಚೇತರಿಸಿಕೊಳ್ಳುತ್ತಿದ್ದಾರೆ. ಇನ್ನು ಕೆಲವು ದಿನ ಅವರು ಆಸ್ಪತ್ರೆಯಲ್ಲಿದ್ದಾರೆ. ನಂತರ ಮನೆಗೆ ತೆರಳುವರು' ಎಂದು ವೈದ್ಯರು ತಿಳಿಸಿದ್ದಾರೆ.

## ಅಥ್ಲೆಟಿಕ್ಸ್ ಕೋಚ್ ನಿಕೊಲಾಯ್ ಶವ ಪತ್ತೆ

**ಪಟಿಯಾಲ (ಪಿಟಿಐ):** ಭಾರತ ಅಥ್ಲೆಟಿಕ್ಸ್‌ನ ಮಧ್ಯಮ ಮತ್ತು ದೂರ ಅಂತರದ ಓಟದ ಕೋಚ್ ನಿಕೊಲಾಯ್ ಸ್ನೆಸ್‌ರೆವ್ ಅವರ ಶವ ಇಲ್ಲಿಯ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನ (ಎನ್‌ಐಎಸ್) ವಸತಿನಿಲಯದಲ್ಲಿ ಶುಕ್ರವಾರ ಪತ್ತೆಯಾಗಿದೆ. ಈ ವಿಷಯವನ್ನು ಭಾರತ ಅಥ್ಲೆಟಿಕ್ಸ್ ಫೆಡರೇಷನ್ ತಿಳಿಸಿದೆ. ಬೆಲಾರಸ್‌ನ 72 ವರ್ಷದ ಸ್ನೆಸ್‌ರೆವ್ ಅವರ ತರಬೇತಿ ಅವಧಿ ಈ ವರ್ಷದ ಸೆಪ್ಟೆಂಬರ್ ಅಂತ್ಯದವರೆಗೆ ಇತ್ತು. ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ.

## ಪೂವಮ್ಮಗೆ 2 ಚಿನ್ನ

**ಪಟಿಯಾಲ:** ಕರ್ನಾಟಕದ ಎಂ.ಆರ್. ಪೂವಮ್ಮ ಅವರು ಇಲ್ಲಿ ನಡೆಯುತ್ತಿರುವ ಇಂಡಿಯನ್ ಗ್ರ್ಯಾನ್ ಪ್ರಿ ಅಥ್ಲೆಟಿಕ್ ಕೂಟದಲ್ಲಿ ಶುಕ್ರವಾರ ಎರಡು ಚಿನ್ನದ ಪದಕ ಮುಡಿಗೇರಿಸಿಕೊಂಡರು. ಅವರು 400 ಮೀ. ಓಟದಲ್ಲಿ 54.11 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಗಳಿಸಿದರೆ, 800 ಮೀ. ವಿಭಾಗದಲ್ಲಿ (2 ನಿ. 08.60 ಸೆ) ಚಿನ್ನದ ಪದಕ ಗೆದ್ದರು.

ಪುರುಷರ ಜಾವೆಲಿನ್ ಎಸೆತದಲ್ಲಿ ನೀರಜ್ ಚೋಪ್ರಾ 88.07 ಸಾಧನೆ ಮಾಡಿ ತಮ್ಮದೇ ರಾಷ್ಟ್ರೀಯ ದಾಖಲೆ ಉತ್ತಮಪಡಿಸಿಕೊಂಡರು. ಮಹಿಳೆಯರ 100 ಮೀ. ವಿಭಾಗದ ಚಿನ್ನವು ಹಿಮಾ ದಾಸ್ ಅವರ ಪಾಲಾಯಿತು. ಅವರು 11.67 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ವಿಭಾಗದಲ್ಲಿ ಹಿಮಾ ಒಬ್ಬರೇ ಸ್ಪರ್ಧಿಸಿದ್ದರು.

## ರಸ್ತೆ ಸುರಕ್ಷತಾ ಜಾಗೃತಿಗಾಗಿ ಕ್ರಿಕೆಟ್: ವೀರೂ ವೈಭವ

**ರಾಯಪುರ:** ದಶಕದ ಹಿಂದಿನ ವೀರೇಂದ್ರ ಸೆಹ್ವಾಗ್ ಬ್ಯಾಟಿಂಗ್ ವೈಭವ ಶುಕ್ರವಾರ ಮತ್ತೆ ಮರುಕಳಿಸಿತು!

ಇಲ್ಲಿಯ ಶಹೀದ್ ವೀರ್ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಆರಂಭವಾದ ರಸ್ತೆ ಸುರಕ್ಷತಾ ವಿಶ್ವ ಸೀರಿಸ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ವೀರೂ ಕೇವಲ 35 ಎಸೆತಗಳಲ್ಲಿ 80 ರನ್ ಗಳಿಸಿ ಅಜೇಯರಾಗುಳಿದರು. ಅವರ ಅಬ್ಬರದ ಬಲದಿಂದ ಇಂಡಿಯಾ ಲೆಜೆಂಡ್ಸ್ ತಂಡವು 10 ವಿಕೆಟ್‌ಗಳಿಂದ ಬಾಂಗ್ಲಾದೇಶ ಲೆಜೆಂಡ್ಸ್ ವಿರುದ್ಧ ಜಯಿಸಿತು. ವೀರೂ 5 ಸಿಕ್ಸರ್,10 ಬೌಂಡರಿ ಸಿಡಿಸಿದರು. ಸಚಿನ್ ತೆಂಡೂಲ್ಕರ್ 26 ಎಸೆತಗಳಲ್ಲಿ 33 ರನ್ ಗಳಿಸಿದರು.

ಸೆಹ್ವಾಗ್

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ ಲೆಜೆಂಡ್ಸ್: 19.4 ಓವರ್‌ಗಳಲ್ಲಿ 109 (ನಝೀಮುದ್ದೀನ್ 49, ಆರ್. ವಿನಯಕುಮಾರ್ 25ಕ್ಕೆ2, ಪ್ರಗ್ಯಾನ್ ಓಜಾ 12ಕ್ಕೆ2, ಯುವರಾಜ್ ಸಿಂಗ್ 15ಕ್ಕೆ2) ಇಂಡಿಯಾ ಲೆಜೆಂಡ್ಸ್: 10.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 114 (ವೀರೇಂದ್ರ ಸೆಹ್ವಾಗ್ ಔಟಾಗದೆ 80, ಸಚಿನ್ ತೆಂಡೂಲ್ಕರ್ ಔಟಾಗದೆ 33) ಫಲಿತಾಂಶ: ಇಂಡಿಯಾ ಲೆಜೆಂಡ್ಸ್‌ಗೆ 10 ವಿಕೆಟ್ ಜಯ.

# ಮಧ್ಯಾಹ್ನದ ಊಟ ಯಾವ ಸಮಯಕ್ಕೆ ಮಾಡಲಿ?

ಮನೆಯಿಂದಲೇ ಕಚೇರಿ ಕೆಲಸ ಮಾಡುವವರು ನಿಗದಿತ ಸಮಯಕ್ಕೆ ಊಟ ಮಾಡದೆ ಅನಾರೋಗ್ಯ, ಸುಸ್ತು, ಕಿರಿಕಿರಿ ಅನುಭವಿಸುವುದು ಹೆಚ್ಚಾಗಿದೆ. ಹಾಗಾದರೆ ಊಟವನ್ನು ಎಷ್ಟು ಹೊತ್ತಿಗೆ ಮಾಡಿದರೆ ಸೂಕ್ತ?

ಎಸ್ಸೆಚ್

ಕಳೆದ ಒಂದು ವರ್ಷದಿಂದ ಮನೆಯಿಂದಲೇ ಕಚೇರಿ ಕೆಲಸ ಮಾಡುವವರಲ್ಲಿ ಕೆಲವರಿಗಾದರೂ ಈ ಅನುಭವ ಆಗಿರಬಹುದು- ಮಧ್ಯಾಹ್ನದ ಊಟ ತಡವಾಗಿ ಕೆಲವೊಮ್ಮೆ ಸಂಜೆಯ ಕಾಫಿ ಸಮಯದಲ್ಲಿ ಮಾಡಿದ್ದೂ ಇದೆ ಅಲ್ಲವೇ? ಆದರೆ ಯಾವಾಗ ಮಧ್ಯಾಹ್ನದ ಊಟ ಮಾಡಬೇಕು ಎಂಬ ಪ್ರಶ್ನೆ ಎದುರಾದಾಗ ನಮ್ಮ ಹೊಟ್ಟೆ ಹಸಿವಾಗಿದೆ ಎಂಬ ಸಂಕೇತ ನೀಡಬೇಕು. ಹಾಗೆಯೇ ಜೀರ್ಣಕ್ರಿಯೆ ಬಗ್ಗೆಯೂ ನಮಗೆ ಅರಿವಿರಬೇಕು. ಸರಿಯಾದ ಸಮಯಕ್ಕೆ ಊಟ ಮಾಡಿದರೆ ಇದು ನಮ್ಮ ಉತ್ಪಾದಕತೆಯ ಮೇಲೂ ಸಕಾರಾತ್ಮಕ ಪರಿಣಾಮ ಬೀರಬಹುದು ಎನ್ನುತ್ತಾರೆ ತಜ್ಞರು.

'ಮಧ್ಯಾಹ್ನದ ಊಟದ ಸಮಯ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಹಾಗೆಯೇ ದೇಹಕ್ಕೆ ಸೇರುವ ಕ್ಯಾಲೊರಿ, ಹಸಿವು, ಚಟುವಟಿಕೆಯ ಜೊತೆಗೆ ಮನೆಯಿಂದಲೇ ಕೆಲಸ ಮಾಡುವ ನಮ್ಮ ರೀತಿ-ನೀತಿಯೂ ಪ್ರಭಾವ ಬೀರುವ ಅಂಶಗಳು' ಎನ್ನುತ್ತಾರೆ ಲೈಫ್‌ಸ್ಟೈಲ್ ಕಾಯಿಲೆಗಳ ತಜ್ಞ ಡಾ. ಟಿ.ಎಸ್. ತೇಜಸ್.

ಮನೆಯಿಂದಲೇ ಕೆಲಸ ಎಂದರೆ ಹೆಚ್ಚಿನ ಸಮಯ ಕೂತೇ ಇರುತ್ತಾರೆ. ಬೇರೆ ಚಟುವಟಿಕೆಗಳಲ್ಲಿ ಏರುಪೇರಾಗುವುದು ಸಹಜ. ಹಾಗೆಯೇ ಕೋವಿಡ್‌ನಿಂದ ಒತ್ತಡ ಹೆಚ್ಚೇ ಇರುತ್ತದೆ. ಹೀಗಾಗಿ ಇವೆಲ್ಲವೂ ಒಟ್ಟಾರೆ ಆರೋಗ್ಯ ಮತ್ತು ಜೀರ್ಣಕ್ರಿಯೆ ಮೇಲೆ ಪರಿಣಾಮ ಬೀರುತ್ತವೆ. ಅವಶ್ಯಕತೆಗಿಂತ ಹೆಚ್ಚಾಗೇ ತಿನ್ನಬಹುದು. ಇದರಿಂದ ಸುಸ್ತು, ಕಿರಿಕಿರಿ, ಏಕಾಗ್ರತೆಯ ಕೊರತೆ ಉಂಟಾಗಬಹುದು ಎಂದು ಅವರು ಎಚ್ಚರಿಸುತ್ತಾರೆ.

## ಊಟ- ತಿಂಡಿಯ ನಡುವಿನ ಅಂತರ

ಹೀಗಾಗಿ ಇವೆಲ್ಲವೂ ಸರಿಯಾಗಬೇಕಾದರೆ ಮಧ್ಯಾಹ್ನದ ಊಟಕ್ಕೆ, ನಂತರದ ತಿಂಡಿಗೆ ನಿಗದಿತ ಅಂತರವಿರಬೇಕಾಗುತ್ತದೆ. ಹಾಗೆಯೇ ಚಟುವಟಿಕೆಯ ಮಟ್ಟ, ಲಿಂಗ, ಆರೋಗ್ಯ ಸಮಸ್ಯೆ, ಗರ್ಭ ಧರಿಸಿದ್ದರೆ.. ಈ ಮೊದಲಾದ ಅಂಶಗಳನ್ನೂ ಇಲ್ಲಿ ಪರಿಗಣಿಸಬೇಕಾಗುತ್ತದೆ.

ಹಸಿವಿನ ಸಂವೇದನೆಯೂ ಮುಖ್ಯ. ಕೆಲವರಿಗೆ ಶಕ್ತಿಯೇ ಇಲ್ಲ ಎನಿಸುವುದು, ತಲೆನೋವು, ಹೊಟ್ಟೆಯಲ್ಲಿ ಗಾಳಿ ಓಡಾಡಿದಂತೆ ಸದ್ದಾಗುವುದು, ಹೊಟ್ಟೆ ಖಾಲಿಯಾದಂತೆ ಎನಿಸುವುದು.. ಇವೆಲ್ಲ ಹಸಿವಿನ ಸಂಕೇತಗಳು. ಇದನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು.

ಬೆಳಿಗ್ಗೆ ಎದ್ದು ಅರ್ಧ ತಾಸಿನಿಂದ ಒಂದು ತಾಸಿನೊಳಗೆ ಮೊದಲ ಆಹಾರ ಅಂದರೆ ಉಪಾಹಾರ ಸೇವಿಸಬೇಕು ಎನ್ನುತ್ತಾರೆ ಡಾ. ತೇಜಸ್. ಇದು ನಿಮ್ಮ ದೇಹಕ್ಕೆ ಇಂಧನವಿದ್ದಂತೆ. ಇದು ಜೀರ್ಣವಾಗಲು ಎಷ್ಟು ಸಮಯ ಬೇಕು ಎಂಬುದರ ಅರಿವೂ ಇರಬೇಕು. ಸಾಮಾನ್ಯವಾಗಿ ಅರ್ಧ ಹೊಟ್ಟೆ ತುಂಬಿದ್ದರೆ ನಾಲ್ಕು ತಾಸಿನೊಳಗೆ ಇದು ಜೀರ್ಣವಾಗುತ್ತದೆ.

## ಉಪಾಹಾರವಾದ 3–4 ಗಂಟೆ ನಂತರ ಊಟ

ಹೀಗಾಗಿ ಉಪಾಹಾರದ ನಂತರ 3–4 ತಾಸು ಬಿಟ್ಟು ಊಟ ಅಥವಾ ಲಘು ಉಪಾಹಾರ ತಿನ್ನುವುದು ಸೂಕ್ತ. ಆದರೆ ನಿಮ್ಮ ದೇಹದ ಸೂಚನೆಯನ್ನೂ ನೀವು ಪರಿಗಣಿಸಿ ನಿಯಮ ರೂಢಿಸಿಕೊಂಡರೆ ಒಳಿತು. ಹಾಗೆಯೇ ಉಪಾಹಾರಕ್ಕೆ ಏನನ್ನು ತಿಂದಿರಿ, ಯಾವ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರಿ ಎಂಬುದೂ ಮುಖ್ಯ. ಕಡಿಮೆ ತಿಂದರೆ ಒಂದೆರಡು ತಾಸಿನಲ್ಲೇ ಹಸಿವು ಕಾಣಿಸಿಕೊಳ್ಳಬಹುದು. ಆದರೆ ಪ್ರೊಟೀನ್ ಹಾಗೂ ನಾರಿನಾಂಶವಿದ್ದರೆ ಅಷ್ಟು ಬೇಗ ಹಸಿವಿನ ಅನುಭವವಾಗುವುದಿಲ್ಲ.

ಕೆಲವು ಆಹಾರ ಪದ್ಧತಿಯಿಂದ ಜಠರ ಹಾಗೂ ಮೆದುಳಿನ ಮಧ್ಯೆ ಉತ್ತಮ ಸಂಪರ್ಕ ಏರ್ಪಡುತ್ತದೆ. ಅಂದರೆ ಭಾವನೆಗಳ ಏರಿಳಿತ, ಮಾನಸಿಕ ಆರೋಗ್ಯ ಎಲ್ಲವೂ ಆಹಾರವನ್ನು ಅವಲಂಬಿಸಿರುತ್ತವೆ. ಉತ್ತಮ ಬ್ಯಾಕ್ಟೀರಿಯ ಹೆಚ್ಚಾಗಲು ಪ್ರೊಬಯಾಟಿಕ್ ಆಹಾರ ಅಂದರೆ ಮೊಸರು ತಿನ್ನಬಹುದು. ಪ್ರಿಬಯಾಟಿಕ್ ಆಹಾರಗಳಾದ ಧಾನ್ಯ, ತರಕಾರಿ, ಒಣ ಹಣ್ಣು ತಿನ್ನಬಹುದು.

ಇಂಟರ್‌ಮಿಟೆಂಟ್ ಅಂದರೆ ಕೆಲವು ಗಂಟೆಗಳ ಕಾಲ ಉಪವಾಸ ಇರುವ ಡಯಟ್ ಇತ್ತೀಚೆಗೆ ಜನಪ್ರಿಯ. ಆದರೆ ಆಗಾಗ ತಿನ್ನುವುದರಿಂದ ನಮ್ಮ ದೇಹಕ್ಕೆ ಹೆಚ್ಚಿನ ಶಕ್ತಿ ಸಿಗುತ್ತದೆ ಎನ್ನುತ್ತಾರೆ ತಜ್ಞರು.

## ಆರೋಗ್ಯಕರ ಆಹಾರ

ಹೆಚ್ಚು ಹಸಿವಾದರೆ ನಮ್ಮ ಮುಂದೆ ಯಾವ ಆಹಾರ ಇರುತ್ತದೋ ಅದನ್ನೇ ತಿನ್ನುವುದು ಮಾಮೂಲು. ಆಗ ಆರೋಗ್ಯಕರ ಆಹಾರ ಸೇವನೆ ಮರೆತುಬಿಡುತ್ತೇವೆ. ಹೀಗಾಗಿ ಹೆಚ್ಚು ಹಸಿವಾಗಲು ಬಿಡಬೇಡಿ. ಅದೇ ರೀತಿ ಯಾವಾಗಲೂ ಹೊಟ್ಟೆ ತುಂಬ ತಿನ್ನುವುದು ಕೂಡ ಸರಿಯಲ್ಲ. ಆ್ಯಸಿಡಿಟಿ, ಅಜೀರ್ಣ ಉಂಟಾಗಬಹುದು. ನಿಧಾನವಾಗಿ, ಆರೋಗ್ಯಕರ ಆಹಾರ ತಿಂದರೆ ಹೊಟ್ಟೆ ತುಂಬಿದ ತೃಪ್ತಿ ಸಿಗುತ್ತದೆ. ಕೆಲಸ ಮಾಡಲೂ ಉತ್ಸಾಹ ಬರುತ್ತದೆ.

ಹಣ್ಣು, ತರಕಾರಿ, ಲೀನ್ ಪ್ರೊಟೀನ್, ಆರೋಗ್ಯಕರ ಕೊಬ್ಬು ಇರುವ ಆಹಾರ ಮಧ್ಯಾಹ್ನದ ಊಟಕ್ಕೆ ಸೂಕ್ತ.

ಹೆಚ್ಚು ಕಾರ್ಬೊಹೈಡ್ರೇಟ್ ಇರುವ, ಕೊಬ್ಬು ಜಾಸ್ತಿ ಇರುವ ಆಹಾರ ಬೇಡ. ಊಟವಾದ ಎರಡು ತಾಸುಗಳ ನಂತರ ಹಸಿವು ಎನಿಸಿದರೆ ಸ್ನ್ಯಾಕ್ ತಿನ್ನಬಹುದು. ಇದು ಕೂಡ ಪ್ರೊಟೀನ್‌ಯುಕ್ತವಾಗಿರಲಿ. ಉದಾಹರಣೆಗೆ ಒಂದು ಸೇಬು, ಒಂದು ಮುಷ್ಟಿ ಒಣ ಹಣ್ಣು ಅಥವಾ ಕ್ರ್ಯಾಕರ್ ಸೇವಿಸಬಹುದು. ❖

# ಮಸಾಲೆ ಚಿಕನ್ ಸೂಪ್

### ರೆಸಿಪಿ

**ಬೇಕಾಗುವ ಸಾಮಗ್ರಿಗಳು:** ಬೆಣ್ಣೆ ಅಥವಾ ಆಲಿವ್ ಎಣ್ಣೆ – 1 ಟೇಬಲ್ ಚಮಚ, ಈರುಳ್ಳಿ – 1 ಚಿಕ್ಕದು (ಚಿಕ್ಕದಾಗಿ ಹೆಚ್ಚಿದ್ದು), ಬೆಳ್ಳುಳ್ಳಿ – 4 ಎಸಳು (ಜಜ್ಜಿದ್ದು), ಹಸಿಮೆಣಸು – 1 (ತೆಳ್ಳಗೆ ಸೀಳಿಕೊಂಡಿದ್ದು), ಕ್ಯಾರೆಟ್ (ಸಿಪ್ಪೆ ತೆಗೆದು ಸೀಳಿಕೊಂಡಿದ್ದು) – 1/2 ಕಪ್, ಕೊತ್ತಂಬರಿ ಸೊಪ್ಪು – 1/4 ಕಪ್ (ಸಣ್ಣಕ್ಕೆ ಹೆಚ್ಚಿಕೊಂಡಿದ್ದು), ಚಿಕನ್ ಸ್ಟಾಕ್ – 1 ಲೀಟರ್, ಬೇಯಿಸಿದ ಚಿಕನ್ – 2 ಕಪ್, ಉಪ್ಪು – ರುಚಿಗೆ, ಕಾಳುಮೆಣಸಿನ ಪುಡಿ – ಸ್ವಲ್ಪ

**ತಯಾರಿಸುವ ವಿಧಾನ:** ದಪ್ಪ ತಳದ ಪಾತ್ರೆಯೊಂದಕ್ಕೆ ಆಲಿವ್ ಎಣ್ಣೆ ಅಥವಾ ಬೆಣ್ಣೆ ಹಾಕಿ ಬಿಸಿ ಮಾಡಿ. ನಂತರ ಈರುಳ್ಳಿ, ಬೆಳ್ಳುಳ್ಳಿ, ಹಸಿಮೆಣಸು, ಕ್ಯಾರೆಟ್ ಹಾಗೂ ಕೊತ್ತಂಬರಿ ಸೊಪ್ಪು ಹಾಕಿ 10 ನಿಮಿಷಗಳ ಕಾಲ ಹುರಿದುಕೊಳ್ಳಿ. ಅದಕ್ಕೆ ಚಿಕನ್ ಸ್ಟಾಕ್ ಸೇರಿಸಿ ಸಣ್ಣ ಉರಿಯಲ್ಲಿ ಕುದಿಸಿ. ಅದಕ್ಕೆ ಬೇಯಿಸಿದ ಚಿಕನ್ ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು ಹಾಗೂ ಕಾಳುಮೆಣಸು ಸೇರಿಸಿ ಮತ್ತೆ ಚೆನ್ನಾಗಿ ಕುದಿಸಿ. ಅದನ್ನು ಬಿಸಿಯಿದ್ದಾಗಲೇ ಕಪ್‌ಗೆ ಹಾಕಿ ಅದರ ಮೇಲೆ ಕ್ರೀಮ್ ಹಾಕಿ ನಂತರ ಸೀಳಿಕೊಂಡ ಹಸಿಮೆಣಸು, ಕೊತ್ತಂಬರಿ ಸೊಪ್ಪು ಅಲಂಕರಿಸಿ ಕುಡಿಯಬಹುದು. ❖

# ಮುಂಬೈ ಸಿಟಿ ಎಫ್‌ಸಿ 'ವಿಘ್ನ' ನಿವಾರಕ ಬೆಂಗಳೂರು ಪ್ರತಿಭೆ

ಕ್ರೀಡೆ

ವಿಘ್ನೇಶ್ ದಕ್ಷಿಣಾಮೂರ್ತಿ –ಐಎಸ್‌ಎಲ್ ಮೀಡಿಯಾ ಚಿತ್ರ

ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಲೀಗ್ ಹಂತದ ಚಾಂಪಿಯನ್ ಆದ ಸಂಭ್ರಮದಲ್ಲಿರುವ ಮುಂಬೈ ಸಿಟಿ ಎಫ್‌ಸಿಗೆ ಈ ಆವೃತ್ತಿಯ ಮೊದಲಿನಿಂದ ಇಲ್ಲಿಯ ವರೆಗೆ ಹೆಗಲೆಣೆಯಾದ ಆಟಗಾರರಲ್ಲಿ ಬೆಂಗಳೂರಿನ ಪ್ರತಿಭೆ ವಿಘ್ನೇಶ್ ದಕ್ಷಿಣಾಮೂರ್ತಿ ಅವರೂ ಇದ್ದಾರೆ. ತಂಡದ ರಕ್ಷಣಾ ವಿಭಾಗದ ಬೆನ್ನೆಲುಬು ಆಗಿರುವ ಅವರು 'ವಿಘ್ನ ನಿವಾರಕ'ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ವಿಕ್ರಂ ಕಾಂತಿಕೆರೆ

**ಇಂಡಿಯನ್** ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿರುವ ಮುಂಬೈ ಸಿಟಿ ಎಫ್‌ಸಿ ಈಗಾಗಲೇ ಲೀಗ್ ಹಂತದ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಇದು, ಆ ತಂಡಕ್ಕೆ 2022ರ ಎಎಫ್‌ಸಿ ಚಾಂಪಿಯನ್ಸ್ ಲೀಗ್‌ನ ಗುಂಪು ಹಂತದಲ್ಲಿ ಆಡುವ ಅವಕಾಶವನ್ನೂ ಒದಗಿಸಿಕೊಟ್ಟಿದೆ. ಹೀಗೆ, 'ಡಬಲ್' ಸಂಭ್ರಮದಲ್ಲಿರುವ ತಂಡಕ್ಕೆ ಐಎಸ್‌ಎಲ್‌ನ ಈ ಆವೃತ್ತಿಯ ಮೊದಲಿನಿಂದ ಇಲ್ಲಿಯವರೆಗೆ ಹೆಗಲೆಣೆಯಾದ ಆಟಗಾರರಲ್ಲಿ ಬೆಂಗಳೂರಿನ ಪ್ರತಿಭೆ ವಿಘ್ನೇಶ್ ದಕ್ಷಿಣಾಮೂರ್ತಿ ಅವರೂ ಇದ್ದಾರೆ. ತಂಡದ ರಕ್ಷಣಾ ವಿಭಾಗದ ಬೆನ್ನೆಲುಬು ಆಗಿರುವ ಅವರು ವಿಘ್ನ ನಿವಾರಕನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

23ನೇ ಸಂಖ್ಯೆಯ ಜರ್ಸಿ ತೊಟ್ಟು ಕಣಕ್ಕೆ ಇಳಿಯುವ 23 ವರ್ಷದ ಈ ಮಿಡ್‌ಫೀಲ್ಡರ್ ಹಾಗೂ ಡಿಫೆಂಡರ್ ಬೆಂಗಳೂರಿನ ಓಜೋನ್ ಅಕಾಡೆಮಿಯಲ್ಲಿ ಬೆಳೆದವರು. ಬೆಂಗಳೂರು ನಗರ ನಿವಾಸಿಯಾಗಿರುವ ಅವರು ಭಾರತ ತಂಡಕ್ಕಾಗಿಯೂ ಆಡಿದ್ದಾರೆ. 2018ರ ಸಾಫ್ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ತಂಡದ ಪರವಾಗಿ ಪದಾರ್ಪಣೆ ಮಾಡಿ ಆ ಟೂರ್ನಿಯಲ್ಲಿ ಎರಡು ಪಂದ್ಯಗಳನ್ನು ಸೆಣಸಿದ್ದರು. ಐಎಸ್‌ಎಲ್‌ನಲ್ಲಿ 2018ರಿಂದ ಆಡುತ್ತಿದ್ದರೂ ಈ ಬಾರಿ ಅವರ ಪ್ರತಿಭೆ ಹೆಚ್ಚು ಬೆಳಕಿಗೆ ಬಂದಿದೆ.

ಡಿಸೆಂಬರ್‌ನಲ್ಲಿ ನಡೆದ ಹೈದರಾಬಾದ್ ಎಫ್‌ಸಿ ವಿರುದ್ಧದ ಪಂದ್ಯದಲ್ಲಿ ವಿಘ್ನೇಶ್ ಗಳಿಸಿದ ಮೋಹಕ ಗೋಲು ಐಎಸ್‌ಎಲ್‌ನ ಅದ್ಭುತ ಗೋಲುಗಳಲ್ಲಿ ಒಂದು ಎಂದೇ ಹೆಸರು ಗಳಿಸಿದೆ. ಬಿಪಿನ್ ಸಿಂಗ್ ಎಡಭಾಗದಿಂದ ಗಾಳಿಯಲ್ಲಿ ತೇಲಿಬಿಟ್ಟ ಚೆಂಡನ್ನು ಮೇಲೆ ಜಿಗಿದು ಎಡಗಾಲಿನಲ್ಲಿ ಒದ್ದು ಕ್ರಾಸ್ ಬಾರ್‌ಗೆ ಸೋಕಿ ಗೋಲುಪೆಟ್ಟಿಗೆಯ ಒಳಗೆ ಬೀಳುವಂತೆ ಮಾಡಿದ ವಿಘ್ನೇಶ್ ಅವರ ಚಾಣಾಕ್ಷ ಮತ್ತು ಮಿಂಚಿನ ಆಟಕ್ಕೆ ನೆಟ್ಟಿಗರು ಮೆಚ್ಚುಗೆಯ ಮಳೆ ಗರೆದಿದ್ದರು.

ಹಿಂದಿನ ಎರಡು ಆವೃತ್ತಿಗಳಲ್ಲಿ ವಿಘ್ನೇಶ್‌ಗೆ ಹೆಚ್ಚು ಅವಕಾಶಗಳು ಸಿಕ್ಕಿರಲಿಲ್ಲ. 2018ರಲ್ಲಿ ನಾಲ್ಕು ಪಂದ್ಯಗಳಲ್ಲಿ ಅವರು ಆಡಿದ್ದು ಒಟ್ಟು 133 ನಿಮಿಷ ಮಾತ್ರ. ಒಂದು ಶಾಟ್, ಮೂರು ಕ್ರಾಸ್ ಮತ್ತು 37 ಪಾಸ್‌ಗಳು ಮಾತ್ರ ಅವರಿಂದ ಮೂಡಿಬಂದಿದ್ದವು. ನಂತರದ ವರ್ಷ ಏಕೈಕ ಪಂದ್ಯದಲ್ಲಿ ಏಳು ನಿಮಿಷ ಆಡುವ ಅವಕಾಶ ದಕ್ಕಿತ್ತು. ಹೀಗಾಗಿ ಒಂದು ಕ್ರಾಸ್ ಮತ್ತು ಐದು ಪಾಸ್‌ಗಳನ್ನು ನೀಡಲು ಮಾತ್ರ ಸಾಧ್ಯವಾಗಿತ್ತು. ಈ ವರ್ಷ ಲೀಗ್ ಹಂತದಲ್ಲಿ ತಂಡ ಆಡಿರುವ 20 ಪಂದ್ಯಗಳ ಪೈಕಿ 19ರಲ್ಲಿ ಅವರು ಕಣಕ್ಕೆ ಇಳಿದಿದ್ದಾರೆ. 30 ಕ್ರಾಸ್ ಮತ್ತು 398 ಪಾಸ್‌ಗಳನ್ನು ನೀಡಿದ್ದು ಆಟದ ಎಲ್ಲ ವಿಭಾಗಗಳಲ್ಲೂ ಛಾಪು ಮೂಡಿಸಿದ್ದಾರೆ.

ಮುಂಬೈ ಸಿಟಿ ಎಫ್‌ಸಿ ಸೇರುವ ಮುನ್ನ ನಾನು ಎಡಭಾಗದ ಮಿಡ್‌ಫೀಲ್ಡರ್ ಆಗಿದ್ದೆ. ಮುಂಬೈ ಸಿಟಿ ಎಫ್‌ಸಿಯ ಕೋಚ್ ಆಗಿದ್ದ ಜಾರ್ಜ್ ಕೋಸ್ಟಾ ಲೆಫ್ಟ್ ಬ್ಯಾಕ್ ವಲಯದಲ್ಲಿ ಆಡಲು ಸೂಚಿಸಿದರು. ಇದರಿಂದ ಮಿಡ್‌ಫೀಲ್ಡರ್ ಆಗಿಯೂ ಡಿಫೆಂಡರ್ ಆಗಿಯೂ ಆಡಲು ಕಲಿತೆ. ಈಗಿನ ಕೋಚ್ ಸರ್ಜಿಯೊ ಲೊಬೆರಾ ಡಿಫೆಂಡರ್ ಆಗಿಯೇ ಇರಲು ಸೂಚಿಸಿದ್ದಾರೆ. ಈ ಎರಡು ವಿಭಾಗಗಳಲ್ಲಿ ಮಹತ್ವದ ವ್ಯತ್ಯಾಸಗಳೇನೂ ಇಲ್ಲ. ಆದರೆ ಲೆಫ್ಟ್ ಬ್ಯಾಕ್‌ನಲ್ಲಿದ್ದಾಗ ರಕ್ಷಣಾ ವಿಭಾಗದ ಕಡೆಗೆ ಹೆಚ್ಚು ಗಮನ ಕೊಡಲೇಬೇಕು. ಅದಕ್ಕೆ ತಕ್ಕಂತೆ ಹೊಂದಿಕೊಂಡು ಈಗ ಆಡುತ್ತಿದ್ದೇನೆ' ಎಂದು ವಿಘ್ನೇಶ್ ಹೇಳಿದರು.

'ಟೂರ್ನಿಯ ಉದ್ದಕ್ಕೂ ಉತ್ತಮ ಸಾಮರ್ಥ್ಯ ತೋರುತ್ತ ಬಂದಿದ್ದೇವೆ. ಲೀಗ್ ಶೀಲ್ಡ್ ಗೆಲ್ಲುವುದರೊಂದಿಗೆ ನಾವು ನಮ್ಮ ಮೊದಲ ಗುರಿಯನ್ನು ತಲುಪಿದ್ದೇವೆ. ಹೀಗಾಗಿ ಪ್ರಶಸ್ತಿ ಗೆಲ್ಲುವತ್ತ ಚಿತ್ತ ನೆಟ್ಟಿದ್ದೇವೆ. ಈ ಹಾದಿಯಲ್ಲಿ ನನ್ನಿಂದಾದ ಕಾಣಿಕೆಯನ್ನು ನೀಡಲು ಸಿದ್ಧನಿದ್ದೇನೆ' ಎಂದು ವಿಘ್ನೇಶ್ ಹೇಳಿದ್ದಾರೆ. ❖

# ಬೇಸಿಗೆ ಧಗೆ ತಣಿಸುವ ಫ್ಯಾಷನ್ ಟ್ರೆಂಡ್

ರೇಷ್ಮಾ

**ಚಳಿಗೆ** ಜಾಕೆಟ್, ಪುಲ್‌ಓವರ್, ಓವರ್‌ಕೋಟ್ ಧರಿಸಿ ಓಡಾಡುತ್ತಿದ್ದವರು ಈಗ ಅದನ್ನೆಲ್ಲಾ ವಾರ್ಡ್‌ರೋಬ್ ಮೂಲೆಗೆ ಸೇರಿಸುವ ಕಾಲ ಬಂದಿದೆ. ಕಾರಣ ಬೇಸಿಗೆಯ ಧಗೆ ತಟ್ಟುತ್ತಿದೆ; ಧಾರಾಕಾರ ಬೆವರು ಹರಿದು ರೇಜಿಗೆ ಹುಟ್ಟಿಸುತ್ತಿದೆ. ಹೀಗಾಗಿ ಬೇಸಿಗೆಯಲ್ಲಿ ತೆಳ್ಳನೆಯ ಹತ್ತಿಯ ಬಟ್ಟೆಯ ದಿರಿಸುಗಳು ಹೆಚ್ಚು ಸೂಕ್ತ ಎನ್ನಿಸುತ್ತವೆ. ಅದರಲ್ಲೂ ಗಾಢ ರಂಗಿನ, ದೇಹದ ಅಂದವನ್ನು ಹೆಚ್ಚಿಸುವಂತಹ ಸಿಲೊಯಟ್‌ನಂತಹ ಉಡುಪುಗಳು ಈ ವರ್ಷದ ಟ್ರೆಂಡ್ ಆಗಿದೆ. 2021ರ ಕೆಲವು ಬೇಸಿಗೆ ಫ್ಯಾಷನ್‌ನ ಟ್ರೆಂಡ್‌ಗಳು ಹೀಗಿವೆ.

## ಪ್ರಿಂಟೆಡ್ ಕಾಟನ್ ಪ್ಯಾಂಟ್

ಹೂವಿನ ಚಿತ್ತಾರವಿರುವ ವಿವಿಧ ಬಣ್ಣದ ಕಾಟನ್ ಪ್ಯಾಂಟ್‌ಗಳು ಬೇಸಿಗೆಯಲ್ಲಿ ಧರಿಸಲು ಹೆಚ್ಚು ಸೂಕ್ತ ಎನ್ನಿಸುತ್ತವೆ. ಅಗಲವಾದ ಪಲಾಜೊ ಪ್ಯಾಂಟ್‌ನಂತಿರುವ ಅಥವಾ ಪೆನ್ಸಿಲ್ ಹತ್ತಿ ಪ್ಯಾಂಟ್‌ಗಳು ಟ್ರೆಂಡಿ ಲುಕ್ ನೀಡುತ್ತವೆ. ಇದರ ಮೇಲೆ ತೋಳಿಲ್ಲದ ಟಾಪ್ ಧರಿಸಿದರೆ ವಿಭಿನ್ನವಾಗಿ ಕಾಣಬಹುದು. ಬೇರೆ ಬೇರೆ ಬಣ್ಣದ ಪ್ಯಾಂಟ್‌ಗಳಿಗೆ ತಕ್ಕಂತೆ ವಿರುದ್ಧ ಬಣ್ಣದ ಟಾಪ್ ಧರಿಸುವ ಮೂಲಕ ಅಂದವನ್ನೂ ಹೆಚ್ಚಿಸಿಕೊಳ್ಳಬಹುದು.

## ಟೈ ಮತ್ತು ಡೈ ಶರ್ಟ್‌ಗಳು

ಟೈ ಮತ್ತು ಡೈ ವಿನ್ಯಾಸದ ಶರ್ಟ್‌ಗಳು ಈ ವರ್ಷದ ಬೇಸಿಗೆಯ ಟ್ರೆಂಡ್. ಸಡಿಲವಾಗಿರುವ ಶರ್ಟ್‌ಗಳನ್ನು ಜೀನ್ಸ್‌ನೊಂದಿಗೆ ಧರಿಸಬಹುದು. ಧರಿಸಲು ಸುಲಭವಾಗಿದ್ದು, ಆರಾಮದಾಯಕ ಎನ್ನಿಸುವ ಈ ಶರ್ಟ್‌ಗಳು ದಪ್ಪ ಇರುವವರಿಗೆ ಹೆಚ್ಚು ಹೊಂದುತ್ತದೆ. ಪೆನ್ಸಿಲ್ ಪ್ಯಾಂಟ್‌ನೊಂದಿಗೆ ಕೂಡ ಟೈ ಮತ್ತು ಡೈ ಶರ್ಟ್ ಧರಿಸಬಹುದು. ಈ ಶರ್ಟ್‌ನೊಂದಿಗೆ ಬೆಳ್ಳಿಯ ಆಭರಣಗಳನ್ನು ಧರಿಸಿ ಟ್ರೆಂಡ್ ಸೃಷ್ಟಿಸಬಹುದು.

## ಹಾಟ್ ಪ್ಯಾಂಟ್ ಅಥವಾ ಹೈ ವೇಸ್ಟ್ ಪ್ಯಾಂಟ್

ಈಗ ಮನೆಯಿಂದ ಹೊರಗಡೆ ಹೋಗುವುದಕ್ಕಿಂತ ಹೆಚ್ಚು ಮನೆಯಲ್ಲೇ ಇರುವ ಕಾರಣ ಹಾಟ್ ಪ್ಯಾಂಟ್ ಧರಿಸಲು ಹೆಚ್ಚು ಸೂಕ್ತ ಎನ್ನಿಸುತ್ತದೆ. ಶಾರ್ಟ್‌ನಂತೆ ಇರುವ ಹಾಟ್ ಪ್ಯಾಂಟ್ ಈಜುಡುಗೆಯಂತೆಯೂ ಕಾಣಿಸುತ್ತದೆ. ಇದರ ಮೇಲೆ ಕ್ರಾಪ್ ಟಾಪ್ ಅಥವಾ ಶಾರ್ಟ್ ಟೀ ಶರ್ಟ್‌ಗಳನ್ನು ಧರಿಸಿದರೆ ಟ್ರೆಂಡಿ ಲುಕ್ ಸಿಗುತ್ತದೆ.

## ಹೂವಿನ ವಿನ್ಯಾಸದ ಉಡುಪುಗಳು

ಹೂವಿನ ವಿನ್ಯಾಸ ಇರುವ ಟಾಪ್‌ಗಳು, ಟೀ ಶರ್ಟ್‌ಗಳು, ನಿಲುವಂಗಿಗಳು ಈ ಬೇಸಿಗೆಯ ಫ್ಯಾಷನ್. ಗಾಢ ಬಣ್ಣದ ಹೂವಿನ ವಿನ್ಯಾಸದೊಂದಿಗಿರುವ ಟಾಪ್‌ಗಳು ಹೆಣ್ಣುಮಕ್ಕಳನ್ನು ಹೆಚ್ಚು ಸೆಳೆಯುತ್ತಿವೆ. ಅದರಲ್ಲೂ ಮಿನಿ ಟಾಪ್‌ಗಳು ಈಗಿನ ಟ್ರೆಂಡ್. ಹೂವಿನ ವಿನ್ಯಾಸದ ದಿರಿಸುಗಳು ಎಲ್ಲಾ ಬಣ್ಣದವರಿಗೂ ಹೊಂದುತ್ತದೆ. ಸ್ಲೀವ್‌ಲೆಸ್, ಮಟನ್ ಸ್ಲೀವ್ಸ್ ಇರುವ ಡ್ರೆಸ್‌ಗಳು ಬಿಸಿಲಿನ ಧಗೆಗೆ ಧರಿಸಲು ಆರಾಮದಾಯಕ.

## ಅಬ್‌ಸ್ಟ್ರ್ಯಾಕ್ಟ್ ಪ್ರಿಂಟ್ ಇರುವ ಉಡುಗೆಗಳು

ಅಬ್‌ಸ್ಟ್ರ್ಯಾಕ್ಟ್ ವಿನ್ಯಾಸಗಳಿರುವ ಉಡುಪುಗಳು ಇತ್ತೀಚೆಗೆ ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ಒಂದೇ ವಿನ್ಯಾಸದ ಪ್ಯಾಂಟ್ ಹಾಗೂ ಟಾಪ್ ಧರಿಸಿದರೆ ನಿಮ್ಮ ಅಂದ ಹೆಚ್ಚುವುದರಲ್ಲಿ ಎರಡು ಮಾತಿಲ್ಲ. ಇದರಲ್ಲಿ ಬೇರೆ ಬೇರೆ ವಿನ್ಯಾಸ ಹಾಗೂ ಬಣ್ಣಗಳ ಉಡುಗೆಗಳು ಲಭ್ಯವಿದ್ದು ನಮಗೆ ಹೊಂದುವಂತಹ ಉಡುಗೆ ಧರಿಸಿದರೆ ಬೇಸಿಗೆಗೂ ಉತ್ತಮ, ಟ್ರೆಂಡಿಯಾಗಿಯೂ ಇರುತ್ತದೆ. ❖

# ಉತ್ಸಾಹದ ಬದುಕಿಗೆ ಸೂತ್ರಗಳು

**ಸುಕೃತ ಎಸ್.**

ಲಾಕ್‌ಡೌನ್ ತೆರವಾಗಿ ಇಷ್ಟು ತಿಂಗಳು ಕಳೆದರೂ, ಲಾಕ್‌ಡೌನ್ ನಮ್ಮೊಳಗೆ ಸೃಷ್ಟಿಸಿದ ಜಡತ್ವ ಇನ್ನೂ ಬಿಟ್ಟಿಲ್ಲ. ಮನೆಯಿಂದಲೇ ಕೆಲಸ ನಿರ್ವಹಣೆ, ಒಂದೇ ರೀತಿಯ ಜೀವನಕ್ರಮ, ಮನೆಯಿಂದ ಹೊರಗೆ ಹೋಗುವುದಕ್ಕೆ ಭಯ... ಹೊರಗಡೆ ಪ್ರಪಂಚದೊಂದಿಗಿನ ಸಂಬಂಧವನ್ನು ನಾವು ಬಹುಪಾಲು ಕಡಿದುಕೊಂಡಿದ್ದೇವೆ – ಹೀಗೆ ನಾನಾ ಕಾರಣಗಳಿಂದಾಗಿ ಜಡತ್ವ ನಮ್ಮೊಳಗೆ ನುಸುಳಿ, ಬೇರು ಬಿಟ್ಟಿದೆ.

ರಾತ್ರಿ ಒಳ್ಳೆಯ ನಿದ್ರೆ ಮಾಡಿದ್ದರೂ ಬೆಳಿಗ್ಗೆ ಎದ್ದಾಗ ಲವಲವಿಕೆ ಇರುವುದಿಲ್ಲ. ಕೆಲವೊಮ್ಮೆ ಹಸಿವೆಯೇ ಆಗುವುದಿಲ್ಲ, ಇನ್ನು ಕೆಲವು ಬಾರಿ ಹೊಟ್ಟೆ ತುಂಬ ತಿಂದರೂ ಸ್ವಲ್ಪ ಸಮಯದಲ್ಲೇ ಹಸಿವೆಯಾದ ಹಾಗೆ ಅನಿಸುತ್ತದೆ. ಹಾಗಾದರೆ, ಇಂತಹ ತೊಂದರೆಗಳಿಂದ ಹೊರಬರುವುದು ಹೇಗೆ, ಈ ಎಲ್ಲಾ ಮಿತಿಗಳನ್ನು ಮೀರಿ, ಉತ್ಸಾಹ ಭರಿತ ಬದುಕನ್ನು ನಮ್ಮದಾಗಿಸಿಕೊಳ್ಳುವುದು ಹೇಗೆ? ಮನೆಯಲ್ಲೇ ಇದ್ದೂ ಜಡತ್ವವನ್ನು ನಾವು ಮೀರಬಹುದು. ಅದಕ್ಕಾಗಿ ನಮ್ಮ ಜೀವನಕ್ರಮವನ್ನು ಸ್ವಲ್ಪ ಬದಲಾಯಿಸಿಕೊಳ್ಳಬೇಕಷ್ಟೆ. ಈ ಏಳು ಸೂತ್ರಗಳನ್ನು ಅಳವಡಿಸಿಕೊಂಡರೆ ಒಂದಿಷ್ಟು ನಿರಾಳವಾಗಿ, ಆರಾಮವಾಗಿ ದಿನ ಕಳೆಯಬಹುದು.

**• 10 ಬಾರಿ ದೀರ್ಘವಾಗಿ ಉಸಿರಾಡಿ**

ನಮ್ಮ ಮೊಬೈಲ್‌ಗಳಲ್ಲಿ ದೀರ್ಘವಾಗಿ ಉಸಿರಾಡುವ ತಂತ್ರಗಳ ಕುರಿತು ಹಲವು ಆ್ಯಪ್‌ಗಳು ಲಭ್ಯ ಇವೆ. ಆದರೆ, ಇದು ಎಲ್ಲರಿಗೂ ಲಭ್ಯವಿಲ್ಲ. ಲಭ್ಯವಿಲ್ಲ ಎನ್ನುವ ಕುರಿತು ಯೋಚನೆ ಬೇಡ. ಬೆಳಿಗ್ಗೆ ಎದ್ದ ತಕ್ಷಣವೇ, ನಮ್ಮ ಎಲ್ಲ ಗಮನವನ್ನು ಉಸಿರಾಟದ ಮೇಲಷ್ಟೆ ಕೇಂದ್ರೀಕರಿಸಿ, 10 ಬಾರಿ ದೀರ್ಘವಾಗಿ ಉಸಿರಾಡಿ ಸಾಕು. ನಮ್ಮ ಇಡೀ ದಿನವನ್ನು ಇದು ಉತ್ಸಾಹಭರಿತವಾಗಿಸಬಲ್ಲದು.

**• ಚೆನ್ನಾಗಿ ನೀರು ಕುಡಿಯಿರಿ**

ಬಾಯಾರಿಕೆ ಆಗದಿದ್ದರೂ ಬೆಳಿಗ್ಗೆ ಎದ್ದ ಬಳಿಕ ನೀರು ಕುಡಿಯುವುದು ಆರೋಗ್ಯಕರ ಕ್ರಿಯೆ ಎಂದು ಪೋಷಕಾಂಶ ತಜ್ಞರು ಹೇಳುತ್ತಾರೆ. ನೀರು ಕುಡಿಯುವುದು ನಮಗೆ ನಾವೇ ಮಾಡಿಕೊಳ್ಳುವ ಉಪಕಾರ ಎಂಬ ಮಾತೂ ಇದೆ. ಕೆಲವರಿಗೆ ಬೆಳಿಗ್ಗೆ ಎದ್ದ ಕೂಡಲೇ ಕಾಫಿ ಅಥವಾ ಟೀ ಕುಡಿಯುವ ಅಭ್ಯಾಸವೂ ಇರುತ್ತದೆ. ಇದೂ ಸಹ ತಪ್ಪಲ್ಲ. ಇಂತಹ ಹವ್ಯಾಸ ಕೂಡ ನಮ್ಮನ್ನು ಉತ್ಸಾಹದಿಂದ ಇರಿಸಬಲ್ಲದು ಎಂದು ಹೇಳುತ್ತಾರೆ ತಜ್ಞರು.

**• ವ್ಯಾಯಾಮ**

ವ್ಯಾಯಾಮವು ಏಕಾಗ್ರತೆ ಶಕ್ತಿಯನ್ನು ಹೆಚ್ಚಿಸುತ್ತದೆ. ವ್ಯಾಯಾಮ ಎಂದಾಕ್ಷಣ ಜಿಮ್‌ಗೆ ಹೋಗಬೇಕು; ಕಟ್ಟುನಿಟ್ಟಿನ ವ್ಯಾಯಾಮವೇ ಆಗಬೇಕು ಎಂದೇನಿಲ್ಲ. ಮನೆ ಸುತ್ತಲೂ ಓಡಾಡಿದರೂ ಸಾಕಾಗುತ್ತದೆ. ಏನಾದರೂ ಒಂದು ದೈಹಿಕ ಚಟುವಟಿಕೆ ಮಾಡಬೇಕು. ಅದು ಯೋಗವಾದರೂ ಸರಿ, ಸ್ಟ್ರೆಚ್‌ವರ್ಕ್ ಆದರೂ ಸರಿ, ಶ್ರಮದಾಯಕವಾಗಿರಬೇಕು. ಇದು ದೇಹದಲ್ಲಿ ಉತ್ತಮವಾದ ರಕ್ತ ಪರಿಚಲನೆಗೆ ಅನುಕೂಲ ಮಾಡುತ್ತದೆ.

**• ಸಕ್ಕರೆ ಸೇವನೆ ಬಗ್ಗೆ ಎಚ್ಚರ**

ನಮ್ಮ ಆಹಾರ ಕ್ರಮದಲ್ಲಿ ಸಕ್ಕರೆ ಸೇವನೆ ಬಗ್ಗೆ ಸ್ವಲ್ಪ ಎಚ್ಚರಿಕೆ ಅಗತ್ಯ. ಹಾಗೆಂದ ಮಾತ್ರಕ್ಕೆ ಸಕ್ಕರೆ ಸೇವನೆಯನ್ನೇ ನಿಲ್ಲಿಸಬೇಕು ಎಂದರ್ಥವಲ್ಲ. ಆದರೆ, ಸಕ್ಕರೆಯನ್ನು ಅನಗತ್ಯವಾಗಿ, ಹೆಚ್ಚುವರಿ ಆಗಿ ಸೇವನೆ ಮಾಡುವುದನ್ನು ನಿಲ್ಲಿಸಬೇಕು. ಜೊತೆಗೆ, ಬೆಳಿಗ್ಗೆಯ ತಿಂಡಿ ಸಮಯದಲ್ಲಿ ಸಕ್ಕರೆ ಸೇವನೆ ಬಗ್ಗೆ ನಿಗಾ ಇರಿಸಿ.

**• ಮೊಬೈಲ್ ಬಳಕೆಯನ್ನು ಕಡಿಮೆ ಮಾಡಿ**

ಬೆಳಿಗ್ಗೆ ಎದ್ದ ಕೂಡಲೆ ಮೂಡುವ ನಿಮ್ಮ ಆಲೋಚನೆಗಳನ್ನು ಬೇರೆ ಯಾರೋ ಪ್ರಭಾವಿಸಬಾರದು. ಆದ್ದರಿಂದ ಬೆಳಿಗ್ಗೆ ಎದ್ದ ಕೂಡಲೇ ನಿಮ್ಮ ಮೊಬೈಲ್ ನೋಡುವುದುನ್ನು ಕಡಿಮೆ ಮಾಡಿ.

**• ನಿಮಗೆ ಅಂತಲೇ ಸಮಯ ನೀಡಿ**

ಕೆಲಸ ಕಾರ್ಯಗಳ ನಡುವೆ ನಾವು ಕಳೆದು ಹೋಗುತ್ತೇವೆ. ನಮ್ಮ ಬಗ್ಗೆ ನಾವು ಯೋಚನೆಯನ್ನೇ ಮಾಡುವುದಿಲ್ಲ. ನಮಗೆ ಅಂತಲೇ ನಾವು ದಿನದ ಕೆಲವು ನಿಮಿಷಗಳನ್ನಾದರೂ ಮೀಸಲಿರಿಸಿಕೊಳ್ಳಬೇಕು. ಇದು ನಮ್ಮ ಮಾನಸಿಕ ಆರೋಗ್ಯಕ್ಕೆ ಬಹುಮುಖ್ಯವಾಗುತ್ತದೆ.

ಎಲ್ಲರಿಗೂ ಒಂದೇ ರೀತಿಯ ಫಾರ್ಮುಲಾ ಕೆಲಸ ಮಾಡುವುದಿಲ್ಲ. ಒಬ್ಬೊಬ್ಬರ ದೇಹಗುಣ ಒಂದೊಂದು ರೀತಿ ಇರುತ್ತದೆ. ಆದರೆ, ಬೆಳಿಗ್ಗೆ ಎದ್ದ ಬಳಿಕ ಇವುಗಳಲ್ಲಿ ಯಾವುದಾದಾರು ಒಂದನ್ನಾದರೂ ಮಾಡಿದರೂ ಇಡೀ ದಿನವನ್ನು ನಾವು ಉತ್ಸಾಹದಿಂದ ಕಳೆಯಬಹುದು ಎನ್ನುತ್ತಾರೆ ತಜ್ಞರು.

**ಬೇಕಾಗುವಷ್ಟು ಆಹಾರ**

ನಮ್ಮ ದೇಹದ ಅಗತ್ಯಕ್ಕೆ ಅನುಗುಣವಾಗಿ ಸರಿಯಾದ ಪ್ರಮಾಣದಲ್ಲಿ ಆಹಾರವನ್ನು ಸೇವಿಸಬೇಕು. ತೀರಾ ಕಡಿಮೆ ಆಹಾರ ಸೇವನೆಯಿಂದ ದೇಹಕ್ಕೆ ಬೇಕಾಗಿರುವ ಪೋಷಕಾಂಶಗಳು ಸಿಗದೇ ಇರಬಹುದು. ಬೆಳಗಿನ ಆಹಾರವನ್ನು ಕಡ್ಡಾಯವಾಗಿ ಸೇವಿಸಬೇಕು. ಇದು ನಮ್ಮ ಇಡೀ ದಿನವನ್ನು ಉತ್ಸಾಹ ಭರಿತ ಗೊಳಿಸುತ್ತದೆ.

## ಗಾಯತ್ರಿ ಚಂದ್ರಶೇಖರ್ ಮುಡಿಗೆ 'ಮಿಸೆಸ್ ಇಂಡಿಯಾ 2021' ಪ್ರಶಸ್ತಿ

ಬೆಂಗಳೂರು ಮೂಲದ ಖ್ಯಾತ ಭರತನಾಟ್ಯ ಕಲಾವಿದೆ ಗಾಯತ್ರಿ ಚಂದ್ರಶೇಖರ್ ಕಳೆದ ತಿಂಗಳು 'ಮಿಸೆಸ್ ಇಂಡಿಯಾ 2021'ರ ವಿಜೇತರಾಗಿದ್ದಾರೆ. ಈ ಸ್ಪರ್ಧೆಯಲ್ಲಿ ತೀರ್ಪುಗಾರರ ಪ್ರಶ್ನೆಗೆ ನೇರಾನೇರ ಉತ್ತರ ನೀಡುವ ಮೂಲಕ ಮೆಚ್ಚುಗೆಗೆ ಪಾತ್ರರಾದರು. 'ನೀವೇಕೆ ಮಿಸೆಸ್ ಇಂಡಿಯಾ ಕಿರೀಟ ವಿಜೇತರಾಗಲು ಬಯಸುತ್ತೀರಿ' ಎಂಬ ಪ್ರಶ್ನೆಗೆ ಸಮಾಧಾನದಿಂದ, ನಗುತ್ತಾ ಉತ್ತರಿಸಿದ ಗಾಯತ್ರಿ, 'ನಾನು ಕಿರೀಟವನ್ನು ಗೆಲ್ಲಲು ಸಮರ್ಥಳಾಗಿದ್ದೇನೆ ಎಂಬುದು ನನ್ನ ಭಾವನೆ, ಆ ಕಾರಣಕ್ಕೆ ನಾನು ಗೆಲ್ಲಬೇಕು. ತಮ್ಮನ್ನು ತಾವು ಪ್ರೀತಿಸುವ ಮಹಿಳೆಯರಿಗೆ ನಾನು ಸ್ಫೂರ್ತಿಯಾಗಬೇಕು. ಪ್ರತಿಯೊಬ್ಬ ಹೆಣ್ಣುಮಗಳು ತನ್ನನ್ನು ತಾನು ಅತ್ಯಂತ ಸುಂದರಳು ಎಂದು ಭಾವಿಸಬೇಕು, ಆಗ ಯಶಸ್ಸು ಎಂಬುದು ಅವಳ ಹಿಂದೆ ಸದಾ ಬೆನ್ನೆಲುಬಾಗಿ ನಿಂತಿರುತ್ತದೆ' ಎಂದು ಉತ್ತರಿಸಿದರು.

ನೃತ್ಯದಲ್ಲಿ ಪ್ರಾವೀಣ್ಯತೆ ಪಡೆದಿರುವ ಗಾಯತ್ರಿ, ಪ್ರಪಂಚದಾದ್ಯಂತ ತಿರುಗಾಟ ಮಾಡಿ ಪ್ರೇಕ್ಷಕರನ್ನು ಮೋಡಿ ಮಾಡಿದ್ದಾರೆ. ಆಕೆ ಬಹುಮುಖ ಕಲಾವಿದೆಯೂ ಹೌದು. ತಮ್ಮ ಚಿಕ್ಕ ವಯಸ್ಸಿನಲ್ಲೇ ಶಾಸ್ತ್ರೀಯ ನೃತ್ಯವನ್ನು ಅಭ್ಯಾಸ ಮಾಡಿದ್ದರು. ಅವರಲ್ಲಿನ ಪ್ರತಿಭೆಯು ಅವರನ್ನು ಪ್ರಪಂಚದಾದ್ಯಂತ ಕರೆದೊಯ್ದಿದೆ. ಅಲ್ಲದೇ ಪ್ರಶಸ್ತಿ, ಪುರಸ್ಕಾರಗಳು ಸಿಗುವಂತೆ ಮಾಡಿದೆ.

ಇವರು 2009ರಲ್ಲಿ ನೃತ್ಯ ಸ್ಕೂಲ್ ಆಫ್ ಆರ್ಟ್ ಅನ್ನು ಆರಂಭಿಸಿದರು. ಅವರ ಕೆಲವು ತತ್ವಗಳು ಈ ಶಾಲೆಯ ಬೋಧನೆಗೆ ಆಧಾರವಾಗಿದೆ. 'ಶಿಸ್ತನ್ನು ಭೋಧಿಸುವುದು, ದೈಹಿಕ ಹಾಗೂ ಆಧ್ಯಾತ್ಮಿಕ ಪ್ರಯೋಜನಗಳನ್ನು ಪಡೆಯುವುದು, ಕಲೆಯ ಮೌಲ್ಯವರ್ಧನೆ, ಗುಂಪಿನಲ್ಲಿ ಕೆಲಸ ಮಾಡುವ ಸೌಹಾರ್ದತೆ, ಸನ್ನೆ ಹಾಗೂ ಕ್ರಿಯೆಗಳ ಮೂಲಕ ಸಂವಹನ ನಡೆಸುವ ಕಲೆ, ಶಾಸ್ತ್ರೀಯ ನೃತ್ಯವನ್ನು ಅನುಭವವನ್ನಾಗಿಸಿಕೊಳ್ಳುವುದು ನಮ್ಮ ನೃತ್ಯ ಸ್ಕೂಲ್ ಆಫ್ ಆರ್ಟ್‌ನ ಪ್ರಮುಖ ತತ್ವಗಳಾಗಿವೆ' ಎನ್ನುತ್ತಾರೆ ಗಾಯತ್ರಿ.

ಇವರು ಕಂಟೆಂಪರರಿ, ಫ್ಯೂಷನ್ ಹಾಗೂ ಬಾಲಿವುಡ್ ಶೈಲಿಯ ನೃತ್ಯಪ್ರಕಾರಗಳ ಸೃಜನಶೀಲ ನೃತ್ಯ ಸಂಯೋಜನೆಗಳ ಮೂಲಕ ಹೆಸರುವಾಸಿಯಾಗಿದ್ದಾರೆ.

ನೃತ್ಯ ಹಾಗೂ ಕಲೆಯನ್ನು ಹೊರತುಪಡಿಸಿ ಜನರೊಂದಿಗೆ ಬೆರೆಯುತ್ತಾ ಉತ್ತಮ ಹಾಗೂ ಪರಿಪೂರ್ಣ ಜೀವನ ಸಾಗಿಸುವ ಮಾರ್ಗವನ್ನು ತೋರುವ ಮೂಲಕ ಸಹಾಯ ಮಾಡುತ್ತಾರೆ. ಟ್ಯಾರೋ ಕಾರ್ಡ್ ರೀಡರ್ ಆಗಿರುವ ಇವರು ಲೈಫ್ ಕೋಚ್ ಹಾಗೂ ಹೀಲರ್ ಆಗಿ ಪ್ರಮಾಣಪತ್ರ ಪಡೆದಿದ್ದಾರೆ. ತನ್ನನ್ನು ತಾನು 'ಜೀವನೋತ್ಸಾಹಿ' ಎಂದು ಕರೆದುಕೊಳ್ಳಲು ಇಚ್ಛಿಸುತ್ತಾರೆ ಇವರು.

## ರಾ ಏಜೆಂಟ್ ಆಗಲಿದ್ದಾರೆ ಅಪ್ಪು

**ಚಂದನವನದ** ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಸಿನಿಮಾ ತೆರೆ ಮೇಲೆ ಬರುತ್ತಿದೆ ಎಂದರೆ ಅಭಿಮಾನಿಗಳು ಕಾತರದಿಂದ ಕಾಯುತ್ತಿರುತ್ತಾರೆ. ಅಲ್ಲದೇ ನಿರ್ದೇಶಕರುಗಳಿಗೂ ಪುನೀತ್ ಜೊತೆ ಸಿನಿಮಾ ಮಾಡುವುದೆಂದರೆ ಒಂದು ರೀತಿಯ ಖುಷಿ. ಸದಾ ವಿಭಿನ್ನ ಪಾತ್ರಗಳಿಂದ ಜನರನ್ನು ರಂಜಿಸುವ ಅಪ್ಪು ಸಿಕ್ಕ ಪಾತ್ರಕ್ಕೆ ನ್ಯಾಯ ಒದಗಿಸುತ್ತಾರೆ.

ಇಂತಿಪ್ಪ ಪುನೀತ್, ಛಾಯಾಗ್ರಾಹಕ ಹಾಗೂ ನಿರ್ಮಾಪಕ ಕೃಷ್ಣ ಅವರ ಮುಂದಿನ ಚಿತ್ರದಲ್ಲಿ ರಾ ಏಜೆಂಟ್ ಆಗಿ ನಟಿಸುತ್ತಿದ್ದಾರೆ. ಪುನೀತ್ ಅಭಿಮಾನಿಗಳು ಮೊದಲಿನಿಂದಲೂ ಪುನೀತ್ ಅವರನ್ನು ಸೈನಿಕನ ಪಾತ್ರದಲ್ಲಿ ಕಾಣುವ ಹಂಬಲದಲ್ಲಿದ್ದರು. ಈಗ ಈ ವಿಷಯ ಅಭಿಮಾನಿಗಳಿಗೆ ಖುಷಿ ನೀಡುವುದರಲ್ಲಿ ಸಂದೇಹವಿಲ್ಲ.

'ನಾನು ಹಾಗೂ ಪುನೀತ್ ಇದೇ ಮೊದಲ ಬಾರಿಗೆ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ನಾನು ಈ ಹಿಂದೆ ಮಾಡಿರುವ ಎಲ್ಲಾ ಸಿನಿಮಾಗಳಿಗಿಂತಲೂ ಈ ಸಿನಿಮಾ ಭಿನ್ನವಾಗಿದೆ. ಇದರಲ್ಲಿ ಪುನೀತ್ ಅವರದ್ದು ರಾ ಏಜೆಂಟ್ ಪಾತ್ರ. ಸಿನಿಮಾದಲ್ಲಿ ನೈಜತೆ ಇರಬೇಕು ಎಂಬ ಕಾರಣಕ್ಕೆ ನಾನು ಭಾರತದ ಹಲವು ರಾ ಏಜೆಂಟ್‌ಗಳ ಬಗ್ಗೆ ಸಂಶೋಧನೆ ನಡೆಸಿದ್ದೇನೆ. ರಾ ಏಜೆಂಟ್‌ಗಳೂ ಸೈನಿಕರಂತೆ ದೇಶವನ್ನು ಕಾಯುವ ಕೆಲಸ ಮಾಡುತ್ತಾರೆ. ಅವರು ನಮ್ಮ ದೇಶಕ್ಕೆ ಎಷ್ಟು ಮುಖ್ಯ ಎಂಬುದನ್ನು ಇದರಲ್ಲಿ ತೋರಿಸಲಾಗುತ್ತದೆ' ಎಂದಿದ್ದಾರೆ ಕೃಷ್ಣ.